ಗೆಜೆಟ್''ಗೆ ಅದರತಲೆಬರಹವೊಂದನ್ನು ಅಂದವಾಗಿ ಬರೆದು ಕಳಿಸಿದಾಗ ಅದು ಮುದ್ರಣಗೊಳ್ಳದಿದ್ದರೂ ಐದು ರೂಪಾಯಿಯ ಮನಿಯಾರ್ಡರ್ ಬಂತು. ಮುಂದೆ ತನ್ನ ವಿಶೇಷ ಸಂಚಿಕೆಗಳಿಗೆ ಈ ಹಳ್ಳಿಯ ಹುಡುಗನನ್ನು ಹುಬ್ಬಳ್ಳಿಗೇ ಕರೆಸಿಕೊಂಡು ಚಿತ್ರಗಳನ್ನು ಮಾಡಿಸಿಕೊಂಡಿತು 'ಹುಬ್ಬಳ್ಳಿ ಗೆಜೆಟ್' ಪತ್ರಿಕೆ. (ಈ ಹೊತ್ತಿಗೆ ಇದು 'ಜೈ ಹಿಂದ್' ಆಗಿತ್ತು.)

ಜವಾನುದಾರಿಕೆ ಎಷ್ಟು ದಿನ? ತನ್ನ ಕಾಲ ಮೇಲೇ ತಾನು ನಿಲ್ಲಬೇಕೆಂಬ ವಿಚಾರ ಬೇರೆ. ಆದರೆ ಯಾವ ಮಾಧ್ಯಮ? ಹೆಚ್ಚು ಕಲಿತಿಲ್ಲವೆಂಬ ಅಳುಕು. ಚಿತ್ರಕಾರನಾಗಿಯೇ ಜೀವನ ನಡೆಸಬೇಕಾದರೆ ಮನೆಯಲ್ಲಿ ವಿರೋಧ. ಈ ತೊಳಲಾಟದಲ್ಲಿಯೇ ಕೆಲವು ತೈಲಚಿತ್ರಗಳನ್ನೂ ರಚಿಸಿದರು. ಆಗಲೇ ಛಾಯಾಚಿತ್ರಗ್ರಹಣದೆಡೆ ಮನವೊಲಿದಿತ್ತು. ಸಂಬಂಧಿಕರೊಬ್ಬರು ಕೊಟ್ಟಿದ್ದ ಬಾಕ್ಸ್ ಕೆಮರಾದಿಂದ ಕಣ್ಣಿಗೆ ಕಂಡದ್ದನ್ನೆಲ್ಲ ಸೆರೆಹಿಡಿದು ಹಳ್ಳಿಯಲ್ಲಿಯೇ ಸಲಕರಣೆಗಳನ್ನು ಹೊಂದಿಸಿಕೊಂಡು, ಕೆಂಪುಗ್ಲಾಸಿರುವ ಕಂದೀಲಿನ ಬೆಳಕಲ್ಲಿ ರೋಲ್ ಡೆವಲಪ್ ಮಾಡುತ್ತಿದ್ದರು. ಫೋಟೋ ತೆಗೆದಾಗೊಮ್ಮೆ ಹುಬ್ಬಳ್ಳಿಗೆ ಹೋಗಿ ಬರುವುದು ದುಬಾರಿಯ ಕೆಲಸ ಅಲ್ಲವೆ? ಅಂದು ಪ್ರಾರಂಭವಾದ ಫೋಟೋಗ್ರಫಿಯಲ್ಲಿ ದೇಸಾಯರು ಇಂದು ತಮ್ಮದೇ ಆದ ಸ್ಟೈಲ್ ರೂಢಿಸಿಕೊಂಡಿದ್ದಾರೆ.

ಚಿತ್ರಕಲೆ, ಫೋಟೋಗ್ರಫಿಗಳೊಂದಿಗೆ ನಾಡಹಬ್ಬ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳ ಏರ್ಪಾಡಿನಲ್ಲಿ ಕಾಲ ಕಳೆಯುತ್ತಿದ್ದ ದೇಸಾಯರಿಗೆ ಇದೇ ಸಂದರ್ಭದಲ್ಲಿ ಗೃಹಸ್ಥಾಶ್ರಮ. ಕೆಲ ಗೆಳೆಯರು ಮುಂಬೈಯಲ್ಲಿದ್ದರು. ಇವರ ಕಲಾಚಾತುರ್ಯವನ್ನು ಕಂಡು ಕೊಂಡಾಡುತ್ತಿದ್ದ ಅವರು "ದೇಸಾಯಿ, ಮುಂಬೈಗೆ ಬಂದುಬಿಡು" ಎಂದು ಒತ್ತಾಯಿಸಿದಾಗ ಹಾಗೇ ಸುತ್ತಾಡಿ ಬಂದರಾಯಿತೆಂದು ಮುಂಬೈ ಗಾಡಿ ಏರಿದರು. ಆ ಮಹಾನಗರಕ್ಕೆ ಮನಸೋತರು. ತಮ್ಮ ಕಲಾವಿಕಾಸಕ್ಕೆ ಇದು ತಕ್ಕ ಸ್ಥಳವೆಂದರಿತು ಅಲ್ಲಿಯೆ ನೆಲಸಬಯಸಿದರು. ಆದರೆ ಸುಮ್ಮನೇ ಇರುವುದೆ? ಚಿಕ್ಕದೊಂದು ಕೆಲಸ ಸಿಕ್ಕಿತಾದರೂ ಅಲ್ಲಿ ಹೆಚ್ಚು ಕಾಲ ಮುಂದೊರೆಯಲಿಲ್ಲ. ಉಪಜೀವನವೂ ಸಾಗಬೇಕು—ಚಿತ್ರಕಲೆಯ ಶಿಕ್ಷಣವೂ ಆಗಬೇಕು. ಕಾರುಗಳ ನಿರ್ಮಾಣ ಸಂಸ್ಥೆ ಪ್ರೀಮಿಯರ್ ಆಟೋಮೊಬೈಲ್ಸ್ ದೇಸಾಯರಿಗೆ ಕೆಲಸ ಕೊಟ್ಟು ಮನೆಯನ್ನೂ ನೀಡಿತು. ದೇಸಾಯಿ ಅಲ್ಲಿ ಕಲಾವಿದನಾಗಿ ಸೇರಿಕೊಂಡರು.

ಮುಂಬೈಯಲ್ಲಿ ಕನ್ನಡಿಗ ಕಲಾಗುರು ದಂಡಾವತಿ ಮಠರು ಸ್ಥಾಪಿಸಿದ್ದ ನೂತನ ಕಲಾಮಂದಿರದಲ್ಲಿ ಕಲಾಶಿಕ್ಷಣ ಮುಂದುವರಿಸಿದರು. ಸಂಜೆಯವರೆಗೆ ವೃತ್ತಿ, ಅನಂತರ ಪ್ರವೃತ್ತಿ.

ಈಗ ದೇಸಾಯರು ಕೆಲ ವಿಷಯಗಳ ಕುರಿತು ಫೋಟೋ ತೆಗೆಯುವುದರ ಜತೆಗೆ ಲೇಖನ ಬರೆಯುವತ್ತಲೂ ಗಮನ ಹರಿಸಿದರು. ತಾವು ಕಲಿತ ನೂತನ ಕಲಾಮಂದಿರದ ಬೆಳ್ಳಿಹಬ್ಬದ ಸಂದರ್ಭದಲ್ಲಿ ಅ ಕುರಿತು ಕನ್ನಡ ಪತ್ರಿಕೆಗಳಿಗೆ ಬರೆದರು. ಅಲ್ಲಿಂದ ಕಲಾವಿದರನ್ನು, ಲೇಖಕರನ್ನು, ಜಾನಪದ ಕಲಾಕಾರರನ್ನು ಕನ್ನಡಿಗರಿಗೆ ಚಿತ್ರ-ಲೇಖನಗಳ ಮೂಲಕ ಪರಿಚಯಿಸುವ ಕೆಲಸಕ್ಕೆ ತೊಡಗಿದರು.

ಕೋಯ್ನಾ ಭೂಕಂಪ, ಪಾನಶೇಟ ಅಣೆಕಟ್ಟು ಒಡೆದ ಸಂದರ್ಭಗಳಲ್ಲಿ ಕೂಡಲೇ ಅಲ್ಲಿ ಹೋಗಿ ಚಿತ್ರ ತೆಗೆದು ಸವಿವರ ವರದಿ ಬರೆದು ಕನ್ನಡ ಪತ್ರಿಕೆಗಳಿಗೆ ಕಳಿಸಿದರು. ಛಾಯಾಚಿತ್ರಕಾರನಾಗಿ ದೇಸಾಯರು ದೇಶ ಸುತ್ತಿದ್ದಾರೆ. ಬರಿಗಣ್ಣಿಗೆ ಕಾಣುವ ವಸ್ತುಗಳನ್ನು, ಕಟ್ಟಡಗಳನ್ನು, ವಾಸ್ತುಶಿಲ್ಪಗಳನ್ನು ಈ ಕಲಾವಿದ ಕೆಮರಾ ಕಣ್ಣಿನ ಮೂಲಕ ಅಂದವಾಗಿ ಸಿಟ್ಟು ತೋರಿಸಿದ್ದಾರೆ. ವಿಜಾಪುರದ ಸ್ನೇಹಿತನೊಬ್ಬನಿಗೆ ತನ್ನೂರಿನ ಗೋಳಗುಮ್ಮಟವಾಗಲಿ, ಬಾರಾ ಕಮಾನಾಗಲಿ ಇಷ್ಟು ಚಂದ ಇವೆ ಎಂದೇ ಗೊತ್ತಿರಲಿಲ್ಲವಂತೆ. ದೇಸಾಯರು ತೆಗೆದ ಫೋಟೋ ನೋಡಿ ಆತ ಆಚ್ಚರಿಗೊಂಡ. ರಾಜಸ್ಥಾನದ ಜೈಪುರಕ್ಕೆ ಹೋಗಿ ಬಂದ ಇನ್ನೊಬ್ಬ ಸ್ನೇಹಿತ "ದೇಸಾಯರ ಫೋಟೋ ನೋಡಿ ನನಗೆ ಆ ಊರು ಇನ್ನೂ ಸುಂದರ ಎನಿಸಿತು" ಎಂದ.

ದೇಸಾಯರೀಗ ಪ್ರಾಚೀನ ವರ್ಣಚಿತ್ರಗಳು ಹಾಗೂ ಆದಿವಾಸಿಗಳ ಚಿತ್ರಕಲೆಯನ್ನು ಸೆರೆಹಿಡಿಯುವತ್ತ ಗಮನಹರಿಸಿದ್ದಾರೆ. ಠಾಣಾ ಜಿಲ್ಲೆಯ ಕೆಲವೆಡೆ ಹಾಗೂ ದಹಾನು ತಾಲೂಕಿನ ಗುಡ್ಡಗಾಡಲ್ಲಿ ವಾಸಿಸುವ ವಾರಲಿ ಗಿರಿಜನರ ಜೀವನ-ಚಿತ್ರಕಲೆಯ ಮೇಲೆ ಬೆಳಕು ಚೆಲ್ಲಿದ್ದಾರೆ. ನೊನ್ನೆಯಷ್ಟೇ ಸೊಲ್ಲಾಪುರದಲ್ಲಿ 200 ವರ್ಷಗಳ ಹಿಂದೆ ಜೀವಿಸಿದ್ದ ಸಂತಕವಿ ಶುಭರಾಮ ಎಂಬುವನು ರಚಿಸಿದ ವರ್ಣಚಿತ್ರಗಳ ಸ್ಲೈಡುಗಳನ್ನು ಮಾಡಿಕೊಂಡು ಬಂದಿದ್ದಾರೆ. "ಇವುಗಳನ್ನು ಸರ್ಕಾರವಂತೂ ಕಣ್ಣೆತ್ತಿ ನೋಡುತ್ತಿಲ್ಲ. ಅವುಗಳ ಮಹತ್ವ ತಿಳಿದ ನಾವಾದರೂ ಈ ರೀತಿಯಿಂದ ರಕ್ಷಿಸಿ ಮುಂಪೀಳಿಗೆಗೆ ಒದಗಿಸಬೇಕಲ್ಲ" ಎನ್ನುತ್ತಾರೆ.

ಚಿತ್ರ ರಚಿಸಿ ದೊಡ್ಡ ಕಲಾವಿದನೆಂಬ ಕೊಂಬು ಹಚ್ಚಿಕೊಂಡು ಕುಣಿದಾಡುವ, ಕಾಸಿಗೊಂದು ಕೊಸರಿಗೊಂದು ಇಂಥ ಕಲಾವಿದರಿರುವ ಈ ಕಾಲದಲ್ಲಿ ದೇಸಾಯಿಯಂಥವರನ್ನು ಯಾರು ಗಮನಿಸಿದ್ದಾರೆ? ಅವರ ಕೆಲಸವನ್ನು ಕರ್ನಾಟಕದ ಮಹಾ ಕಲಾವಿದ ಪುಂಗವರಲ್ಲಿ ಯಾರು ಗುರುತಿಸಿದ್ದಾರೆ?

ಪ್ರಾಚೀನ ಚಿತ್ರಕಲೆಯ ತಾಣಗಳನ್ನು ಹುಡುಕಿ ಅವುಗಳನ್ನು ಸೆರೆಹಿಡಿದು ಪ್ರತಿಕೃತಿ ತಯಾರಿಸಿ ರಕ್ಷಿಸಿಡುವ ಕೆಲಸವನ್ನು ಮುಂದೊರೆಸಿಕೊಂಡು ಹೋಗಲು ಅವರಿಗೆ ಪ್ರೋತ್ಸಾಹ ನೀಡಬೇಕಾದದ್ದು ಅಕಾಡೆಮಿ ಮಾಡಬಹುದಾದ ಮಹತ್ವದ ಕೆಲಸ. —

ಅತಿ ಬೆಲೆಬಾಳುವ ಪುಸ್ತಕ

ಚೀನಾ 'ಸಧರ್ಮ ಪುಂಡರೀಕ ಸೂತ್ರ' ಹೆಸರಿನ ಒಂದು ಧಾರ್ಮಿಕ ಪುಸ್ತಕವನ್ನು ಪ್ರಕಟಿಸಿದೆ. ಈ ಪುಸ್ತಕದ ಬೆಲೆ 22,000 ರೂ. ಇದು ವಿಶ್ವದಲ್ಲೇ ಅತ್ಯಂತ ಬೆಲೆಯ ಪುಸ್ತಕ.

ಈ ಪುಸ್ತಕದಲ್ಲಿ ಭಗವಾನ್ ಬುದ್ಧನ ಉಪದೇಶವಿದೆ.

ಕನ್ನಡಕಗಳ ಕಳ್ಳ

ಫಿಲಾಡೆಲ್ಫಿಯಾದಲ್ಲಿ ಬೆಲೆಬಾಳುವ ಕನ್ನಡಕಗಳ ಫ್ರೇಂಗಳನ್ನು ಉಪಯೋಗಿಸುವ ಹವ್ಯಾಸ ಅಲ್ಲಿಯವರಲ್ಲಿ ಹೆಚ್ಚಾಗಿದೆ. ಈ ಕನ್ನಡಕಗಳ ಫ್ರೇಂ ಬೆಲೆ ರೂ. 850 ರಿಂದ ರೂ. 1500.

ಈ ಕನ್ನಡಕಗಳನ್ನು ಕಳ್ಳರು ಅಪಹರಿಸುವುದು ಹೆಚ್ಚಾಗಿ ಫ್ಯಾಷನ್ ಪ್ರಿಯ ಕನ್ನಡಕಧಾರಿಗಳಿಗೆ ಬಹು ಕಷ್ಟವಾಗಿದೆ.

—ಎನ್.ಕೆ.ಎನ್.

॥ ಶ್ರೀ ಗಜಾನನ ಪ್ರಸನ್ನ ॥

ಹಾವೇರಿ ತಾಲೂಕ ಕನವಳ್ಳಿಯಲ್ಲಿ

ಸಂಗೀತೋತ್ಸವ ಹಾಗು ಚಿತ್ರಕಲಾಪ್ರದರ್ಶನ

ಪ್ರತಿಸಲದಂತೆ ಶ್ರೀ ಗಣೇಶೋತ್ಸವದ ನಿಮಿತ್ತವಾಗಿ
ಆನಂದವನದ ಪೂಜ್ಯ **ಶ್ರೀ ಚಿದಂಬರ ಸ್ವಾಮಿಗಳ** ಸನ್ನಿಧಿಯಲ್ಲಿ
ದಿನಾಂಕ ೮ ನೇ **ಸಪ್ಟಂಬರ ೧೯೭೪** ರ ರಾತ್ರಿ **೯-೩೦ ಕ್ಕೆ**
(ಸ್ಥಳ: ಎಲ್ ಎ. ನಾಡಿಗೇರ ಇವರ ನಿವಾಸ)

ಸಂಗೀತ ಸಮಾರಂಭ ನಡೆಯುವದು.

ಅಂದು ಕೆಳಗಿನ ಕಲಾವಿದರಿಗೆ ಸತ್ಕಾರ

೧. **ಶ್ರೀ ಅರ್ಜುನಸಾ ನಾಕೋಡ** ಆಕಾಶವಾಣಿ ಕಲಾವಿದರು ಧಾರವಾಡ.
೨. **ಶ್ರೀ ಎನ್. ಸಿ. ದೇಸಾಯಿ** (ಅಗಡಿ) ಚಿತ್ರಕಲಾವಿದರು.
೩. **ಕುಮಾರಿ ಸಂಗೀತಾ ಕಟ್ಟಿ** ಧಾರವಾಡ ಉದಯೋನ್ಮುಖ ಸಂಗೀತ ಕಲಾವಿದೆ.

ಈ ಕಾರ್ಯಕ್ರಮಕ್ಕೆ ಮಾನ್ಯ **ಶ್ರೀ ಬಿ ರಾಘವೇಂದ್ರರಾವ** ಸಹಾಯಕ ಕಮೀಶನರ ಹಾವೇರಿ
ಶ್ರೀ ನೆಜ್ಜೂರ ತಹಶೀಲದಾರ ಹಾವೇರಿ.
ಹಾಗು ಮಾನ್ಯ **ಶ್ರೀ ಎಂ. ಪಿ. ಜಾಲಿ** ನಿವೃತ್ತ D. D. P. I. ಕನವಳ್ಳಿ ಇವರು
ಉಪಸ್ಥಿತರಿರುವರು.

ಈ ಕಾರ್ಯಕ್ರಮದಲ್ಲಿ ತಾವು ಭಾಗವಹಿಸಿ ಗಣೇಶನ ಕೃಪೆಗೆ ಪಾತ್ರರಾಗಬೇಕೆಂದು ಬೇಡಿಕೆ.

ಕನವಳ್ಳಿ
೧-೯-೧೯೭೪

ತಮ್ಮವನೇ ಆದ
ಎಲ್. ಎ. ನಾಡಿಗೇರ

ಪಿ. ಸೂ. ಸನ್ಮಾನಿತರಾದ ಶ್ರೀ ಎನ್. ಸಿ. ದೇಸಾಯಿ ಇವರ ವರ್ಣರಂಜಿತ ಚಿತ್ರಗಳನ್ನು ಪ್ರದರ್ಶನಕ್ಕೆ ಇಡಲಾಗುವದು.

(ಕಾರ್ಯಕ್ರಮದ ವಿವರ ಹಿಂಬದಿಯಲ್ಲಿ)

ಕರ್ನಾಟಕ ಸರಕಾರ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಧಾರವಾಡ

ಚಿತ್ರಕಲಾ ಮತ್ತು ಜಾನಪದ ಉತ್ಸವ

ದಿನಾಂಕ ೧೭, ೧೮, ೧೯ ಮತ್ತು ೨೦
ಮಾರ್ಚ ೧೯೮೭

ಹುಬ್ಬಳ್ಳಿ ಆರ್ಟ ಗ್ಯಾಲರಿ

ಸರ್ವರಿಗೂ ಸ್ವಾಗತ

ಮ. ಗು. ಸದಾನಂದಯ್ಯ
ಸಹಾಯಕ ನಿರ್ದೇಶಕರು

ಸಪ್ತಮಂಡಲ

ನಾಟಕೋತ್ಸವ

(ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಪುರಸ್ಕೃತ)

ಸಂಸ್ಥಾಪಕ :
ಜಯತೀರ್ಥ ಜೋಶಿ

ನಿರ್ಮಾಪಕರು :
ಗೋಪಾಲ ವಾಜಪೇಯಿ
ವಿರೂಪಾಕ್ಷ ನಾಯಕ

ವಿಶೇಷ ಆಮಂತ್ರಿತರು :
ಶ್ರೀ ಮ. ಗು. ಸದಾನಂದಯ್ಯ,
ಸಹಾಯಕ ನಿರ್ದೇಶಕರು
ಕನ್ನಡ-ಸಂಸ್ಕೃತಿ ಇಲಾಖೆ,
ಧಾರವಾಡ

ಸಮಿತಿಯ ಸದಸ್ಯರು :
ಬಾಳಣ್ಣ ಶೀಗೀಹಳ್ಳಿ
ಡಿ. ಬಿ. ಹಿರೇಮಠ
(ಗ್ರಾಮೀಣ ರಂಗಚೇತನ [illegible])

ಎಸ್. ಎಸ್. ದೇಶಪಾಂಡೆ
ಕೃಷ್ಣ ಕಟ್ಟಿ
(ಕರ್ನಾಟಕ ಕಲೋದ್ಧಾರಕ ಸಂಘ
ಧಾರವಾಡ)

ರಾಘವೇಂದ್ರ ಹುನಗುಂದ
ಅರವಿಂದ ಕುಲಕರ್ಣಿ
(ಅಭಿನಯ ಭಾರತಿ ಹುಬ್ಬಳ್ಳಿ)

ದಿ. ೨೩. ೨. ೮೭

ಶ್ರೀ ಎನ್.ಸಿ. ದೇಸಾಯಿಯವರೆ,

ವಂದನೆಗಳು.

ನಮ್ಮ ನಾಟಕೋತ್ಸವದ ಅಂಗವಾಗಿ ದಿ. ೨೮-೨ರ ಸಂಜೆ ನಡೆಯುವ ರಂಗಗಣ್ಯರ ಸತ್ಕಾರ ಸಮಾರಂಭದ ಮುಖ್ಯ ಅತಿಥಿಗಳಾಗಿ ಬರಲು ಒಪ್ಪಿಕೊಂಡದ್ದಕ್ಕೆ ಕೃತಜ್ಞ.

ಅಂದು ಸಂಜೆ ನಿಮ್ಮನ್ನು ಕರೆದೊಯ್ಯಲು ನಾವು ಬರುತ್ತೇವೆ.

ದಯವಿಟ್ಟು ನಾಟಕೋತ್ಸವದ ಮೂರೂ ದಿನ ನೀವು ನಮ್ಮೊಂದಿಗಿರಬೇಕೆಂದು ವಿನಂತಿ.

ತಮ್ಮ

[signature]

(ನಿರ್ಮಾಪಕ)

ವ್ಯವಹಾರ ವಿಳಾಸ: ಗೋಪಾಲ ವಾಜಪೇಯಿ, ಪತ್ರಕರ್ತ, ಬ್ಯಾಹಟ್ಟಿ ಪ್ಲಾಟ್ಸ್, ದೇಶಪಾಂಡೆ ನಗರ, ಹುಬ್ಬಳ್ಳಿ - ೫೮೦ ೦೨೯

SRISHTI
ADVERTISING
23, GOAN TOWER, LAMINGTON ROAD, HUBLI-580 020. Phone: 65099

Ref. No. INTD/CLT/ *Date* ____________

Dear Sir,

We are very happy to introduce ourselves as a newly started Advertising Agency with a Bombay back-ground.

We are a full-feldged ad-agency with an independent art department and facilities for copywriting and photography. In addition to Media-publicity we also undertake creation, designing and publication of posters, leaflets, booklets, brochures, annual reports, calenders etc. We intend to expand our activity to include out-door publicity such as hoardings, slides, bus-panels and publicity over All India Radio and Doordarshan. We hope to fulfill the long felt needs of this region in the field of commercial Art and Advertising. We will also help you to get all your printing problems solved.

We profess to maintain high ethical and business standards and are seeking accreditation of the authentic institutions in the field.

Hope you will assign your valued advertising account to us. Enquiries regarding casual advertisements are also welcome.

Thanking you.

yours faithfully
For SRISHTI ADVERTISING

(N. C. DESAI)
Managing Partner

SRISHTI
ADVERTISING
23, GOAN TOWER,
LAMINGTON ROAD
HUBLI 580 020
PHONE 65099

ಶ್ರಮದ ಶಿವ

❋ ದತ್ತಾತ್ರಯ ಯಲ್ಲಾಪುರ

ಒಂದೂರು. ಅದು ಸಂಪದ್ಭರಿತ ಹಳ್ಳಿ. ಎಲ್ಲರೂ ಮೈ ಮುರಿದು ದುಡಿದು, ಸುಖವಾಗಿ ಬದುಕುತ್ತಿದ್ದರು. ಆ ಹಳ್ಳಿಯಲ್ಲಿ 'ಶಿವ' ಎಂಬ ಯುವಕ ಮಾತ್ರ ಮಹಾ ಸೋಮಾರಿ. ಅವನು ತನ್ನವರೆಂದು ಯಾರೂ ಇರದ ಪರದೇಶಿ. ಯಾರಾದರೂ ಅವನ ಬಗ್ಗೆ ಕನಿಕರದಿಂದ 'ಶಿವಾ, ನಿನಗೆ ಕೆಲಸ ಕೊಡುವೆ ಬಾ ಮಾಡಿಹಾಯಾಗಿರುವೆಯಂತೆ' ಅಂದರೆ, ಈ ಆಲಸಿ ಶಿವ ಮರುದಿನದಿಂದ ಅವರಿಗೆ ಮುಖವನ್ನೇ ತೋರಿಸದೇ ತಲೆಮರೆಸಿಕೊಳ್ಳುತ್ತಿದ್ದ. ಇದರಿಂದಾಗಿ ಆತ 'ಆಲಸಿ ಶಿವ' ಎಂದೇ ಜನರ ಬಾಯಲ್ಲಿ ಪ್ರಚಲಿತಗೊಂಡ. ಅವನಿಗೆ ಗೌರವ, ಬೆಲೆಯೇ ಇಲ್ಲವಾಯ್ತು. ಕೊನೆಗೊಮ್ಮೆ ಅವನಿಗೆ ಆ ಹಳ್ಳಿಯಲ್ಲಿ ಬದುಕುವುದೇ ಕಷ್ಟವಾಯಿತು. ಆಗ ಅವನಿಗೆ ತನ್ನಮೇಲೆ ತನಗೇ ಅಸಹ್ಯವಾಯಿತು. ಆದರೆ ದುಡಿಮೆಯರಿಯದ ಶರೀರ ಕೆಲಸ ಮಾಡಲು ಬಗ್ಗಲಿಲ್ಲ, ತನಗಿನ್ನು ಬದುಕಿರುವುದಕ್ಕಾಗದೆಂದು ತಿಳಿದು, ಪ್ರಾಣದ ಮೇಲೆ 'ವಿರಕ್ತಿ' ಹುಟ್ಟಿತು. ಆತ್ಮಹತ್ಯೆ ಮಾಡಿಕೊಳ್ಳಲು ನಿರ್ಧರಿಸಿಬಿಟ್ಟ, ಅದಕ್ಕಾಗಿ ಊರಹೊರಗಿನ 'ಹಾಳುಬಾವಿ'ಯ ಹತ್ತಿರ ಹೋದನು. ಆ ಮಹಾಬಾವಿಯನ್ನು ಇಣುಕಿ ನೋಡಿದಾಗಲೇ ಎದೆ 'ಧಸಕ್' ಎಂದಿತು. ಮೇಲಿಂದ ಹಾರಲು ಧೈರ್ಯಸಾಲದೆ ಹಾಗೇ ನಿಂತುಕೊಂಡನು.

ಬಾವಿಯ ಹತ್ತಿರದಲ್ಲೇ ಒಂದು ಮಹಾನ್ ವೃಕ್ಷದ ಬುಡದಲ್ಲಿ ಕುಳಿತು ಕಟ್ಟಿಗೆ ಹೊರೆ ಕಟ್ಟುತ್ತಿದ್ದ ಸಾಧು ಒಬ್ಬ 'ಶಿವನ' ಚಟುವಟಿಕೆಗಳನ್ನೆಲ್ಲಾ ಗಮನಿಸಿಕೊಂಡಿದ್ದನು. ಆತ ಕೆಲಸಮಯದ ನಂತರ, ಶಿವನನ್ನು ಕುರಿತು

ಮಕ್ಕಳ ಕತೆ

'ಮಗೂ ಇಲ್ಲಿ ಬಾ...... ನಿನಗೆ ಬಂದಿರುವ ಕಷ್ಟವೇನೆಂದು ತಿಳಿಸು. ನನ್ನ ಕೈಲಾಗುವ ಸಹಾಯ ಮಾಡುತ್ತೇನೆ' ಎಂದನು. ಶಿವ ಓಡೋಡಿ ಸಾಧುವಿನ ಪಾದಕ್ಕೆರಗಿ ತನ್ನ ವ್ಯಥೆಯ ಕಥೆಯನ್ನು ಸವಿಸ್ತಾರವಾಗಿ ಹೇಳಿದ.

ಸ್ವಾಮಿ, ಕಷ್ಟಪಡದೇ ಹಣಗಳಿಸಿ ಸುಖವಾಗಿರಬೇಕೆಂಬುದು ನನ್ನಾಸೆ! ಇದನ್ನೀಡೇರಿಸಿ ಸ್ವಾಮಿ...... ನಿಮ್ಮನ್ನು ಎಂದೆಂದಿಗೂ ಮರೆಯಲಾರೆ' ಎಂದು ಅಂಗಲಾಚಿದ. ಅಲೌಕಿಕ ಜ್ಞಾನ ಪಡೆದ ಸಾಧುವಿಗೆ ಶಿವನ ಅಂತರ್ಯ ಅರಿವಾಯಿತು. ನಸಿನಕ್ಕ, 'ಮಗೂ ಇಲ್ಲಿ ನೋಡು' ಎಂದು ಕೈ ಬೆರಳು ಮಾಡಿ ತೋರಿದ. ಅಲ್ಲೊಂದು ಇರುವೆ ತನಗಿಂತ ದೊಡ್ಡದಾದ ಸೊಳ್ಳೆಯ ಶವವನ್ನು ಕಚ್ಚಿಕೊಂಡು ಆಗದಿದ್ದರೂ ಎಳೆದುಕೊಂಡು ಹೋಗುತ್ತಿತ್ತು. '...ನೋಡಿದೆಯಾ ಮಗೂ? ಶ್ರಮಪಡದೇ ಸುಖವಿಲ್ಲ! ...ಬದುಕಬೇಕಾದರೆ ಕಷ್ಟವನ್ನು ಅನುಭವಿಸಲೇ ಬೇಕು!' ಮನುಷ್ಯನಾದವಂಥೂ ಕಷ್ಟಕ್ಕೆಂದೂ ಹೆದರಲೇ ಬಾರದು.' ಎಂದನು.

ಸ್ವಾಮಿ, ನಿಮ್ಮಂಥ ಮಹಾತ್ಮರೇ ಹೀಗೆಂದ ಮೇಲೆ ನಾನು ಬದುಕುವುದು, ಅಸಾಧ್ಯ! ... ಆತ್ಮಹತ್ಯೆ ಅನಿವಾರ್ಯವೆನ್ನಿಸುತ್ತದೆ!!' ಎಂದು

'ಸರಿ... ಮಗೂ ನಿನ್ನಿಷ್ಟದಂತೇ ನಡೆ! ಆದರೆ ಇಂದು ಸೂರ್ಯಾಸ್ತದವರೆಗೆ ನನಗೊಂದು ಉಪಕಾರ ಮಾಡು. ನಾನು ಒಂಟಿ ಮುದುಕ. ಶಕ್ತಿಗುಂದಿದೆ. ಕಟ್ಟಿಗೆ ಕಡಿದು ತಂದು, ಹೊರೆಕಟ್ಟಿ, ಹೊರುವುದೆಲ್ಲ ದುಸ್ಸಾಧ್ಯವಾಗುತ್ತಿದೆ! ಸ್ವಲ್ಪಹೊತ್ತು ನಾನು ವಿಶ್ರಮಿಸಿಕೊಳ್ಳುತ್ತೇನೆ. ನೀನು ಅನ್ಯಥಾ ಭಾವಿಸದೇ ಅಲ್ಲಿಯ ವರೆಗೆ ಇಲ್ಲೇ ಸುತ್ತಲೂ ಇರುವ ಒಣ ಕಟ್ಟಿಗೆಗಳನ್ನು ಕಡಿದು, ಹೊರೆ ಕಟ್ಟು!... ಸಾಯುವ ಮೊದಲು ಪುಣ್ಯ ಗಳಿಸಬೇಕು...' ಎಂದು ಹೇಳಿದ.

ಸಾಧು ಹೇಳಿದಂತೆ ಕೇಳಿದರೆ ಕೊನೆಗೆ ಕರುಣೆ ಬಂದಾದರೂ, ತಾನು ಕಷ್ಟಪಡದೇ ಸುಖವಾಗಿರಬಹುದಂಥಾ ಮಂತ್ರ ಉಪದೇಶಿಸಬಹುದೆಂದುಕೊಂಡು, ಶಿವ ಸಾಧು ಹೇಳಿದ ಕೆಲಸ ಮಾಡಲು ಒಪ್ಪಿಕೊಂಡ. ಸಂಜೆಯಾಗುತ್ತಿದ್ದಂತೇ ಹತ್ತಾರು ಹೊರೆ ಒಣ ಕಟ್ಟಿಗೆಗಳನ್ನು ಕಡಿದು ಹೊರೆ ಕಟ್ಟಿದ. ಅಷ್ಟರಲ್ಲೇ ಸಾಧು ನಿದ್ದೆಯಿಂದೆದ್ದನು. ಶಿವನ ಕೆಲಸ ಕಂಡು ಸಾಧು ಸಂತುಷ್ಟನಾದ. ಶಿವನಿಗೆ ಬುದ್ಧಿ ಕಲಿಸಲು ಇದೇ ತಕ್ಕ ಸಮಯವೆಂದುಕೊಂಡ ಸಾಧು, ಅವನನ್ನು ಕರೆದು, ಮಗೂ, ನೀನು ತಯಾರಿಸಿದ ಕಟ್ಟಿಗೆ ಹೊರೆಗಳನ್ನೆಲ್ಲಾ ಆಹಾಳು ಬಾವಿಗೆ ಎಸೆದು ಬಿಡು! ಅವುಗಳಿಂದೇನು ಉಪಯೋಗ? ಎಂದನು. ಇದರಿಂದ ಶಿವ ಬೆಚ್ಚಿಬಿದ್ದ! ಇಷ್ಟುಹೊತ್ತು ತಾನು ಕಷ್ಟಪಟ್ಟು ಬೆವರು ಸುರಿಸಿ ಕಡಿದು ಕಟ್ಟಿದ ಕಟ್ಟಿಗೆ ಹೊರೆಯನ್ನು ಬಾವಿಗೆ ಎಸೆಯುವುದೇ? ಎಂಥಾ ಹುಚ್ಚು ಕೆಲಸ!

'ಸ್ವಾಮಿ, ನೀವಿದೇನು ಹೇಳಿದಿರಿ? ಇದನ್ನು ಮಾರಿದರೆ, ಹಣ ಬರುತ್ತದೆ. ಜನ ಕಟ್ಟಿಗೆಯನ್ನು ಕೊಂಡು ಬಳಸುತ್ತಾರೆ. ನಿಮಗೂ ಅನ್ನ ಸಿಗುತ್ತದೆ ಹೊಟ್ಟೆಗೆ! ಇಂಥ ಪ್ರಯೋಜನಕಾರಿ ವಸ್ತುವನ್ನು ಸುಮ್ಮನೇ ಬಾವಿಗೆಸೆಯುವುದೇ?' ಎಂದು ಕೇಳಿದ. ಶಿವನ ಈ ಮಾತಿನಿಂದ ಸಾಧು ಆಶ್ಚರಿಗೊಂಡ. ಆತ ಶಿವನಿಂದ ಈ ಮಾತನ್ನೇ ನಿರೀಕ್ಷಿಸಿದ್ದನೆನ್ನಿ! ಕೂಡಲೇ ಸಾಧು, 'ಮಗೂ, ಸತ್ಯವನ್ನೇ ಹೇಳಿದೆ. ಈ ಲೋಕದಲ್ಲಿ ಉಪಯೋಗಕ್ಕೆ ಬಾರದೇ ಇರುವ ವಸ್ತು ಯಾವುದೂ ಇಲ್ಲ, ಒಬ್ಬರಿಗಿಲ್ಲದಿದ್ದರೆ, ಇನ್ನೊಬ್ಬರಿಗ್ವಾದರೂ ಆ ವಸ್ತು ಮಹತ್ತರವಾದ ಉಪಯೋಗಕ್ಕೆ ಬರುತ್ತದೆ. ಅಂದಮೇಲೆ ಮನುಷ್ಯನಿಂದ ಈ ಸಮಾಜ, ದೇಶ ಮಹತ್ತರವಾದ ಕೊಡುಗೆಗಳನ್ನು ಬಯಸಿದೆ. ನಿನ್ನನ್ನು ನೀನೇ ಪ್ರಶ್ನಿಸಿಕೋ. ನಿನ್ನ ಕರ್ತವ್ಯವನ್ನು ನೀನು ಮಾಡಿಮುಗಿಸಿದೆಯೋ? ನಿನ್ನಿಂದಾಗಬೇಕಿದ್ದ ಉಪಯೋಗ ಆಗಿಹೋಯಿತೋ? ನಿನ್ನಿಂದ ದೇಶ ಬಲಿಷ್ಠವಾಗಬೇಕಿದೆ. ಇಂತಿರುವಾಗ ನೀನು ಆತ್ಮಹತ್ಯೆ ಮಾಡಿಕೊಳ್ಳುವುದು ಸಮಂಜಸವೋ?' ಎಂದೆಲ್ಲ ಸಾಧು ಪ್ರಶ್ನಿಸಿದ.

ಶಿವನಿಗೀಗ ಚೇಳು ಕುಟುಕಿದಂತಾಯ್ತು. ಝುಡಿಸಿ ಎದ್ದಂತಾಯ್ತು. ಸಾಧು ತನ್ನ ಕಣ್ಣು ತೆರೆಸಿದ ಎಂದುಕೊಂಡ. ಕೂಡಲೇ ಸಾಧುವಿನ ಪಾದಕ್ಕೆರಗಿ ತಾನು ಇನ್ನು ಮುಂದೆ ಜನಹಿತವಾಗಿ, ಉಪಯೋಗಿಯಾಗಿ ಬಾಳುತ್ತೇನೆಂದು ಪ್ರತಿಜ್ಞೆ ಮಾಡಿದ. ಸಾಧುವಿಗೆ ನಮಸ್ಕರಿಸಿ ಊರಿಗೆ ಹಿಂತಿರುಗಿ ಬಂದ. ನಂತರ ಅವರಿವರ ಹತ್ತಿರ ಒಳ್ಳೆ ಶ್ರಮವಹಿಸಿ ದುಡಿದು, ಊರಲ್ಲಿ ಒಳ್ಳೇ ಹೆಸರು ಗಳಿಸಿದ. ಕಾಲಕ್ರಮೇಣ ಶಿವನಿಗೆ ಹಣವೂ, ಒಳ್ಳೇ ಹೆಸರೂ ಬಂತು. ಜನ

ಪರ್‍ಯಾ ನಾನು ಜಿಗ್ರಿ ದೋಸ್ತರು. ಸಾರಿ! ಆಫೀಸಿನಾಗ ನಾನು ಬಾಸ್ ಅವನು ದಾಸ್. ಆಫೀಸಿನ ಹೊರಗೂ ಅವನಿಂದ ದೂರ ದೂರ ಸರಿದಂತೆಲ್ಲ ಬೆಲ್ಲದ್ಹಾಂಗ ಬಿಗಿಯಾಗಿ ಅಂಟಿಕೊಳ್ಳುವವ. ಯಾವಾಗ್ಲೂ 'ಒನ್ ಬೈ ಟೂ' ಅನ್ನುತ್ತಾ ಎಲ್ಲರ ಚಹದಾಗೂ ಪಾಲು ತಗೊಳ್ಳುವವ. ದರೋಡೆಕೋರರಂತೆ ನಮಗೆ ತಿಳಿಯದ್ಹಾಂಗ ಜೇಬಿಗೆ ಕತ್ತರಿ ಹಾಕುವವ. ಪರ್‍ಯಾನ ಜಿಗ್ರಿ ಗೆಳ್ತನ ಆದದ್ದು ಹ್ಯಾಗಂತಿರಾ ಗೊತ್ತಾ?

ಒಮ್ಮೆ ಕಂಡರಿಯದ ಅಂಡಮಾನ್ ದ್ವೀಪವಾದ ಭಾಲ್ಕಿಗೆ ವರ್ಗವಾದಾಗ, ನನ್ನ ಮೇಲಧಿಕಾರಿಗಳನ್ನು ಶಪಿಸಿ, ಅಲ್ಲಿಗೆ ಹೋಗಿದ್ದೆ. ಛಾರ್ಜು ತೆಗೆದುಕೊಂಡು ನನ್ನ ಕುರ್ಚಿಯಲ್ಲಿ ಆರಾಮವಾಗಿ ಒರಗಿದ್ದಾಗ, ದೆವ್ವದಂತೆ ಎದುರಿಗೆ ಬಂದು ನಿಂತಿದ್ದ ಪರ್‍ಯಾ ಇವನ್ಯಾರಪ್ಪಾ ನೇಪಾಳಿ ಅಂದುಕೊಳ್ಳುವಷ್ಟರಲ್ಲಿ, ತನ್ನ ಕುರಿ ತಲೆಯನ್ನು ಕೆದರಿಕೊಳ್ಳುತ್ತಾ ವಿನೀತನಾಗಿ 'ಸಾರ್' ಅಂದ. 'ಏನೆಂಬಂತೆ' ಬಾಸ್ ಠೀವಿಯಿಂದ ಅವನೆಡೆ ನೋಡಿದಾಗ 'ಚಹ ಹೇಳಲಾ' ಅಂದ. 'ಹೂಂ' ಅಂದೆ ಗತ್ತಿನಿಂದ. ಚಹಾ ಬಂದಿತ್ತು. ಚಹಾ ಕುಡಿಯುವಾಗ ಆ ಪರ್‍ಯಾ 'ಒನ್ ಬೈ ಟೂ' ಬಗ್ಗೆ ಕೊರೆದದ್ದೆ ಕೊರೆದದ್ದು.

'ಚಹಾ ಹೆಚ್ಚು ಕುಡಿದರೆ ಹಾನಿಕರ ಸಾರ್! ಆದರೆ ಕುಡಿಯದಿದ್ದರೆ ತಲೆನೋವು. ಆದ್ದರಿಂದ ಹಿತಮಿತವಾಗಿ ಒನ್ ಬೈ ಟು ಕುಡಿದರೆ ಖರ್ಚು ಕಡಿಮೆ. ಆರೋಗ್ಯಕ್ಕೂ ಒಳ್ಳೇದು. ಹಣದ ಉಳಿತಾಯವಾಗುವುದು. ಗೆಳೆತನ ಬೆಳೆಯುವುದು. ಈ ಭಾಲ್ಕಿಯಲ್ಲಿ ನೀರಿನ ಸಮಸ್ಯೆ

ಪರ್‍ಯಾನನ್ನು ದರೋಡೆಕೋರ, ಜೇಬಿಗೆ ಕತ್ತರಿ ಹಾಕುವವ ಎಂದು ಅಂದುಕೊಂಡಿದ್ದ ನಾನು ಆದೊಂದು ದಿನ ಪರ್‍ಯಾ ಇಲ್ಲದನ್ನು ಕಂಡು, 'ಶನಿ ತೊಲಗಿತು' ಎಂದು ಬಯ್ದುಕೊಂಡು ಖುಶಿಯಿಂದ ಶಿಳ್ಳೆ ಹಾಕುತ್ತ 'ಮಂಜುನಾಥ' ಹೊಟೇಲಿನ ಕಡೆ ನಡೆದಿದ್ದೆ ಆದರೆ ಅರ್ಧ ದಾರಿಯಲ್ಲಿ ಪ್ರತ್ಯಕ್ಷನಾದ ಪರ್‍ಯಾ 'ನಾನು ಬರುವೆ ಸಾರ್!' ಎಂದು ಹಲ್ಲು ಕಿಸಿದ. ಆ ಹಲ್ಲುಗಳನ್ನು ಕಿತ್ತು ಬಿಸಾಡುವಷ್ಟು ಸಿಟ್ಟು ಬಂತು.

SRISHTI
ADVERTISING
23, GOAN TOWER
LAMINGTON ROAD,
HUBLI - 580 020.
PHONE : 65099

SRISHTI
ADVERTISING
23, GOAN TOWER
LAMINGTON ROAD,
HUBLI - 580 020.
PHONE : 65099

ಕರ್ಮವೀರ
ದೀಪಾವಳಿ ಸಂಚಿಕೆ ೧೯೭೩
ರೂ. 3.50

|| SHRI MALTEESH PRASANNA ||

We take pleasure to invite you, On the occasion of

" SHASHTABDH POORTI SHANTI "

of our dear father

Shri N. C. Desai

on 13th August 1984 at Anandavan Kshetra in the presence of His Holiness Poojya Shri Chidambar murthi Swamiji, Anandavan.

Please attend the function with family & friends.

Sow. Vidyavati T. Aithal.
T. S. Aithal

Vinod N. Desai.
Sow. Bharathi Vinod Desai

Post ; ANANDAVAN 4GAOI-581128 Dist : DHARWAR. KARNATAKA STATE
Tel. Address : [illegible] HAVERI.
BOMBAY [illegible] BOMBAY 400010

|| ಶ್ರೀ ಮಾಲತೇಶ ಪ್ರಸನ್ನ ||

-: ಷಷ್ಠ್ಯಬ್ಧ ಪೂರ್ತಿ ಶಾಂತಿ :-

ಸಸ್ನೇಹ ವಂದನೆಗಳು, ನಮ್ಮ ತೀರ್ಥರೂಪರಾದ

ರಾ|| ರಾ|| ಶ್ರೀ ನಾನಾಸಾಹೇಬ [illegible] ದೇಸಾಯಿ ಅಗಡಿ

(Shri N. C. Desai)

ಇವರ ಷಷ್ಠ್ಯಬ್ಧ ಪೂರ್ತಿ ಶಾಂತಿ ಕಾರ್ಯಕ್ರಮವನ್ನು
ಪರಮಪೂಜ್ಯ ಶ್ರೀ ಚಿದಂಬರ ಮೂರ್ತೀಜಿ ಸ್ವಾಮಿಗಳು ಚಕ್ರವರ್ತಿ ಆನಂದವನ-ಅಗಡಿ
ಇವರ ದಿವ್ಯ ಸಾನ್ನಿಧ್ಯದಲ್ಲಿ
ದಿನಾಂಕ ೧೩ ನೇ ಅಗಷ್ಟ ೧೯೮೪ ನೇ ಸೋಮವಾರ
ಶಕೆ ೧೯೦೬ ರಕ್ತಾಕ್ಷಿ ಸಂ|| ಶ್ರಾವಣ ಬ|| ದ್ವಿತೀಯಾ-ದಂದು
ಶ್ರೀ ಕ್ಷೇತ್ರ ಆನಂದವನದಲ್ಲಿ ನೆರವೇರಿಸಲು ಗುರುಹಿರಿಯರು ನಿಶ್ಚಯಿಸಿದ್ದಾರೆ. ಈ ಶುಭಕಾರ್ಯಕ್ಕೆ
ತಾವು ಬಂಧು ಬಳಗದವರೊಂದಿಗೆ, ಬಂದು ಶೋಭೆ ತರಬೇಕಾಗಿ ಬೇಡಿಕೆ.

ತಮ್ಮ

ಸೌ. ವಿದ್ಯಾವತಿ ಟಿ. ಐತಾಳ
ಟಿ. ಎಸ್. ಐತಾಳ

ವಿನೋದ ಎನ್. ದೇಸಾಯಿ.
ಸೌ. ಭಾರತಿ ವಿನೋದ ದೇಸಾಯಿ.

ಅಗಡಿ ೨೬-ಜುಲೈ ೧೯೮೪ ಬಹದ್ದೂರ ದೇಸಾಯಿ ಬಂಧುಗಳು- ಅಗಡಿ

"ನೇಗಿಲು ಹಿಡಿಯಬೇಕಿದ್ದ ಈ ಕೈಗಳು ಕುಂಚ ಹಿಡಿದುವೋ!"—ನಾಲ್ಕು ದಶಕಗಳ ಹಿಂದೆ ಕಾದಂಬರಿಕಾರ ನಿರಂಜನ ಹೊರಡಿಸಿದ ಉದ್ಗಾರವಿದು.

ಚಿತ್ರಕಲೆಯ ಹುಚ್ಚನ್ನಂಟಿಸಿಕೊಂಡಿದ್ದು ಅದೇ ಗುಂಗಿನಲ್ಲಿರುತ್ತಿದ್ದ ತಮ್ಮ 'ರಕ್ತ ಸರೋವರ' ಹಾಗೂ 'ಸಂಧಿಕಾಲ'ಗಳಿಗೆ ಮುಖಚಿತ್ರ ಬರೆಸಿದ ಅವರು ಆತನಲ್ಲಿ ಬೆಳೆಯುತ್ತಿದ್ದ ಕಲಾವಿದನನ್ನು ಹುರಿದುಂಬಿಸಿದರು. ಬೆನ್ನು ತಟ್ಟಿ ಮೆಚ್ಚು ನುಡಿಯಾಡಿದರು. ಅಗಡಿಯ ಈ ಹುಡುಗನಿಗೆ 'ಅಗದಿ ಆನಂದ.' ಆ ಬೆನ್ನು ತಟ್ಟುವಿಕೆಯೆ ಆತನಿಗೆ ದೊಡ್ಡ ಬಹುಮಾನ.

ಮಣ್ಣು ಹತ್ತಬೇಕಿದ್ದ ಕೈಗಳಿಗೆ ಬಣ್ಣ ಮೆತ್ತಿಕೊಂಡಿದ್ದರೆ? ಎದುರಾದ ಅಡ್ಡಿಗಳಿಗೆ ಎದೆಯೊಡ್ಡದೆ ಆತ ಊರಲ್ಲಿಯೇ ನೆಲೆಸಿದ್ದರೆ'

ನಾದಸ್ವರ-ಕೈಲವರ್ಣ

ಪ್ರಾಶಿಸಕೊಡಗಿದರೂ ದೇಸಾಯರು ದೂರದ ಬಂಗಲೆಯಲ್ಲಿಯೇ ಉಳಿದರು. ಪಕ್ಕದಲ್ಲೇ ಶ್ರೀ ಶೇಷಾಚಲ ಗುರುಗಳ ಆನಂದವನ. ಶಾಲೆ ಬಂಗಲೆಯಿಂದ ಬಲು ದೂರ. ಹೀಗಾಗಿ ಹುಡುಗ ಶಾಲೆಗೆ ಹೋಗುವುದೇನೂ ಬೇಡ ಎಂದು ಅಪ್ಪನ ಅಪ್ಪಣೆ. ನಾನಾ ಸಾಹೇಬ ಶಾಲೆಗೆ ಶರಣು ಹೊಡೆಯಬೇಕಾಯಿತು.

ಪಕ್ಕದಲ್ಲೇ ಇದ್ದ ಶ್ರೀ ಶೇಷಾಚಲ ಗ್ರಂಥಮಾಲೆ ದೇಸಾಯರ ಕಲೆಗೆ ನೀರೆರೆದು ಪೋಷಿಸಿತೆನ್ನಬೇಕು. ಆ ಪ್ರಕಾಶನದ ಅಂದಿನ ಪ್ರಕಾಶಕರಾಗಿದ್ದ ಧ. ಪ. ಕಾಳೆಯವರು ನಾನಾ ಸಾಹೇಬರಿಂದ ಪ್ರಕಾಶನಕ್ಕೆ ಕೆಲ ಚಿತ್ರಗಳನ್ನು ಬರೆಸಿದರು. ಹತ್ತಿರದ ಹಾವೇರಿಯ ಹೈಸ್ಕೂಲಲ್ಲಿ ಚಿತ್ರಕಲಾ ಶಿಕ್ಷಕರಾಗಿದ್ದ ಕಾಳಪ್ಪ ಗುಡಿಸಾಗರರಂತೂ ಹುಡುಗನ

ಪ್ರತಿಭಾ ವಿಕಾಸಕ್ಕೆ ಸಾಕಷ್ಟು ನೆರವು ನೀಡಿ, ಕಲ್ಪ ಸಲಕರಣೆಗಳನ್ನು ಉಡುಗೊರೆಯಾಗಿತ್ತು ಹರಸಿದರು. ಗ್ರಂಥಮಾಲೆಯ ಪುಸ್ತಕರಾಶಿ, ಅಲ್ಲಿಗೆ ಬರುತ್ತಿದ್ದ ಪತ್ರಿಕೆಗಳಂತೂ ಬಾಲಕನಲ್ಲಿ ಹೆಚ್ಚು ಜ್ಞಾನವುಂಟುಮಾಡಿದವು.

ತಂದೆ ಚಿದಂಬರಗೌಡರಿಗೆ ಅಸ್ವಾಸ್ಥ್ಯದ ಮೂಲಕ ಹುಬ್ಬಳ್ಳಿಯ ದವಾಖಾನೆ ಸೇರಬೇಕಾಗಿ ಬಂದಾಗ ಇವರೂ ಅಲ್ಲಿಗೆ ಹೋದರು. ಅಲ್ಲಿ ತಿಂಗಳುಗಟ್ಟಲೆ ವಾಸ್ತವ್ಯ. ಅರ್ಧಕ್ಕೆ ನಿಂತ ಶಿಕ್ಷಣವನ್ನು ಮುಂದುವರಿಸುವ ಹಟ ಹುಡುಗನಿಗೆ. ಹೊಸದಾಗಿ ಪ್ರಾರಂಭವಾಗಿದ್ದ ಒಂದು ಹೈಸ್ಕೂಲಿನಲ್ಲಿ ಸೇರ್ಪಡೆ. ಚಿತ್ರಕಲೆಯಲ್ಲಿ ಹೆಚ್ಚು ಅಭ್ಯಾಸ. ಗ್ರೇಡ್ ಪರೀಕ್ಷೆಗೆ ಕಟ್ಟ

ಮಹಿಳೆಯ ವ್ಯಕ್ತಿಚಿತ್ರ

ಈ ಕಲಾವಿದನ ಕಾರ್ಯ ಯಾರು ಗುರುತಿಸಿದ್ದಾರೆ?

ನಾನಾದೇಸಾಯಿ—ಈ ಹೆಸರು ಎಷ್ಟು ಮಂದಿಗೆ ಗೊತ್ತು? ಚಿತ್ರಕಲೆ ಹಾಗೂ ಛಾಯಾಚಿತ್ರ ಕಲೆ—ಈ ಎರಡು ಮಾಧ್ಯಮದಲ್ಲೂ ನಿಷ್ಣಾತನಾದ ಈ ಮುಂಬೈ ಕನ್ನಡಿಗ ಕಲಾವಿದ ಪ್ರಾಚೀನ ಚಿತ್ರಕಲೆಯ ಕಾಣಗಳನ್ನು ಹುಡುಕುತ್ತಾ, ಅವುಗಳನ್ನು ಸೆರೆಹಿಡಿಯುತ್ತಾ ರಕ್ಷಿಸುವ ಒಂದು ಮಹತ್ತರ ಕೈಂಕರ್ಯದಲ್ಲಿ ತೊಡಗಿದ್ದಾರೆ. ಆದರೆ ಅವರ ಈ ಕಾರ್ಯವನ್ನು ಎಷ್ಟು ಜನ ಗುರುತಿಸಿದ್ದಾರೆ?

● ವೃಷಭೇಂದ್ರಯ್ಯ

ರಾಜಾಸ್ಥಾನಿ ಮಹಿಳೆ (ಪೋಸ್ಟರ್ ಕಲೆ)

ಹೊಲ-ಮನೆ-ಎತ್ತುಗಳ ಚಿಂತೆಯೊಂದಿಗೆ ಹೆಚ್ಚೆಂದರೆ ಹಿರಿಯರ ಆಸ್ತಿಯನ್ನು ಕರಗಿಸುತ್ತ, ನಾಲ್ಕು ಜನರ ಬಾಯಲ್ಲಿ 'ಗೌಡ'ರಾಗಿ ಮೆರೆಯುತ್ತಿದ್ದನೇನೋ.

ಎನ್. ಸಿ. ದೇಸಾಯಿ ಇಂದು ಕನ್ನಡದ ಬಹುತೇಕ ಪತ್ರಿಕೆಗಳ ಮೂಲಕ ಗೊತ್ತಿರುವ ಹೆಸರು. ತಮ್ಮ ಅಪರೂಪದ ರೇಖನಗಳಿಂದ ಛಾಯಾಚಿತ್ರಗಳಿಂದ ಕನ್ನಡಿಗರ ಗಮನ ಸೆಳೆದಿದ್ದಾರೆ. ಅವರ ಬಗ್ಗೆ ತಿಳಿಯಬಯಸುವವರಿಗೆ ದೇಸಾಯಿ ಒಬ್ಬ ಮುಂಬೈ ಕನ್ನಡಿಗ ಎಂದಷ್ಟೇ ಗೊತ್ತಾಗುತ್ತದೆ. ಕಾರಣ ದೇಸಾಯಿ ಪ್ರಚಾರಪ್ರಿಯರಾಗದಿರುವುದು.

ದೇಸಾಯಿ ಅರುವತ್ತು

ಈ ಯುಗಾದಿಯಂದು ಅರುವತ್ತರ ಹೊಸಿಲು ಮೆಟ್ಟಿ ವೃತ್ತಿಯಿಂದ ನಿವೃತ್ತರಾದ ದೇಸಾಯಿಯವರು ಈಗ ಪೂರೆ ಕಳಚಿ ನಿಂತಿದ್ದಾರೆ. "ಇನ್ನು ಏನಿದ್ದರೂ ಚಿತ್ರಕಲೆ-ಛಾಯಾಗ್ರಹಣವೇ ಪೂರ್ಣಾವಧಿಯ ಕೆಲಸ" ಎನ್ನುತ್ತಾರೆ ಅವರು.

ಬಗಲಿಗೆ ನೇತುಹಾಕಿರುವ ಭಾರದ ಚೀಲದಿಂದ ಅವರು ತೆಗೆಯುವ ವಸ್ತುಗಳನ್ನು ಕಂಡಾಗ ಇಂದ್ರಜಾಲಿಕನನ್ನು ಕಂಡಂತೆ ಭಾಸ. "ಇವು ಅಪರೂಪದ ಫೋಟೋಗಳು, ಸುಮಾರು 250 ವರ್ಷದ ಹಿಂದಿನವು" ಎಂದೆನ್ನುತ್ತ ಪ್ರಾಚೀನ ವರ್ಣಚಿತ್ರಗಳ ಫೋಟೋ-ವರ್ಣಪಾರದರ್ಶಿಕೆಗಳನ್ನು ತೋರಿಸುತ್ತಾರೆ. ನೋಡುವವ ಮಂತ್ರಮುಗ್ಧ. ತೋರಿಸಿದವುಗಳ ಕುರಿತು ಸುದೀರ್ಘ ವಿವರಣೆ ನೀಡುತ್ತಾರೆ. ಅನಂತರ ಮತ್ತೆ ಮೊದಲಿನಂತೆ ಅವನ್ನೆಲ್ಲ ಅಚ್ಚುಕಟ್ಟಾಗಿ ಜೋಡಿಸಿ ಚೀಲದಲ್ಲಿಡುತ್ತಾರೆ.

ಹಿಮಾಚಲ ಪ್ರದೇಶ ಮಹಿಳೆ (ಪೋಸ್ಟರ್ ವರ್ಣ)

ಧಾರವಾಡ ಜಿಲ್ಲೆಯ ಹಾವೇರಿ ತಾಲೂಕಿನ ಅಗಡಿಯ ದೇಸಾಯರ ವಂಶದ ನಾನಾ ಸಾಹೇಬರಿಗೆ ಚಿತ್ರಕಲೆ ಚಿಕ್ಕಂದಿನಲ್ಲೇ ಅಂಟಿಕೊಂಡ ಚಟ. ಶ್ರಾವಣಮಾಸದ ಶುಕ್ರವಾರದ ಗೌರಿಯ ಚಿತ್ರಗಳನ್ನು ಗಡಿಗೆಗಳ ಮೇಲೆ ಬರೆದು ಪೂಜಿಸುವುದು ವಾಡಿಕೆ. ನಾನಾ ಸಾಹೇಬರ ಚಿಕ್ಕಪ್ಪ ಅದರಲ್ಲಿ ನಿಷ್ಣಾತ. ಇವರಿಗೂ ಅದರಲ್ಲಿ ಆಸಕ್ತಿ ಮೂಡಿ ಚಿಕ್ಕಪ್ಪನಿಗೆ ನೆರವಾಗತೊಡಗಿದರು. ಬಾಲಕನ ಪ್ರತಿಭೆ ಸುತ್ತಮುತ್ತಲಿನವರನ್ನು ಅಚ್ಚರಿಗೀಡುಮಾಡಿತು.

ಕನ್ನಡ ಎರಡನೆ ವರ್ಗದಲ್ಲಿ ಓದುತ್ತಿದ್ದಾಗ ಪ್ಲೇಗಿನ ಪಿಡುಗು. ಊರೆಲ್ಲ ದೂರ ಹೋಗಿ

ನಾದತಲ್ಲೀನ-(ಪತ್ರಿಕೆಯ ಮುಖಪುಟ;

ಕಲಾವಿದ ಎನ್. ಸಿ. ದೇಸಾಯಿ

ದರು. ಕರ್ನಾಟಕ-ಮಹಾರಾಷ್ಟ್ರ-ಗುಜರಾತ್ ಸೇರಿದ ಇಡೀ ಮುಂಬೈ ಪ್ರಾಂತಕ್ಕೆ ಮೆಟ್ರಿಕ್ ಡ್ರಾಯಿಂಗಿನಲ್ಲಿ ದೇಸಾಯರು ಸರ್ವ ಪ್ರಥಮರಾಗಿ ಪಾರಿತೋಷಕ ಗಿಟ್ಟಿಸಿದರು.

ಆಗ 1942ರ 'ಭಾರತ ಬಿಟ್ಟು ತೊಲಗಿ' ಆಂದೋಲನಕ್ಕೆ ತೀವ್ರ ಸ್ವರೂಪ. ಆನಂದವನದಲ್ಲಿ ಗಳಗನಾಥರ ಕಾದಂಬರಿಗಳಿಂದ ದೇಶಪ್ರೇಮವನ್ನು ಮೈಗೂಡಿಸಿಗೊಂಡಿದ್ದ ನಾನಾ ಸಾಹೇಬ ಕೆಲ ಹುಡುಗರೊಂದಿಗೆ ಚಳವಳಿಗೆ ಧುಮುಕಿದಾಗ 'ಊರ ಗೌಡರ ಮಗ ಚಳವಳಿಗೆ ಇಳಿದ' ಸುದ್ದಿ ಹಬ್ಬಿ ತಂದೆಗೆ ಸಿಟ್ಟು. ಯಾಕೆಂದರೆ ಆಂಗ್ಲರ ವಿರುದ್ಧ ದೇಸಾಯಿ ಮನೆತನದವರು ಚಳವಳಿ ಮಾಡಿದರೆ ಗೌಡರ ಪಟ್ಟಗಳೆಲ್ಲ ಖಾಲಸಾತ ಆದಾವೆಂಬ ಭಯ. ಮಗನಿಗೆ ಅಗಡಿಯ ಮನೆಯೇ ತುರಂಗವಾಯಿತು. ಶಿಕ್ಷಣ ಅಲ್ಲಿಗೇ ನಿಂತಿತು!

ಅಗಡಿಯಲ್ಲಿ ಹೊಲ-ಮನೆಗಳೆಂದು ಓಡಾಡುವುದರೊಂದಿಗೆ ಚಿತ್ರಕಲೆಯ ಅಭ್ಯಾಸವನ್ನೂ 'ಏಕಲವ್ಯ'ನಾಗಿ ಮುಂದುವರಿಸಿದ ನಾನಾ ಸಾಹೇಬ ಪತ್ರಿಕೆಗಳಿಗೆ ಚಿತ್ರ ಬರೆದು ಕಳಿಸತೊಡಗಿದರು. ಶಿಸ್ತಿನ ಸೇನಾನಿ ದಿ|| ನಾ. ಸು. ಹರ್ಡೀಕರರು ನಡೆಸುತ್ತಿದ್ದ 'ಹುಬ್ಬಳ್ಳಿ

ಛಾಯಾ ಚಿತ್ರ ಪ್ರದರ್ಶನ

[illegible]

ಸಂಯುಕ್ತ ಕರ್ನಾಟಕ [illegible]

ವರ್ಣಚಿತ್ರಗಳ ಸ್ಲೈಡ್ ಪ್ರದರ್ಶನ

[illegible] ಟಿಪ್ಪು ಸುಲ್ತಾನನ ಉಪ [illegible] ಕೃಷ್ಣರಾಯ ಮಹಾರಾಜರ ಎರಡುನೂರು ವರ್ಷಗಳ ಹಿಂದಿನ ವರ್ಣಚಿತ್ರಗಳ ಸ್ಲೈಡ್‌ಗಳು [illegible] ಶನಿವಾರ ದಿನಾಂಕ ೨೮ ರಂದು ಸಂಜೆ ೬-೩೦ಕ್ಕೆ ಸವಾಯಿ ಗಂಧರ್ವ ಕಲಾ ಮಂದಿರದಲ್ಲಿ [illegible] ಎಸ್ ಕೆ ದೇಸಾಯಿ [illegible] ಸ್ವಾಗತ ಇದೆ ಎಂದು ಲಲಿತ ಕಲೆಯ ಅಧ್ಯಕ್ಷ [illegible] ದೇಸಾಯಿ ತಿಳಿಸಿದ್ದಾರೆ.


ACCEPTED BY MORE NATIONAL DENTAL ASSOCIATIONS THAN ANY OTHER
Colgate
Colgate
THE WORLD LEADER IN ORAL CARE

ಸುಧಾ
ನವೆಂಬರ್ ೨೧,೧೯೬೫
40

ಸುಧಾ

ಮಾರ್ಚ್ 13,1966

ಸುಧಾ
ಮೇ 22, 1966
40
ಪೈಸೆ
N.C. Desai

ಸುಧಾ
ಜನವರಿ 1, 1967
50 ಪೈಸೆ

ಸುಧಾ
ಫೆಬ್ರವರಿ 26, 1967
50
ಪೈಸೆ

ಸುಧಾ
ಏಪ್ರಿಲ್ 27, 1969
50 ಪೈಸೆ

ಸುಧಾ
25 ಮಾರ್ಚ್ 1979
ಬೆಲೆ ರೂ. 1-00

ಸುಧಾ
4 ಫೆಬ್ರುವರಿ 1979
ಬೆಲೆ ರೂ. 1-00

ಸುಧಾ
11 ನವೆಂಬರ್ 1979
ಬೆಲೆ ರೂ. 1-00

ತರಂಗ
ಅಕ್ಟೋಬರ್ 23, 1983
ರೂ.1-50
ಶಿರ್ಡಿ
ಸಾಯಿಬಾಬಾ
ಸಂಸ್ಥಾನ

ಕೆ.ಎಸ್. ನಾರಾಯಣಾಚಾರ್ಯ

ಉತ್ಥಾನ


ಮನೆ ಮಂದಿಗೆಲ್ಲ ಮುದನೀಡುವ ಮಾಸಿಕ
ಕಸ್ತೂರಿ
ಜುಲೈ 2002
ಪಾಕೀಜಾ
ಮೀನಾಕುಮಾರಿಯ
ಹಂಸಗೀತೆ

ಸುಧಾ
25 ಮಾರ್ಚ್ 1979
ಬೆಲೆ ರೂ. 1·00

ಸುಧಾ
18 ಸೆಪ್ಟೆಂಬರ್ 1977
ರೂ.1

ಸುಧಾ
ಜುಲೈ 19.. 1970
50 ಪೈಸೆ
NcDesai

ಸುಧಾ
ಡಿಸೆಂಬರ್ 3, 1967
NCDesai
50
ಪೈಸೆ

ಸುಧಾ
ಜನವರಿ 15, 1967
50 ಪೈಸೆ

ಸುಧಾ
ಅಕ್ಟೋಬರ್ ೨, 1966
40 ಪೈಸೆ

SUDHA Illustrated Kannada Weekly 22—5—1966 REG. No. B. G. 297

ಸುಧಾ
ಆಗಸ್ಟ್ 22, 1965
40

ರಾಗಶ್ರೀ





ಸಾಪ್ತಾಹಿಕ ಉದಯವಾಣಿ [illegible]

ಟಿಟವಾಳದಲ್ಲಿಯ ಗಣಪತಿ

ಮುಂಬೈಯಲ್ಲಿ ಗಣಪತಿ

[illegible] (Trust) [illegible]

[illegible] ವಿನಾಯಕನ ಸಾನ್ನಿಧ್ಯದ [illegible] ಅತಿ ಪ್ರಸಿದ್ಧವಾದ ಜಾಗೃತ ಸ್ಥಾನ [illegible] ವಿನಾಯಕ. ಅಲ್ಲದೇ ಮುಂಬೈಯಿಂದ [illegible] ಅಂತರದ ಮೇಲೆ ಇರುವ [illegible] ಗಣಪತಿ.

[illegible] ವಿನಾಯಕನ ದರ್ಶನಕ್ಕಾಗಿ ನಿಂತಿರುವ 'ಲಾಯಿನ್' (Queue) [illegible]

[illegible] ಕೆಲ ವರ್ಷಗಳ ಹಿಂದೆ [illegible] ತಿಂಗಳಿಗೆ ಎರಡು [illegible]

[illegible] ಗಣಪತಿಗೆ [illegible] ಭಕ್ತರ [illegible] ಅಷ್ಟು ದೂರವೂ ಜನ ಹೋಗುತ್ತಾರೆ. ಪ್ರತಿ ಮಂಗಳವಾರವೂ ಹೋಗಿ ದರ್ಶನ ಪಡೆದು ಹೊತ್ತು [illegible] ಜನವೂ ಉಂಟು.

ಚಿತ್ರ - ಲೇಖನ

ಎನ್. ಸಿ. ದೇಸಾಯಿ

ದರ್ಶನಕ್ಕೆ ಯಾವ ದಿನವಾದರೇನು ಎಂದು ಸೂಟಿಯ ದಿನಗಳಲ್ಲಿಯೂ ಜನ ಕುಟುಂಬ ಸಮೇತರಾಗಿ ಹೋಗಿ ದಿನವೆಲ್ಲ ಅಲ್ಲಿ ಕಳೆದು, ವಿಹರಿಸುವವರೂ ಇದ್ದಾರೆ. (ಅಕ್ಕಿ ಸಿಗದಿರುವ ಮುಂಬೈ ಜನ ಬರುವಾಗ ಒಂದಿಷ್ಟು ಅಕ್ಕಿಯನ್ನು ತರುತ್ತಾರೆ – ಇಲ್ಲಿಂದ.)

'ಟಿಟವಾಳ' ಒಂದು ಚಿಕ್ಕ ಹಳ್ಳಿ. ಪೌರಾಣಿಕ ಹಿನ್ನೆಲೆಯೂ ಇದಕ್ಕಿದೆ. [illegible] ಕೊಟ್ಟ ಮೂರ್ತಿ ಇದೇ ಎಂದೂ [illegible] ಸ್ಥಳ ಪುರಾಣ ಹೇಳುತ್ತದೆ.

ಪುನರುದ್ಧಾರ

18ನೇ ಶತಮಾನದಲ್ಲಿ ಪಾಣಿಪತ್ [illegible] ವಿನಾಯಕನೆಂದರೆ ಪ್ರಾಣ. ಆ ಸಮಯ [illegible] ಆದರೆ ಈಗ ಮಂದಿರದ ಬಳಿ [illegible] ಸರೋವರ [illegible] ಆಗಾಗ ಅವರು ಇಲ್ಲಿಗೆ [illegible] ಪೇಶ್ವೆ ಇಲ್ಲಿ ಬಂದಿದ್ದಾಗ ಅವನ [illegible] ರಾಜರು ಬರುವ ಒಂದು ಸಂದರ್ಭದಲ್ಲಿ ಅಲ್ಲಿದ್ದ ಸರೋವರವನ್ನು

(ಮುಂದೆ ನೋಡಿ)

ಟಿಟವಾಳದ ಜೀರ್ಣೋದ್ಧಾರವಾದ ಈಗಿನ ಗಣಪತಿ ಮಂದಿರ

ಪೇಶ್ವೆಯವರಿಂದ ನಿರ್ಮಾಣವಾಗಿದ್ದ ಟಿಟವಾಳದ ಮೂಲ ಗಣಪತಿ ಮಂದಿರ. (ಇದನ್ನು ಕೆಡವಿ, ಆ ಸ್ಥಳದಲ್ಲಿ ಮಂದಿರವನ್ನು ಮಾತ್ರ ಹೊಸದಾಗಿ ಕಟ್ಟಲಾಗಿದೆ. ಮೂರ್ತಿಯೂ ಇದ್ದ ಸ್ಥಳದಲ್ಲಿಯೇ ಇವೆ)

ಪ್ರಭಾದೇವಿಯ ಸಿದ್ಧಿ ವಿನಾಯಕನ ಮೂರ್ತಿ

[illegible] ಸಿದ್ಧಿ ವಿನಾಯಕನ ಮಂದಿರ. ದರ್ಶನಕ್ಕಾಗಿ ಸಾಲಿನಲ್ಲಿ ನಿಂತ [illegible] ಭಾಗ ಒಂದು ಕಾಣುತ್ತದೆ [illegible] ದೃಶ್ಯ

ಪ್ರಭಾದೇವಿಯ ಸಿದ್ಧಿ ವಿನಾಯಕ ಮಂದಿರ

ಮುಂಬೈಯಲ್ಲಿ ಗಣಪತಿ

(1ನೇ ಪುಟದಿಂದ)

ದುರಸ್ತಿ ಮಾಡಿಸುವ ಕಾರ್ಯದಲ್ಲಿ [illegible] ಈ ಟಿಟವಾಳದಲ್ಲಿ [illegible] ಗಣನಾಯಕನ ಮೂರ್ತಿಯು ಅವನಿಗೆ ಸಿಕ್ಕಾಗ ಇದೊಂದು ಶುಭ ಚಿಹ್ನೆಯೆಂದು ಕೂಡಲೇ ಕುದುರೆ ಸವಾರನೊಬ್ಬನನ್ನು [illegible] ಅಟ್ಟಿ ಪೇಶ್ವೆಗೆ ವಿಷಯ ತಿಳಿಸಲು ಕಳುಹಿಕೊಟ್ಟ. ಪೇಶ್ವೆಗೆ ದೃಷ್ಟಾಂತದ ಮೂಲಕ ಈ ವಿಷಯ ಮೊದಲೇ ಮುಂಚಿನ ರಾತ್ರಿ ವಿದಿತವಾಗಿತ್ತು. ಕುದುರೆ ಆಳಿನ ಮೂಲಕ ಅದರ ಸತ್ಯ ಗೋಚರವಾದಾಗ ಪೇಶ್ವೆಗೆ ಆನಂದಕ್ಕೆ ಮಿತಿಯೇ ಉಳಿಯದಾಯಿತು. ಸರೋವರದ ತಟದ ಮೇಲೆಯೇ ವಿನಾಯಕನಿಗೊಂದು ಮಂದಿರವೂ ಆಯಿತು. ಊರಲ್ಲಿಯ ಜೋಶಿ ಮನೆತನದವರಿಗೆ ನಿರಂತರ ಪೂಜೆ ಪುರಸ್ಕಾರಕ್ಕೆ [illegible] ಯನ್ನೂ ಹಾಕಿ ಕೊಡಲಾಯಿತು. ಈಗಲೂ ಇದೇ ಜೋಶಿ ಮನೆತನದವರೇ ವಿನಾಯಕನ ಪೂಜಾರಿಗಳು. [illegible]

[illegible]

August 61

POONA

The aftermath of Deluge when Panshet and Khadakwasla Dams breached on 12th July 1961

Photographs : N. C. B. Desai Publicity Department

Poems : M. Mohon

This tragedy hath terminus in truth :
My valient kin in thousands die
Or move in rags .
Their worth displays its gold thro' gashes.

The doomsday
Of comets

The dam of Panshet cracks and death in spate roars off
Its breach and thunders down like Niagara
To lap the city's millions.

And duration itself
Erupts with decisions to live dashed off.

"Friends Circle," a group of Premier employees who went to Poona immediately after the floods, are seen on-the-spot help. This photograph has been taken by Shri Jagtap

Life is filed fo ever

Like moon my Poona sinks in waters here



2/91



ಗಾಲಿ ನಡೆದು ಬಂದ ದಾರಿ

[illegible]



[illegible]

ಕಾಯುಯ ಕ್ರುಸವೊಂದದಲ್ಲಿ 'ರಥ'

[illegible] 28ನೆ [illegible] 1825 [illegible] 14 [illegible]

[illegible] 1698ರ [illegible] 1769ರ [illegible]

[illegible] ತ್ಯಾಗಿದ್ದರೆ. [illegible] ಇಂದಿಗೂ ಅದೇ ರೂಢಿಯೇ [illegible] ಭಾಗದಲ್ಲಿರುವುದನ್ನು ನಾವು ಕಾಣುತ್ತಿದ್ದೇವಲ್ಲ? ಜಾತ್ರೆಯಲ್ಲಿಯ ತೇರನ್ನು ಜನರೇ ಎಳೆಯುವುದಿಲ್ಲವೆ?

[illegible]

ಯಾಂತ್ರೀಕರಣ

ಗಾಲಿಯ ಆಕಾರದಲ್ಲಿ, ಅದನ್ನು ಸಿದ್ಧ [illegible]

ಭಾರತೀಯ ವಾಹನ – ಮೊಹೆಂಜೋದಾರೊನಲ್ಲಿ ದೊರೆತ ಮಣ್ಣಿನ ಆಟಿಗೆ.



ಪಶ್ಚಿಮ ಬಂಗಾಳದಲ್ಲಿ ದೊರೆತ ತೆರಾಕೊಟಾ ಚಿತ್ರ ಒಂದು ಎತ್ತಿನ ಗಾಡಿಯ ಅಂದಿನ ರೀತಿ ಇದು.

[illegible]ಲ್ಲಿಲ್ಲ. ವಾಹನಕ್ಕೆ ಈ ಯಾಂತ್ರಿಕ ಶಕ್ತಿಯನ್ನು ಉಪಯೋಗಿಸುವ ಪ್ರಥಮ ಪ್ರಯತ್ನ ನಡೆದುದು 1802ರಲ್ಲಿ. ಯಾಂತ್ರಿಕ ಪ್ರಥಮ ವಾಹನವೇ ಉಗಿಬಂಡಿ.

ವಾಹನಕ್ಕೆ ಒಮ್ಮೆ ಯಂತ್ರದ ಉಪಯೋಗದ ಅನುಕೂಲತೆಗಳನ್ನು ಮನಗಂಡುದೇ ತಡ ಪ್ರಗತಿ ಜೋರಾಗಿಯೇ ನಡೆಯಿತು. ಹೆಚ್ಚು ಭಾರ, ಹೆಚ್ಚು ಜನರನ್ನು, ಸಾಧ್ಯವಿದ್ದಷ್ಟು ಶೀಘ್ರವಾಗಿ ದೂರದ ಸ್ಥಳಗಳಿಗೆ ಸಾಗಿಸುವ ವ್ಯವಸ್ಥೆ ನಡೆಯಿತು.

ಮುಂದೆ ಪೆಟ್ರೋಲ್ ಎಂಜಿನ್ ಶೋಧವಾದ ಮೇಲೆ – ವಾಹನದ ಯಂತು ಎಲ್ಲಿಗೂ ಬರುತ್ತಿದೆ.

ಈ 'ಆಟೊಮೋಬಾಯಿಲ್' ಇಂದು ಸಾರಿಗೆಯಲ್ಲಿ ಅತ್ಯಂತ ಅನುಕೂಲತೆಗಳನ್ನು ತಂದಂತೆಯೇ ದೇಶದ ಲಕ್ಷಾವಧಿ ಜನಕ್ಕೆ ಅನ್ನದ ಹಾದಿಯನ್ನೂ ತೋರಿದೆ.

ಮಾನವನ ನಾಗರಿಕತೆಯ ಮೂಲದಲ್ಲಿ ಒಂದು ಮರದ ತುಂಡಿನಿಂದಾಗಿ ಶೋಧವಾದ ಗಾಲಿ ಇಂದು ಯಾಂತ್ರಿಕ ಮೂಲವಸ್ತುವಾಗಿ ಬೆಳೆದಿದೆ. ಬೆಳೆಯುತ್ತಲೇ ಇದೆ. ಕಾಲ ಕಳೆದಂತೆ, ಅದರ ಪ್ರಗತಿಯ ಹಾದಿಯಲ್ಲಿ ಇನ್ನೂ ಏನೇನು ಕಾದಿದೆಯೊ?

(ಆಧಾರ: ಡನ್‌ಲಪ್ - ಪತ್ರಿಕೆ)

ಸೌತೆಕಾಯಿ ಬೇಕೆ, ಠಂಡಾ ಸೌತೆಕಾಯಿ?

ಚಿತ್ರ ಮತ್ತು ಲೇಖನ: **ಎನ್. ಸಿ. ದೇಸಾಯಿ**

ಇತ್ತೀಚೆಗೆ ಮಿರಜಕ್ಕೆ ಹೋಗಲು ಕರ್ನಾಟಕ ಎಕ್ಸ್‌ಪ್ರೆಸ್ ಏರಿದೆ.

ರೈಲು ಬೆಳಗಾಂವಿ ಪ್ರವೇಶಿಸುವ ಹೊತ್ತಿಗೆ ಬಿಸಿಲಿನ ಚುರುಕು ಹೆಚ್ಚಾಗಿತ್ತು. ಬರುತ್ತಿದ್ದ ಗಾಳಿಯೂ ಬಿಸಿ. ಮನಸ್ಸು ತಂಪಿನ ಪದಾರ್ಥಗಳನ್ನು ಪಡೆಯಲು ಹಾತೊರೆಯುತ್ತಿತ್ತು. ಎಳೆ ಸೌತೆಕಾಯಿ ಹೊತ್ತ ಹುಡುಗನೊಬ್ಬ ಡಬ್ಬಿಯನ್ನು ಹೊಕ್ಕ. ಕೈಯಲ್ಲಿ ಒಂದು ಚಿಕ್ಕ ಚೂರಿ, ಜೊತೆಗೆ ಸ್ವಲ್ಪವೇ ಖಾರ ಬೆರೆಸಿದ ಉಪ್ಪು ಇರುವ ಡಬ್ಬಿ. ಇವನ್ನು ಎಲ್ಲಿದ್ದಾಗ ನೆನೆಸಿಕೊಂಡರೂ ಬಾಯಲ್ಲಿ ನೀರೂರುವುದು ಸಹಜ. ಇನ್ನು ಸೆಕೆಯಲ್ಲಿ-ಅದೂ ಪ್ರವಾಸದಲ್ಲಿ –ಇವನು ಪ್ರತ್ಯಕ್ಷನಾದರೆ, ನಿಜವಾಗಿ ಒಂದಾದರೂ ಕಾಯನ್ನು ತಿನ್ನೋಣ ಎಂದು ಎನಿಸದೆ ಇರಲಾರದು. ಇಪ್ಪತ್ತು ಪೈಸೆ ಕೊಟ್ಟು ಒಂದು ಸೌತೆಕಾಯನ್ನು ಕೊಂಡೆ. ಅರ್ಧವನ್ನು ಮಾತ್ರ ತಿಂದು, ಇನ್ನರ್ಧವನ್ನು ನನ್ನೊಟ್ಟಿಗಿದ್ದ ಜೋಳದ ರೊಟ್ಟಿಯ ಜೊತೆ ತಿಂದರಾಯಿತೆಂದು ಉಳಿಸಿಕೊಂಡೆ.

ಸೌತೆಕಾಯಿ ಮಾರಿದ ವ್ಯಕ್ತಿ ಎಳೆ ವಯಸ್ಸಿನವ. ವಾನಿದ್ದ ಜಾಗದ ಹತ್ತಿರವೇ ಬಂದು ಕೂತ. ಓದುವುದರಲ್ಲಿ ಮಗ್ನನಾಗಿದ್ದ ನನ್ನ ಲಕ್ಷ್ಯ ಕೆಲಕಾಲ ಅದ ನೆಡೆಗೆ ಹೋಗಲಿಲ್ಲ–ಅವನು [illegible]

[illegible]

ಬುಟ್ಟಿಹೊತ್ತು ವ್ಯಾಪಾರದ ಕಣಕ್ಕೆ ಹೊರಟ ಗುಲ್ಯಾರ

"ಸರಿ. ನೀನು ಶಾಲೆಗೆ ಹೋಗುವುದನ್ನು ಬಿಟ್ಟು ಇದೇನು ಕೆಲಸ ಮಾಡುತ್ತೀ?" ಎಂದೆ.

[illegible] ಶಾಲೆಗೆ ಹೋಗುತ್ತಿದ್ದೆ. ಶಾಲೆ ಬಿಟ್ಟು ಈಗ ಗಾಡಿಯಲ್ಲಿ ಜೀವನ [illegible] ಮಾಡುತ್ತೇನೆ" ಎಂದ.

★

[illegible]

ಈ ಎಳೆಕಂದಗಳು ತಂದೆಯ ವ್ಯವಸಾಯದಲ್ಲಿ ತೊಡಗಲು ಕಾರಣವಾಗಿರಬೇಕು. ಗುಲ್ಯಾರನ ಕುಟುಂಬವೆಂದರೆ, ತಂದೆತಾಯಿ, ನಾಲ್ವರು ಅಣ್ಣತಮ್ಮಂದಿರು, ಒಬ್ಬ ತಂಗಿ. ಏಳು ಜನರ ಸಂಸಾರ.

ಈ ವ್ಯವಸಾಯದಿಂದ ಬರುವ ಆದಾಯ ಎಂದರೆ, ದಿನಕ್ಕೆ ಒಬ್ಬರಿಗೆ 3 ರೂಪಾಯಿ [illegible] 5 ರೂ.ವರೆಗೆ ಮಾತ್ರ. ಕುಟುಂಬ [illegible] ಸೈಕಲ್ ಅಂಗಡಿಯ ಆದಾಯ ಕುಟುಂಬವನ್ನು ಸಾಗಿಸಲು ಸಾಲದೆ ಹೋಗಿರಬೇಕು. [illegible] ಗುಲ್ಯಾರ ಮತ್ತು ಅವನ ತಮ್ಮ ಶಾಲೆಗೆ ಶರಣು ಹೊಡೆದು, ಈ ವ್ಯವಸಾಯಕ್ಕಿಳಿದರೇನೊ.

[illegible]

ಸಾಕು. ಇವರ ಜೀವನ ಹಾಗಲ್ಲ. ದಿನದ ನಿಶ್ಚಿತ ವ್ಯಾಪಾರ ಆಗುವವರೆಗೆ ಇವರು ತಿರುಗಲೇಬೇಕು – ಹೋಗುವ ಬರುವ ಗಾಡಿಗಳನ್ನು ಏರಬೇಕು, ಇಳಿಯಬೇಕು; ಅಂದ ಚಂದದ ಮಾತಿನಿಂದ ಪ್ರವಾಸಿಯ ಮನವೊಲಿಸಿ, ವ್ಯಾಪಾರವನ್ನು ಕುದುರಿಸಬೇಕು. ಸೌತೆಕಾಯಿ ಬುಟ್ಟಿಯನ್ನು ಹೊತ್ತು ತಿರುಗಬೇಕು. ದೈಹಿಕ ಶ್ರಮವೂ ಕಡಮೆಯಿಲ್ಲ. ಬೆಳಗ್ಗೆ ಏಳಕ್ಕೆ ಊಟ ಮಾಡಿ ಮನೆಬಿಟ್ಟರೆ, ಇವರು ರಾತ್ರಿ ಮನೆಗೆ ಮರಳುವುದು ಏಳಕ್ಕೋ, ಎಂಟಕ್ಕೋ.

ಇನ್ನು ಪ್ರತಿದಿನ ಬೇಕಾಗುವ, ಸೌತೆಕಾಯನ್ನು ಕಡಮೆ ಬೆಲೆಗೆ ಸಿಗುವಲ್ಲಿ ಕೊಳ್ಳಬೇಕು. ಇದಕ್ಕಾಗಿ ಮುಂಚಿನ ದಿನವೇ ಬಂಡವಲನ್ನೂ ಸಿದ್ಧಮಾಡಿಕೊಂಡಿರಬೇಕು.

ಗುಲ್ಯಾರ, ಈ ಸೌತೆಕಾಯಿಗಳನ್ನು ಬೆಳಗ್ಗೆ ಬೆಳಗಾವಿಯಲ್ಲಿ ಖರೀದಿಸುತ್ತಾನೆ. ಆಮೇಲೆ ಒಳ್ಳೆಯವಲ್ಲದವನ್ನು ಬೇರ್ಪಡಿಸಿ ಸೌತೆಕಾಯಿ ಸಿಪ್ಪೆ ಸುಲಿಯಬೇಕು. ಬುಟ್ಟಿಯಲ್ಲಿ ಹೊಂದಿಸಬೇಕು. ಬಹುಶಃ ಇವನಿಗೆ ಪ್ರಥಮ ಸಿಗುವ ಗಾಡಿಯೆಂದರೆ 'ಕರ್ನಾಟಕ ಎಕ್ಸ್‌ಪ್ರೆಸ್' ಇರಬೇಕು. ಇವನು ವ್ಯಾಪಾರಮಾಡುವ ಕ್ಷೇತ್ರ ಬೆಳಗಾವಿಯಿಂದ ಉಗಾರವರೆಗೆ.

ನನ್ನ ಗಾಡಿ ಇನ್ನಷ್ಟು ದೂರ ಪ್ರವಾಸ ಮಾಡಿತು.

ಪೇರಲ ಹಣ್ಣನ್ನು ಮಾರುವ 'ಮೂಕ'ನೊಬ್ಬನ ದರ್ಶನ. ಪ್ರವಾಸಿಗಳಿಗೆ ಒತ್ತಾಯ ಪಡಿಸಿ ಅವನ ವ್ಯಾಪಾರ. ರೂಪಾಯಿಗೆ ಮೂರೇ ಪೇರಲ ಹಣ್ಣು. ಯಾರಿಗೆ ಮಾರಿದರೂ ಮೂರನ್ನೇ ಮಾರಿಯಾನೇ ಹೊರತು, ಒಂದು ಹಣ್ಣು ಕೇವಲ ಯಾರಿಗೂ ಕೊಡಲಾರ. ಯಾರಾದರೂ ನಮಗೆ ಬೇಡವೆಂದು ಕೈ ಸನ್ನೆಯಿಂದ–ಅವನೊಂದಿಗೆ ಕೈಸನ್ನೆಯ ಭಾಷೆಯೇ–ಹೇಳಿದರೆ ರೇಗುತ್ತಿದ್ದ. ನಂತರ ನಿಂತು, ತಾನು ತೊಟ್ಟ ನೈಟ್ ಪಾಯಿಜಾಮದ ತುದಿ ಎತ್ತಿ ತೋರಿಸುತ್ತಾನೆ–ಕಟ್ಟಿಗೆ ಕಾಲನ್ನು ತೊಟ್ಟಿದ್ದು, ಇವನು ಕಾಲುಮುರುಕ ಎಂದು ಸಾರುತ್ತಿದೆ. ಅದನ್ನು ತೋರಿಸುತ್ತ, ಕೈಸನ್ನೆಯಿಂದಲೇ 'ನಾನೂ ಮಕ್ಕಳೊಂದಿಗೆ ಇದರ ಮಾರಾಟದಿಂದಲೇ ನನ್ನ ಮನೆ ನಡೆಯಬೇಕು. ಅದಕ್ಕೆ ನೀವೇ ಆಧಾರಿಗಳು' ಎಂದು ಮುಂತಾಗಿ ಹೇಳುತ್ತಾನೆ. ಇವನ್ನೆಲ್ಲ ಕೈಸನ್ನೆಯಿಂದ ಹೇಳುವಾಗ ಅವನ ಭಾವ, ಮುಖದಮೇಲಿನ ಕರುಣಾರ್ದ್ರ ನೋಡುವವರನ್ನು ಮುಗ್ಧ ಮಾಡುತ್ತದೆ–ಹೋಗಲಿ, ಬೇಡವಾದರೂ ತೆಗೆದುಕೊಳ್ಳೋಣ ಎನಿಸುತ್ತದೆ. ಎಷ್ಟಾದರೂ ವಯಸ್ಸಾದವ ನೋಡಿ. ಜೀವನದಲ್ಲಿ ಅನುಭವ ತುಂಬಿದೆ. ಕಾರ್ಯ ಸಾಧಿಸುತ್ತಾನೆ. ಗುಲ್ಯಾರ [illegible] ಪಡಿಸಿ ವ್ಯಾಪಾರಮಾಡುವ [illegible] ಇರಲಿ, ನಾಟಕ [illegible]!

[illegible]

(ಮುಂದಿನ ಪುಟ ನೋಡಿರಿ)

ಸೌತೆಕಾಯಿ ಬೇಕೆ, ಠಂಡಾ ಸೌತೆಕಾಯಿ

(61ನೇ ಪುಟದಿಂದ)

ಕಡ್ಡಾಯದ ಶಿಕ್ಷಣ ಜಾರಿಯಲ್ಲಿದೆ ಅಲ್ಲವೇ ನಮ್ಮಲ್ಲಿ? ಕಡ್ಡಾಯವಾಗಿ ಗುಲ್ಯಾರ ಸೌತೆಕಾಯಿ ಮಾರಬೇಕು.

ಕಲಿಯಬೇಕೆನ್ನುವವರಿಗೆ ಅನುಕೂಲತೆ ಇಲ್ಲ! ಅನುಕೂಲವಿದ್ದವರಿಗೆ ಶಿಕ್ಷಣದ ಹಾದಿಯಲ್ಲಿ 'ಸ್ವೇಚ್ಛೆ'ಯೇ ಹೆಗ್ಗುರಿ. ಧಾರವಾಡದ ಬಾರ್ ಒಂದರಲ್ಲಿ ನಾನು ಕುಳಿತಿದ್ದೆ. ಹಿಂಬದಿಯ ಟೇಬಲ್ ನಾಲ್ಕು ಜನ ವಿದ್ಯಾರ್ಥಿಗಳಿಂದ ಅಲಂಕೃತವಾಗಿತ್ತು. ವೇಷ ನೋಡಿದರೆ, 'ಮಾಡ್.' 'ಪಾಪ್' ಎಲ್ಲವೂ ಇತ್ತು. ಮಾತಿನಿಂದ ಮಾತ್ರ, ಇವರು ಹಳ್ಳಿಯಿಂದಲೇ ಬಂದವರು ಎಂದು [illegible] ವಾಗುತ್ತಿತ್ತು. ವಿದ್ಯಾರ್ಥಿಗಳು ಅಭ್ಯಾಸದಲ್ಲಿ ಮಗ್ನರಾಗಿರಬೇಕಾದ ವೇಳೆ ವಿಸ್ಕಿ ಬಾಟಲಿಯ ಮಧ್ಯೆ ಸವೆಯುತ್ತಿತ್ತು. ಈ ಚಿತ್ರದೆದುರು ಗುಲ್ಯಾರನ ಚಿತ್ರ ಕಣ್ಣ ಮುಂದೆ ಕಟ್ಟಿತು.

ಗುಲ್ಯಾರ [illegible]

[illegible]

ನಾಗಾಲ್ಯಾಂಡ್ ಆದಿವಾಸಿಗಳು. ಬಂದೂಕು ಉಪಯೋಗ ತಿಳಿದಿದ್ದರೂ ಆದಿವಾಸಿಗಳೇ!



ಬಂಗಾಳದ ಆದಿವಾಸಿ ತರುಣಿ

ಭಾರತೀಯ ಆದಿವಾಸಿಗಳು

ಛಾಯಾಚಿತ್ರಕಲೆಯಲ್ಲಿ ಒಬ್ಬೊಬ್ಬರಿಗೆ ಒಂದೊಂದು ವಿಶಿಷ್ಟ ವಿಷಯ ಹಿಡಿಸಿರುತ್ತದೆ. ಕೆಲವರು ಪಕ್ಷಿ ಪ್ರಾಣಿಗಳ ಜೀವನ ಬಗ್ಗೆ ಛಾಯಾಗ್ರಹಿಸಿದರೆ, ಕೆಲವರು ಕೇವಲ ಮಕ್ಕಳ, ವ್ಯಕ್ತಿಗಳ ಚಿತ್ರ ತೆಗೆದರೆ, ಇನ್ನು ಕೆಲವರು ಮರಗಳ ಬೊಡ್ಡೆ, ಮುಗಿಲಿನ ವಿಚಿತ್ರ ಆಕಾರ, ಕಲ್ಲುಬಂಡೆಗಳ ಅನೇಕ ರೀತಿಯ ಆಕೃತಿ, ಹೀಗೆ ಏನೇನೋ ವಿಷಯಗಳನ್ನು ಆರಿಸಿಕೊಂಡು ಕಲಾತ್ಮಕವಾಗಿ ಚಿತ್ರ ಗ್ರಹಿಸುವ ಹವ್ಯಾಸಕ್ಕೊಳಗಾಗಿರುತ್ತಾರೆ.

ಇಲ್ಲಿ ಬರೆಯುವ ವಿಷಯ ಇವಕ್ಕೆಲ್ಲ ಭಿನ್ನವಾದವು. ಕಲಕತ್ತೆಯ ಸುನೀಲ್‌ರಾಯ್ ಒಬ್ಬ ಚಿತ್ರಕಾರ. ಆದರೆ ಈಗ ಅವರು ಪರಿಪೂರ್ಣ ಛಾಯಾಗ್ರಾಹಕ. ಅವರ ಹವ್ಯಾಸ ವಿಚಿತ್ರ. ಅವರು ಆರಿಸಿರುವ ವಿಷಯ 'ಭಾರತೀಯ ಆದಿವಾಸಿಗಳು' ಛಾಯಾಚಿತ್ರಗಳನ್ನು ಗ್ರಹಿಸುವಲ್ಲಿ ಅವರು ಪಟ್ಟ ಪರಿಶ್ರಮ ಅಪಾರ.

ಕೇವಲ ಆದಿವಾಸಿಗಳ ವ್ಯಕ್ತಿಚಿತ್ರಗಳನ್ನಷ್ಟೆ ಅವರು ಹಿಡಿಯರು. ಅವರ ಜೀವನ, ನಡಾವಳಿ, ಆಹಾರ, ಆಟಪಾಟ ಮುಂತಾದ್ದರ ಕಡೆಗೂ ಅವರ ಲಕ್ಷ್ಯ ಹರಿಯುತ್ತದೆ. ಭಾರತದ ಮೂಲೆಮೂಲೆಗೂ ಹೋಗಿ ಆದಿವಾಸಿಗಳ ಸ್ಥಳಗಳನ್ನು ಅರಸಿ ಅವರ ಚಿತ್ರಕ್ಕೆ ಅಣಿಯಾಗುತ್ತಾರೆ ಈ ಛಾಯಾಕಾರ.

ಚಿತ್ರ ಕಣ್ಣಿಗೆ ಹಬ್ಬವನ್ನುಂಟುಮಾಡೀತು. ಆದರೆ ಒಮ್ಮೊಮ್ಮೆ ಆ ಪ್ರದೇಶಗಳಲ್ಲಿ ಚಿತ್ರಕಾರ ಸಂಕಟಕ್ಕೊಳಗಾದ ಪ್ರಸಂಗಗಳಿಗೇನು ಕಡಿಮೆ ಇಲ್ಲ. ಕೆಲ ಪ್ರದೇಶಗಳಲ್ಲಿ ಬೇರೆ ಜನರಿಗೆ ಪ್ರವೇಶವಿರುವುದಿಲ್ಲ. ಅಂಥಲ್ಲಿ ಮೈಮರೆತು ಇವರು ಕಾಲಿರಿಸಿದರೆಂದರಾಯ್ತು. ಆ ಕಾಡು ಜನ ಹುಯ್ಯೆಂದು ಇವರಮೇಲೆ ಬೀಳುವ ಪ್ರಸಂಗಗಳುಂಟು. ಅಂಥಲ್ಲಿ ಚಿತ್ರ ತೆಗೆಯುವುದಂತಿರಲಿ ಅವರಿಂದ ಪಾರಾಗಿ ಬರುವುದೂ ಕಷ್ಟ.

ಇವರ ಸಂಗ್ರಹದಲ್ಲಿ ಒಂದು ಭೀಕರ ಚಿತ್ರವುಂಟು. ಆದಿವಾಸಿಯರ ಹಿರಿಯನ ಗುಡಿಸಲಿನ ಚಿತ್ರವದು. ಯಮಾಕೃತಿಯ ಆ ಹಿರಿಯ ಗುಡಿಸಲಿನಲ್ಲಿ ಕುಳಿತಿದ್ದಾನೆ. ಗುಡಿಸಲಿನ ಹೊರಗೋಡೆಯೆಲ್ಲ ಮಾನವ ಹಾಗೂ ಪಶುಗಳ ತಲೆಬುರುಡೆಗಳಿಂದ ಅಲಂಕೃತವಾಗಿದೆ. ಇದೇನು ವಿಚಿತ್ರ ಎಂದು ಕೇಳಿದರೆ ವೈರಿಗಳು ಹಾಗೂ ಉಪದ್ರವಿ ಪ್ರಾಣಿಗಳನ್ನು ಕೊಂದ ಲೆಕ್ಕದಪಟ್ಟಿ ಅದೆಂದು ಹೇಳಿದರು ಛಾಯಾಕಾರ.

ಭಾಷಾತೊಂದರೆಯೂ ಬಹಳಷ್ಟು ಅಡ್ಡ ಬರುತ್ತದೆ. ಆದರೂ ಈ ಚಿತ್ರಕಾರನ ತಾಳ್ಮೆಯಿಂದಾಗಿ ಅವೆಲ್ಲ ದೂರವಾಗಿ, ಚಿತ್ರಗ್ರಹಣದ ಕಾರ್ಯವನ್ನು ಸಾಧಿಸುತ್ತಾರೆ. ಭಾರತದ ಎಲ್ಲ ಭಾಗವನ್ನೂ ತಿರುಗಾಡಿ, ಅಂದಮಾನದವರೆಗೂ ಇವರು ಪ್ರವಾಸ ಮಾಡಿದ್ದಾರೆ.

ಇವರ ಎಷ್ಟೋ ಆದಿವಾಸಿಚಿತ್ರಗಳೇ ಕೆಲ ಚಿತ್ರಕಲಾವಿದರ ಕುಂಚದಿಂದಿಳಿದಿದ್ದು, ಇವರ ಛಾಯಾಚಿತ್ರಗಳ ಪ್ರದರ್ಶನಗಳನ್ನು "ಜಾಯಿಂಟ್ಸ್" ನಂಥ ಸಂಸ್ಥೆಗಳು ಏರ್ಪಡಿಸಿ ಪ್ರೋತ್ಸಾಹ ನೀಡಿವೆ.

● ಎಸ್. ಸಿ. ದೇಸಾಯಿ

ನಾಗಲ್ಯಾಂಡಿನ ಆದಿವಾಸಿ ಮಹಿಳೆಯರು

ಒರಿಸ್ಸಾದ ಆದಿವಾಸಿ ಸ್ತ್ರೀಯರು

Prajavani

ಮರಾಠಿಗರು- "ಸಬನ್ನಾರ"

[illegible]

ನಿಮಗೆ ಗೊತ್ತೆ? ಎಂದೆ (ಮರಾಠಿಯಲ್ಲಿ) ಕೂಡಲೇ ಉತ್ತರ ಬಂತು. ಗೊತ್ತಿದೆ. ಅದು ಅವರ ಮನೆ ಎಂದು ತೋರಿಸುತ್ತಾ ಆ ವ್ಯಕ್ತಿ [illegible] ಗೊತ್ತೆ" ...ಅವರ ಹೆಸರು [illegible] ಅವರ [illegible] ಹೆಸರು "ಸಬನ್ನಾರ" ಎಂದೂ [illegible]

[illegible] (1984) [illegible]

—ಎಸ್.ಸಿ. ದೇಸಾಯಿ

[illegible]

(ಚಿತ್ರಗಳು—ಒಬೆರಾಯ್ ಹೋಟೆಲ್‌ನ 'ಓಮಾ ಪತ್ರಿಕೆ'ಯ ಕೃಪೆಯಿಂದ)



ನತ್ತಿನ ಜೊತೆ ತಾನೂ ನಗುತ್ತಿದ್ದಾಳೆ, ಈ ಅಸ್ಸಾಮಿನ ಗಿರಿಕನ್ಯೆ

ಮುತ್ತಿನ ನತ್ತು ಹೊತ್ತ ಮಹಾರಾಷ್ಟ್ರದ ಹೆಣ್ಣು

ನಾಸಿಕದ ಮೇಲೆ ನತ್ತೊ? ಇಸ್ಪೇಟ್ ಕಳಾವರೋ?



ಕುಟಿಗಳ ಮೇಲೆರಗಿದ 'ದುಂಬಿ'



[illegible]

ಪಾರಿ ಹೋಸಿದ ಆಧುನಿಕ ... [illegible]

ಈ ಮಾರುಕಟ್ಟೆಯಲ್ಲಿ ಉತ್ತಮ ... [illegible]

ಕೊಳ್ಳುವ ಮುನ್ನ ಹಲ್ಲು ಎಣಿಸಿ ನೋಡುವುದು ವಾಡಿಕೆ

ತ್ತಾರೆ. ಈ ಎಲ್ಲ ಕಾರ್ಯಗಳಲ್ಲಿ ದನ ಪೇಟೆಗೆ ಬರುವ ಹೊತ್ತಿಗೆ, ಪ್ರತಿ ದನದ ಮೇಲೆ ಸಾವಿರಾರು ರೂಪಾಯಿಗಳ ವೆಚ್ಚ ಆಗಿರುತ್ತದೆ. ಅಂತೆಯೇ ದನಗಳ ಬೆಲೆಯೂ ಹೆಚ್ಚು. ಈ ವರ್ಷ ಈ ಜಾತ್ರೆಯಲ್ಲಿ ಒಂದು ಜೊತೆ ಎತ್ತಿನ ಬೆಲೆ ಹತ್ತರಿಂದ ಹದಿನಾರು ಸಾವಿರಕ್ಕೆ ಮುಟ್ಟಿತೆಂದು ತಿಳಿಯುತ್ತದೆ.

ಯಾಂತ್ರೀಕರಣ ಮತ್ತು ದನಗಳು

ಬೇಸಾಯ ಇಂದು ಯಾಂತ್ರೀಕರಣದತ್ತ ಸಾಗಿದೆ. ಹೀಗೆಂದು ಎತ್ತುಗಳ ಉಪಯೋಗ ಪೂರ್ಣ ಕುಗ್ಗಿಯೇ ಹೋಗುವದೆಂದೇನಲ್ಲ. ಭಾರತೀಯ ಬೇಸಾಯಗಾರರಿಗಂತೂ ಅದು ಬೇಕು. ಜಾತ್ರೆಯಲ್ಲಿ ಎತ್ತುಗಳನ್ನು ಖರೀದಿಸಲು ಬಂದಿದ್ದ ಒಬ್ಬ ವಯಸ್ಸಾದ ರೈತರು. ಟ್ರ್ಯಾಕ್ಟರನ್ನು ಹೊಂದಿದಾರೆಂದು ತಿಳಿಯಿತು. ಅವರನ್ನು ಕೇಳಿದೆ: "ಏನು ತಾವು ಟ್ರ್ಯಾಕ್ಟರ ಹೊಂದಿದ್ದರೂ ಮತ್ತೆ ಎತ್ತುಗಳ ಅವಶ್ಯವೇನು?" ಎಂದು ಆ ಹಿರಿಯ ಉತ್ತರಿಸಿದರು. "ಟ್ರ್ಯಾಕ್ಟರ್ ಏನು, ನಮಗೆ ಗೊಬ್ಬರ ನೀಡುತ್ತದೆಯೆ?" ನಿಜ. ಕೇವಲ ಗೊಬ್ಬರಕ್ಕಾಗಿಯೇ ಇಷ್ಟು ಭಾರೀ ಮೊತ್ತದ ಎತ್ತುಗಳನ್ನು ಅವರು ಖರೀದಿಸಲಿಲ್ಲ. ಬೇಸಾಯದ ಇತರೇ ಕಾರ್ಯಗಳಿಗೂ ಬೇಕು. ಆದರೆ, ನಮ್ಮ ರೈತರು. ಸಗಣಿ ಗೊಬ್ಬರವನ್ನೇ ಹೆಚ್ಚು ಆದರಿಸುತ್ತಾರೆ. ರಾಸಾಯನಿಕ ಗೊಬ್ಬರ ಉಣಿಸುವಲ್ಲಿ ಏನಾದರೂ ಹೆಚ್ಚುಕಡಮೆಯಾದರೆ ಹಾನಿಯಾದೀತು ಎಂಬುದು ಹೆದರಿಕೆ...

ಈ ಮಾರುಕಟ್ಟೆಯಲ್ಲಿ ಕಳೆದವ. ಗೊಬ್ಬರ ಪ್ರತಿವರ್ಷ ಹರಾಜು ಆಗುತ್ತದೆ–ಇದರಿಂದ ಜಾತ್ರಾ ಸಮಿತಿಯವರಿಗೆ, ಎಂಬತ್ತು ಸಾವಿರದಿಂದ ಒಂದು ಲಕ್ಷದವರೆಗೆ ಉತ್ಪನ್ನ ಬರುತ್ತದೆ. ಇಲ್ಲಿರುವ ಅಂಗಡಿ ಪಾಡಿ [illegible] ಗೆಯೂ ಜಾತ್ರಾ ಸಮಿತಿಗೆ ಸೇರುತ್ತದೆ. ಇನ್ನು 'ಸೆಸ್'ದ ರೂಪದಲ್ಲಿ ಆದಾಯ ಮುನಿಸಿಪಾಲಿಟಿಯವರು ಮಾರಾಟವಾದ ದನಗಳಿಗೆ ಸೇಕಡಾ ರೂ. 1 ರಂತೆ [illegible] ಮಾಡುವರು. ಈ ಬಂದ ಉತ್ಪನ್ನದಿಂದ [illegible]

[illegible] ಗಾರರಿಗೆ [illegible] ಅನುಕೂಲಗಳನ್ನು ಒದಗಿಸಲಾಗುತ್ತದೆ.

ಪಾರಿತೋಷಕಗಳು

ಈ ಜಾನುವಾರ ವ್ಯಾಪಾರ ಪ್ರಾರಂಭವಾದುದೇ ಮುಕ್ತೇರಿ ಮಠದ ಹಿಂದಿನ ಸ್ವಾಮಿಗಳಾದ ಪರಮಪೂಜ್ಯ ಲಿಂ. ಶ್ರೀ. ಮ.ನಿ. ಪ್ರ. ಶಿವಬಸವ ಸ್ವಾಮಿಗಳ 25 ನೇ ಪುಣ್ಯದಿನಾಚರಣೆಯ ನಿಮಿತ್ತವಾಗಿ 1970 ರಲ್ಲಿ. ಈಗಲೂ ಪ್ರತಿವರ್ಷ ಸ್ವಾಮಿಗಳ ಪುಣ್ಯತಿಥಿಯ ಕಾಲಕ್ಕೆ ಈ ಜಾತ್ರೆಯಲ್ಲಿ ದನಗಳ ಸಂಖ್ಯೆ ಇಮ್ಮಡಿಸುತ್ತದೆ. ಸಮಿತಿಯವರು ಉತ್ತಮ ದನಗಳಿಗೆ ಪಾರಿತೋಷಕ ನೀಡಿ ಪುರಸ್ಕರಿಸುತ್ತಾರೆ. ಈ ವರ್ತನೆ ಹೆಚ್ಚು ಜನ ವ್ಯಾಪಾರಸ್ಥರನ್ನು ಆಕರ್ಷಿಸುತ್ತದೆ. ಸ್ವಾಮೀಜಿಯವರ ಪುಣ್ಯತಿಥಿ ಪುಷ್ಯ ಶುದ್ಧ 11 ರಂದು ನಡೆಯುವುದು. ಈ ವರ್ಷ ಜನವರಿ (1980) 13ರಂದು ನಡೆಯಲಿದೆ.

ಸ್ವಾಮೀಜಿಯವರ ಹೆಸರಿನಲ್ಲಿ ಒಂದು 25 ಲಕ್ಷ ರೂಪಾಯಿ ಬೃಹದ್ ಕಲ್ಯಾಣ ಮಂಟಪವನ್ನು ನಿರ್ಮಿಸಲು ಜಾತ್ರಾ ಸಮಿತಿಯವರು ನಿರ್ಧರಿಸಿದ್ದಾರೆ. ಈ ಯೋಜನೆಗೆ [illegible] ದನಗಳ ಜಾತ್ರೆಯಿಂದ ಬರುವ ಉತ್ಪನ್ನದಲ್ಲಿವನ್ನೂ ಉಪಯೋಗಿಸಲಾಗುತ್ತಿದೆ. ಈ ಕಲ್ಯಾಣಮಂಟಪ ಎಲ್ಲ [illegible] ವುದು ಒಂದು ವಿಶೇಷ.

ನೀವು ಪ್ರತಿದಿನ ಓದಿ ಆನಂದಿಸುವ ಕತೆಗಳನ್ನು ಬರೆಯುವ ಅನೇಕ ಲೇಖಕರ ಲೇಖಣಿಗಳಿಗೆ ಸೃಜನಾತ್ಮಕ ಹರಿವು ನೀಡುವುದು:

ಬ್ರಿಲ್ ಇಂಕ್ Bril INK

ತಯಾರಕರು:
ಇಂಡಸ್ಟ್ರಿಯಲ್ ರಿಸರ್ಚ್ ಕಾರ್ಪೊರೇಷನ್
ಮದರಾಸ್ 600 041 & ಬೆಂಗಳೂರು 560 055

ADWAVE IRC 1162,KAN

ಸ್ಥಳದಲ್ಲೋ ಕಾಟ ಇದ್ದಿದ್ದೇ. ಅದನ್ನನುಭವಿಸುವ ಬದಲು ನಲ್ಲಿಯ ಬಳಿ ಹಾಯಾಗಿ ಕುಳಿತು ಪ್ರಪಂಚದ ಸುದ್ದೀನೋ, ಆಚೀಚೆ ಮನೆಯೊಳಗಿನ ವಿಷಯಗಳನ್ನೋ ಹೊಸೆಯುತ್ತ ಕುಳಿತುಕೊಳ್ಳ ತೊಡಗಿದರು.

ಈ ನಲ್ಲಿಯ ಪ್ರಾಬ್ಲಂ ಶುರುವಾದ ಮೇಲೆ ನನ್ನ ಮನೆಯೊಳಗಿನ ವಾತಾವರಣವೂ ಭಿನ್ನವಾಗ ತೊಡಗಿತು. ರಾತ್ರಿ ಎದ್ದಿರಬೇಕಾಗುತ್ತದೆಂದು ನನ್ನಾಕೆ ಹಗಲೆಲ್ಲ ನಿದ್ದೆ ಹೊಡೆಯತೊಡಗಿದಳು. ಇದರಿಂದ ಊಟ ಮಾಡಿ ಆಫೀಸಿಗೆ ಹೋಗಬೇಕಾದ ನಾನು ಅಡಿಗೆ ಆಗದೆ ಉಪವಾಸ ಹೋಗಬೇಕಾಯಿತು. ಶಾಲೆಯಿಂದ ಬರುವ ಮಕ್ಕಳು ಹೊತ್ತಿಗೆ ಸರಿಯಾಗಿ ಹೊಟ್ಟೆಗೆ ಬೀಳದೆ ರಂಪ ಮಾಡತೊಡಗಿದರು. ತನ್ನ ನಿದ್ದೆ ಕೆಟ್ಟಿತೆಂದು ನನ್ನಾಕೆ ಆ ಮಕ್ಕಳನ್ನು ಚಚ್ಚಿದ್ದೇ ಚಚ್ಚಿದ್ದು.

ಇನ್ನು ರಾತ್ರಿಯ ಅವಸ್ಥೆ ಕೇಳ್ತೀರಾ? ನನ್ನಾಕೆ ನಲ್ಲೀ ಬಳಿ ಜಪ ಶುರು ಮಾಡಿದ ಮೇಲೆ ಕೈಗೂಸು [illegible]

ಸಂದರ್ಭದಲ್ಲಿ ಮಾತ್ರ ಅಲ್ಲಿನ ಜನಗಳ ಅದೃಷ್ಟ ಅದೊಂದು ದಿನಕ್ಕಾದರೂ [illegible] ತ್ತಿತ್ತು. ಆ ಮನೆಗಳಿಗೆ ದಿನವೆಲ್ಲ ನೀರು [illegible] ವಾಗ ಉಳಿದವರೂ ತಮ್ಮ [illegible] ಪಂದೆ. ಪಾತ್ರೆಗಳಲ್ಲಿ ನೀರು [illegible] ತ್ತಿದ್ದರು. ಅದರಿಂದ ನೀರ ಅಪರೂಪವಾಗಿ [illegible] ಬರುವ ಯೋಗ.

ರಾತ್ರಿಯೆಲ್ಲ ಜಾಗರಣೆ ಮಾಡತೊಡಗಿದ ಮೇಲೆ ನಮ್ಮೂರಿನ ಮಹಿಳೆಯರಿಗೆ [illegible] ಕಾಯಿಲೆಗಳು ಕಾಣಿಸಿಕೊಳ್ಳತೊಡಗಿದವು. [illegible] ರಕ್ತದ ಒತ್ತಡ ತೀವ್ರವಾಗಿ ಮಾನಸಿಕ [illegible] ಮೇಲೆ ಕೆಳಗಾಗತೊಡಗಿತು. ಅನೇಕ ಮನೆಗಳಲ್ಲಿ ತಟ್ಟೆಗಳು ಹಾರಾಡತೊಡಗಿದವು. ಕೆಲವರು [illegible] ಗಳನ್ನು ಆಶ್ರಯಿಸತೊಡಗಿದರು.

ಇಂಥ ಸಂದರ್ಭದಲ್ಲಿ ನಾವು ಗಂಡಸರು ಒಂದು ನಿರ್ಧಾರಕ್ಕೆ ಬಾರದೆ ಬೇರೆ ದಾರಿಯಿರಲಿಲ್ಲ. ಒಂದು ಗುಪ್ತ ಸಭೆ ಜರುಗಿಸಿ ನಲ್ಲಿಯ [illegible]

ತುಷಾರ

ಡಿಸೆಂಬರ್, 1982

[illegible] ದ್ದಿದೆ.

ಸ್ವಲ್ಪೇ ದಿನಗಳಲ್ಲಿ ನಲ್ಲಿಯ ಹುಡುಗಾಟದಿಂದ ಹೆಂಗಳೆಯರ ಹುರುಪು ಇಳಿಯತೊಡಗಿತು. ಅವರ ಬಾಯಿಂದ ನಗರಸಭೆಯ ಜನ್ಮ ಜಾಲಾಡತೊಡಗಿತು. ಆದರೆ ನಗರ ಸಭೆಯ ಕಿವುಡು ಕಿವಿಯ ಮೇಲೆ ಇದಾವುದೂ ಬೀಳಲೇ ಇಲ್ಲ. ನಿಸಾಚರನಾದ ನಗರಸಭೆಯ ನೀರು ಬಿಡುವವನು ತನಗಿಷ್ಟಬಂದಾಗ ವಾಲ್ವ ತಿರುಗಿಸಿ ಒಂದು ಬೀದಿ ಧ್ವಂಸವಾಗುವ ವರೆಗೆ ನೀರು ಹರಿಸುವ ಮಹದುಪಕಾರ ಮಾಡಿ, ನಂತರ ವಾಲ್ವ ಮೊದಲಿನ ಸ್ಥಿತಿಗೆ ತಂದು ಮ್ಯಾನ್ ಹೋಲ್ ಮುಚ್ಚಿ ಹೋಗಿಬಿಡುತ್ತಿದ್ದನು.

ಆದರೆ ಕೆಲವೊಮ್ಮೆ ಅಂದರೆ ನಮ್ಮೂರ ಪುಡಾರಿಯರ ಇಲ್ಲವೆ ನಗರಸಭೆಯ ಹಿರಿಯ ಅಧಿಕಾರಿಗಳ ಮನೆಗಳಲ್ಲಿ ವಿಶೇಷ ಉತ್ಸವವೇನಾದರೂ ಏರ್ಪಟ್ಟ

ಸ್ಥಗಿತಗೊಳಿಸಲಾಗಿದೆಯೆಂದು ನಗರಸಭೆ ಪತ್ರಿಕೆಯಲ್ಲಿ ಜಾಹೀರುಪಡಿಸಿತು. ಇದನ್ನು ಓದಿ ನಾವು ಗಂಡಸರು ಒಳಗೊಳಗೇ ಸಂತಸಪಟ್ಟೆವು. ಆದರೆ ನಮಗಿಂತಲೂ ಹೆಚ್ಚಿಗೆ ಸಂತಸಪಟ್ಟವರು ನಮ್ಮ ಮಹಿಳೆಯರು ಎಂದು ತಿಳಿದಾಗ ನಮ್ಮ ಸಂತಸ ಇಮ್ಮಡಿಕೊಂಡಿತು. ತಾತ್ಕಾಲಿಕವಾಗಿ ಬಾಯಿ ನಿಲುಗಡೆಯೇ ಆಗಲಿ ಎಂದು ನಾನು ಮನಸ್ಸಿನಲ್ಲೇ ಅಂದುಕೊಂಡೆ. ಇಲೆಕ್ಷನ್ ಇನ್ನೂ ದೂರ ಇದ್ದಿದ್ದರಿಂದ ಸದ್ಯ ನಮ್ಮ ನಲ್ಲಿಗಳಲ್ಲಿ ನೀರು ಹರಿಯಲಾರದೆಂಬ ಧೈರ್ಯ ನಮ್ಮದು.

ಎಂದಿನಂತೆ ನಮ್ಮ ಮಹಿಳೆಯರು ಬಾವಿಯ ಬಳಿ ಜಮಾಯಿಸತೊಡಗಿದರೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ ತಾನೆ?

●

ಮುಗಿಂದು ಶೈಕರರ
ಎಮ್ಮು ಚಂದ್ರಶಾಲಿನಿ →

ಮಲ್ಲಾರಿ-ಮೈಲಾರ

तुकारामाशी नाते सांगणारे अभंगकार-संत राजाराम

...गोदावरी नदीच्या काठावर, ... एक छोटेखानी गाव आहे— ... गावात प्रवेश केला की तुमचे स्वागत करतील गावातली लहान मुले आणि गावकरी. तुम्ही जर कुठले बाहेर-गावचे प्रवासी असाल तर ते तुमच्या येण्याचा उद्देश चटकन ओळखतील ...

हा पाटलाचा वाडा ...

तुम्ही आत शिरलात की ...

... गोष्टी आणि कौतुके अजून मुखी आहेत.

... जन्मलेला राजाराम ... फार वेगळा होता. ... त्याला अभिमान नव्हता. त्याचे खेळ म्हणजे ... एक देव करायचा आणि त्याची पूजा करायची. ... आणि भजन करायचे. ...

नानासाहेब देसाई

... घोड्यांची सरदारकी ...

चिद्बर स्वामींची भेट

ಅಪ್ಪಟ ಮದರಾಸಿ ಬಾಳೆದಿಂಡು, ಬಾಳೆಎಲೆ

ನಮ್ಮವರಿಗೆ ಪ್ರಿಯವಾದ ಅನೇಕ ... ಇಲ್ಲ. ಅಂದವಾಗಿ ... ಮುಡಿಯಲ್ಲಿ ... ಹೋಟೆಲುಗಳಲ್ಲಿರುವ ಭಗವಾನ್ ನಿತ್ಯಾನಂದರ ಚಿತ್ರಗಳಿಗೂ ಈ ಮಾಲೆಯಿಂದಲೇ ಪೂಜೆ.

ಬೆಂಗಳೂರು ರೇಷ್ಮೆ

ಬೆಂಗಳೂರು, ... ಮೊದಲಾದ ಪ್ರಸಿದ್ಧ ರೇಶಿಮೆ ಸೀರೆಗಳು, ರೇಶಿಮೆ ಧೋತರಗಳು ಬೇಕೆಂದರೆ ಮಾತುಂಗಕ್ಕೆ ಧಾವಿಸಬೇಕು.

ಬಾಳೇಕಾಯಿ ನಾನಾಥರ

ಮಾತುಂಗ: ಮುಂಬೈನಲ್ಲಿನ ಮರಿ ಮದರಾಸು

Kannada Prabha 23-8 1981.

2/47

ತೇಲಂಗ್ ರಸ್ತೆಯಲ್ಲಿ ಭಟ್ಟರ ಬುಕಿಂಗ್ ನಡೆದಿದೆ

ಹೌಸ್ – ಹಾಗೂ ಉಳಿದ ಹಿಂದು ಅಂಗಡಿಗಳಲ್ಲಿ ... ಸೌಲಭ್ಯವೂ ... ಸಂಭವವಿದೆ.

ಸಚಿತ್ರ ಲೇಖನ:

ಎಸ್.ಸಿ. ದೇಸಾಯಿ

... ಮಾತುಂಗದಲ್ಲಿ ಮನೆ ಹಿಡಿಯುವವರ "ಓ ಅಪ್ಪುವೂರಮ್" ಎಂದು ಕೇಳುತ್ತಿದ್ದರಂತೆ – ... ಕುಟುಂಬಗಳು ಇಲ್ಲಿಂದ ಕಾಲು ಕಿತ್ತಿದ್ದವು. ಆಂತಹದರಲ್ಲಿ ನನ್ನ ಚಿಕ್ಕಪ್ಪನ ಯಜಮಾನರೂ ಒಬ್ಬರು ಬಿಟ್ಟು ಹೋಗುವಾಗ ಸಾಮಾನುಗಳನ್ನು ... ಮೊದಲಿದ್ದ ದೊಡ್ಡ ಮನೆ ... ಅವರುಗಳು ಬೇರೆ ಬೇರೆ ಮನೆ ...

1966 ರಲ್ಲಿ ಮೆಸರ್ ...



ಹೂವಿನ ವ್ಯವಹಾರ ಜಾರಿ!

ದಿಲ್ಲಿಗೇ ಬಂದಿರುವ ಹಳ್ಳಿ

● ಎನ್. ಪಿ. ದೇಸಾಯಿ

1 ಬಿಹಾರದ ಗುಡಿಸಲ ಗೋಡೆಯನ್ನು ಅಲಂಕರಿಸಿರುವ ಚಿತ್ರ
2. ಭಿತ್ತಿ ಚಿತ್ರದ ಮತ್ತೊಂದು ಮಾದರಿ (ಬಿಹಾರ)
3 ರಾಜಸ್ಥಾನದ ಗ್ರಾಮೀಣ ಕಲಾವಿದರ [illegible]
4. ಕುಲು ಪ್ರದೇಶದಲ್ಲಿ ಕಾಣುವ ಗುಡಿಸಲು
5. [illegible]
6. ಸೌರಾಷ್ಟ್ರದ 'ಮೆಹ್ರ' ಗುಡಿಸಲಿನ ಹಳ್ಳಿ [illegible]

ದೇಶವಿಡೀ ಪ್ರಗತಿ ಮೈದಾನ. ಅದರಲ್ಲಿ ಒಂದು ಆವಾರ. ಅಲ್ಲಿ [illegible] ಕಾಲಿಡು [illegible] ವಾತಾವರಣ [illegible] ಕಾಂಕ್ರೀಟ್ [illegible]

ಅಲ್ಲಿ [illegible] ಹಳ್ಳಿ [illegible] ಆದಿವಾಸಿಗಳ [illegible] ಚಿತ್ರ, [illegible]

ಅದೊಂದು ರಾಜಸ್ಥಾನೀ ಹಳ್ಳಿ. ಅಲ್ಲೊಂದು ಚಾವಡಿ ಸಹ ಇದೆ.

ಹಾಗೇ ಅಪ್ಪಾಡಿ.

ಕೇರಳದ ಗಂಧದ ಕಟ್ಟಿಗೆಯ ಮೇಲಿನ ಕೆತ್ತನೆ. ಚನ್ನಪಟ್ಟಣದ ಆಟಿಕೆ. [illegible] 'ಬಿದ್ರಿ' ಕೆಲಸ, ಮಹಾರಾಷ್ಟ್ರದ '[illegible]' ಚಿತ್ರಕಲೆ, ಆಂಧ್ರದ ಕಲಮಕಾರಿ ಚಿತ್ರ. [illegible] ಅರಳಿದ ಆನೆ. [illegible] ಶಿಲ್ಪವಾದ ಅಲಂಕಾರಿಕ [illegible] ಶಿಲ್ಪದಲ್ಲಿ ಅರಳುವ ಮೂರ್ತಿ, [illegible] ಚಿತ್ರಗಳು, [illegible] ತಯಾರಾಗುವ ವಸ್ತು, [illegible]

ಇದು ಅಖಿಲ ಭಾರತ ಕರಕುಶಲ [illegible] ಏಷ್ಯಾ-72 [illegible] ಗಳ ಪ್ರದರ್ಶನದ ಕಾಲಕ್ಕೆ ಇದು ಹೊಳೆಯಿತು. ಪ್ರದರ್ಶನಕ್ಕೆ [illegible] ಕರಕುಶಲದ. [illegible] ಜನರ ಪ್ರತಿಭೆಗೆ [illegible]

ಈ [illegible] 1972ರಲ್ಲಿ [illegible] ಯೋಜನೆ. ಇದು [illegible] ಮೈದಾನದಲ್ಲಿನ ಸುಮಾರು ಆರು ಎಕರೆ ಜಾಗದಲ್ಲಿ ಈ ಹಳ್ಳಿಗೆ ಸ್ಥಾನ [illegible]

[illegible]

ಅಬು ಬೆಟ್ಟ, ರಾಜಸ್ಥಾನದ ಅರಾವಳಿ ಪರ್ವತ ಶ್ರೇಣಿಯ ಒಂದು ಗಿರಿಧಾಮ. ಸಮುದ್ರ ಮಟ್ಟದಿಂದ 5653 ಅಡಿ ಎತ್ತರದಲ್ಲಿದೆ.

ಅಬು ನಾಮಕರಣ ಅರ್ಬುದ ಎಂಬ ಸರ್ಪದ ಹೆಸರಿನಿಂದ ಬಂದುದು ಎನ್ನುತ್ತಾರೆ. ವಶಿಷ್ಠ ಋಷಿಗಳು ತಪಸ್ಸುಗೈದ ಪ್ರದೇಶ. ಋಷಿಗಳ [illegible] ಹಸುವಿಗೆ ಬಿತ್ತು. ಋಷಿಗಳಿಗೆ ಅದನ್ನು ಹೊರ ತೆಗೆಯಲಾಗಲಿಲ್ಲ. [illegible] ತುಂಬಿತು, ಹಸುವು ತೇಲಿಬಂತು. ಹೀಗೆ ಹಸುವೇನೋ ಉಳಿಯಿತು ಆದರೆ, ಆ [illegible] ಇಲ್ಲ [illegible] ಋಷಿಗಳು [illegible] ಶಿವನಲ್ಲಿ. ಹಿಮಾಲಯ ಪರ್ವತನ ಎರಡನೆಯ ಮಗ ನಂದಿವರ್ಧನನಿಗೆ ಈ ಕೆಲಸವನ್ನೊಪ್ಪಿಸಲಾಯಿತು. ಅವನು ಕುಂಟ, ಅವನ ಗೆಳೆಯ "ಅರ್ಬುದ" ನಂದಿವರ್ಧನನನ್ನು ಅಲ್ಲಿಗೆ ಸಾಗಿಸಬೇಕೆಂದು ನಿರ್ಣಯ. [illegible] ಸರ್ಪ — ಅರ್ಬುದನಿಗೆ ತಿಳಿದದ್ದು ನಂದಿವರ್ಧನ [illegible] ಶಿವನ ಅಪ್ಪಣೆ [illegible] ಗೆಳೆಯ, ಅವನನ್ನು [illegible] ನಂದಿವರ್ಧನನನ್ನು ಸುತ್ತಿಕೊಳ್ಳುತ್ತಾನೆ. ಇಬ್ಬರೂ [illegible] ನಿರ್ಮಾಣವಾಯಿತು. "ಅರ್ಬುದ" ಅಸ್ತಿತ್ವಕ್ಕೆ ಬಂತು, ಈಗ ಅದೇ ಅಬು.

ಈ ಗಿರಿಧಾಮ ನೈಸರ್ಗಿಕವಾಗಿ, ಎಷ್ಟು ಸುಂದರವೋ ಹವಾಮಾನದಿಂದಲೂ ಅಷ್ಟೇ ಆಹ್ಲಾದಕರ, ಮಾನವ ನಿರ್ಮಿತ ಅಚ್ಚರಿಯಿದ್ದಾರೆ, ಪೂಜೆ ಪುನಸ್ಕಾರ ಅಧಿಕವಾಗಿ ನಡೆಯುತ್ತಲೇ ಇವೆ.

"ದಿಲ್‌ವಾರಾ" ಎಂಬುದು ಅಬು ಗಿರಿಧಾಮದ ಬಳಿಯೇ ಇರುವ ಹಿಂದು ಹಳ್ಳಿ. ಅಲ್ಲಿ ಜೈನರ ಐದು ಮಂದಿರಗಳಿವೆ. ಅದರಲ್ಲಿ ಎರಡು ಹಾಲುಗಲ್ಲಿನ (ಬಿಳಿ ಸಂಗಮವರಿ) ಕೆತ್ತನೆಗೆ, ನಕ್ಷೆಗೆ ಪ್ರಸಿದ್ಧವಾಗಿವೆ. ಮಂದಿರಗಳನ್ನು ಅವನ್ನು ಕಟ್ಟಿಸಿದವರ ಹೆಸರಿನಿಂದಲೇ

ಚಿತ್ರ-ಲೇಖನ:
ಎನ್. ಸಿ. ದೇಸಾಯಿ

ಗುರುತಿಸುತ್ತಾರೆ. ಮೊದಲನೆಯದು ವಿಮಲ ವಸಹಿ" ಎಂಬುದು ಕಟ್ಟಿಸಿದವರು ವಿಮಲ ಶಹಾ ಎಂಬುವರು. ನಿರ್ಮಾಣ ಕ್ರಿ.ಶ. 1031–32ರಲ್ಲಿ. ಆ ಕಾಲದಲ್ಲಿಯೇ ಕೋಟಿ ಕಟ್ಟಲೆ ಹಣ ವಿನಿಯೋಗಿದೆ ಎಂದರೆ ಅದರ ನಿರ್ಮಾಣದ ಬೆಲೆ [illegible] ಊಹಿಸಬಹುದಾಗಿಲ್ಲ. ಈ ಮಂದಿರ ಮೊದಲನೆಯ ತೀರ್ಥಂಕರ ಆದಿನಾಥನದು.

ಈ ಮಂದಿರದ ಗರ್ಭಗುಡಿಯ ಮುಂದಿರುವ ಅಂಗಣದ ಒಳ ಛತ್ತೇ ಅತಿ ಪ್ರಸಿದ್ಧವಾದುದು. ಅದನ್ನು ವರ್ಣಿಸಲು ಪದಗಳ ಸಾಧ್ಯವು ಗಿರಿ ಎನಿಸಲಿಕ್ಕಿಲ್ಲ ನೋಡಬೇಕು ಆನಂದಿಸಬೇಕು.

ಎರಡನೇಯ ಮಂದಿರವೇ ವಸ್ತುಪಾಲ, ತೇಜಪಾಲ ಎಂಬಿಬ್ಬರು ಸಹೋದರರಿಂದ ಕ್ರಿ.ಶ. 1261 ರಲ್ಲಿ ನಿರ್ಮಿತವಾಯಿತು.

ದಿಲ್ವಾರಾ ಮಂದಿರದ ಮುಖ್ಯ ಅಂಗಣ.

ದಿಲ್‌ವಾರಾ ಮಂದಿರ: ಹಾಲುಗಲ್ಲಿನಲ್ಲಿ ಚಿತ್ತಾರ

ಗಳಿಗೂ ಕಡಿಮೆಯಿಲ್ಲ. [illegible] ಹಸ್ತದಂತದಲ್ಲಿ ಕೊರೆಯುವಂತೆ ಇಲ್ಲಿ ಹಾಲುಗಲ್ಲಿನಲ್ಲಿ ಕೆತ್ತಿದ್ದಾರೆ. [illegible] ನಿರ್ಮಾಣವಾಗಿದೆ, [illegible] ಹತ್ತಿರ [illegible] ಈ ಮಂದಿರಗಳ ನಿರ್ಮಾಣವಾಗಿ ಆದರೂ ಅಷ್ಟು ಒಂದು ಚೂರೂ ಎಲ್ಲಿಯೂ ಮಂಕಾಗಿಲ್ಲ. ಮಂದಿರಗಳ, ದಕ್ಷಿಣೆಗೆ [illegible] ಇಪ್ಪತ್ತೆರಡನೇಯ ತೀರ್ಥಂಕರ "ನೇಮಿನಾಥ"ರದು. ಆಗಿನ ಕಾಲದಲ್ಲಿಯೇ ಈ ಮಂದಿರದ ನಿರ್ಮಾಣಕ್ಕೆ 12 ಕೋಟಿ ರೂ. [illegible]

'ನಖಿ' ಸರೋವರ

ಈ ಗಿರಿಧಾಮದಲ್ಲಿ, ಒಂದು ಹಿರಿಯ ಸರೋವರವಿದೆ ಜಲ ವಿಹಾರಕ್ಕೆ ದೋಣಿಗಳಿವೆ, ಬೇಸಿಗೆ ಕಾಲದಲ್ಲಿಯೂ ಈ [illegible] ಸರೋವರದ ಆಚೆಯ ಅಂಚು ಕಾಣುವುದಿಲ್ಲ. ಸಮುದ್ರವೇ ಬಂದು ಇಲ್ಲಿ ನೆಲೆಸಿದೆಯೋ ಎಂಬಂತೆ ಭಾಸವಾಗುತ್ತದೆ.

ಈ ಸರೋವರ ನಿರ್ಮಿತಿಗೂ ಒಂದು ಕಥೆ. ಯಾವುದೋ ಒಂದು ಸಂದರ್ಭದಲ್ಲಿ ದೇವತೆಗಳು "ನಖ"ದಿಂದ (ಉಗುರು) ಭೂಮಿಯನ್ನು ಕೆದರಿ ಈ ಸರೋವರವನ್ನು ನಿರ್ಮಿಸಿದರಂತೆ ಅದಕ್ಕಾಗಿ ಈ ಸರೋವರಕ್ಕೆ "ನಖಿ ಸರೋವರ" ಎಂದು ಹೆಸರು.

ಅಚಲೇಶ್ವರ ಮಂದಿರ

ದಿಲ್ವಾರಾ ಮಂದಿರಗಳಿಂದ ಐದು ಮೈಲಿ ದೂರ ಹೋದರೆ ಅಚಲಗಡ ಎಂಬೊಂದು ಹಳ್ಳಿ. ಅಚಲಗಡ ಕೋಟೆಗೆ ಐತಿಹಾಸಿಕ ಪ್ರಸಿದ್ಧಿ ಇದೆ. ಈ ಆವಾರದಲ್ಲಿಯೇ "ಅಚಲೇಶ್ವರ ಮಹಾದೇವ"ನ ಗುಡಿ. ಇದ್ದು ಅತಿ ಪುರಾತನ ದೇವಸ್ಥಾನವೆಂದು ಹೇಳಲಾಗುತ್ತಿದೆ. ಇಲ್ಲಿಯ ಕಿಲ್ಲೆಯನ್ನು ಮೇವಾಡದ ಮಹಾರಾಣಾ ಕುಂಭರನು 1452ರಲ್ಲಿ ನಿರ್ಮಿಸಿದನೆಂದು ಇತಿಹಾಸದ ಪುಟಗಳಿಂದ ತಿಳಿಯುವುದು. ಇಲ್ಲಿಯೂ ಕೆಲ ಜೈನಮಂದಿರಗಳಿವೆ. ಇವನ್ನು ಚೌಮುಖಿ ಮಂದಿರಗಳೆಂದು ಕರೆಯುತ್ತಾರೆ. ಇಲ್ಲಿ ನಾಲ್ಕು ಮುಖಗಳುಳ್ಳ ಧಾತುವಿನ ಮೂರ್ತಿಗಳಿವೆ. ಈ 14 ಮೂರ್ತಿಗಳ ಒಟ್ಟು ತೂಕ 1440 ಮಣ.

ಹೀಗೆ ಅಬು ಗಿರಿಧಾಮ, ನೈಸರ್ಗಿಕವಾಗಿ ಐತಿಹಾಸಿಕವಾಗಿ, ವಾಸ್ತುಶಿಲ್ಪ ದೃಷ್ಟಿಯಿಂದ ಪ್ರಸಿದ್ಧವಾಗಿದೆ.

ಅಹಮದಾಬಾದಿನಿಂದ ಅಜಮೇರಕ್ಕೆ ಹೋಗುವ ರೈಲು ದಾರಿಯಲ್ಲಿ "ಅಬುರೋಡ" ನಿಲ್ದಾಣ ಸಿಕ್ಕುತ್ತದೆ, ಅಲ್ಲಿಂದ 18 ಮೈಲಿ ಬಸ್ಸಿನಲ್ಲಿ ಹೋದರೆ ಸಿಕ್ಕುವುದು ಈ ಗಿರಿಧಾಮವು.

ದಿಲ್ವಾರಾ—ಮಂದಿರದಲ್ಲಿ ಒಂದು ಪೌಳಿ

"ನಖಿ ಸರೋವರ" ಹಾಗೂ ಅದರ ಅಂಚಿನಲ್ಲಿರುವ ಉದ್ಯಾನ.

ಕನ್ನಡಪ್ರಭ
ಭಾನುವಾರ
ಆಗಸ್ಟ್ ೬, ೧೯೮೦

ವಾಙ್ಮಯ ವಿಹಾರ

ಗುಡಿಸಲು ನಿರ್ಮೂಲನವಾದರೂ ನಡುಗುತ್ತ ಕುಳಿತಿರುವ ಮುದುಕ ಜಾಗ ಬಿಡಲಾರ

ನಿರಾಧಾರವಾದ ಕುಟುಂಬ, ಹಾರ್ ರೈಲು ನಿಲ್ದಾಣದ ಪ್ಲಾಟ್‌ಫಾರ್ಮ್‌ನಲ್ಲಿ ಹಂಗಾಮಿ ವಸತಿ.

[illegible]

[illegible]

ಧಾರಾಕಾರ ಮಳೆ, ಆದರೂ ನಿರ್ಮೂಲನದ ಕೆಲಸ ನಡೆದೇ ಇದೆ.

ಕಿರಿಯರೆಲ್ಲ ಕೆಲಸಕ್ಕೆ ಹೋಗಿದ್ದಾರೇನೋ. ಮುದುಕ ಪ್ಯಾಸ್ ಮನೆ ಕಾಯುತ್ತಿದ್ದಾನೆ.

[illegible]

ಮಹಿಳಾ ಗೃಹ ಉದ್ಯೋಗ
ಲಿಜ್ಜತ್-ಪಾಪಡ್ ಸಾಹಸ

● ಶಾರದಾ ಎಸ್. ದೇಸಾಯಿ
● ಚಿತ್ರಗಳು : ಎಸ್. ಬಿ. ದೇಸಾಯಿ

ಮುಂ[illegible] ... ಈ ಗೃಹ ಉದ್ಯೋಗ [illegible] ... ಸ್ಥಳವೆಂದು ಬೇರೆ ಹೇಳಬೇಕಿಲ್ಲ.

ಈಗ್ಗೆ ಎರಡು ದಶಕಗಳಿಗೂ ಹಿಂದೆ, ಕ್ರಿ.ಶ. 1959ನೆಯ ವರ್ಷ. ಈ ಚಾಳಿನ ವಾಸಿಗಳಾದ ಏಳು ಜನ್ನ ಮಹಿಳೆಯರು ಮಾಳಿಗೆಯ ಮೇಲೆ ಚಿಕ್ಕ ಸಭೆಗೂಡಿದ್ದಾರೆ, ಮನೆಗೆಲಸ ಮುಗಿದ ಮೇಲೆ ಉಳಿದ ವೇಳೆಯ ಸದುಪಯೋಗ ಹೇಗೆ ಮಾಡಬೇಕು ಎಂಬುದೆ ಚರ್ಚೆಯ ವಿಷಯ. ಆ ಸೂಚನೆಗಳ ಚರ್ಚೆಯಾದ ನಂತರ, 'ಹಪ್ಪಳ ಮಾಡಿ ಮಾರುವುದು' ಎಂಬ ನಿರ್ಧಾರವಾಯಿತು. ಆ ಸೂಚನೆ ಎಲ್ಲರಿಗೂ ಒಪ್ಪಿಗೆಯಾಯಿತು. ಇದ [illegible] ರೂಪುಗೊಂಡಿತು. ಎಲ್ಲ ಮಹಿಳೆಯರಿಗೂ ಇದರ ಉಪಯೋಗ [illegible] ... ಉದ್ದೇಶದ 'ಶ್ರೀ ಮಹಿಳಾ ಗೃಹ ಉದ್ಯೋಗ - ಲಿಜ್ಜತ ಪಾಪಡ' ಎಂಬ [illegible] ಮಾರ್ಚ್ 15, 1959 [illegible].

'ಲಿಜ್ಜತ್' ಅಂದರೆ 'ರುಚಿಯಾದುದು' [illegible]. ಪಾಪಡ ಅಂದರೆ ಹಪ್ಪಳ. ಮುಖ್ಯವಾಗಿ ಹಪ್ಪಳವನ್ನೇ ಲಕ್ಷಿಸಿ [illegible] ಮಾಡುವುದೆಂದು ನಿರ್ಧರಿಸಿದರು. ಈ ಮಹಿಳೆಯರ, ಇನ್ನು ಕೆಲವು ಮುಖ್ಯ ನಿರ್ಧಾರಗಳೆಂದರೆ ಆರ್ಥಿಕ ಬಲಕ್ಕಾಗಿ [illegible] ಆರು ಸಾವಿರದಷ್ಟು [illegible] ವ್ಯವಹಾರವನ್ನು ಈ ಸಂಸ್ಥೆ ನಡೆಸಿತು.

ನೋಂದಣಿ

ಪರಸ್ಪರ ವಿಶ್ವಾಸ, ನಂಬಿಗೆ - ಕಾರ್ಯದಲ್ಲಿಯ ಆಸ್ಥೆ, [illegible] ದಿನದಿಂದ [illegible] ಬೆಳೆಯಿತು. ಬೆಳೆ[illegible]. ಈ ಪ್ರಸಂಗದಲ್ಲಿ ಸಂಸ್ಥೆಗೆ [illegible] ಹಿರಿಯ ವ್ಯಾಪಾರಸ್ಥರೂ - [illegible] ಆಗಿದ್ದ ಸಮಾಜಸೇವಕ ಶ್ರೀ ಛಗನ್

ಕೇವಲ ಎರಡು ದಶಕಗಳಲ್ಲಿ ಇಪ್ಪತ್ತೈದು ಶಾಖೆಗಳನ್ನು ಕೂಡಿ ಹತ್ತಿರ ಹತ್ತಿರ ಎಂಟು ಕೋಟಿ ರೂಪಾಯಿಗಳ ವ್ಯವಹಾರ ನಡೆಸಿದ ಹಿರಿಮೆ 'ಲಿಜ್ಜತ್ ಪಾಪಡ್' ಸಂಸ್ಥೆಯದು.

ಈ ಸಂಸ್ಥೆ ಜನ್ಮ ತಾಳಿದ್ದೇ ಮಹಿಳೆಯರಿಗಾಗಿ. ವ್ಯವಸ್ಥಾಪನವೂ ಮಹಿಳೆಯರಿಂದಲೇ. ಸ್ವಾಭಿಮಾನದಿಂದ ದುಡಿಯುವ ಯಾವ ಮಹಿಳೆಯೂ ಈ ಸಂಸ್ಥೆಯ ಸದಸ್ಯಳಾಗಬಹುದು.



ಶ್ರೀಮತಿ ಸುನಂದಾ ಸದಾಶಿವ ಭಾಗ

[illegible] 'ದೇಣಿಗೆ' ತೆಗೆದುಕೊಳ್ಳಬಾರದು, ಹಪ್ಪಳದ 'ರುಚಿ'ಯನ್ನು ಯಾವಾಗಲೂ ಕಾಯ್ದುಕೊಂಡು ಹೋಗುವುದು - ಹಾಗು ಸ್ವಂತ ಶ್ರಮದಿಂದಲೇ [illegible] ಬೆಳೆಸಿಕೊಂಡು ಹೋಗುವದು ಎಂಬ ಕೆಲ ಮೂಲ ಉದ್ದೇಶಗಳನ್ನು ಪ್ರಥಮ ದಿನದಿಂದಲೇ ಕಾಯ್ದುಕೊಂಡು ಬಂದಿದ್ದಾರೆ. ಅಂತಲೇ ಇಷ್ಟು ಅಲ್ಪ ಕಾಲದಲ್ಲಿ ಈ ಸಂಸ್ಥೆ ವಿಶಾಲ ವೃಕ್ಷವಾಗಿ ಬೆಳೆಯಲು ಅನುಕೂಲವಾಯಿತೆಂದು ಹೇಳಬೇಕು. ನಿಜ, ಆರ್ಥಿಕ ತೊಂದರೆ ಎನಿಸಿದಾಗ ಹಣವನ್ನು ಕೈಗಡವೆಂದು ತೆಗೆದುಕೊಂಡಿದ್ದಾರೆ, ವಿನಾ 'ದೇಣಿಗೆ' ಕೇಳಿಲ್ಲ. ಪ್ರಥಮ ದಿನದಿಂದ ಛಗನ್ ಬಾಪ್ಪಾ ಪರೇಖ ಎಂಬುವರ ಆಶೀರ್ವಾದ, ಆದೇಶಗಳು ಸಿಗುತ್ತಲೇ ಇದ್ದವು. ಛಗನ್ ಬಾಪ್ಪಾರ ಹೇಳಿಕೆಯ ಮೇರೆಗೆ ಸಂಸ್ಥೆಯ ಸದಸ್ಯರು ಖಾದೀ-ಗ್ರಾಮೋದ್ಯೋಗ ಸಂಸ್ಥೆಯ (*KVIC*) ಶ್ರೀ ಢೇಬರ ಅವರನ್ನು ಕಂಡು, ಖಾದೀ ಗ್ರಾಮೋದ್ಯೋಗದ ಮಾನ್ಯತೆ ತಮ್ಮ ಸಂಸ್ಥೆಗೆ ಸಿಗಬೇಕೆಂದು ಕೇಳಿಕೊಂಡರು. ಢೇಬರರು ಸಂಸ್ಥೆಯ ಕಾರ್ಯಕ್ರಮಗಳನ್ನು ಪ್ರತ್ಯಕ್ಷ ವೀಕ್ಷಿಸಿ ಸಮಾಧಾನಪಟ್ಟರು. ಆದರೆ ಸಂಸ್ಥೆಯು ಪಬ್ಲಿಕ್ ಟ್ರಸ್ಟ್ ಆಕ್ಟ್ ಪ್ರಕಾರ ನೋಂದಾಯಿಸಲ್ಪಡುವುದರಿಂದ [illegible] ನೋಂದಣಿಯಾಗುವದು ಅವಶ್ಯವೆಂದರು. ಆ

"ಛಗನ್ ಬಾಪ್ಪಾ"
(ಛಗನ್‌ಲಾಲ್ ಕರಮಸೀ ಪರೇಖ)
ಏಳು ಜನ ಮಹಿಳೆಯರು "ಮಹಿಳಾ ಗೃಹ ಉದ್ಯೋಗ ಲಿಜ್ಜತ್ ಪಾಪಡ್"ಗೆ ಜನ್ಮವಿತ್ತರು - ಅದು ಬೆಳೆಯಲು ಉತ್ತೇಜನ ನೀಡಿದವರೇ – ಇವರು

ಆಗಿದ್ದು ಈಗಲೂ ಹಾಗೆಯೇ ನಡೆದುಕೊಂಡು ಬಂದಿದೆ.

ಮಹಿಳೆಯರಿಗಾಗಿ-ಮಹಿಳೆಯರಿಂದಲೇ

ಸಂಸ್ಥೆ ಜನ್ಮತಾಳಿದ್ದೇ ಮಹಿಳೆಯರಿಗಾಗಿ - ವ್ಯವಸ್ಥಾಪನವೂ ಮಹಿಳೆಯರಿಂದಲೇ ಎಂಬ ಉದ್ದೇಶದಿಂದ ಹಾಗೆಯೇ ನಡೆದುಕೊಂಡು ಬಂದಿದೆ. ಸ್ವಾಭಿಮಾನದಿಂದ ದುಡಿಯುವ ಯಾವ ಮಹಿಳೆಯೂ ಈ ಸಂಸ್ಥೆಯ ಸದಸ್ಯಳಾಗಬಹುದು. ಯಾವ ಜಾತಿ, ಮತ, ಪ್ರದೇಶ ಎಂಬ ಭೇದಗಳನ್ನೂ ಪರಿಗಣಿಸಲಾಗುವುದಿಲ್ಲ. '*Self Employed*'ನ ಉದ್ದೇಶವಿದ್ದ ಯಾವ ಮಹಿಳೆಯೂ ಈ ಸಂಸ್ಥೆಯ ಲಾಭ ಪಡೆಯಬಹುದು.

ತುಷಾರ

[illegible] ... ಆದಿರಿತವಾಗಿ ... ಹಾಗೆ ಚಿತ್ರಿಸು. ಅಲ್ಲಿಗೆ ಬಹುಶಃ ಸೂಕ್ಷ್ಮ ಮುಕ್ತಾಯವಾಗಬಹುದು. ... 1,500 - ರೂಪಾಯಿ ... 500 - ರೂಪಾಯಿ [illegible]

[illegible] ... ಸಾಮಾನ್ಯವಾಗಿ ಇತರ ಭಾಷೆಗಳಲ್ಲಿ ವಿಶೇಷಾಂಕ ಎಂದರೆ [illegible] ... ಚಿತ್ರಗಳ ಸಂಪುಟ ಎಂಬ ಭಾವನೆ. ... ಆದರೆ [illegible] ಸಾಹಿತ್ಯದ ಹೊರತೆ, ... ಮಹಿಳೆ, ಮಕ್ಕಳು, ಭವಿಷ್ಯ, ಪ್ರವಾಸ, ಸಿನಿಮಾ, ಕ್ರೀಡೆ ಹೀಗೆ ಒಂದೊಂದು ವಿಷಯವನ್ನೇ [illegible] ... ಸೋಲ್, ಹಂಸ, ಸಹ್ಯಾದ್ರಿ, [illegible]

●●●●●

ಕನ್ಯಾ

ತುಲ

ಮೀನ

ಕೈ ಕೆಸರಾದರೆ ಬಾಯಿ ಮೊಸರು. ಯಂತ್ರೋದ್ಯಮ ಕೌಟುಂಬಿಕ ಧನದ ವಹಿವಾಟಿನಲ್ಲಿ ಇವನ್ನು ಮರೆಯದಿರಿ. ಪ್ರಗತಿಗೆ ಕಾಲ ಪರಿಪಕ್ವವಾಗುತ್ತಿದೆ. ಪ್ರಣಯ ಜೀವನ ಗೃಹದಲ್ಲಿ ಅಚ್ಚುಮೆಚ್ಚು. ಮನಸ್ಸಿನಂತೆ ಯೋಜನೆ ಮುನ್ನಡೆ. ಸಂಸಾರ-ಸಮಾಜ-ವಾಹನ ಸಮಸ್ಯೆಗಳು ಬಗೆಹರಿದು ನೆಮ್ಮದಿ. ... ಕಾರ್ಯ ... ತಾ. 15ರಿಂದಿದೆ

ಬೆಳೆಯಲು ಭೂಮಿ ಅನಿವಾರ್ಯವೇ?

... ಸುಮಾರು 20 ಅಡಿ ಎತ್ತರದಲ್ಲಿ 8 ಅಡಿ ಅಗಲ, 25 ಅಡಿ ಉದ್ದದ ... ಸಿದ್ಧಗೊಳಿಸಲಾಯಿತು. ಪ್ರತಿ ಪಾತಿಗೂ ಗೋಡೆಗಳನ್ನು ನಿರ್ಮಿಸಿ ... ಆಹಾರದ ಕೊರತೆ ... ಎದುರಿಸಿದರು. ... ಆವರ, ದೇಶಗಳಿಗೂ ಅನ್ವಯವಾಗ ...

Sunday 11th December 1977

ಬಯಲುಸೀಮೆಯ ತಂಪು ನೆಲ ಸೊಗಲ

ಚಿತ್ರ ಮತ್ತು ಲೇಖನ:
ಎನ್. ಸಿ. ದೇಸಾಯಿ

ಬೆಳಗಾವಿ ಜಿಲ್ಲೆಯ ಕೆಲ ಮಹತ್ವದ ಸ್ಥಳಗಳು ಜನರಿಂದ ಇನ್ನೂ ಮರೆಯಾಗಿ ಉಳಿದಿರುವುದನ್ನು ಕಂಡಾಗ ಆಶ್ಚರ್ಯವಾಗುತ್ತದೆ. ಹೀಗೆ ಉತ್ತಮ ಪ್ರವಾಸೀ ಕೇಂದ್ರವಾಗಿದ್ದರೂ ಅಷ್ಟು ಪ್ರಚಾರ ಪಡೆಯದೇ ಉಳಿದಿರುವ, ರಮಣೀಯ ಪ್ರದೇಶ ಬೈಲಹೊಂಗಲ ತಾಲ್ಲೂಕಿನಲ್ಲಿರುವ ಸೊಗಲ.

ಸೊಗಲದಲ್ಲಿರುವುದು ಒಂದು ಚಿಕ್ಕ 'ಧಬಧಬೆ.' ಇಂಥ ಚಿಕ್ಕಪುಟ್ಟ ತಡಸಲುಗಳು, ಜಲಪಾತಗಳು, ಮಲೆನಾಡಿನವರಿಗೆ ಆಶ್ಚರ್ಯವನ್ನುಂಟುಮಾಡಲಾರವು. ಅವುಗಳ ಅಲ್ಲಿ ಕೊರತೆಯೇನೂ ಇಲ್ಲ. ಆದರೆ ನಮ್ಮ ಬಯಲುಸೀಮೆಯ ಮಟ್ಟಿಗೆ ರಮಣೀಯ ಸ್ಥಳವಲ್ಲದೆ ಆರೋಗ್ಯವನ್ನು ಉತ್ತಮಗೊಳಿಸಿಕೊಳ್ಳಬೇಕೆಂಬುವರಿಗೆ ಒಂದು ತಾಣವೂ ಕೂಡ.

'ಜಲಪಾತ' ಎಂದರೆ ಒಂದು ನದಿಯು ಗುಡ್ಡದ ಅಥವಾ ಪರ್ವತದ ಕೊರಕಲಿನಲ್ಲಿ ಧುಮುಕುವ ನದಿ. ಸೊಗಲ ಇದಕ್ಕೆ ಅಪವಾದ. ಇಲ್ಲಿ ಯಾವ ನದಿ ಅಥವಾ ಹಳ್ಳದಿಂದಲೂ ನೀರು ಹರಿದು ಬಂದು ಧುಮುಕುವುದಿಲ್ಲ. ನೀರು ಬೀಳುವ ಸ್ಥಳದಿಂದ ಈ ಗುಡ್ಡದಲ್ಲಿಯೇ ಕಾಲು ಮೈಲಿನಷ್ಟು ಮೇಲೆ ಹೋದರೆ, ಕೆಲ ಚಿಕ್ಕಪುಟ್ಟ ಝರಿಗಳಿಂದ ನೀರು ಒಂದೆಡೆ ಸಂಗ್ರಹವಾಗಿ–ಮುಂದೆ ಧುಮುಕುತ್ತದೆ. ಬೀಳುವ ಎತ್ತರವೂ ಹೆಚ್ಚಿಲ್ಲ. 15–20 ಅಡಿಗಳಷ್ಟಿರಬೇಕು. ಗಾತ್ರವೂ ಅಷ್ಟು ಹಿರಿದಲ್ಲ. ಒಂದೇ ರೀತಿ ವರ್ಷದ ಆದೇ ಗಾತ್ರದಲ್ಲಿ ಹನ್ನೆರಡು ತಿಂಗಳೂ ಈ ನೀರು ಧುಮುಕುತ್ತದೆ.

ಹಿತಕರ ಹವೆ

ಈ ಚಿಕ್ಕ ಜಲಪಾತದ ಕೆಳಗೆ ಸ್ನಾನ ಮಾಡುವುದೇ ಒಂದು ಹೊಸ ಅನುಭವ. ಬಿಸಿಲಿನ ಅವಧಿಯಲ್ಲಿ ಮಾಡಿದಾಗ ನೀರಿನ ಕಾವು ಕಾಣುವುದಿಲ್ಲ. ಒಳ್ಳೆಯ 'ಶವರ್ ಬಾತ್'ನ ಅನುಭವ. ಸ್ವಲ್ಪ ಮಧ್ಯಕ್ಕೆ ಹೋದರೆ ಬೀಳುವ ನೀರು ಹುಬ್ಬು ಮೈಗೆ ಬಡಿಯುತ್ತದೆ. 'ಮಸಾಜ್' ಮಾಡಿದ ಅನುಭವವಾಗುತ್ತದೆ ಮೈಗೆ. ಈ ಪೆಟ್ಟನ್ನು ಅನುಭವಿಸುವುದಕ್ಕಾಗಿಯೇ ಇಲ್ಲಿಗೆ ಬರುವ ಜನರಿದ್ದಾರೆ. ಸೊಂಟ ಹಿಡಿದವರು, ನರ

ಇದೀಗ ಜೀರ್ಣೋದ್ಧಾರಗೊಂಡಿರುವ ಸೊಗಲದ ಶಿವಮಂದಿರ, ದೇವೀಸನ್ನಿಧಿ

ತೊಡಕಿನವರು ಮುಂತಾದ ದೈಹಿಕ ನೋವುಳ್ಳವರು ಇಲ್ಲಿ ಬರುತ್ತಾರೆ. ಪ್ರತಿದಿನ ಬಂದು ಈ ಪೆಟ್ಟು ತಿಂದು ತಮ್ಮ ನೋವನ್ನು ಕಳೆದುಕೊಂಡವರಿದ್ದಾರೆಂದು ಹೇಳಲಾಗುತ್ತದೆ. ನೀರು ಜಲಪಾತವಾಗಿ ಬೀಳುವ ಮೊದಲು, ವಿವಿಧ ಝರಿಗಳಿಂದ ಚಿಮುಕಿದ ನೀರು ಮೇಲ್ಗಡೆಯಲ್ಲಿ ಒಂದು ಚಿಕ್ಕ ಸರೋವರದಂತೆ ಕಲೆಯುತ್ತದೆ. ಜಲಪಾತದ ಕೆಳಗೆ ಸ್ನಾನ ಬೇಡವೆನ್ನುವವರು ಈ ತಿಳಿಯಾದ ತಂಪುಗಂಗೆಯಲ್ಲಿ ಮೀಯುತ್ತಾರೆ.

ಸರೋವರದಿಂದ ಇನ್ನಷ್ಟು ಹಿಂದುಗಡೆ ಪರ್ವತದ ಮೇಲೆ ಸುಳಿದರೆ, ಒಂದು ವನ. ಈ ತಂಪು ನೆರಳಿನಲ್ಲಿ ಅಡ್ಡಾಡಿದಾಗ ಮನಸ್ಸು ಒಂದು ಬೇರೆಯೇ ಜಗತ್ತಿನಲ್ಲಿ ತಿರುಗಿದ ಅನುಭವವನ್ನು ಪಡೆಯುತ್ತದೆ. ಇಲ್ಲಿಯ ಹವೆ ಆರೋಗ್ಯಕರವಾದುದು. ನೀರು ಶುದ್ಧವಾದುದು. ಇಂಥಲ್ಲಿ ಒಂದು ಆರೋಗ್ಯಧಾಮವಾದರೆ, ಅದೆಷ್ಟೋ ಜನರಿಗೆ ಔಷಧವಿಲ್ಲದೆ ಕೆಲ ಕಾಯಿಲೆಗಳು ಗುಣವಾಗುವುದರಲ್ಲಿ ಸಂಶಯವಿಲ್ಲ.

ನಿಜವಾಗಿ ಹೇಳಬೇಕಾದರೆ ಶುಶ್ರೂಷೆ ಪಡೆದು ಚೇತರಿಸಬೇಕಾದ ರೋಗಿಗಳಿಗೆ ಇದೊಂದು ಉತ್ತಮ ತಾಣ. ಸಮಾಜಸೇವೆಯ ದೃಷ್ಟಿಯ ಡಾಕ್ಟರುಗಳ ಕಣ್ಣುತಪ್ಪಿಸಿ ಈ ಜಾಗ ಹಾಗೇ ಏಕೆ ಉಳಿದಿದೆಯೋ ತಿಳಿಯದು. ಘಟಪ್ರಭೆಯಷ್ಟೇ ಉತ್ತಮ ಹವೆ ಇಲ್ಲಿದೆಯೆಂದು ಹೇಳಬೇಕು. ಸಾಕಷ್ಟು ಸ್ಥಳದ ಅನುಕೂಲತೆಯೂ ಇರುವುದರಿಂದ ಸರಕಾರವೇ ಒಂದು ಒಳ್ಳೆಯ ಆಸ್ಪತ್ರೆಯನ್ನು ನಿರ್ಮಿಸಿದರೆ, ಬರೀ ತಾಲೂಕಿನ ಜನರಿಗಷ್ಟೇ ಅಲ್ಲ ಜಿಲ್ಲೆಯ – ನಾಡಿನ ಜನತೆಗೆ ಹಿತವಾದೀತು. ಶುಶ್ರೂಷೆಗಾಗಿ ನಗರಕ್ಕೆ ನುಗ್ಗುವ ಜನ ಇಲ್ಲಿ ಬಂದು ಅಲ್ಪವೆಚ್ಚದಲ್ಲಿ ವಾಸವಾಗಿ ಆರೋಗ್ಯ ಪಡೆದು ಮರಳಲು ಅನುಕೂಲವಾದೀತು.

ಸ್ನಾನಕ್ಕೆ ರಮ್ಯ ತಾಣ, ಈ ಚಿಕ್ಕ ಜಲಪಾತ

ಹಿಂದೆ ಈ ಸ್ಥಳದ ಹೆಸರು 'ಸೊಗಲ'ವೆಂದು ಹೇಗೆ ಬಂದಿತೆಂಬುದಕ್ಕೆ ಆಧಾರವಿಲ್ಲ! ಆದರೆ ನೈಸರ್ಗಿಕ ಸೌಂದರ್ಯ, ಸೊಗಸಾದ ವಾತಾವರಣ, ಅನುಕೂಲತೆಗಳಿಂದ ಈ ಹೆಸರು ಬಂದಿರಬಹುದು.

ಮುರಗೋಡದಿಂದ ... ಪ್ರವಾಸ ಅನುಕೂಲಕರ. ಈ

ಸೊಗಲದ ಧಬಧಬೆ

ನಿರ್ಮಲವಾದ ಶೀಹರಿವು

ಹಿಂದೆ ಈ ಸ್ಥಳ ಋಷಿಗಳ ವಾಸವಾಗಿತ್ತೆಂದು ಹೇಳುತ್ತಾರೆ. ಕೆಲ 'ಬಾವಾ' ಜನರು, ಜಂಗಮರು ವಾಸವಾಗಿರುವುದನ್ನು ಈಗಲೂ ಕಾಣುತ್ತೇವೆ. ಜಲಪಾತದ ಅಂಚಿನಲ್ಲಿ, ಶಿವಮಂದಿರ ಹಾಗೂ ದೇವಿಯ ಸ್ಥಾನಗಳಿವೆ. ವರ್ಷಕ್ಕೊಮ್ಮೆ ಇಲ್ಲಿ ಜಾತ್ರೆಯೂ ನಡೆಯುತ್ತದೆ. ಈ ಚಿಕ್ಕ ಪರ್ವತದ ಕೆಳ ಅಂಚಿನಲ್ಲಿ ಹಿಂದೊಮ್ಮೆ ಆನೆಗಳ ವ್ಯಾಪಾರ ನಡೆಯುತ್ತಿತ್ತಂತೆ. 'ಸೊಲಗ' ಎಂದಿದ್ದ

ಗಾವಿಯಿಂದಲೂ ... ಇಲ್ಲಿಗೆ ಹೋಗಬಹುದು, ...

ಬೆಳಗಾವಿ ಮತ್ತು ... ಕಡೆಗಳಿಂದ ಶಾಲಾಮಕ್ಕಳ ತಂಡಗಳು ಇಲ್ಲಿ ವಿಹಾರಕ್ಕೆ ಬರುತ್ತವೆ. ಆದರೆ ಇದೊಂದು ಪ್ರವಾಸೀ ಆಕರ್ಷಣೆಯಾದೀತು ಎಂದು ಯಾರೂ ಗಮನಕ್ಕೆ ತೆಗೆದುಕೊಂಡಂತಿಲ್ಲ. ... ಗ್ರಾಮಪಂಚಾಯಿತಿಯವರು ಕಾರ್ಯ ಕೈಕೊಂಡರೆ ಅದೊಂದು ಹಿರಿಯ ಸಾಧನೆ.

ಈ ಚಿಕ್ಕ ಜಲಪಾತದಿಂದ ಬಿದ್ದ ನೀರು ಮುಂದೆ ಹೋಗಿ ಹಳ್ಳ ಆಗುವುದು ಸಾಮಾನ್ಯವಾಗುತ್ತದೆ. ಅಲ್ಲಿಂದ ಮುಂದೆ ಹರಿಯುವ ನೀರು ಕೆಲವರದೇ ಬೇಸಾಯಕ್ಕೆ ಅನುಕೂಲವಾಗಿ ಅದರ ಬಳಕೆ. ಅದಕ್ಕಾಗಿ ಒಂದು ಕೆರೆ ನಿರ್ಮಿಸಿ ಈ ನೀರನ್ನು ಕೂಡಿಸಿದರೆ ಹೆಚ್ಚು ಜನಕ್ಕೆ ಅದರಿಂದ ಅನುಕೂಲವಾದೀತು. ◆

[illegible]

ಮುಂಬೈಯಲ್ಲಿ

ಶ್ರೀ ಆದಿ ಶಂಕರಾಚಾರ್ಯ ಮಂದಿರ

ಗರ್ಭಗೃಹ ಗೋಪುರ

ವಿಷ್ಣು

ಎನ್. ಸಿ. ದೇಸಾಯಿ

[illegible] ... ಈ ಮಂದಿರದ ರಾಜಗೋಪುರ [illegible] 'ತ್ರಿದಲ' ವಿಮಾನ (ಗೋಪುರ)ದ್ದೇ [illegible] ... ಜೀವನಕ್ಕೆ ಸಂಬಂಧಿಸಿದ ವರ್ಣಚಿತ್ರಗಳು

ಇವೆ ಗೀತೋಪದೇಶದ ಚಿತ್ರವು ಇಲ್ಲಿದೆ. ಈ ಮಂಟಪಕ್ಕೆ ಹೋಗುವ ಮುನ್ನ ಎರಡು ವಿಶಾಲ ಕಂಬಗಳಿದ್ದು ಅವುಗಳಲ್ಲಿ ಮೂವತ್ತಾರು ಕಮಲಗಳಿದ್ದು ಪ್ರತಿ ಕಮಲಕ್ಕೂ ಮೂವತ್ತಾರು ಪಕಳೆಗಳುಂಟು. ಇದು, ಹಿಂದು ಧರ್ಮದ 'ಮೂವತ್ತಾರು' ತತ್ವಗಳನ್ನು ಪ್ರತಿಬಿಂಬಿಸುವವು. ಛತ್ತಿನ ಮೇಲೆ 1,008 ಪಕಳೆಗಳಿರುವ ವಿಶಾಲ ಕಮಲದ ಚಿತ್ರವಿದೆ.

ಶಾಸ್ತ್ರೋಕ್ತವಾಗಿ, ಧಾರ್ಮಿಕ ದೃಷ್ಟಿಯಿಂದ ಪರಿಪೂರ್ಣವಾಗಿರುವ ಈ ಒಂದು ವಿಶೇಷ ವಾಸ್ತುಶಿಲ್ಪ ಈ ಮಹಾನಗರದಲ್ಲಿ ಇಂದು ರೂಪುಗೊಂಡಿದೆ. ಇಪ್ಪತ್ತು ಲಕ್ಷ ರೂಪಾಯಿಗಳಷ್ಟು ಹಣ ಖರ್ಚು ಮಾಡಿ ನಿರ್ಮಾಣವಾಗಿರುವ ಈ ಶಂಕರ ಮಂದಿರ, ಭಕ್ತರಿಗೆ ಒಂದು ಅಪೂರ್ವ ಆಕರ್ಷಣೆ.

ಈ ಕಟ್ಟಡ ಸಮಿತಿಯ ಅಧ್ಯಕ್ಷ ಪ್ರೀಮಿಯರ್ ಆಟೋಮೋಬಾಯಿಲ್‌ನ ಮ್ಯಾನೇಜಿಂಗ್ ಡೈರೆಕ್ಟರ್ ಶ್ರೀ ಪಿ. ಎನ್. ವೆಂಕಟೇಶನ್ ಅವರು. ಅವರೂ ಅವರ ಶ್ರೀಮತಿಯವರು ಈ ಕಟ್ಟಡ ನಿರ್ಮಾಣದಲ್ಲಿ ವಹಿಸಿದ ಆಸ್ಥೆ ಅಷ್ಟಿಷ್ಟಲ್ಲ.

ಪ್ರತಿಷ್ಠಾಪನೆಯ ಕಾರ್ಯನಿರ್ವಹಣೆಯನ್ನು ವಹಿಸಿಕೊಂಡವರು, ಕನ್ನಡದ ಜನಕ್ಕೆ ಚಿರಪರಿಚಿತರಾದ ಶ್ರೀ ಆರ್. ವೆಂಕಟೇಶಮೂರ್ತಿಯವರು.

ಪೂಜೆಗೆ ನಲ್ಲಿಯ ನೀರು ಪೂರ್ಣ 'ಮಡಿ' ಅಲ್ಲವೆಂದೋ ಏನೋ ಈ ಮಂದಿರದ ಆವಾರದಲ್ಲಿ ಒಂದು ಬಾವಿಯೂ ಇದೆ. ಹೀಗೆ ಪ್ರತಿ ವಿಷಯವನ್ನು ಕೂಲಂಕಷವಾಗಿ ನೋಡಿ, ವಿಚಾರ ಮಾಡಿ ನಿರ್ಮಾಣ ಮಾಡಲಾಗಿದೆ. ಸದ್ಯ ಶಂಕರಮಠದ ಅಧ್ಯಕ್ಷರಾಗಿರುವವರು ಕನ್ನಡಿಗ ಶ್ರೀ ಬಿ. ನಾರಾಯಣಸ್ವಾಮಿಯವರೇ.

ಇಷ್ಟೆಲ್ಲ ಕಾರ್ಯವನ್ನು ಅತಿ ಕೂಲಂಕಷವಾಗಿ ಮಾಡಿದರೂ ಒಂದು ವಿಷಯ ಮಾತ್ರ ಏಷ್ಟೋ ಭಕ್ತರಿಗೆ ಸೇರಿದಂತಿಲ್ಲ. ಈ ಕಟ್ಟಡದಲ್ಲಿ ಬ್ಯಾಂಕೊಂದು ವಿಶಾಲ ಜಾಗೆಯನ್ನು ಆವರಿಸಿದೆ. ಬಹುಶಃ ಮಠಕ್ಕೆ ಬ್ಯಾಂಕಿನಿಂದ ವಿಶೇಷ ಆರ್ಥಿಕ ನೆರವು ಆಗಿರಬೇಕು. ಇಂಥ ಲಾಭ ಪಡೆಯುವುದೂ ಕೆಲ ಸಂಸ್ಥೆಗಳ ರೂಢಿಯೂ ಅಹುದು. ಆದರೆ, ಶಂಕರಮಠ ಆ ಕಡೆ ಹೊರಳದೆ– ಈ ವಿಶಾಲವಾದ ಜಾಗೆಯನ್ನು ಮಠವು ಯೋಜಿಸಿಕೊಂಡ ಕಾರ್ಯಕ್ರಮಗಳಿಗೆ ಯೋಜಿಸಿಕೊಂಡಿದ್ದರೇ ಚೆನ್ನಾಗಿತ್ತು. ಇಲ್ಲವೇ ಈ ಭಾಗವನ್ನು 'ಕಲ್ಯಾಣ ಮಂಟಪ' ಎಂದು ಮಾಡಿದ್ದರೂ, ಅಲ್ಲಿ ಉತ್ಪನ್ನದ ಹಾದಿಯೂ ಆಗುತ್ತಿತ್ತು. ಸಮಾಜ ಕಾರ್ಯಕ್ಕೆ ಎಡೆಮಾಡಿದಂತೂ ಆಗುತ್ತಿತ್ತು. ಇದೊಂದು ಕೊರತೆಯೇ ಎನ್ನಬೇಕು. ●

[illegible]

ವೈಕಲ್ಯದಲ್ಲಿ ಚಿಗುರಿದ ಪ್ರತಿಭೆ - 5

[illegible]

ಚಿತ್ರ-ಲೇಖನ: ಎನ್. ಸಿ. ದೇಸಾಯಿ

'ಮನಸ್ಸಿದ್ದಲ್ಲಿ ಮಹಾದೇವ' ಎನ್ನುವ ಮಾತಿದೆ. ಕೆಲವರು ಅದನ್ನು ಪ್ರತ್ಯಕ್ಷ ನಡೆಸಿಯೂ ತೋರಿಸುತ್ತಾರೆ. ಏನೇ ತೊಂದರೆ ಇರಲಿ, ತೊಡಕುಗಳು ಬರಲಿ ಇಂಥದನ್ನು ಮಾಡಲೇಬೇಕೆಂದು ಅವರು ನಿರ್ಧರಿಸಿದರೆ ಅದನ್ನು ಮಾಡಿಯೇ ತೀರುತ್ತಾರೆ. ಆದರೆ ಅದು ಆತ್ಮನಿರ್ಧಾರವಾಗಿರಬೇಕು. ಅಂದರೇನೆ ಆ ಕಾರ್ಯ ಸಲೀಸಾಗಿ ನೆರವೇರುತ್ತದೆ!

ಜಯಂತಿಲಾಲ್ ಸಿರೋಯಾ ಇಂಥ ವರ್ಗಕ್ಕೆ ಸೇರಿದವರು. ಅವರು 13 ವರ್ಷದವರಿರುವಾಗ ದುರ್ದೈವ ಅವರ ಎರಡೂ ಕೈಗಳನ್ನು ಕಸಿದುಕೊಂಡು ಅವರನ್ನು ಅಂಗವಿಕಲರನ್ನಾಗಿ ಮಾಡಿತು. ಆಗ ದೀಪಾವಳಿಯ ಸಮಯ. ಮಕ್ಕಳೆಲ್ಲ ಪಟಾಕಿ ಮದ್ದು ಬಾಣಗಳನ್ನು ಹಾರಿಸಿ ನಲಿಯುತ್ತಿದ್ದಂತೆ ಬಾಲಕ ಜಯಂತಿಲಾಲನೂ ಆಡಿ ನಲಿದ. ಆದರೆ ಇವನಿಗೆ ಈ ದೀಪಾವಳಿ ಸಂತೋಷ ತರುವ ಹಬ್ಬವಾಗಲಿಲ್ಲ. ಮದ್ದು ತುಂಬಿದ ಒಂದು ತಗಡಿನ



ಲಂಬಾಣಿಗಳದೇ ಒಂದು ಜಾತ್ರೆ

ಅಲ್ಲಲ್ಲಿ ಜಾತ್ರೆಗಳು ಜರುಗುತ್ತವೆ. ಆದರೆ ಸಾಧಾರಣವಾಗಿ ಅಂಥ ಜಾತ್ರೆಗಳು ಇಂಥದೇ [illegible] ದೇವರದೋ, ದೇವದೇ ಇರುತ್ತದೆ. ಎಲ್ಲ ಜಾತಿಯವರೂ ಸೇರುತ್ತಾರೆ [illegible] ಇಲ್ಲಿ ವ್ಯಾ[illegible] ಜನಜಾತ್ರೆ ನಡೆಯುತ್ತದೆ.

ಹೆಚ್ಚಾಗಿ ಜಾತ್ರೆಗಳು ನಡೆಯುವುದು [illegible] ರೈತನಿಕ್ಕೆ [illegible] [illegible] ಎತ್ತಿನ ಗಾಡಿಯಲ್ಲಿ. ಮನೆ [illegible] ದೇವರದೋ, ದೇವದೇ [illegible] [illegible] ತರಿಸಲು! ಕೆಲ [illegible] ಕೆಲವು ಕೆಲ ವಿಷಯಗಳು ಇಷ್ಟು ಕೆಲವು ತಿಂಗಳುಗಟ್ಟಲೆ ನಡೆಯುತ್ತವೆ. ಇಂಥಲ್ಲಿ ಎತ್ತು - ದನಗಳ ವ್ಯಾಪಾರವೇ ಮುಖ್ಯವಾಗಿರುತ್ತದೆ. [illegible] ನಡೆಯುವುವು.

ಕೆಂಗೊಂಡ"ದಲ್ಲಿ ನಡೆಯುವ ದುರ್ಗಾದೇವಿಯ ಜಾತ್ರೆ ಇದಕ್ಕೆಲ್ಲ ಭಿನ್ನವಾಗಿದೆ. ಎಂದು ಹೇಳಬೇಕು. ಎರಡು ವರ್ಷಗಳ ಹಿಂದೆ [illegible] ಮುಂಬಿನ ದಿನವಿರಬೇಕು, ಎಂದಿನಂತೆ - ಬೆಳ[illegible] [illegible] ಚಕ್ಕಡಿಗಳು, ಎತ್ತುಗಳ ಕೋಡಿಗೆ ಬಣ್ಣ, [illegible] ಹೊಸ ಗುಡಾರಗಳ ಕೆಲ್ಲಾರಿ ಕಟ್ಟಿದ್ದಾರೆ. [illegible] ದನ್ನು ಕಂಡಾಗ ಇನ್ನಷ್ಟು ಆಶ್ಚರ್ಯ. ಎಲ್ಲರೂ ಲಂಬಾಣಿಗಳು, ಗಂಡಸರು, ಹೆಂಗಸರು, ಮಕ್ಕಳು, ಮುದುಕರು, ಎಲ್ಲರೂ ಅವರೇ. ಎಲ್ಲ ಚಕ್ಕಡಿಗಳಲ್ಲೂ ಅವರೇ.

ಮಹಿಳೆಯರೆಲ್ಲ ರಂಗುರಂಗಿನ ಲಂಬಾಣಿ ಉಡುಪಿನಲ್ಲಿ. ಹೆಚ್ಚಾಗಿ ಕೆಂಪು ಹಳದಿ ಬಣ್ಣ. ವಿವಿಧ ನಕ್ಷೆ ಅವಕ್ಕೆ ಗಾಜಿನ ಅಲಂಕಾರ, ಮಕ್ಕಳು ಈ ವೇಷದಲ್ಲಿ ಇನ್ನೂ ಅಂದವಾಗಿ ಕಾಣುತ್ತಾರೆ. ಇವರ ಅಂದಿನ ತಾತ್ಕಾಲಿಕ [illegible] ಬದಲಿಸಿದೆ. [illegible] ಇದರ ಇಲ್ಲಿ [illegible] ಅಲ್ಲಿ ಬಂದಿಳಿದಿದ್ದ ಕಾರಣವನ್ನು ಹುಡುಕಲು ಹೊರಟೆ.

[illegible] ಹೇಳಿದರು. ಅರೆ! ನಿಮಗೆ ಗೊತ್ತೇ ಇಲ್ಲವೇ? ಸಂಕ್ರಮಣದಂದು ಕೆಂಗೊಂಡದಲ್ಲಿ ದುರ್ಗಾದೇವಿಯ ಜಾತ್ರೆ. ಹೆಚ್ಚಾಗಿ ಆ ಜಾತ್ರೆ ಲಂಬಾಣಿಗಳದೇ ಎಂದು [illegible]..." ಎಂದರು ಆ ಹಿರಿಯ. ಅವರೆಲ್ಲ ಅಲ್ಲಿಗೇ ಹೊರಟಿದ್ದಾರೆ, ಪ್ರತಿ ವರ್ಷ ನಮ್ಮದಲ್ಲಿ ಒಂದು ರಾತ್ರಿಯ ಕ್ಯಾಂಪು ಅವರದು" ಎಂದೂ ಹೇಳಿದರು.

ನಾನು ಈ ಜಾತ್ರೆ ನೋಡಬೇಕು ಎಂದು ನಿಶ್ಚಯಿಸಿದೆ. ಕೆಂಗೊಂಡಹಳ್ಳಿ, [illegible] ಮೂರೇ ಮೈಲಿ. ಮರು ದಿನ ಹೊರಟೆ. ಆದರೆ ಜನ ಎಚ್ಚರಿಸಿದರು– ಆ ಜಾತ್ರೆ ನಡೆಯುವುದು ರಾತ್ರಿಯಲ್ಲಿ ದಾತ್ರ" ಎಂದು ತಾನು ಹೊರಡುವ ವೇಳೆಯನ್ನು ಬದಲಿಸಿದೆ. [illegible] ರಾತ್ರಿ [illegible] ತಲುಪಿದಾಗ ಎಂಟೂವರೆಯಾಗಿರಬೇಕು. ನನ್ನ ಆಶ್ಚರ್ಯಕ್ಕೆ ಸೆಲಿಯೇ ಇಲ್ಲವಾಯಿತು. [illegible] ಅಲ್ಲವೇ, ಅವರ ಸಂಖ್ಯೆ ಕಡಿಮೆ..

[illegible] ಛಾಯಾಚಿತ್ರಗಳನ್ನೂ [illegible]. [illegible] ನಾನೊಬ್ಬನೇ ಆ ಗುಂಪಿನಲ್ಲಿ ಹೋಗಲು ಭಯವಾಯಿತು. ಅಲ್ಲಿ ಜಾತ್ರೆಯ ಬಂದೋಬಸ್ತಿಗೆ ಬಂದಿದ್ದ ತಾತ್ಕಾಲಿಕ ಪೊಲೀಸು ಠಾಣೆಯ ಹತ್ತಿರ ಹೋಗಿ [illegible] ಕಂಡೆ, [illegible] ಪೊಲೀಸು [illegible] ಅಧಿಕಾರಿ ನನ್ನ ಕೇಳಿಕೆಯನ್ನು ಮನ್ನಿಸಿದರು, ನನ್ನ ಕೆಲಸ ಹಗುರವಾಯಿತು ಎನ್ನಬೇಕು.

[illegible] ಸುತ್ತಲಿನ ಹೊಲಗಳಲ್ಲೆಲ್ಲ ಬಿಡಾರ ಬಿಟ್ಟಿದ್ದರೆ ಈ ಯಾತ್ರಿಕರು. ಕೆಲವರು [illegible] ಕೆಲವರು [illegible] ದ್ದಾರೆ ಕುರಿ - ಕೋಳಿಗಳ ಬಲಿ" ಧಾರಾಳ [illegible] ಕಡೇ ಇಲ್ಲ. ಇಲ್ಲಿ ಈ ಜಾತ್ರೆಯಲ್ಲಿ ದೊಡ್ಡ ದನಾರುವ ವಿಧಾನವೇ ಬೇರೆ. ಅದೊಂದು ವಿಚಿತ್ರವೂ ಅಹುದು. ಆರು - ಏಳು ಅಡಿ ಎತ್ತರದ, ನಾಲ್ಕಡಿ ಅಗಲದ, ಎಂಟಡಿ ಉದ್ದದ ಅಟ್ಟ"– ಬೇಕಾದರೆ ಇದಕ್ಕೆ ಸ್ಟ್ಯಾಂಡ್ ಅನ್ನೋಣ. ಈ ಅಟ್ಟದ ಮೇಲೆ ಬಿಳಿ ಪ್ಲಾಸ್ಟಿಕಿನ ಡ್ರಮ್ಮು - ದೊಡ್ಡ ಕ್ಯಾನುಗಳು. ಇಬ್ಬದಿಯಲ್ಲಿ ಮಾರುವವರು. ಖರೀದಿಸುವವರು ತಮ್ಮದೆ ಜಾತ್ರೆಯಲ್ಲಿ ಕೆಳಗೆ ನಿಂತ ಜಾತ್ರೆ ದಢವೆ ಕು. ಹಣ ತೆತ್ತು ಪಡೆಯಬೇಕು. ಈ ಕುಡಿತಕ್ಕೆ ಮಿತಿಯೂ ಇಲ್ಲ; [illegible] ಇಲ್ಲ. ಈ ವ್ಯಾಪಾರ ರಾತ್ರಿಯಲ್ಲಿಯೂ ನಡೆಯುವದೇ!

ಲಂಬಾಣಿಗರ ಈ ಜಾತ್ರೆಯಲ್ಲಿ ಉಳಿದ ಜಾತ್ರೆಗಳಲ್ಲಿರುವ ಬೆಂಡು ಬತ್ತಾಸು [illegible] ಇದ್ದವು. ಪ್ರಮಾಣ ಕಡಿಮೆ. ಆದರೆ ಲಂಬಾ[illegible] ಬೇಕಾಗುವ ವಸ್ತುಗಳ ಅಂಗಡಿಗಳು ಧಾರಾಳವಾಗಿದ್ದವು. ಅವರಿಗೆ [illegible] ಬೇಕಾಗುವ [illegible] [illegible] ಗಾಜಿನ [illegible] ಅಂಚಿಗೆ ಅಂಟುವ ಗೆಜೆ– ಹಾಗೆ ಒಂದು ರೀತಿಯ ವಸ್ತ್ರಾಲಂಕಾರದ ಅಂಗಡಿಗಳಾದರೆ ಅವರಿಗೆ ಬೇಕಾಗುವ ದಂತದ ಬಳೆ ಕಿವಿಗೆ ಹರಳಿಗೆ ಜೋಲು ಬೀಳುವ ದಸ್ತು ಒಡವೆಗಳ ಅಂಗಡಿಗಳೂ ಬೇರೆ. ಬಹುಶಃ ಅವರಿಗೇ ಬೇಕಾಗುವ ದಸ್ತು ಒಡವೆಗಳನ್ನು ಈ ಜಾತ್ರೆಯಲ್ಲಿ ಖರೀದಿಸುತ್ತಾರೋ ಏನೋ. ಅಷ್ಟು ಗದ್ದಲ ಬಿಟ್ಟು ಆತುರತೆಯಿತ್ತು ಅದರಿಗೆ. ಬೇರೆ ಅಂಗಡಿಗಳು ಹೋ[illegible] ಇವರೇ. [illegible] ದ್ದೇನೋ ಎಂದು ಭಾಸವಾಗುತ್ತಿತ್ತು ನನ್ನಲ್ಲಿ.

ದೇವಿಯ ಜಾತ್ರೆ ಬಂದಿದ್ದೇವೆ; ದರ್ಶನ [illegible]

ಸಚಿತ್ರ ಲೇಖನ:

ಎನ್. ಸಿ. ದೇಸಾಯಿ

[illegible] ... ಅದೆಂಥಹ ಗದ್ದಲ ಎಲ್ಲರೂ ಲಂಬಾಣಿಗಳು. ಭಕ್ತಿಪರ ಆವಾರಾಗಿದ್ದಾರೆ. ದೇವಿಯ ಹಾಡು ಹೇಳುತ್ತ ಹೊಗಳುತ್ತಾ ಉಘೆ ಉಘೇ ದುರ್ಗವ್ವಾ" ಎನ್ನುತ್ತಿದ್ದಾರೆ. ಸರ್ಕಾರಿ [illegible] ದೈಹಿಕವಾಗಿ ಭಕ್ತಿಪರವಶರಾದವರು ಇವರು. ದುಷ್ಟ ಇವರನ್ನು ದೇವಿಯ ತೀರ ಹತ್ತಿರಕ್ಕೆ" ಬಿಡುವುದು ಬೇಡ ಎಂದುಕೊಂಡೆ. ಇವರು ನಿರ್ಗಮಿಸುತ್ತಿರುವ ಚಿತ್ರವನ್ನು ನಾನು ಹಿಡಿಯ[illegible] ರಾದವರಾದ. ಈ ಸಮುದಾಯಗಳೇ [illegible] (ಕ್ಯಾಮರಾದ ಹೊಳಪಿನ ದೀಪ) ಪಾಳಾಗಿ ಹೋಗಿತ್ತು. ಅದರಿಂದಾಗಿ ಇನ್ನೂ ಎರಡು ಚಿತ್ರಗಳನ್ನು ತೆಗೆಯಲಾಗಲಿಲ್ಲ.

ಸಾಧಾರಣ ಇವರ ಹರಕೆ" ಎಷ್ಟರ [illegible] ಶಕ್ಯಸಾಧ್ಯವೆಂದೆನಿಸಿತು. [illegible] ಜನ ಹೇಳಿದರು ಬಹಳ ದೂರದಿಂದಲೂ ಈ ಜಾತ್ರೆಗೆ ಬರುತ್ತಾರಂತೆ" [illegible] ಬರುತ್ತಾರೆ ಆದರೆ [illegible]

[illegible]

[illegible]

ಜಾತ್ರೆಗೆ ಬಂದ ಲಂಬಾಣಿಗರ ಬಿಡಾರ

ಕಿವಿಗೆ ಅರಿಸಿದ ಆಭರಣದ ಜೋಡಣೆ

ಲಂಬಾಣಿ ಹೆಂಗಸರಿಂದ ವ್ಯಾಪಾರ

ಜೀವ ಹಿಂಡಿ ಬಲು ರುಚಿ!

[illegible]

ಉದಯವಾಣಿ

ದೀಪಾವಳಿ ವಿಶೇಷಾಂಕ

ರೂ.8/-

ಗುಲಾಬಿನಗರ ಜಯಪುರ

ಸರೋವರಗಳ ನಗರ — ಉದಯಪುರ

ಚಿತ್ರಲೇಖನ: ನಾ. ದೇಸಾಯಿ.

ಉದಯವಾಣಿ 12-7-1984

'ಆನಂದವನ' ಗ್ರಾಮೀಣ ಭಾಗದಲ್ಲಿ ಅರಳಿದ 'ಮಹಾಗ್ರಂಥ'

ಧಾರವಾಡ ಜಿಲ್ಲೆಯ ಹಾವೇರಿ ತಾಲೂಕಿನ ಒಂದು ಹಳ್ಳಿ ಅಗಡಿ. ಈ ಗ್ರಾಮದ ಪೂರ್ವಕ್ಕೆ ಒಂದುವರೆ ಕಿಲೋಮೀಟರು ಹೋದರೆ ಒಂದು ಮಹಾದ್ವಾರ. ಹಾದಿಯ ಕಲ್ಪಿಸಿದ ಸಮೀಪಿಸಿದ್ದು ಕಾಣುತ್ತದೆ. ಅಚ್ಚುಕಟ್ಟಾದ ನಕ್ಷೆ. ಈ ಪರಿಸರದಲ್ಲಿ ಇದೊಂದು ಭವ್ಯ ಕಟ್ಟಡವೇ ಸರಿ. ಮಾರ್ಗದ ಬಲಗಡೆಯಲ್ಲಿದೆ. ಇದೇ ಜುಲೈ 4ನೇ ದಿನಾಂಕ (1984) ಮಧ್ಯಾಹ್ನದ ಮೂರು ಘಂಟೆಯ ಸಮಯವಾಗಿದೆ. ವೇದಘೋಷ ಪೂರ್ಣಕುಂಭದೊಂದಿಗೆ ಕೆಲ ಸತ್ಪುರುಷರ ಸ್ವಾಗತ ನಡೆಯುತ್ತಿದೆ. ಅವರು ಈ ಮಹಾದ್ವಾರದ ಒಳಗೆ ಬರುತ್ತಿದ್ದಾರೆ. ವೇದಘೋಷದೊಂದಿಗೆ ಊರಜನ, ಮುತ್ತೈದೆಯರು ಕುಮಾರಿಯರು ಬಾಲಬಾಲಕಿಯರೂ ವೃದ್ಧರೂ ಈ ಸಮಾರಂಭದಲ್ಲಿ ಪಾಲ್ಗೊಂಡಿದ್ದಾರೆ. ವೇದಘೋಷ ಗಗನವನ್ನು ತುಂಬಿದರೆ, ಇನ್ನಷ್ಟು ಮುಂದಿದ್ದ ಓಲಗ ಮಂಗಲವಾದ್ಯ ನುಡಿಸುತ್ತಲಿದೆ. ಒಟ್ಟಾರೆ ದೃಶ್ಯ—ಇದು ಪೌರಾಣಿಕ ಕಾಲದಲ್ಲಿ ನಡೆಯುತ್ತಿದೆಯೋ ಎಂದೆನಿಸುತ್ತಿದೆ!

ಈ ಸ್ಥಾನ ಮತ್ತಾವುದೂ ಅಲ್ಲ. ಅಗಡಿಯ ಸಾಧುಗಳೆಂದು ಪ್ರಸಿದ್ಧರಾಗಿದ್ದ ಶ್ರೀ ಶೇಷಾಚಲ ಸದ್ಗುರು ಮಹಾರಾಜರ 'ಆನಂದವನ' ಅಗಡಿ. ಸಂದರ್ಭ ಈ ಸಾಧುಗಳ ಆಶ್ರಮದಲ್ಲಿ ಪ್ರಕಟವಾಗಿದ್ದ ಮಹಾಗ್ರಂಥ 'ಆನಂದವನ'ದ ಬಿಡುಗಡೆ.

ವಿದ್ವ ಮಹಾನುಭಾವರು, ಮೈಸೂರು ರಾಮಕೃಷ್ಣಾಶ್ರಮದ ಶ್ರೀ ಸೋಮನಾಥಾನಂದಜೀಯವರು, ಮಲ್ಲಾಡಿಹಳ್ಳಿಯ ರಾಘವೇಂದ್ರ ಗುರೂಜಿಯವರು, ಚಿದಂಬರ ನಗರದ ಶ್ರೀ ಸುಂದರೇಶ ದೀಕ್ಷಿತರು ಹಾಗೂ ಪೂಜ್ಯ ಅರವಿಂದಪ್ಪನವರು.

ಈ ಗ್ರಂಥದ ಪ್ರಧಾನ ಸಂಪಾದಕರು ಆನಂದವನದ ಇಂದಿನ ಗುರುಗಳಾಗಿರುವ ಶ್ರೀ ಚಿದಂಬರಮೂರ್ತಿಜೀ ಸ್ವಾಮಿಯವರು. ಈ ಸಂದರ್ಭದಲ್ಲಿ ಸಹಾಯ ಸಲ್ಲಿಸಿದವರು ಮೈಸೂರಿನ ಶ್ರೀ ತ. ಸು. ಶಾಮರಾಯರು ಹಾಗೂ ಧಾರವಾಡದ, ಚಿದಂಬರಾನಂದರೆಂದು ಪರಿಚಿತರಾದ ಶ್ರೀ ಸಿ. ಎಸ್. ಕುಲಕರ್ಣಿಯವರು.

1000 ಪುಟಗಳಿಗೂ ಹೆಚ್ಚಾಗಿರುವ ಡೆಮಿ 1/4 ಆಕಾರದ ಈ ಮಹಾ ಗ್ರಂಥದ ಪರಿಚಯವನ್ನು ಶ್ರೀ ಚಿದಂಬರಾನಂದರು ಮಾಡುತ್ತ "ಇದರಲ್ಲಿ ಮೂರು ಭಾಗಗಳಿದ್ದು ಪ್ರಥಮ ಭಾಗವಾದ – "ಸ್ವಾತ್ಮ ದರ್ಶನದಲ್ಲಿ" ಆನಂದವನ ಕ್ಷೇತ್ರ ಚಿದಂಬರ ಮಹಾಸ್ವಾಮಿ. ಅವರ ಲೀಲೆಗಳ ವೈಶಿಷ್ಟ್ಯ, ಸಾಧುಗಳ ದರ್ಶನ ಗಳಲ್ಲಿದೇ ಶೇಷಾಚಲ ಸಾಧುಗಳು – ಅವರ ಕಾರ್ಯ, ಆನಂದವನದಲ್ಲಿ ಸಾಹಿತ್ಯ ಸೇವೆ ಮುಂತಾದವುಗಳ ವಿವರವಿದೆ. ಈ ಭಾಗದಲ್ಲಿ ಯೇ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಬರೆದಿರುವ ಸ್ವಾಮಿಗಳ ವಿಷಯವಾದ ಸರಳ ರಗಳೆ ಇದೆ. ಗಳಗನಾಥರಿಂದ ಹೇಗೆ ಪ್ರಭಾವಿತರಾದೆಂದು, ಶ್ರೀರಂಗ, ಕೃಷ್ಣಮೂರ್ತಿ ಪುರಾಣಿಕ, ತ. ರಾ. ಸು. ಮುಂತಾದವರು ಹೇಳಿದ್ದಾರೆ. ಶೇಷಾಚಲ ಗ್ರಂಥಮಾಲೆಯ ವಿಷಯವಾಗಿ, ಶ್ರೀ ಶಂಕರ ಪಾಟೀಲರ ವಿವರಣೆಯಿದೆ. ಕೃಷ್ಣಮೂರ್ತಿ ಕಿತ್ತೂರರು ಗಳಗನಾಥರ ಬಗ್ಗೆ ಬರೆದಿದ್ದಾರೆ.

ಎರಡನೆಯ ಭಾಗ 'ಸದ್ದರ್ಶನ'ದಲ್ಲಿ ವೇದ, ಉಪನಿಷತ್, ಭಗವದ್ಗೀತಾ, ಯೋಗ, ಸಾಂಖ್ಯ, ಮೀಮಾಂಸ ಮುಂತಾದವುಗಳ

ಕಾದಂಬರಿಗಳ ಪಿತಾಮಹ "ಗಳಗನಾಥರು"

ಅಲ್ಲದೆ ವಿವಿಧ ಧರ್ಮಗಳ ವಿಷಯವಾದ ತಜ್ಞರ ಬರಹಗಳಿವೆ. ಜ್ಯೋತಿಷಶಾಸ್ತ್ರದ ಲೇಖನವನ್ನು ಶ್ರೀ ಬಿ. ವಿ. ರಾಮನ್ನರು ಬರೆದಿದ್ದಾರೆ. ಪುರಾಣ, ರಾಮಾಯಣ, ಭಾಗವತಗಳ ವಿಷಯವಾದ ಲೇಖನಗಳಿವೆ ಹಾಗೂ ಇವುಗಳು ಕನ್ನಡದಲ್ಲಿ ಎಂತು ಎಂಬ ಬರೆಹಗಳೂ ಉಂಟು. "ಕನ್ನಡದಲ್ಲಿ ರಾಮಾಯಣ" ಎಂಬುದು ಪಾ. ಮೂ. ನಾಯಕರ ಬರೆಹ, ಕನ್ನಡದಲ್ಲಿ 'ಮಹಾಭಾರತ' ಎಂಬ ವಿಷಯವಾಗಿ ಬರೆದವರು, ಎನ್ಕೆ ಅವರು. 'ಭಾರತ ದರ್ಶನ' ರಚಿತವಾದುದು ಎ. ವಿ. ಸೀತಾರಾಮಯ್ಯನವರಿಂದ. 'ದ್ವೈತದರ್ಶನದ ಬಗ್ಗೆ ಬರೆದವರು ಶ್ರೀ ಕೆ.ಟಿ. ಪಾಂಡುರಂಗಿಯವರು. ರಂ. ಶ್ರೀ ಮುಗಳಿಯವರು 'ಅರವಿಂದ ದರ್ಶನ' ಮಾಡಿಸಿದ್ದಾರೆ. ಪ್ರೊ. ಸಿ. ಎ. ಶರಿಮಸಿಯವರು 'ವೀರಶೈವ ದರ್ಶನ'ದ ವಿಷಯವಾಗಿ ಚರ್ಚಿಸಿದ್ದಾರೆ. ಯೋಗ ದರ್ಶನದ ಬಗ್ಗೆ ಬರೆದವರು – ಮಲ್ಲಾಡಿ ಹಳ್ಳಿಯ ರಾಘವೇಂದ್ರ ಗುರೂಜಿಯವರು (ತಿರುಕ).

ಮೂರನೆಯ ಭಾಗ 'ದಿಗ್ದರ್ಶನ'ದಲ್ಲಿ ಕರ್ನಾಟಕದ 19 ಜಿಲ್ಲೆಗಳಲ್ಲಿಯ ಆಗಿಹೋದ, ಇರುವ ಸಂತಸತ್ಪುರುಷರ ವಿಷಯವಾದ ಲೇಖನಗಳು ಇವೆ. ಪ್ರತಿ ಜಿಲ್ಲೆಗಳಲ್ಲಿರುವ ಕ್ಷೇತ್ರಗಳ ವಿವರಣೆ ಅವುಗಳ ಮಹತ್ವದ ಬಗ್ಗೆ ಬೇರೆಬೇರೆ ಲೇಖಕರು ತುಂಬಾ ಆಸ್ಥೆಯಿಂದ ಬರೆದಿದ್ದಾರೆ. ಈ ವಿಷಯವಾಗಿರುವ ಇದೊಂದು ಡಿರೆಕ್ಟರಿಯೆಂದೇ ಹೇಳಬೇಕು. ಶ್ರೀ ಚಿದಂಬರಾನಂದರು ಗ್ರಂಥ ಪರಿಚಯ ಮಾಡುತ್ತ ಇದೊಂದು ಮಹಾ ಗ್ರಂಥವೆಂದು ಹೇಳಿದ್ದು ಅಕ್ಷರಶಃ ನಿಜವಾದ ಮಾತು.

ಈ ಗ್ರಂಥ ಬಿಡುಗಡೆಯನ್ನು ಮಲ್ಲಾಡಿ ಹಳ್ಳಿಯ ಶ್ರೀ ರಾಘವೇಂದ್ರ ಸ್ವಾಮಿಗಳು ನೆರವೇರಿಸುತ್ತಾ, ಇಂಥ ಒಂದು ಮಹತ್ಕಾರ್ಯ ಆನಂದವನದಲ್ಲಿ ನೆರವೇರಿದ್ದು ಶ್ಲಾಘನೀಯ ಎಂದರು. ಇದೇ ಸಂದರ್ಭದಲ್ಲಿ ಈ ಸಮಾರಂಭದ ನಿಮಿತ್ತ ಹೊರಡಿಸಿದ ಸ್ಮರಣ ಸಂಚಿಕೆ 'ಅಮೃತ'ದ ಬಿಡುಗಡೆಯನ್ನು ಪೂಜ್ಯ ಶ್ರೀ ಸುಂದರೇಶ ದೀಕ್ಷಿತರು-ಚಿದಂಬರನಗರ, ಸೌದತ್ತಿ ಇವರು ನೆರವೇರಿಸಿದರು. ಮೈಸೂರು ಶ್ರೀರಾಮಕೃಷ್ಣಾಶ್ರಮದ – ಸೋಮನಾಥಾನಂದಜಿ ಅವರು ಮಾತನಾಡಿ ಹರಸಿದರು.

ಜುಲೈ ನಾಲ್ಕನೆಯ ದಿನಾಂಕ ಆನಂದವನದಲ್ಲಿ ಸಂಭ್ರಮದ ದಿನ.

ಆನಂದವನ ಅಸ್ತಿತ್ವಕ್ಕೆ ಬಂದುದು ಹೋದ ಶತಮಾನದ ಕೊನೆಯಲ್ಲಿ ಅಗಡಿಯಲ್ಲಿ ಶ್ರೀ ಶೇಷಾಚಲಸಾಧುಗಳ ಅವತಾರವಾದಾಗ. ಧಾರ್ಮಿಕ, ಸಾಮಾಜಿಕ ಕಾರ್ಯಗಳೊಂದಿಗೆ ಸಂಸ್ಕೃತ–ವೇದ ಪಾಠಶಾಲೆ ಪ್ರಾರಂಭವಾಯಿತು. ಅನ್ನದಾನ, ಅತಿಥಿ ಸತ್ಕಾರ ನಡೆಯಿತು. ಸಾಹಿತ್ಯ ಸೇವೆಯೂ ಈ ಪುಣ್ಯ ಭೂಮಿಯಿಂದ ನಡೆಯಲಿ ಎಂದು ಗಳಗನಾಥರು, ಯಲ್ಲೋ ಗುಡ್ಡೋ ಕುಲಕರ್ಣಿಯವರು ತಮ್ಮ ಊರಿನ ಸ್ನೇಹಿತರೊಂದಿಗೆ ಸಾಧುಗಳ ಅಪ್ಪಣೆ ಪಡೆದು "ಸದ್ಬೋಧ ಚಂದ್ರಿಕೆ" ಎಂಬ ಮಾಸಪತ್ರಿಕೆಯನ್ನು ಪ್ರಾರಂಭಿಸಿದರು. ಅದರ ಪ್ರಥಮ ಸಂಚಿಕೆ ಪ್ರಕಟವಾದುದು 1908ನೇ ಇಸ್ವಿಯ ಜುಲೈ ತಿಂಗಳು.

ಆ ಕಾಲವೆಂದರೆ, ಬ್ರಿಟಿಷರ ಆಳ್ವಿಕೆಯ ಕನ್ನಡ ತನವಿಲ್ಲದ ಕಾಲ. ಉತ್ತರ ಕರ್ನಾಟಕದ ಜನರಲ್ಲಿ ಮರಾಠಿ ಪ್ರಭಾವ. ಸಾಲದ್ದಕ್ಕೆ ವಿವಿಧ ರಾಜ್ಯಗಳಲ್ಲಿ ಸಂಸ್ಥಾನಗಳಲ್ಲಿ ಹಂಚಿ ಹೋಗಿದೆ. ಜನತೆಯಲ್ಲಿ ಸ್ವಾಭಿಮಾನವೇ ಶೂನ್ಯವಾಗಿದ್ದ ಸಮಯ – ಇಂತಹ ವಾತಾವರಣದಲ್ಲಿ ಕನ್ನಡದ, ಕನ್ನಡ ಸಾಹಿತ್ಯದ, ದೇಶದ ಸೇವೆ ಮಾಡಲು ಒಂದು ಪತ್ರಿಕೆಯನ್ನು ಹೊರಡಿಸುವುದು ಸಾಹಸದ ಕಾರ್ಯವೇ ಆಗಿತ್ತು. ಆ ಸಾಹಸವನ್ನು ಈ ಸ್ನೇಹಿತರು ಮಾಡಿದರು.

ಆಗ ಚಂದ್ರಿಕೆ ಆನಂದವನದಲ್ಲಿ ಅರಳಿ

ಆನಂದವನದ ಸಾಮಾನ್ಯ ನೋಟ

ಎನ್. ಸಿ. ದೇಸಾಯಿ

ಚಿತ್ರ : ಈಶ್ವರ ಎನ್. ಜೋಶಿ

ದಿದ್ದರೆ ಇಂದಿನ ನಾಡಿನ ಪರಿಸ್ಥಿತಿ ಯಾವ ರೀತಿಯದಾಗಿರುತ್ತಿತ್ತೋ ಎಂದು ಹೇಳುವುದು ಕಷ್ಟ.

ಚಂದ್ರಿಕೆ – ಪ್ರಕಟವಾಗಿ, ಪ್ರಥಮದಲ್ಲಿ ಮರಾಠಿ ಪತ್ರಿಕೆಗಳ ರೂಪಾಂತರವಾಗಿ ನಂತರ ಗಳಗನಾಥರ ಸ್ವಂತ ಕಾದಂಬರಿಗಳನ್ನು ಧಾರಾವಾಹಿಯಾಗಿ ಪ್ರಕಟಿಸಿದಾಗ ಚಂದ್ರಿಕೆ ಅಸಂಖ್ಯಾತ ಲೇಖಕರನ್ನು ಆಕರ್ಷಿಸಿದೆ. ಸಾಕಷ್ಟು ವಿದ್ಯಾರ್ಥಿಗಳಲ್ಲಿ ಸಾಹಿತ್ಯಾಭಿರುಚಿಯನ್ನು ಬೆಳೆಸಿ, ಎಷ್ಟೋ ಲೇಖಕ ಲೇಖಕಿಯರನ್ನು ಕನ್ನಡ ಸಾಹಿತ್ಯಕ್ಕೆ ನೀಡಿದ ಕೀರ್ತಿ ಚಂದ್ರಿಕೆಯದು. ವರ್ಗಣಿದಾರರು ಹೆಚ್ಚಿದಂತೆ ಸಂಪಾದಕರುಗಳಿಗೆ ಬೇಕಾದಷ್ಟು ಪ್ರತಿಗಳನ್ನೇ ಪೂರೈಸಲಾಗಿಲ್ಲ. ಅಗಡಿಯ ದಕ್ಕೆ ಆನಂದವನದಲ್ಲಿಯೇ ಸ್ವಂತ ಮುದ್ರಣಾಲಯವಿದ್ದುದನ್ನು ವಿಸ್ತರಿಸಿದರು. ಆ ಬಿಡುಗಡೆ ಅವರಿಗೆ ತಪ್ಪಿಲ್ಲ. ಆಗ ಸಂಪಾದಕರು – "ಇಷ್ಟು ಜನ ಚಂದಾದಾರರಾದರೂ ಏಕೆ ಕೂಡಿದ್ದಾರು?" ಎಂದು ಗೋಳಿಟ್ಟುಕೊಂಡಿದ್ದಾರೆ.

ಆ ಸಮಯಕ್ಕೆ ... ...



ಯಲ್ಲೋ ಗುಡ್ಡೋ ಕುಲಕರ್ಣಿಯವರು – ಸದ್ಬೋಧಚಂದ್ರಿಕೆಯ ಪ್ರಥಮ ಸಂಪಾದಕರು

ಆದರೆ ಚಂದ್ರಿಕೆಯನ್ನು ಚಿರಸ್ಥಾಯಿಯಾದುದು ಇರಲಿಲ್ಲವೆನ್ನಬೇಕು. ಹಾಗು ಇನ್ನೊಂದು ಅಭಿಮಾನದ ವಿಷಯವೆಂದರೆ ಆಗ ಜನಿಸಿದ ಪತ್ರಿಕೆಗಳಲ್ಲಿ ಇಷ್ಟು ಕಾಲ ಬಾಳಿದ ಶ್ರೇಯಸ್ಸು ಚಂದ್ರಿಕೆಗೆ ಮಾತ್ರ. ಎಪ್ಪತ್ತೈದು ವರ್ಷ ಬಾಳಿ ಕನ್ನಡನಾಡಿನ ಅವಿರತ ಸೇವೆಯನ್ನು ಗೈದವಳು ಚಂದ್ರಿಕೆ ಮಾತ್ರ ಎಂದು ಹೇಳಬೇಕು.

ಈ ದೀರ್ಘಕಾಲದ ಸೇವೆಯ ಕುರುಹಾಗಿ ಇಂದಿನ ಸಂಪಾದಕರಾದ ಹಾಗು ಆನಂದವನದ ಗುರುಗಳಾದ ಶ್ರೀ ಚಿದಂಬರಮೂರ್ತಿ ಚಕ್ರವರ್ತಿಗಳು ಈ "ಆನಂದವನ" ಗ್ರಂಥವನ್ನು ಸಂಪಾದಿಸಿ ಪ್ರಕಟಿಸಿದ್ದಾರೆ.

ಗಾತ್ರದಲ್ಲಿ ಎಷ್ಟು ದೊಡ್ಡದೋ ಮೌಲಿಕವಾಗಿಯೂ ಅಷ್ಟೇ ಹಿರಿದು ಈ ಗ್ರಂಥ. ಇನ್ನು ಅಚ್ಚಿನ ಸೌಂದರ್ಯದ ವಿಷಯವಾಗಿ ಹೇಳುವದಾದರೆ ಈ ಗ್ರಂಥ ಗ್ರಾಮೀಣ ಭಾಗವಾದ ಅಗಡಿಯಲ್ಲಿ ಅಚ್ಚಾಗಿದೆಯೆಂದು ಹೇಳಿದರೆ ಯಾರೂ ನಂಬಲಾರರು. ಉಪಯೋಗಿಸಿದ ಕಾಗದ, ಚಿತ್ರಗಳ ಸೌಂದರ್ಯ, ಮುದ್ರಣದ ಕುಶಲತೆ ಒಂದೊಂದೂ ವರ್ಣಿಸುವಂತಹದು. ಇನ್ನು ಈ ಕಾರ್ಯಕ್ಕೆ ತಗಲಿದ ಹಣದ ಗಾತ್ರವೂ ಚಿಕ್ಕದಲ್ಲ! ಹಾಗೆಂದು ಆನಂದವನದಲ್ಲಿ – ಸ್ವಾಮಿಗಳಲ್ಲಿ ಅಪಾರ ಹಣವಿದೆಯೆಂದು ತಿಳಿದರೆ ತಪ್ಪಾದೀತು. ಯಾವ ಕಾರ್ಯಕ್ಕೂ ಭಕ್ತರ ದೇಣಿಗೆಯೇ ಇವರಿಗೆ ಆಧಾರ. ಈಗಲೂ ಅದೇ ಪ್ರಕಟಣೆಯ ಪೂರ್ವದ ಹಣವೆಂದು ಭಕ್ತರನ್ನು ಕೇಳಿದರು. ಸಾವಿರಾರು ಭಕ್ತರು ಮುಂದೆ ಬಂದರು. ಕಾರ್ಯ ಪ್ರಾರಂಭವಾಯಿತು ಆದರೆ ಮೊದಲು ಯೋಜಿಸಿದ್ದಕ್ಕಿಂತಲೂ ಕೊನೆಯಲ್ಲಿ ಈ ಗ್ರಂಥದ ವೆಚ್ಚ ಹೆಚ್ಚಾಗಿದೆ.

ಇಂದು ಇದೊಂದು ಮಹಾಗ್ರಂಥವಾಗಿದೆ. ಹಿಂದೆ ಮುಕ್ಕಾಲು ಶತಮಾನದ ಹಿಂದೆ – ಸದ್ಬೋಧ ಚಂದ್ರಿಕೆ ಜನ್ಮತಾಳಿ ಕನ್ನಡದ ಜಾಗೃತಿ ಮಾಡಿದ್ದರೆ ಇಂದು 'ಆನಂದವನ' ಗ್ರಂಥ ಇಂದಿನ ಪೀಳಿಗೆಯ ಕೊಡುಗೆಯಾಗಿದೆ.

ಸದ್ಬೋಧಚಂದ್ರಿಕೆಯ ಅಮೃತಮಹೋತ್ಸವದ ಸಂದರ್ಭದಲ್ಲಿ ತೆಗೆದ ಚಿತ್ರ. ಎಡದಿಂದ ಚಿದಂಬರಾನಂದ, ತ. ಸು. ಶಾಮರಾವ್, ಸೋಮನಾಥಾನಂದಜಿ, ರಾಘವೇಂದ್ರ ಸ್ವಾಮಿಜಿ, ಸುಂದರೇಶ ದೀಕ್ಷಿತ, ಅರವಿಂದ ದೀಕ್ಷಿತ, ಚಿದಂಬರ ಮೂರ್ತಿ ಸ್ವಾಮಿಜಿ ಹಾಗೂ ಎನ್. ಸಿ. ದೇಸಾಯಿ.

The pioneer of Kannada novels

By N.C.Desai

North Karnataka, which is still referred to as Bombay-Karnataka, was so much influenced by Marathi language and culture that at the beginning of this century there were no Kannada newspapers in this area. People used to sign in Modi-Marathi, the newspaper read was *Kesari* (Marathi) of Lokamanya Tilak, published from Pune. The food habits, wearing of sari, nose-ring were all of Maharashtrian style. The railways through this area was named the Madras and Southern Maharashtra Railway (MSM).

Though there were no Kannada newspapers, there were Kannada schools at least. Therefore Kannada text books were being published. Other publications were mythological in nature. No novels and short story collections came up while there were ample in Marathi language which circulated in this area of Karnataka. This may have been because of the Peshwa rule prior to the entry of Britishers.

One will be surprised to know that the Kannada movement and popularising of modern Kannada literature commenced from a remote village Agadi in Haveri taluk of Dharwad district. A saint Sheshachala Sadguru was born in this village. Once during an attack of plague on the village the devotees built a fairly big hut to accommodate devotees and visitors near a pond and a mango grove. By the time the disease subsided the Swamiji's hut was looking like an ashrama and some of the devotees were reluctant to leave. The Swami told them said that if the owner of the land permits they could stay on. Ramachandragouda Bahadur Desai, the owner of the land, happily donated the entire land occupied by the huts. Thus *Anandvana* was born.

Narayana Bhagwan, Shankar Bhagwan, Lingo Bhagwan, V.T.Kulkarni, and Y.G.Kulkarni were the important followers of Swamiji in the early days of V.T.Kulkarni and Y.G.Kulkarni started to think of starting a monthly magazine from this place. The intention was to popularise Kannada language and direct the profit, if any, for the maintenance of the pathashala. Y.G.Kulkarni became the first editor of *Sabodha Chandrike* which was born with the blessings of Swamiji as a result of their request.

Galagnath

V T Kulkarni was well known as a good teacher, good administrator, also a social worker and was selected as an assistant to a member of the Text Book and went to Pune. Harinarayan Apte was a very popular Marathi novelist of that time. Kulkarni read all his novels including *Gad Ala Pan Sinha Gela* (We captured the fort, but lost the lion). After reading the novel he went to *Simha Gad*, the scene of the novel. He then re-cast the novel in Kannada. Besides contributing on different subjects he started serialising novels in *Sadbodha Chandrike*. The ending of every episode was left at a point which aroused curiosity amongst readers and they eagerly awaited the next issue. The circulation of *Sadbodh Chandrike* increased and it was rather difficult now to print the issue elsewhere. *Anandvan* acquired a full fledged, fairly big printing press. The magazine was not only served for entertainment but also helped bring into focus many writers.

R.V.Sahagirdar or Adya Rangachar, popularly known as *Shri Ranga* has said that when he was a student of 6th standard in a high school in Bijapur, this magazine was introduced to him by the librarian. After reading a few issues he was so hooked on to it that he bribed the librarian to get his turn at the new issue early as there used to be a long waiting list to read the magazine. Shri Ranga also said that it was *Galaganat* who inspired him to write. By this time V T Kulkarni had become popular as *Galagant*.

The late Basavaraj Kattimani, a very well known novelist, said that when he was in Belgaum as a student in 1933, he read Galganath's *Prabuddha Padmanayana*. This was the first novel of Galaganath and also the book that inspired Kattimani to write. Galganath's other works included *Ishwari Sutra*, *Marathi Abhyadaya*, *Chatrapati Kamalakumari*, *Grahakalaha Ranee Mrunalini* and *Kannadigar Kamakathe*. Not only Kattimani, but other great Kannada litterateurs like Bendre, Gokak, Mugali, Betageri, NK, Mugali and many more of the generation owe much to Galaganathan.

After the nirvana of Sheshachala Sadguru, Galaganath had to leave *Anandvan*, and settle in Haveri. After some years he ran into financial difficulties. He went from town to town, village to village, house to house carrying books on his head along with two others, trying to sell them. That was the fate of of this doyen of Kannada. This year we celebrate his 125th birthday.

[illegible]

[illegible]

[illegible] ...

ಕುರುಡುಗಣ್ಣುಗಳಿಗೆ....

(ಮೊದಲನೆಯ ಪುಟದಿಂದ)

ಕುಟುಂಬದ ಬಿಡೆಸ್ಪೆಷ್ಟರ ಮೇಲೆ ಒಂದೊಂದು ರೀತಿಯ ನುಷ್ಪರಿಣಾಮವನ್ನು ಮಾಡಿದೆ. ಇವನ-ಪತ್ನಿ ಇಂದಿರಾಗೆ ಬಂದ ಕಣ್ಣುಬೇನೆ ಸಂಜೀವಿ-ಕಣ್ಣೇ ಹೋಗಿ ಅವಳು ಕುರುಡಿಯಾದಳು. ಈಗ ಅವಳು ಪರಾವಲಂಬಿ ಇಂದು ಇಂದಿರಾ-ದಯನ್ನಿಗೆ [illegible]...

ಈಗ ಫುಟಪಾತ್ ಮೇಲೆ ಇರುವುದೂ ಕಷ್ಟವಾಯಿತು.

ಜಾಬಳ ಬಾಲಕೃಷ್ಣರನ್ನು ಮಾತನಾಡಿಸಿದರೆ ಜೀವನದಲ್ಲಿ ಇಷ್ಟೆಲ್ಲಾ [illegible], ವಿಪರೀತ ಕಷ್ಟವನ್ನು ಅನುಭವಿಸುತ್ತಿರುವರು ಹಿಂದೆಗೆಯುವದಿಲ್ಲ. ಮುಖದ ಮೇಲೆ ಮುಗುಳ್ನಗೆ ಕುಣಿಯುತ್ತಲೇ ಇರುತ್ತದೆ...

ಕುರುಡಿ, ಅಬಲೆ- ಪತ್ನಿ ಇಂದಿರಾಳನ್ನು ತಾಯಿಲ್ಲದಾಗ ಫುಟಪಾಥಮೇಲೆಯೋ ಇನ್ನಾವುದೋ ಸುರಕ್ಷಿತವಲ್ಲದ ಜಾಗೆಯಲ್ಲಿ ಬಿಡಲು ಅವರಿಗೆ ಮನಸ್ಸಾಗದು- ಪತ್ನಿಯ ಮೇಲೆ ಗಾಢ ಪ್ರೇಮ.

ಒಟ್ಟು ಬರುವ ರೂ. ೩೫೦೦/- ತಿಂಗಳ ಸಂಬಳದಲ್ಲಿ ಆದಾಯಕರ ಕ್ಷೇಮನಿಧಿ ಇಂಥವನ್ನೆಲ್ಲ ಕಳೆದರೂ ಇವರಿಬ್ಬರಿಗೆ ಸಾಕಾಗುವಷ್ಟು - ಕೈತುಂಬ ಹಣಬರುವದರಲ್ಲಿ ಯಾವ ಸಂದೇಹವೂ ಇಲ್ಲ;

ಸ್ವಂತ ಅಡಿಗೆ ಮಾಡುವ ಪ್ರಮೇಯವೇ ಇಲ್ಲ ಜಾಗೆಯೂ ಇಲ್ಲ; ಹೆಂಡತಿಗೆ ಕಣ್ಣು ಇಲ್ಲ. ಬೆಳಗಿನ ಚಹಾದಿಂದ ಹಿಡಿದು ಎಲ್ಲವೂ ಹೋಟೆಲಿನಲ್ಲಿಯೇ.

ಸಂಬಳ ಸಿಕ್ಕ ೧೫ ದಿನಗಳ ಕಾಲವಂತೂ ಪತ್ನಿ ಹೇಳದ ಪ್ರಸಿದ್ಧ ತಿಂಡಿತಿನಿಸುಗಳ ಅಂಗಡಿಗೆ ಹೋಗುತ್ತಾರೆ. ಅವಳಿಗೆ ದಾದರನಲ್ಲಿಯ "ಮಾಮಾಕಾಣೆನ ಅಂಗಡಿಯ ಬಟಾಟಾ ವಡಾ" ತಿನ್ನಬೇಕೆಂದೆನಿಸಿದರೆ ಬಾಲಕೃಷ್ಣ ಅವಳನ್ನು ಕುರ್ಲಾದಿಂದ [illegible] ಟ್ಯಾಕ್ಸಿಯಲ್ಲಿ ಕರೆದುಕೊಂಡು ಹೋಗುತ್ತಾರೆ. ಇದೇ ರೀತಿ ಅವಳಿಗೆ ಬೇಕಾದ ಆಹಾರ [illegible] ಪ್ರಸಂಗದಲ್ಲಿ ದೊರಕಿಸಲು ಬಾಲಕೃಷ್ಣ [illegible]. ಹೆಂಡತಿಯ ಮೇಲೆ ಅಷ್ಟು ಅಕ್ಕರೆ. ಬಾಲಕೃಷ್ಣರಿಗೆ [illegible] ಬೇರೆ ವೇಳೆ [illegible] ಇರುತ್ತದೆ. ಒಂದು; ಬೆಳಗಿನ [illegible] ರಿಂದ ಮಧ್ಯಾಹ್ನ [illegible] ವರೆಗೆ. ಎರಡನೆಯದು ಮಧ್ಯಾಹ್ನ [illegible] ರಿಂದ ರಾತ್ರಿ [illegible] ರ ವರೆಗೆ. ಈ ಕೆಲಸಕ್ಕಾಗಿ ಮನೆಬಿಡುವಾಗ ಪ್ರತಿಸಲವೂ ತಪ್ಪದೇ ಇಂದಿರಾ ಪತಿ ಕೈಹಿಡಿದೆ [illegible]. [illegible] ಬಾಲಕೃಷ್ಣ [illegible] (west) [illegible] [illegible] ಅವರ ಆ ಹಾಳ್ಯ [illegible] ಈ ಪರವಾ.

ತಿಂಗಳ ಕೊನೆಯ [illegible] ಬಾಲಕೃಷ್ಣ ಸಹೋದ್ಯೋಗಿಗಳಿಂದ [illegible] ಪಡೆಯುತ್ತಾರೆ. ಹಾಗೆಯೇ [illegible] ತಕ್ಷಣ ಅದನ್ನು [illegible] ಸುತ್ತಾರೆ. ಅಂತಲೇ ಅವರಿಗೆ [illegible] ಕೊಂಡರೆ [illegible] ಅನಿಸುವದಿಲ್ಲ. ಜೀವನ ಈಗ ಹೀಗೆ ನಡೆದಿದೆ. [illegible] ದಾದ ಮೇಲೆ ಈ ಜೋಡಿಯ ಜೀವನ ಹೇಗೆ ಸಾಗುವದೋ ನೋಡಬೇಕು.

ಆನಂದ ವನದ ಸಾಮೂಹ್ಯ ನೋಟ

ಅದಕ್ಕಾಗಿ ನಿರ್ದಿಷ್ಟ ಆದಾಯದ ಅವಶ್ಯಕತೆ, ಸದ್ಬೋಧ ಚಂದ್ರಿಕೆಯ ಪ್ರಕಟಣೆ ಈ ಎರಡೂ ಉದ್ದೇಶಗಳನ್ನು ಸಾಧಿಸಬಹುದು ಎಂದು ಅವರ ಕಲ್ಪನೆ ಆಗಿನ ಕಾಲದಲ್ಲಿ ಸಫಲವಾಗಿದೆ ಎಂಬುದು ಹೆಮ್ಮೆಯ ಮಾತಲ್ಲವೆ?

'ಆನಂದವನ' ಒಂದು ಅಧ್ಯಾತ್ಮಿಕ ಧಾರ್ಮಿಕ ಸ್ಥಾನ. ಶೇಷಾಚಲಸಾಧುಗಳು, ಸಾಹಿತ್ಯದ ಮಾಸಪತ್ರಿಕೆಯ ಪ್ರಕಟಣೆಗೆ ಅನುಮತಿ ನೀಡುವರೋ? ಎಂದು ಗಳಗನಾಥರಿಗೆ, ಕುಲಕರ್ಣಿಯವರಿಗೆ ಅನುಮಾನ. ಹೀಗಾಗಿ ಈ ವಿಷಯವನ್ನು ನೇರ ಸ್ವಾಮಿಗಳೆದುರು ಇಡಲಾರದಾಗಿದ್ದರು. ಈ ತೀರ್ಮಾನವನ್ನು ಬಗೆಹರಿಸಿದವರು ಸಾಧುಗಳ ಪರಮ ಶಿಷ್ಯರಾಗಿದ್ದ ಶ್ರೀ ನಾರಾಯಣ ಭಗವಾನರು.

ಸದ್ಬೋಧ ಚಂದ್ರಿಕೆಗೆ ಪ್ರಾರಂಭದಲ್ಲಿ ತನ್ನ



ಆತಿಹಳೆಯ 'ಚಂದ್ರಿಕೆ' ಮುಖಪುಟ

ಮುಕ್ಕಾಲು ಶತಮಾನ ಅಪೂರ್ವ ಇತಿಹಾಸ

ಚಿತ್ರ, ಲೇಖನ :

● ಎಸ್. ಸಿ. ದೇಸಾಯಿ

'ಆನಂದವನ' ಎಂದೊಡನೆ ಕರ್ನಾಟಕದ ಸಂತರೊಬ್ಬರ ಹೆಸರು ಕರ್ಣದಲ್ಲಿ ಕೇಳಿಯುತ್ತದೆ. ಅದೇ 'ಅಗಡಿಯ ಸಾಧುಗಳು' ಎಂದು ಪ್ರಸಿದ್ಧರಾಗಿದ್ದ ಶ್ರೀ ಶೇಷಾಚಲ ಸದ್ಗುರು ಮಹಾರಾಜರದು.

ಸಾಧುಗಳು ಕೇವಲ ಅಧ್ಯಾತ್ಮಿಕ ಗುರುಗಳಾಗಿರದೆ, ಸಾಹಿತ್ಯ ಸೇವೆ, ಸಮಾಜಸೇವೆ, ಶಿಕ್ಷಣ ಮುಂತಾದ ಲೋಕೋಪಯೋಗಿ ಕಾರ್ಯಗಳಿಗೆ ಎಡೆಮಾಡಿದ ಮಹಾಪುರುಷ, ಅಂದು ಅವರು ನೆಟ್ಟ ಬೀಜ ಇಂದು ಹೆಮ್ಮರವಾಗಿ ನಿಂತಿದೆ.

ಅವರು ಜನಿಸಿದ್ದು ಅಗಡಿಯಲ್ಲಿ. ಅಗಡಿ ಇರುವುದು ಧಾರವಾಡ ಜಿಲ್ಲೆಯ, ಹಾವೇರಿ ತಾಲ್ಲೂಕಿನಲ್ಲಿ. ಚಿಕ್ಕ ಹಳ್ಳಿ ಆದರೇನಾಯಿತು, ಅದರ ಪ್ರಸಿದ್ಧಿ ಕರ್ನಾಟಕದ ಹೊರಗೂ ಹರಡಿದೆ. ಈ ಹಳ್ಳಿಯ ಪಕ್ಕದಲ್ಲಿಯೇ ಆನಂದವನ!

ಅಗಡಿ ಸಾಧುಗಳು ಶೇಷಾಚಲ ಸದ್ಗುರು ಮಹಾರಾಜರು

ಆನಂದವನದ ಈಗಿನ ಗುರುಗಳು ಶ್ರೀ ಚಿದಂಬರ ಮೂರ್ತಿಚಕ್ರವರ್ತಿ ಅವರು

ಈಗ್ಗೆ ಮುಕ್ಕಾಲು ಶತಮಾನದ ಹಿಂದೆ, ಆದೇತಾನೆ ಕನ್ನಡ ಪತ್ರಿಕಾ ಪ್ರಪಂಚ, ಆಧುನಿಕ ಸಾಹಿತ್ಯ ಮುಗುಳೊಡೆಯುತ್ತಿದ್ದ ಕಾಲ. ಈ ಸಂದರ್ಭದಲ್ಲಿಯೇ "ಆನಂದವನ"ದಲ್ಲಿ 'ಸದ್ಬೋಧ ಚಂದ್ರಿಕೆ' ಅರಳಿದ್ದು.

ಈ ಸಮಯಕ್ಕಾಗಲೇ–ಸಾಧುಗಳ ಆನಂದವನದಲ್ಲಿ ಸಂಸ್ಕೃತ ವೇದಪಾಠಶಾಲೆ ಪ್ರಾರಂಭವಾಗಿದ್ದವು. ಇಲ್ಲಿಂದ ಸಾಹಿತ್ಯ ಸೇವೆಯೂ ಏಕೆ ನಡೆಯಬಾರದು? ಎಂದು ಗುರುಗಳ ಕೆಲ ಶಿಷ್ಯರು ಯೋಚಿಸಿದರು, ಅಂತಹರಲ್ಲಿ, ದಿ. ವೆಂ. ತಿ. ಗಳಗನಾಥ, ದಿ|| ಯ. ಗು. ಕುಲಕರ್ಣಿಹಾಗು ಇವರ ಕೆಲಸ್ನೇಹಿತರು ಮುಖ್ಯರು. ಈವರೀರ್ವರು ತಮ್ಮ ತಮ್ಮ ನೌಕರಿಗಳಿಗೆ ರಾಜೀನಾಮೆ ನೀಡಿ ಸ್ವಾಮಿಗಳ ತದೇಕ ಸೇವೆಗೆಂದು ಬಂದು ಆನಂದವನದಲ್ಲಿ ನೆಲೆಸಿದರು.

'ಸದ್ಬೋಧ ಚಂದ್ರಿಕೆ' ಯ ಪ್ರಾರಂಭಕ್ಕೆ ಇನ್ನೂ ಒಂದು ಕಾರಣವೂ ಇತ್ತು. ಸ್ವಾಮಿಗಳಿಗೆ ನಿಶ್ಚಿತವಾದ ಯಾವ ಆದಾಯವೂ ಇರಲಿಲ್ಲ. ಆಸ್ತಿಯಂತೂ ಮೊದಲೇ ಇಲ್ಲ (ಈಗಲೂ ಹಾಗೆಯೇ!). ಸ್ಥಾಪಿತವಾದ ಸಂಸ್ಕೃತ ವೇದ ಪಾಠಶಾಲೆ ತೊಂದರೆ ಇಲ್ಲದೆ ನಡೆದುಕೊಂಡು ಹೋಗಬೇಕಿತ್ತು.

ದೇ ಆದ ಅಚ್ಚುಕೂಟವಿರಲಿಲ್ಲ. ಹುಬ್ಬಳ್ಳಿ, ಗದಗು, ಮತ್ತೆಲ್ಲಿಯೋ ಹೋಗಿ ಪತ್ರಿಕೆಯನ್ನು ಮುದ್ರಿಸಿಕೊಂಡು ಹೊತ್ತು ತರಬೇಕು. ಚಂದಾದಾರರಿಗೆ ಹಂಚಬೇಕು. ಚಂದ್ರಿಕೆ ಜನಪ್ರಿಯವಾಗಲೂ ತಡವಾಗಲಿಲ್ಲ. ಬಹುಶಃ ಅದರಲ್ಲಿ ಪ್ರಕಟವಾಗುತ್ತಿದ್ದ ಧಾರ್ಮಿಕ ಲೇಖನಗಳು, ಕತೆಗಳು, ಧಾರಾವಾಹಿ ಕಾದಂಬರಿಗಳು ಇವು ಅದನ್ನು ಅಲ್ಪವೇಳೆಯಲ್ಲಿಯೇ ಜನಪ್ರಿಯವಾಗಿ ಮಾಡಿರಬೇಕು. ಪತ್ರಿಕೆಯ ಪ್ರಸಾರ ಹೆಚ್ಚಿದಂತೆ ಅದನ್ನು ಬೇರೆಡೆಯಲ್ಲಿ ಮುದ್ರಿಸಿ ತಂದು ಹಂಚುವುದು ಕಷ್ಟವೆಂದಾದಾಗ ತನ್ನದೇ ಮುದ್ರಣಾಲಯ ಹೊಂದಿಸಿಕೊಳ್ಳಬೇಕಾಯಿತು. ಅದೇ ಶ್ರೀ ಶೇಷಾಚಲ ಮುದ್ರಣಾಲಯ.

ಮೊದಲು ತಂದುದು ಚಿಕ್ಕ ಮುದ್ರಣ ಯಂತ್ರ. ಈ ಯಂತ್ರದ ಮೇಲೆ ಚಂದಾದಾರರಿಗೆ ಸಾಕಾಗುವಷ್ಟು ಪ್ರತಿಗಳನ್ನು ಅಚ್ಚಿಸುವದೂ ಸಾಧ್ಯವಿಲ್ಲವೆಂದಾಗ ಹಿರಿಯ ಯಂತ್ರಗಳಿಗಾಗಿ ಪ್ರಯತ್ನಿಸಿದ್ದಾರೆ. ಇಂಥ ಸಂದರ್ಭದಲ್ಲಿ(1914 ರಲ್ಲಿ)ಪ್ರಕಟವಾದ ಸದ್ಬೋಧ ಚಂದ್ರಿಕೆಯ ಒಂದು ಸಂಚಿಕೆಯಲ್ಲಿ ಗಳಗನಾಥರು ಹೀಗೆ ಬರೆದಿದ್ದಾರೆ:

"....ಈಗೆರಡು ವರ್ಷಗಳಿಂದ ತರಿಸಬೇಕು ತರಿಸಬೇಕು ಎಂದು ಹಾಡುತ್ತ ಬಂದಿದ್ದ ಎರಡು ಯಂತ್ರಗಳನ್ನು, ಅಂದರೆ ಪ್ರಿಂಟಿಂಗ್ ಮೆಷಿನ್ ಹಾಗೂ ಕಟಿಂಗ್ ಪ್ರೆಸ್ ಎಂಬವೆರಡನ್ನು ಚಂದ್ರಿಕೆಯು ಸರಾಸರಿ 2,800 ರೂಪಾಯಿಗಳನ್ನು ಕೊಟ್ಟು ಒಮ್ಮೆ ಗಟ್ಟಿ ಮನಸ್ಸು ಮಾಡಿ, ಮೊನ್ನೆ ತರಿಸಿಬಿಟ್ಟಳು. 'ನೀನು ಹೊತ್ತಿಗೆ ಸರಿಯಾಗಿ ಬರುವದಿಲ್ಲ. ನಿನ್ನ ಮುದ್ರಣ ಕೆಲಸವೂ ನೆಟ್ಟಗಾಗುವದಿಲ್ಲ' ಎಂದು ಚಂದಾದಾರರ ಕೈಯಿಂದ ಅನಿಸಿಕೊಂಡು, ಅನಿಸಿಕೊಂಡು ಚಂದ್ರಿಕೆಗೆ ಇತ್ತ ಬಿದ್ದರೆ ಕೆರೆ ಅತ್ತ ಬಿದ್ದರೆ ಭಾವಿ ಎಂಬ ಗತಿಯಾಗಿತ್ತು. ಯಾಕೆಂದರೆ 8000 ಪ್ರತಿಗಳನ್ನು ಕೈ ಪ್ರೆಸ್ಸಿನ ಮೇಲೆ

ಈ ಕನ್ನಡ ನೆಲದಲ್ಲಿ ಕಳೆದ ಎಪ್ಪತ್ತೈದು ವರ್ಷಗಳಿಂದ ಪತ್ರಿಕೆಯೊಂದು ಎಂದೂ ನಿಲ್ಲದೆ ನಡೆದುಬರುತ್ತಿದೆ ಎನ್ನುವುದು ಹೆಮ್ಮೆಯ ಮಾತು. "ಸದ್ಬೋಧ ಚಂದ್ರಿಕೆ"ಯದು ಒಂದು ರೋಮಾಂಚಕರ ಇತಿಹಾಸ. ಈ ಪತ್ರಿಕೆ ಇದೀಗ ಮುಕ್ಕಾಲು ಶತಮಾನದ ಸಮಾರಂಭವನ್ನು ಆಚರಿಸುತ್ತಿದೆ.



ದಿ|| ಯಲ್ಲೋಗುರುದ್ರೋ ಕುಲಕರ್ಣಿ–ಚಂದ್ರಿಕೆ ಪ್ರಥಮ ಸಂಪಾದಕರು



ದಿ|| ಗಳಗನಾಥ: ಚಂದ್ರಿಕೆಯ ಸಂಪಾದಕ

(4ನೆ ಪುಟನೋಡಿ)

(17 ನೆ ಪುಟದಿಂದ)

ಮುಕ್ಕಾಲು ಶತಮಾನದ ಅಪೂರ್ವ ಇತಿಹಾಸ

ಹೊತ್ತಿಗೆ ಸರಿಯಾಗಿ ಮುದ್ರಿಸುವದು ಅಸಾಧ್ಯವಾದ್ದರಿಂದ, ಮೇಲಿನವೆರಡು ಯಂತ್ರಗಳನ್ನು ತರಿಸದಿದ್ದರೆ ಆಕೆಗೆ ಬೈಸಿಕೊಳ್ಳುವದು ತಪ್ಪುವಹಾಗಿದ್ದಿಲ್ಲ. ಹೊಸಯಂತ್ರಗಳನ್ನು ತರಿಸಿಬಿಡಬೇಕೆಂದರೆ, ಆಕೆಯ ಕೈಯಲ್ಲಿ ದುಡ್ಡು ಇದ್ದಿಲ್ಲ. ಹೀಗಾಗಿ ಅತ್ಯಬದ್ಧಳಾದ ಚಂದ್ರಿಕೆಯು ಉಸುರ್ಗಳೆಯುತ್ತ "ಏನು ಮಾಡಬೇಕು, ಹೇಗೆ ಮಾಡಬೇಕು" ಎಂಬ ದ್ವಾದಶಾಕ್ಷರೀ ಮಂತ್ರವನ್ನು ಜಪಿಸುತ್ತ "ದೇವರೇ, ಇಷ್ಟು ಜನ ಚಂದಾದಾರರಾದರೂ ಯಾಕೆ ಕೂಡಿದ್ದಾರು! ಎಷ್ಟಂತ ಅವರಿಗೂ ನಮಗೂ ತ್ರಾಸು" ಎಂದು ಒಮ್ಮೊಮ್ಮೆ ಪಶ್ಚಾತ್ತಾಪ ಪಡುತ್ತಾ ಏನೂ ತೋಚದೆ ಸುಮ್ಮನೆ ಕುಳಿತುಕೊಳ್ಳುತ್ತಿದ್ದಳು."

ಇದು ಎಪ್ಪತ್ತು ವರ್ಷಗಳ ಹಿಂದೆ 'ಸಂಪಾದಕೀಯ' ರೂಪದಲ್ಲಿ ಪ್ರಕಟವಾದ ಬರಹ. ನಂತರ ಚಂದ್ರಿಕೆಯ ಪ್ರಸಾರ ಆ ಕಾಲದಲ್ಲಿ ಹದಿನಾಲ್ಕು ಸಾವಿರದವರೆಗೂ ಏರಿತ್ತೆಂದರೆ ಆಗಾಧವಾಗುತ್ತದೆ ಅಲ್ಲವೆ?

ಆನಂದವನದಲ್ಲಿ ಮುದ್ರಣದ ಕೂಟ–ಶ್ರೀ ಶೇಷಾಚಲ ಮುದ್ರಣಾಲಯ ಪ್ರಾರಂಭವಾದೊಡನೆ ಅದರ ವ್ಯವಸ್ಥೆಯನ್ನು ನೋಡಿಕೊಳ್ಳಲು ನೇಮಕವಾದವರು ದಿ. ಶ್ರೀ ಧ. ಪ. ಕಾಳೆ ಅವರು. ಅವರು ಹುಬ್ಬಳ್ಳಿಯ ರೀಲ್ವೆ ಮುದ್ರಣಾಲಯದಲ್ಲಿ ತಂತ್ರಜ್ಞರಾಗಿದ್ದರು. ಅದನ್ನು ಬಿಟ್ಟುಕೊಟ್ಟು ಸ್ವಾಮಿಯ ಸೇವೆಗೆ ಬಂದುನಿಂತರು, ನಂತರ ಅವರು ಕೂಡ ಕೆಲ ಪುಸ್ತಕಗಳನ್ನು ಬರೆದರಲ್ಲದೇ ಕೆಲ ಮರಾಠಿ ಉತ್ತಮ ಗ್ರಂಥಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ.

ಒಂದು ತಲೆಮಾರಿನ ಹಿಂದಿನ ಕನ್ನಡ ಸಾಹಿತಿಗಳು, ಸದ್ಬೋಧ ಚಂದ್ರಿಕೆಯನ್ನು ಓದಿಯೇ ಸ್ಫೂರ್ತಿ ಪಡೆದವರು ಎಂದು ಹೇಳಿದರೆ ಅತಿಶಯೋಕ್ತಿಯಾಗದು. ಅಂಥ ಒಂದು ಪ್ರಸಂಗವನ್ನು ಇಲ್ಲಿ ನೆನೆಯಬಹುದು.

ಆನಂದಕಂದರು (ದಿ. ಬೆಟಗೇರಿ ಕೃಷ್ಣಶರ್ಮರು) ನಿಧನವಾಗುವದಕ್ಕೆ ಅಲ್ಪ ಕಾಲಕ್ಕೆ ಮುಂಚೆ ತಮ್ಮ ಜೀವನದ ಸ್ಮೃತಿಗಳನ್ನು ಬರೆಸಿದರು. ಅದರಲ್ಲಿ "ನನ್ನ ಓದಿನಗೀಳು" ಎಂಬುದೂ ಒಂದು ಭಾಗ. ಅಲ್ಲಿ ಅವರು ಚಂದ್ರಿಕೆಯು ತಮಗೆ ಎಷ್ಟು ಪ್ರೀತಿಯ ಪತ್ರಿಕೆಯಾಗಿತ್ತು, ಅದರಲ್ಲಿ ಪ್ರಕಟವಾದ ಕತೆ ಕಾದಂಬರಿಗಳು, ಲೇಖನಗಳು ತಮ್ಮ ಮೇಲೆ ಎಷ್ಟೊಂದು ಪರಿಣಾಮ ಮಾಡಿದವು, ಚಂದ್ರಿಕೆಯ ಮೂಲಕ ತಮ್ಮ ಓದಿನ ಚಟ ಹೇಗೆ ಬೆಳೆಯಿತು ಎಂದು ಬಹು ಅಂದವಾಗಿ, ಅಭಿಮಾನದಿಂದ ಹೇಳಿದ್ದಾರೆ. ಬೇಂದ್ರೆಯವರು ಆನಂದವನ, ಸದ್ಬೋಧ ಚಂದ್ರಿಕೆ ಗಳಗನಾಥರ ಕಾದಂಬರಿಗಳು ಈ ವಿಷಯವಾಗಿ ಸಾಕಷ್ಟು ಹೇಳಿದ್ದುಂಟು. ತಮ್ಮ ವಿದ್ಯಾರ್ಥಿ ದೆಶೆಯಲ್ಲಿ ಚಂದ್ರಿಕೆ ತಮ್ಮ ಪ್ರೀತಿಯ ಪತ್ರಿಕೆಯಾಗಿತ್ತೆಂದು ಹೇಳಿದ ನೆನಪು. ಈ ರೀತಿಯಾಗಿ ಎಷ್ಟೋ ಹಿರಿಯ ಸಾಹಿತಿಗಳಿಗೆ ಆಗಿನ ಕಾಲದಲ್ಲಿ ಚಂದ್ರಿಕೆ ಸಾಹಿತ್ಯ ವಿಷಯದಲ್ಲಿ ಒಂದು ತರದ ಸುಮ್ಮಸ್ಸನ್ನು ನೀಡಿದೆ ಎಂದರೆ ತಪ್ಪಾಗಲಾರದು!

ಮುಕ್ಕಾಲು ಶತಮಾನಗಳ ಹಿಂದೆ—ಕರ್ನಾಟಕದ ಪರಿಸ್ಥಿತಿ ಬೇರೆಯೇ ಇತ್ತು. ಇಂದಿನಂತೆ ಕರ್ನಾಟಕ ಒಟ್ಟಾದೀತು ಎಂಬುದು ಕನಸು ಮನಸ್ಸಿನಲ್ಲಿಯೂ ಇರಲಿಲ್ಲ. ಮುಂಬೈ ಕರ್ನಾಟಕ, ಹೈದರಾಬಾದ (ನೊಗಲಾಯಿ), ಮದ್ರಾಸು, ಮೈಸೂರು ಈ ರೀತಿಯಲ್ಲಿ ಹರಿದು ಹಂಚಿಹೋಗಿದ್ದ ತುಂಡುಗಳಲ್ಲಿ ವಿದ್ಯಾಭ್ಯಾಸದ ರೀತಿ ಬೇರೆ, ಸಂಸ್ಕೃತಿ ಬೇರೆ, ರಾಜಕೀಯವೂ ಬೇರೆ ಎಂಬ ಪ್ರಸಂಗದಲ್ಲಿ, ಸದ್ಬೋಧ ಚಂದ್ರಿಕೆ ಈ ಎಲ್ಲ ಭಾಗಗಳಿಗೂ ಮುಟ್ಟಿ ಕನ್ನಡತನದ ಒಂದು ಅರಿವು ಮೂಡಿಸಿದೆ. ಬೇರೆ ಪತ್ರಿಕೆಗಳು ಆಗ ಇರಲಿಲ್ಲವೆಂದಲ್ಲ. ಆದರೆ ಯಾವೂ ಚಂದ್ರಿಕೆಯಷ್ಟು ಜನಪ್ರಿಯವಾಗಿರಲಿಲ್ಲವೆಂದು ದೃಢವಾಗಿ ಹೇಳಬೇಕು. ಚಂದ್ರಿಕೆ ಬರೀ ಕನ್ನಡತನವನ್ನಷ್ಟೇ ಎಚ್ಚರಿಸಲಿಲ್ಲ. ಆಗ ಪ್ರಕಟವಾದ ಗಳಗನಾಥರ ಐತಿಹಾಸಿಕ ಕಾದಂಬರಿಗಳು, ಸರಳ ಶೈಲಿಯಲ್ಲಿ ಪ್ರಕಟವಾದ ಪೌರಾಣಿಕ ಪ್ರಸಂಗಗಳು ಓದುಗನಲ್ಲಿ ಪರೋಕ್ಷವಾಗಿ ರಾಷ್ಟ್ರೀಯತೆ, ದೇಶಭಕ್ತಿಯನ್ನು ಜಾಗೃತಗೊಳಿಸಿವೆ!

ಗಳಗನಾಥರು 'ಆನಂದವನ'ವನ್ನು ಬಿಟ್ಟು ಹೋದ ಮೇಲೆ ಮುದ್ರಣಾಲಯವಿಲ್ಲದೆ ಚಂದ್ರಿಕೆ ತಬ್ಬಲಿಯಾದಳು. ಆದರೆ ಪ್ರಕಟಣೆ ನಿಲ್ಲಲಿಲ್ಲ. ಶ್ರೀ ಧ. ಪ. ಕಾಳೆ ಅವರು ತಮ್ಮದೇ ಮುದ್ರಣಾಲಯವನ್ನು ಮೊದಲಿನ ಹೆಸರಿನಲ್ಲಿ ಮುಂದುವರಿಸಿದರು.

ಚಂದ್ರಿಕೆಯಂತೂ ನಡೆದುಕೊಂಡು ಬರುತ್ತಿತ್ತು ಆನಂದವನದಲ್ಲಿ. ಶ್ರೀ ಶೇಷಾಚಲ ಗ್ರಂಥಮಾಲೆಯೂ ಪ್ರಾರಂಭವಾಗಿ ಅಲ್ಲಿ ಆ ಕಾಲದಲ್ಲಿ ಉತ್ತಮ ಗ್ರಂಥಗಳು ಅರಳಿ ಕನ್ನಡತಾಯ ಮಾಲೆಯಲ್ಲಿ ಮೊದಲು ಸೇರಿದ ಪುಷ್ಪಗಳಾಗಿವೆ. ಈ ರೀತಿಯಾಗಿ ಕನ್ನಡ ಸಾಹಿತ್ಯದ ಪ್ರಾರಂಭದ ಸೇವೆ ಆನಂದವನದಲ್ಲಿ ನಡೆದಿದೆ.

ಕಾಳೆಯವರೂ ಆನಂದವನವನ್ನು ತ್ಯಜಿಸಿದ ನಂತರ ಮುದ್ರಣಾಲಯವಿಲ್ಲದೇ ಚಂದ್ರಿಕೆ ಮತ್ತೊಮ್ಮೆ ತಬ್ಬಲಿಯಾದಳು. ಈ ಸಮಯಕ್ಕಾಗಲೇ, ಇಂದಿನ ಗುರುಗಳು–ಪರಮ ಪೂಜ್ಯ ಶ್ರೀ ಚಿದಂಬರಮೂರ್ತಿಗಳು ಆನಂದವನದ ಕಾರ್ಯಭಾರಗಳನ್ನು ನಿರ್ವಹಿಸಲು ಪ್ರಾರಂಭಿಸಿದರು. ಈಗ ಅವರು ಆನಂದವನದಲ್ಲಿ ಆಧುನಿಕ ಮುದ್ರಣಾಲಯವನ್ನು ಹೊಂದಿಸಿದ್ದಾರೆ. ಅವರೇ ಸಂಪಾದಕರು.

ಹಿಂದಿನ 14,000 ದ ಪ್ರಸಾರವನ್ನು ನೆನೆದಾಗ ಇಂದಿನ ಪ್ರಸಾರ ಕಡಿಮೆ ಎಂದೆನಿಸಬಹುದು. ಆದರೆ ಎಷ್ಟೋ ಎಡೆತಡೆಗಳು ಬಂದರೂ ಸಂಚಿಕೆ ಎಂದೂ ನಿಂತಿಲ್ಲ. ಕೆಲವೊಮ್ಮೆ ಸಂಯುಕ್ತ ಸಂಚಿಕೆಗಳಾಗಿ ಹೊರಟಿವೆ ವಿನಾ ಪ್ರಕಟಣೆ ಎಂದೂ ನಿಲ್ಲಲಿಲ್ಲ!

ಕ್ರಿ. ಶ. 1908 ರಲ್ಲಿ ಪ್ರಾರಂಭವಾದ ಸದ್ಬೋಧಚಂದ್ರಿಕೆಗೆ ಈಗ ಪೂರ್ಣ ಮುಕ್ಕಾಲು ಶತಮಾನ ತುಂಬಿದೆ. ಅಮೃತ ಮಹೋತ್ಸವದ ನೆನಪಿಗಾಗಿ ಇಂದು ಆನಂದವನದಲ್ಲಿ—"ಆನಂದವನ"ಎಂಬ ನಾಮಕರಣವನ್ನೆ ಹೊಂದಿ ಬೃಹದ್ಗ್ರಂಥ ಒಂದು ಪ್ರಕಟವಾಗುತ್ತಲಿದೆ. 1100 ಪುಟಗಳ (ಕಿರೀಟ ಚತುರ್ಥ) ಈ ಮಹಾಗ್ರಂಥದ ಪ್ರಧಾನ ಸಂಪಾದಕರೂ ಶ್ರೀ ಚಿದಂಬರ ಮೂರ್ತಿಗಳೇ. ಸಂಪಾದಕರಾಗಿ ಶ್ರೀ ತ. ಸು. ಶಾಮರಾಯರು ಹಾಗೂ ಶ್ರೀ ಸಿ. ಎಸ್. ಕುಲಕರ್ಣಿಯವರು (ಚಿದಂಬರಾನಂದ) ಸಹಾಯಕರಾಗಿದ್ದಾರೆ. ಈಗ್ರಂಥವೂ ಆನಂದವನದ ಮುದ್ರಣಾಲಯದಲ್ಲಿಯೇ ಅಚ್ಚಾಗಿದೆ. ಈ ಗ್ರಂಥ ಇಷ್ಟರಲ್ಲಿಯೇ ಬಿಡುಗಡೆಯಾಗಲಿದೆ. ಬಿಡುಗಡೆಯ ಸಂದರ್ಭದಲ್ಲಿ ಶ್ರೀ ಚಿದಂಬರಮೂರ್ತಿಗಳು ಆನಂದವನದಲ್ಲಿ ಒಂದು ಸಮಾರಂಭವನ್ನು ಏರ್ಪಡಿಸಲಿದ್ದಾರೆ.

ಈ ಗ್ರಂಥ, ಸ್ವಾತ್ಮದರ್ಶನ, ಸದ್ದರ್ಶನ, ದಿಗ್‌ದರ್ಶನ ಎಂದು ಮೂರು ಮುಖ್ಯಭಾಗಗಳನ್ನು ಹೊಂದಿದ್ದು, ಮೊದಲ ಭಾಗದಲ್ಲಿ ಆನಂದವನ ಸದ್ಬೋಧ ಚಂದ್ರಿಕೆಯ ವಿವರಣೆ ಇದೆ. ಎರಡನೆಯ ಭಾಗದಲ್ಲಿ, ಸನಾತನ ಭಾರತೀಯ ದರ್ಶನಗಳ ಪರಿಚಯ, ಅದ್ವೈತ, ದ್ವೈತ, ವಿಶಿಷ್ಟಾದ್ವೈತ ಬಗ್ಗೆ ಅಲ್ಲದೆ— ಬೌದ್ಧ, ಜೈನಧರ್ಮಗಳ ವಿಷಯವಾಗಿ ಚರ್ಚೆಗಳುಂಟು. ಮೂರನೇ ಭಾಗದಲ್ಲಿ ಕರ್ನಾಟಕದಲ್ಲಿ ಆಗಿಹೋದಸಂತರ, ಪುಣ್ಯಕ್ಷೇತ್ರಗಳ ಜಿಲ್ಲಾವಾರು ಪರಿಚಯ, ಅಲ್ಲದೇ ಆನಂದವನದ ಸಚಿತ್ರದರ್ಶನ — ಈ ರೀತಿ ವಿಷಯಗಳನ್ನು ಹೊಂದಿ ಈ ಮಹಾಗ್ರಂಥ ಹೊರಬರಲಿದೆ.

ಈ ಗ್ರಂಥ ಪ್ರಕಟಣೆಗೆ ಲಕ್ಷಾವಧಿ ರೂಪಾಯಿ ವೆಚ್ಚ ತಗಲಿದೆ. ಹಿಂದಿನಂತೆ ಭಕ್ತರು–ಅಭಿಮಾನಿಗಳು ನೀಡಿದ ಕಾಣಿಕೆಯ ಆಧಾರದ ಮೇಲೆಯೇ ಈ ಪ್ರಕಟಣೆಯಾಗಿದೆ ಎಂಬುದು ಇನ್ನೊಂದು ಅಭಿಮಾನದ ಸಂಗತಿ.

ಕೆರಳಿದ ಸರ್ಪ

(13ನೆ ಪುಟದಿಂದ)

ಹತ್ತಾರು ಜನ ಹೊತ್ತು ತಂದು ಗೋಡೌನ್‌ದಲ್ಲಿ ಹಾಕಿದರು. ಇಪ್ಪತ್ತು ಮೂವತ್ತು ಜನರ ಗುಂಪು ಸಲೀಮಾಳ ಸುತ್ತ ನಿಂತು ಕೇಕೆಹಾಕಿ ನಕ್ಕಿತು. ... ಗೆಳೆಯರನ್ನು ಕರೆತಂದ. ಎಲ್ಲರೂ ಕೂಡಿ ಸಲೀಮಾಳ

ಅಬುಬಕರನಿಗೆ ಬೇಕಾದವನೊಬ್ಬ ... ಒಂದು ದಿನ ಅವನ ಬಾಯಿಂದಲೇ ... ಬ್ಲೇಡ್ ಹಾರಿಸುವಲ್ಲಿ ಪರಿಣತನಾದ.

(ಸಶೇಷ)

ನವ ನಟ ನಟಿಯರು ಬೇಕಾಗಿದ್ದಾರೆ

ಪಾಲ್ಕನೇ ಚಿತ್ರ ಮುಗಿದಿದೆ. ಮುಂದಿನತಿಂಗಳಲ್ಲಿ ಚಿತ್ರೀಕರಣವಾಗಲಿರುವ ಕನ್ನಡ ಐದನೇ ವರ್ಣರಂಜಿತ ಚಿತ್ರಕ್ಕೆ ಹೊಸ ನಟ ನಟಿಯರು ಬೇಕಾಗಿದ್ದಾರೆ. ಇಚ್ಛೆಯುಳ್ಳ, ಇಪ್ಪತ್ತೈದು ವಯಸ್ಸಿನೊಳಗಿರುವವರು ತಮ್ಮ ಫೋಟೊ ಮತ್ತು ವಿಳಾಸ ಸಹಿತ ಕಳುಹಿಸಿರಿ. ಸೂಕ್ತ ಪೋಸ್ಟಲ್ ಸ್ಟಾಂಪಿನ ಕವರನ್ನು ಜೊತೆಯಲ್ಲಿ ಕಳುಹಿಸಿಕೊಡದಿದ್ದಲ್ಲಿ ನಿಮಗೆ ಜವಾಬು ಕಳುಹಿಸುವುದಿಲ್ಲ. ಮತ್ತು ಭಾವಚಿತ್ರ ಸಹಾ ಹಿಂತಿರುಗಿಸಲಾಗುವುದಿಲ್ಲ. ಬೇರೆ ಚಿತ್ರದಲ್ಲಿ ಆಯ್ಕೆಯಾಗಿದ್ದು ತಿಳಿಸಿದರೆ ಒಳ್ಳೆಯದು.

ವಿವರಗಳಿಗೆ ಬರೆಯಿರಿ :

P. O. Box 7

ಪ್ರಜಾಮತ, ಬೆಂಗಳೂರು–560 001

ಉದಯವಾಣಿ

ರವಿವಾರ 18 - 5 - 1986

ಮ್ಯಾಗಜಿನ್ ವಿಭಾಗ

ಪೂಜಿಸುತ್ತಲಿದ್ದೇವೆ. ವಂಶವೃದ್ಧಿಗಾಗಿಯೂ ಅವನ ಮೊರೆ ಹೋಗಿದ್ದೇವೆ.

ಉದಯರವಿಯ ಆರಾಧನೆ ಮಾಡಿ, ಸೂರ್ಯ ಸ್ತೋತ್ರ, ಸೂರ್ಯ ನಮಸ್ಕಾರ ಮುಂತಾದವುಗಳ ರೂಪದಲ್ಲಿ ಸೂರ್ಯೋಪಾಸನೆ ಗೈದು ಕೊಂಡು ಬಂದ ನಮ್ಮ ಪೂರ್ವಜರು. ಆತನಿಗೊಂದು ಮಂದಿರ ನಿರ್ಮಿಸಲು ಯೋಚಿಸಿದ್ದು ಬಹಳ ತಡವಾಗಿ. ಉಳಿದ ದೇವ ಮಂದಿರಗಳ ಸಂಖ್ಯೆಗೆ ಹೋಲಿಸಿದರೆ ಸೂರ್ಯ ಮಂದಿರಗಳು ಕಡಿಮೆ.

ಸಪ್ತಾಶ್ವಬಂಧಿತ ಸ್ವರ್ಣರಥಾರೂಢನಾದ ಸೂರ್ಯನ ಕಲ್ಪನೆ ವೇದಕಾಲದ್ದು. ಅದೇ ರೂವಾರಿಗಳ ಕೈಯಲ್ಲಿ ಕಲೆಯಾಗಿ ಅರಳಿತು.

ಇರಾಣದಲ್ಲಿ ಸೂರ್ಯಾರಾಧನೆ ನಮಗಿಂತ ಮೊದಲೇ ಪ್ರಾರಂಭವಾಯಿತು. ಇರಾಣದ ಸೂರ್ಯ ನಮ್ಮವರಿಗೆ ಪ್ರೇರಣೆ ನೀಡಿದನೇನೋ. ಅದೇ ಛಾಯೆ ನಮ್ಮ ಸೂರ್ಯ ದೇವಾಲಯಗಳಲ್ಲಿ ಕಾಣಿಸುವುದು ಬಿಟ್ಟ ಮಾತು.

ಕೋಣಾರ್ಕದ ಸೂರ್ಯ ದೇವಾಲಯ ಬಿಟ್ಟರೆ ನಮ್ಮ ನೆನಪಿಗೆ ಬರುವುದು ಗುಜರಾತದ ಮೊಢೆರಾ ಸೂರ್ಯಮಂದಿರ. ಅಹಮ್ಮದಾಬಾದಿನಿಂದ 125 ಕಿಲೋ ಮೀಟರುಗಳ ಅಂತರದಲ್ಲಿದೆ ಮೊಢೆರಾ.

ಮೊಢೆರಾ ಸೂರ್ಯಮಂದಿರದ ನಿರ್ಮಾಣ ಕಾಲ ಕ್ರಿ.ಶ 11ನೆಯ ಶತಮಾನ. ಕ್ರಿಸ್ತಶಕ 1026-27ರಲ್ಲಿ ರಾಜ್ಯಭಾರ ಮಾಡುತ್ತಿದ್ದ ಸೋಳಂಕಿ ವಂಶದ ದೊರೆ ಪ್ರಥಮ ಭೀಮ

ಹೊಂಗಿರಣಗಳು ಈ ದೇವಾಲಯದ ಗರ್ಭಗೃಹವನ್ನು ಪ್ರವೇಶಿಸುವಾಗ ಆದಿತ್ಯ ತನ್ನನ್ನು ತಾನೇ ಹೊನ್ನಿನರಕದಲ್ಲಿ ಅದ್ದಿಕೊಳ್ಳುತ್ತಾನೇನೋ ಎಂದೆನಿಸುತ್ತದೆ. ಕುಸುರಿನ ಕಂಬಗಳ ಅಂಚು. ಕಮಾನಿನ ತೋರಣಗಳಂಚನ್ನು ಹೊಂಗಿರಣಗಳು ಚುಂಬಿಸುವಾಗ ಅವೆಲ್ಲಕ್ಕೂ ಸ್ವರ್ಣಲೇಪ. ಹೀಗಾಗಿ ಆ ಅಪೂರ್ವ ಸಂಧಿಕಾಲ ನಮ್ಮನ್ನು ಸುವರ್ಣ ಮಂದಿರದಲ್ಲಿದ್ದೇವೆಂಬ ಭ್ರಮೆಗೊಳಪಡಿಸುತ್ತದೆ.

ಮಂದಿರ ಪ್ರವೇಶಕ್ಕೆ ಮುನ್ನ ನಮಗೆದುರಾಗುವುದು 'ಸೂರ್ಯಕುಂಡ'. ನಾಲ್ಕು ನಿಟ್ಟಿನ ಮೆಟ್ಟಿಲುಗಳನ್ನಿಳಿದರೆ ನಮಗೆ ಅಸಂಖ್ಯಾತ ದೇವತೆಗಳು ಪ್ರತ್ಯಕ್ಷರಾಗುತ್ತಾರೆ–ಸಾಲು ಸಾಲಾಗಿ. ಕುಂಡದ ಪಶ್ಚಿಮ ದಿಕ್ಕಿಗೆ ಸೂರ್ಯ ಮಂದಿರ.

ಮೊದಲು ಸಭಾಮಂಟಪ. ಅಬ್ಬಾ ಎಂಥ ಕುಸುರಿನ ಕೆಲಸ ಇಲ್ಲಿದೆ. ಇಲ್ಲಿ ನೃತ್ಯ-ಸಂಗೀತ ನಡೆಯುತ್ತಿತ್ತಂತೆ. ಈ ಸಭಾಮಂಟಪದ ಕಮಾನು ಎಷ್ಟು ಕುಸುರಿನದಾಗಿದೆಯೋ ಅಷ್ಟೇ ಕಲಾತ್ಮಕವಾಗಿ ರೂಪುಗೊಂಡಿವೆ ಮಂಟಪದ ಒಳ ಹೊರಗಿನ ಗೋಡೆಗಳು. ಅಸ್ಸಂಖ್ಯ ಕಂಬಗಳು. ಛತ್ತು ಮುಂತಾದವುಗಳೆಲ್ಲೆಲ್ಲ ಕುಸುರಿನ ಕೆಲಸ ಅದ್ಭುತವಾಗಿದೆ.

ಸಭಾಮಂಟಪ ಮತ್ತು ಗರ್ಭಗುಡಿಯ ನಡುವಿನ ಕಿರು ಸಭಾಗೃಹದ ಶಿಲ್ಪಕಲೆಯೂ ಉತ್ಕೃಷ್ಟ. ಅಲಂಕಾರಿಕ ವಿಗ್ರಹಗಳನ್ನು ನೋಡುತ್ತೇವೆ. ಆದರೆ ಇಷ್ಟೆಲ್ಲ ನೋಡಿದ

ಪೂರ್ಣ ಮಂದಿರದ ಸಾಮಾನ್ಯ ನೋಟ

ಅಪರೂಪದ ಶಿಲ್ಪ ಸಂಪತ್ತು

ಮೋನಿಯರ್ ವಿಲಿಯಮ್ಸ್ ಸಂದರ್ಶಿಸಿದಾಗ–

"ಈ ದೇವಾಲಯದ ರೂವಾರಿಗಳಾರು? ಅವರನ್ನು ಅವನ ಕಾಲಿಗೆ ಬೀಳುತ್ತೇನೆ ಅಷ್ಟೇ!

ಹುಡುಗಿ ಜೋರಾಗಿ ಕೂಗಿದಳು. "ನಿನಗ್ಯಾಕ್ರೀ ತಲೆಹರಟೆ? ನಾನು ಈ ಕಂಪೆನಿ ಮಾಲಿಕರ ಮಗಳು. ನಮ್ಮಪ್ಪ ಹೇಳಿದ್ರೂ ಒಂದೇ; ನಾನು ಹೇಳಿದ್ರೂ ಒಂದೇ. ನಿಮಗೆ ನಿಮ್ಮ ನೌಕರಿ ಉಳೀಬೇಕು ಅನ್ನೋ ಆಸೆ ಇದ್ರೆ ಒಬೇ ಮೈ ಕಮ್ಯಾಂಡ್ಸ್...."

ಪ್ರಜಾವಾಣಿ
10-8-1986

ಸಾಪ್ತಾಹಿಕ ಪುರವಣಿ

ಇಲ್ಲಿ, ಸಜೀವನಾಗನಿಗೆ ಸಂಭ್ರಮದ ಪೂಜೆ

ಇಂದು ನಾಗರಪಂಚಮಿ. ಹಿಂದೂಗಳಿಗೆ ಇದು ಅಣ್ಣತಮ್ಮಂದಿರು. ಅಕ್ಕತಂಗಿಯರ ಹಬ್ಬ. ಇಂದು ಕಲ್ಲುನಾಗನಿಗೆ ಅಥವಾ ಬೆಳ್ಳಿ ನಾಗನಿಗೆ ತನಿ ಎರೆದು ಬೆನ್ನಿಗೆ ಹಾಲು ತುಪ್ಪ ಹಚ್ಚಿಕೊಳ್ಳುತ್ತಾರೆ. ಆದರೆ ಕರ್ನಾಟಕದ ಗಡಿಗೆ ಸಮೀಪದಲ್ಲಿರುವ ಬತ್ತೀಸ ಶಿರಾಳ ಎಂಬ ಊರಿನಲ್ಲಿ ಜೀವಂತನಾಗನ ಪೂಜೆ ಇಂದು ಬಲು ಸಂಭ್ರಮದಿಂದ ನಡೆದಿದೆ. ಶತಮಾನಗಳ ಹಿಂದೆ ಇಲ್ಲಿ ಪ್ರಾರಂಭವಾದ ಜೀವಂತ ನಾಗನ ಪೂಜೆ ಈಗ ಮನೆ ಮನೆಗಳಲ್ಲಿ ಮಾತ್ರವಲ್ಲ ಒಂದು ಜಾತ್ರೆಯಾಗಿ ಮಾರ್ಪಟ್ಟು ಸಮುದಾಯದ ಆಚರಣೆಯಾಗಿ ನಡೆದಿದೆ. ಜೀವಂತನಾಗನ ಪೂಜೆ ಮತ್ತು ಅದ್ದೂರಿಯ ಮೆರವಣಿಗೆ ದೇಶವಿದೇಶಗಳಿಂದ ಲಕ್ಷಾಂತರ ಮಂದಿಯನ್ನು ಆಕರ್ಷಿಸುತ್ತಿದೆ.

ವರ್ಣ ಪಾರದರ್ಶಿಕೆ-ಲೇಖನ
ಎನ್.ಸಿ. ದೇಸಾಯಿ

ಮನೆಯಲ್ಲಿ ಹಾವು ಬಂತೆಂದರೆ ಹುಡುಕಿ. ಹೊಡೆದು. ಕೊಲ್ಲುತ್ತೇವೆ. ಅದು ವಿಷಹಾರಿ ಜೀವಕ್ಕೆ ಅಪಾಯ ಎಂಬುದೇ ಈ ಕೃತ್ಯಕ್ಕೆ ಮೂಲ.

ನಾಗಪಂಚಮಿ ಬಂತೆಂದರೆ ಅದೇ ನಾಗನ ಶಿಲೆ. ಮಣ್ಣಿನ ಮೂರ್ತಿಗೆ ಪೂಜಿಸಿ ಹಾಲೆರದು ಕೈಮುಗಿಯುತ್ತೇವೆ.

ಆದರೆ ಮಹಾರಾಷ್ಟ್ರದ ದಕ್ಷಿಣ ತುದಿಯಲ್ಲಿ, ಕರ್ನಾಟಕದ ಗಡಿಗೆ ಹತ್ತಿರದಲ್ಲಿ ಸಾಂಗಲಿ ಜಿಲ್ಲೆಯಲ್ಲಿ 'ಬತ್ತೀಸ ಶಿರಾಳ' ಎಂಬುದೊಂದು ಹತ್ತುಸಾವಿರ ಜನಸಂಖ್ಯೆಯ ತಾಲ್ಲೂಕು ಸ್ಥಳ ಇದೆ. ಅಲ್ಲಿ ಪೂರ್ವದಿಂದಲೇ ನಾಗಪಂಚಮಿಯದಿನ ಪ್ರತಿ ಮನೆಯಲ್ಲೂ ಸಜೀವ ನಾಗಗಳು ಪೂಜೆಗೊಳ್ಳುತ್ತಿದ್ದವು. ಈಗ ಈ ಹಬ್ಬ ಒಂದು ಜಾತ್ರೆಯಾಗಿ ಪರಿಣಮಿಸಿದೆ.

ಈ ಊರಲ್ಲಿ ಜೀವಂತ ನಾಗರಪೂಜೆ ಪ್ರಾರಂಭವಾದುದೇ ಒಂದು ಆಶ್ಚರ್ಯಕರ ಘಟನೆಯಿಂದ.

ಶತಮಾನಗಳ ಹಿಂದಿನ ಮಾತು. ಇದು [illegible]

ಸಾಪ್ತಾಹಿಕ ಸೌರಭ

ಭಾನುವಾರ

ಸಂಯುಕ್ತ ಕರ್ನಾಟಕ

ದಿನಾಂಕ 2-8-1992

'ಬತ್ತೀಸ ಶಿರಾಳ': ಸಜೀವ ನಾಗಾರಾಧನೆಯ ಕ್ಷೇತ್ರ

ತೋದಿಕೊಂಡಳು !....

ಇದನ್ನೆಲ್ಲ ಶಾಂತಚಿತ್ತದಿಂದ ಆಲಿಸುತ್ತಿದ್ದ ಸಾಧು, ಆಗಿಹೋದ ಘಟನೆಗೆ ಚಿಂತಿಸುವದು ಬೇಡ ಎಂದು ಹೇಳಿ ಏನೋ ನೆನಪಾದವರಂತೆ ಭಿಕ್ಷುವಿನ ಪ್ರಶ್ನೆ "ಏನು ಜೀವಂತ ನಾಗನ ಪೂಜೆಯಲ್ಲಿ ಮಗ್ನರಾಗಿದ್ದಿರಾ?..... ಎಂದು ಕೇಳುತ್ತಾನೆ. ಆಶ್ಚರ್ಯಭರಿತಳಾದ ಆ ಸಾಧ್ವಿ ಉತ್ತರಿಸುತ್ತಾಳೆ. "ಏನು ಪಂಚಮಿಯಂದು ಜೀವಂತ ನಾಗನನ್ನು ಯಾರಾದರೂ ಪೂಜಿಸಿದ್ದನ್ನು ನೀವು ಕೇಳಿದ್ದೀರಾ, ನೋಡಿ...ರಾ?" ಎಂದು ಸ್ವಲ್ಪ ಕುಪಿತಳಾಗಿಯೇ

ಜನಸಮೂಹವನ್ನು ಸೀಳಿಕೊಂಡು ಹೇಗೆ ಮನೆ ಒಳಗೆ ಸೇರಿರುತ್ತಾಳೆಯೋ ಅದೇ ರೀತಿ ಓಡಿ ಹೊರಬರುತ್ತಾಳೆ. ಮತ್ತೊಮ್ಮೆ ಭಿಕ್ಷುವನ್ನು ಕಾಣುವ ಆತುರ. ಅಲ್ಲಲ್ಲಿ ಅರಸಿದ ಮೇಲೆ ಅವನೂ ಸಿಗುತ್ತಾನೆ. ದೂರದಿಂದಲೇ ಇವಳನ್ನು ನೋಡಿದ ಅವನಿಗೆ 'ನಗು'. ಆದರೆ ಗಂಭೀರ ಮುದ್ರೆಯಲ್ಲಿಯೇ ಇರುತ್ತಾನೆ.....

ಆ ಮಹಿಳೆ ನಡೆದುದನ್ನೆಲ್ಲ ವಿವರಿಸುತ್ತಾಳೆ. ಕೇಳಿದ ಸಾಧು 'ಅಮ್ಮಾ ಈ ಭಸ್ಮವನ್ನು

ಕರ್ನಾಟಕ - ಮಹಾರಾಷ್ಟ್ರ ಗಡಿಭಾಗದ ಸಾಂಗಲಿ

ನಲ್ಲಿ. ಮಹಾಜನ ಮನೆತನದಲ್ಲಿ ಆಕಸ್ಮಿಕವಾಗಿ ನಾಥಪಂಥೀಯ ಸಾಧುವಿನ ಪವಾಡದಿಂದ ಪ್ರಾರಂಭವಾದ ಈ ಪೂಜೆ ಕೆಲಕಾಲ ಹಾಗೇ ನಡೆದುಕೊಂಡು ಬಂದಿರುತ್ತದೆ. ಅದು ಕೇವಲ ಮಹಾಜನ ಮನೆತನದಲ್ಲಿ ಮಾತ್ರ. ನಂತರ ಈ ಪೂಜೆ ಯಾವಾಗ ಮುಗ್ಗಿಹೋಯಿತೆಂಬುದರ ಅರಿವಿಲ್ಲ. ನಿಂತುಹೋದುದು ಮಾತ್ರ ನಿಜ.

ಪುನರುತ್ಥಾನ

ಬತ್ತೀಸ ಶಿರಾಳದಲ್ಲಿ ದಂತಕಥೆಯಾಗಿ ಉಳಿದಿದ್ದ ಈ ಘಟನೆಗೆ ಚೈತನ್ಯ ಬಂದುದು ಬಹುಶಃ ಮುಕ್ಕಾಲು ಶತಮಾನದ ಹಿಂದೆ ...ಮನೆತನದ ...

ಇದೆ. ಅವರ ಕಸುಬೇ ಅದು. ಆದರೆ, ಬತ್ತೀಸ ಶಿರಾಳದಲ್ಲಿ ಇದೊಂದು ಧಾರ್ಮಿಕ-ಸಾಂಸ್ಕೃತಿಕ ಕಾರ್ಯವಾಗಿ ಬೆಳೆದುಬಂದಿದೆ.

ದಿನಗಳೆದಂತೆ ಈ ಸಜೀವ ನಾಗಪೂಜೆ ಕೇವಲ ಮಹಾಜನ ಮನೆತನಕ್ಕೆ ಮಾತ್ರ ಸೀಮಿ...

ಬತ್ತೀಸ ಶಿರಾಳದ ತರುಣರ ಹುಮ್ಮಸ್ಸು ಇಮ್ಮಡಿಸಿತು. ಹಬ್ಬದ ಸಡಗರ ಉಬ್ಬತೊಡಗಿತು. ಇಂದು ಅದು ವಿಜೃಂಭಣೆಯ ಹಬ್ಬವಾಗಿ ಬೆಳೆಯುತ್ತಿದೆ.

ಹಾವು ಹಿಡಿಯುವದು ಹೇಗೆ ?

ಉತ್ಸವವೇನೋ ನಡೆಯುತ್ತದೆ. ಅದಕ್ಕೆ ಬೇಕಾಗುವ ಸರ್ಪಗಳನ್ನು ಹಿಡಿದು ತರುವದು ಹೇಗೆ? ನಾನು ಈ ಊರಿಗೆ ಹೋಗುವ ಮೊದಲು ಊಹಿಸಿದ್ದೆ. ಬೇರೆ ಹಬ್ಬದಂದೇ ತರುತ್ತಾರೆಂದು ನನ್ನ ಭಾವನೆಯಾಗಿತ್ತು. ಅಲ್ಲ ಈ ಕಾರ್ಯ ಗುರುಪೂರ್ಣಿಮೆ ಮುಗಿಯುತ್ತಿದ್ದಂತೆ ಪ್ರಾರಂಭವಾಗುತ್ತದೆ. ಅಂದರೆ ಹಬ್ಬಕ್ಕೆ

ಸೌರಭ ವೈವಿಧ್ಯ.....

ಕಥೆ

II



III

ಕನ್ನಡಪ್ರಭ

ವಾಚಕರ ವಿಹಾರ

ಭಾನುವಾರ 29-3-1987

ಶಿಲ್ಪಗಳ ಶೈಲಿಗೆ ತನ್ನದೇ ಆದ ವೈಶಿಷ್ಟ್ಯವಿದೆ. ಒಂದೂ ಶಿಲ್ಪದ ಭಾವ ಏಷ್ಟೊಂದಾಗಿದೆ ಎಂದರೆ, ಶಿಲ್ಪದ ಕೆಲವೇ ಭಾಗವನ್ನು ನೋಡಿದರೆ ನಮ್ಮ ಕಣ್ಣುಗಳನ್ನೇ ನಾವು ನಂಬಲಾಗುವದಿಲ್ಲ. "ಇದು ಜಿಪ್ಸಿವರ್ ಶಿಲ್ಪವೇ" ಎಂಬ ಶಂಕೆ ಬಾರದೇ ಇರುವದಿಲ್ಲ.

ಇಂಥ ಒಂದು ಪ್ರಸಂಗವೇ ನನ್ನನ್ನು ಈ ಲೇಖನಕ್ಕೆ ಪ್ರಚೋದಿಸಿದ್ದು ಎನ್ನಬೇಕು.

ಇತ್ತೀಚಿನ ಅಹಮದಾಬಾದ ಪ್ರವಾಸದಲ್ಲಿ ನಾನು ಸ್ಥಳಗಳನ್ನು ನೋಡಲು ಹೋಗುವ ಕಾರ್ಯಕ್ರಮವನ್ನು ಇಟ್ಟುಕೊಂಡಿರಲಿಲ್ಲ, ಕಾರಣ ಅವನ್ನೆಲ್ಲ ನಾನು ವಿಷ್ಣೋಸಲ ನೋಡಿದ್ದೆ. ಈ ಪ್ರಸಂಗದಲ್ಲಿ ಆಕಸ್ಮಿಕವಾಗಿ ಹೊಂದಿದವರು ಅವೇಗೋಪುರವನ್ನು [illegible] ದೆವು. [illegible] ಗೋಪುರಗಳ ಹತ್ತಿರವೂ ಹೋದೆವು. ಈ ಸಲ ಅವನ್ನು ನೋಡುತ್ತಿದ್ದಾಗ [illegible] ಹೊಸ ಅನುಭವವೇ ಆಗತೊಡಗಿತು.

ಈ ಜೋಡು ಗೋಪುರಗಳು. ಅವುಗಳ ಶಿಲ್ಪ ತಂತ್ರಕ್ಕಾಗಿ ಅತಿಪ್ರಸಿದ್ಧ. ಈ ಗೋಪುರಗಳು. ಸಾರಂಗಪುರಗೇಟಿನ ಹೊರವಲಯದಲ್ಲಿ [illegible] ಮಸೀದಿಯ ಎದುರಿನಲ್ಲಿವೆ. ಇವುಗಳ ತಂತ್ರವೇನೆಂದರೆ, ಮೂರು ಅಂತಸ್ತಿನ ಈ ಗೋಪುರಗಳು. ಮಧ್ಯದ ಒಂದು ಮಾಳಿಗೆಯಿಂದ ಸಂಪರ್ಕವಾಗಿವೆ. ಒಂದು ಗೋಪುರದ ಮೇಲೆ ನಿಂತು, ಬೇರಾರ ಕಿವಿಯನ್ನೂ, ಯಾವುದೋ ತಟ್ಟಿದ ಭಾಗವನ್ನು ಹಿಡಿದು ಜೋತು ಹಾಕಿದರೆ (ಅಲ್ಲಾಡಿಸಿದರೆ) ಎರಡನೆಯ ಗೋಪುರ ಹಿಗ್ಗೊಂಡು ತಾನು ಅಲುಗಾಡುತ್ತದೆ. ಅಲ್ಲಿ ನಿಂತವನಿಗೆ ಅದರ ಭಾಸ ಸ್ಪಷ್ಟವಾಗಿ ಮನವರಿಕೆಯಾಗುತ್ತದೆ! ಇನ್ನೇನು ಏನಾದರೂ ಬಿದ್ದು ಬಿಡುವದೋ ಎಂಬ ಭಯವೂ ಆವರಿಸುತ್ತದೆ. ಆದರೆ, ನೂರಾರು ವರ್ಷಗಳಿಂದಲೂ ಇದು

ವಿಶ್ವದ ವಿಚಿತ್ರ ಈ ಗೋಪುರಗಳ ಶಿಲ್ಪ ತಂತ್ರ

ಬಿ[illegible] [illegible] ರಾಜಧಾನಿ [illegible] [illegible] ಆದ [illegible]

ಈ [illegible] ಕ್ರಿ.ಶ. [illegible]

ಸುಲ್ತಾನ ಅಹಮದ್‌ಶಹಾ ಎಂದರು ಈ ನಗರಕ್ಕೆ ಅವನ ಹೆಸರು.

ಇಲ್ಲಿ ಅಹಮದಶಹಾ ಒಮ್ಮೆ ತಂಗಿದ್ದಾಗ, ಮೊಲಗಳು ಬೇಟೆಗಾರರಿಗೆ ಹೆದರದೆ ಪ್ರತಿಭಟಿಸಿದವಂತೆ ಈ [illegible] ರಹಸ್ಯಗೆ ಅದ್ಭುತ [illegible] ಈ ಸ್ಥಳದಲ್ಲಿ [illegible] ಒಂದು ಮಹತ್ವವಿದೆ ಎಂದು ಭಾವಿಸಿದ ಅಹಮದ್ಶಹನು, ರಾಜಧಾನಿಯನ್ನೇ ಇಲ್ಲಿ ನಿರ್ಮಿಸಲು ನಿರ್ಧರಿಸಿದ ಪರಿಣಾಮವಾಗಿ ಈ ನಗರ ನಿರ್ಮಾಣವಾಯಿತು ಸಾಬರಮತಿ ನದಿಯ ದಂಡೆಯ ಮೇಲಿರುವ ಈ ನಗರವು ನಿರ್ಮಾಣವಾದ [illegible] "ಕರಣಾವತಿ" ಎಂದು ಕರೆಯಲ್ಪಡುತ್ತಿತ್ತು [illegible] ಇಲ್ಲಿ ನಗರವನ್ನು ನಿರ್ಮಿಸಬೇಕೆಂದು [illegible]

ಬೇಟಲಿಸಿದವರು ಅವನ ಗುರುಸ್ಥಾನದಲ್ಲಿದ್ದ ಮುಸ್ಲಿಂ ಸಂತರಾಗಿದ್ದ "ಅಹಮದ್ ಗಂಜ ಬಕ್ಷ" ಅವರು.

ಪಶ್ಚಿಮ ಭಾರತದಲ್ಲಿ ಎರಡನೇಯ ನಗರವಾಗಿರುವ ಅಹಮದಾಬಾದ [illegible] ಪೂರ್ವ ಪಶ್ಚಿಮದಲ್ಲಿ ನಿರ್ಮಾಣವಾದ ವಾಸ್ತು

ಹಿಗ್ಗುತ್ತ ನಡೆದು ಬಂದಿದೆ. ಇದು ವಿಶ್ವದ ವಿಚಿತ್ರಗಳಲ್ಲಿ ಒಂದು ಎನಿಸಿದೆ. ಇದು ಅದರ ಶಿಲ್ಪ ತಂತ್ರಕ್ಕೆ ಸೇರಿದ ವಿಷಯ.

ಇಂಥದೇ ಇನ್ನೊಂದು ಅವೇಗೋಪುರಗಳು ಅಹಮದಾಬಾದಿನ ರಾಜಪೂರ ಗೋಮತಿಪುರದ [illegible] "[illegible] ಬಿಬಿ"ಯ ಮಸೀದೆ ಎಂದು ಕರೆ[illegible]

ಗಳಲ್ಲಿ ಅರಳುತ್ತಿದ್ದ ಶಿಲ್ಪಕಲೆಯು ಸೂಕ್ಷ್ಮತೆ ಅಲ್ಲಿನ [illegible]

[illegible] ಕರ್ನಾಟಕದಲ್ಲಿ [illegible] ಸೀಮೆಯಲ್ಲಿ ಕಸೂತಿ ಬಹುವಾಗಿ ಪ್ರವರ್ಧಮಾನಕ್ಕೆ ಬಂದ ಕಲೆ. ಮೊದಲಿಗೆ [illegible]

[illegible] ದ ಹೊಳಪಿನ ಸೀರೆಗಳ ಮೇಲೆ ವಿವಿಧ ನಕ್ಷೆ [illegible] ಕಸೂತಿಮಾಡಿ [illegible]

ಲಾವಣ್ಯಕ್ಕಿನ್ನೊಂದು ಹೆಸರು ಕಸೂತಿ ಸೀರೆ !

[illegible] ಈ ಮೇಲೆ ಹೇಳಿದ ವಾದಕ್ಕೆ ಪುಷ್ಟಿ ನೀಡುತ್ತವೆ. ಅವುಗಳೊಂದಿಗೆ ವನ್ಯ ಪ್ರಾಣಿಪಕ್ಷಿಗಳು - ಹುಲಿ, ಆನೆ, ನವಿಲು ಮುಂತಾದವು - ನಿಸರ್ಗದಲ್ಲಿನ ಗಿಡಮರ, [illegible] ವಿನ್ಯಾಸ ಮಾತ್ರ ಕಾಲದಿಂದ ಕಾಲಕ್ಕೆ ಬದಲಾಗುತ್ತಾ

[illegible] ಬಂದುಗಳ ಮದುವೆ ಸೀರೆಗೆ ಕಡ್ಡಾಯವಾಗಿತ್ತು. [illegible] ಪದ್ಧತಿ ಸಡಿಲಾಗಿದ್ದರೂ ಸಂಪೂರ್ಣ ನಶಿ[illegible] [illegible] ಯನ್ನು ವಿವಾಹದ ಸಂದರ್ಭದಲ್ಲಿ ನೀಡಿ ಇಂದಿಗೂ ಸಂಪ್ರದಾಯ ಪಾಲಿಸುತ್ತಾರೆ.

ಫ್ಯಾಶನ್ ಅಲೆ ಕಸೂತಿಕಲೆಗೂ ಪೆಟ್ಟುಕೊಟ್ಟಿತ್ತು. [illegible] ಚಕ್ರದಲ್ಲಿ ಮೇಲೆ ಬಂದು ಕಸೂತಿ ಜನಪ್ರಿಯತೆಯನ್ನು ಮರಳಿ ಪಡೆದಿದೆ. ಬರೀ ಸೀರೆಗಳಿಗೆ ಮಾತ್ರ [illegible]

ಗ್ರಾಮೀಣ ಪ್ರದೇಶದಲ್ಲಿ ಹುಟ್ಟಿ, ಜನಪದ ಕಲೆಯಾಗಿ ಬೆಳೆದ ಕಸೂತಿ ಕ್ರಮೇಣ ತನ್ನ ತಂತ್ರ, ಪದ್ಧತಿ, ವಿಶಿಷ್ಟತೆ, ವಿಸ್ತರಿಸಿಕೊಂಡಿದೆ. ಇಂದಿಗೂ [illegible] ಬದಿಯಲ್ಲಿ ಹೆಣೆಯುವ ಮುಂಗಿ ಪಟ್ಟಿ, ಪಡವಲ ಹೂ, ತೆಂಗಿನಪಟ್ಟಿ, ಕಾಯಿಪಟ್ಟಿ, ಶಂಖಮರಗಿ ಪಟ್ಟಿ, [illegible]

ಚಿತ್ರಲೇಖನ:

ಎನ್.ಸಿ. ದೇಸಾಯಿ

[illegible] ನವಿಲು ದೀಪ, ಹೂದಾನಿ, ಪಕ್ಷಿದೀಪ, ಚದುರಂಗ [illegible]

ರಸ್ತೆ ಬದಿಯಲ್ಲಿ ತಯಾರಾಗುವ ಈ ಕಲಾಕೃತಿಗಳ ಹಿಂದೆ ನಾವು ಕಾಣದ ಬೇರೊಂದು ಜಗತ್ತೇ ಇದೆ. ರಾಜಾಸ್ಥಾನದಿಂದ ದೇಶದ ವಿವಿಧ ಭಾಗಗಳಿಗೆ ವಲಸೆ ಹೋಗಿ ಜೀವನ ನಡೆಸುವ ಈ ಕಲಾಕಾರರದು ಬಹು ವಿಚಿತ್ರವಾದ ಬದುಕು. ಜೊತೆಗೆ ಅವರು ಎದುರಿಸಬೇಕಾದ ಸಮಸ್ಯೆಯೂ ಅನೇಕ!

ರಸ್ತೆಯ ಬದಿಯಲ್ಲಿ ಅರಳುವ ಕಲೆ

ಚಿತ್ರ-ಲೇಖನ: ಎನ್.ಸಿ. ದೇಸಾಯಿ



ವರಲಕ್ಷ್ಮೀ

ಕೆಲ ಸಮಯದ ಹಿಂದೆ. ಹುಬ್ಬಳ್ಳಿಯ ಇಂದಿರಾ ಗಾಜಿನ ಮನೆಯ ಎದುರಿಗಿನ ರಾಷ್ಟ್ರೀಯ ಹೆದ್ದಾರಿಯಲ್ಲಿ ನಗರ ಬಸ್ಸಿನಲ್ಲಿ ಪ್ರವಾಸ ಮಾಡುತ್ತಿರುವಾಗ ರಸ್ತೆಯ ಬಳಿ ಇದ್ದ ಅತಿ ಆಕರ್ಷಕವಾದ ಬಣ್ಣ ಬಣ್ಣದ ಮೂರ್ತಿಗಳು ಗಮನ ಸೆಳೆದವು. ಇದೇನು ಇಂಥ ಸುಂದರ ಕಲಾಕೃತಿಗಳು ರಸ್ತೆಯ ಬಳಿ ನಿರ್ಮಾಣವಾಗುತ್ತಿವೆಯಲ್ಲ ಎಂದುಕೊಂಡು ನೋಡಿದರೆ ಅಲ್ಲಿ

ಹಾನಗಲ್‌ದಲ್ಲಿ ಹಾದಮ್ಮ...

[illegible] ಹೆಗ್ಗಳಿಕೆಯ ಸಂಗತಿ.

ಚಿತ್ರ-ಲೇಖನ:

ಎಸ್ ಪಿ ದೇಸಾಯಿ

[illegible]

ಪರಾತದ ತುಂಬ ಆವಲಕ್ಕಿಯನ್ನು [illegible] ಮೇಲೆ ತಂಬಾಕಿನೊಂದಿಗೆ (ಹೊಗೆ ಸೊಪ್ಪು) [illegible] ಅಷ್ಟಗೆ ಯಾರಾದರೂ ಹಾಯ್ದರೆ ಅವರ ಬಗ್ಗೆ ಕೊಂಕು ನುಡಿ ಆಡಿ ನಗುವುದೇ ಇವರಿಗೊಂದು [illegible] ಈಗ ಈ [illegible] ಕಡಿಮೆ. ಆದರೆ ಹಾನಗಲ್‌ದಲ್ಲಿ ಅವಲಕ್ಕಿ [illegible]

[illegible]

ನಲ್ಲೆ ಹೊರಟರೆ ಹಾನಗಲ್ಲಿನ [illegible] ಕೆರೆಯಿದೆ. 'ಆನೆಕೆರೆ' [illegible] ಹೆಸರು. ಈ ಕೆರೆಯಲ್ಲಿ ಆನೆಗಳ [illegible] ನಗರ. [illegible] ಕೋಟೆಗಳ [illegible]

[illegible] ಪ್ರಸಿದ್ಧವಾಗಿದೆ [illegible]

[illegible] ಭಾಗಗಳಲ್ಲದೇ ಗರ್ಭಾಲಯವೂ ಉಂಟು.

ಈ [illegible] 60 x 40 ಅಡಿ. ಈ ಮಂಟಪಕ್ಕೆ ಭವ್ಯವಾದ ಜೊತೆಗೆ ಸುಂದರವಾದ ಕೆತ್ತನೆಯಿರುವ ಛತ್ತಿದೆ. ನಂತರದ ಮಂಟಪಕ್ಕೂ ಛತ್ತು ಇದೆ. ಇದು ಕೂಡ ಸೂಕ್ಷ್ಮವಾದ ಕೆತ್ತನೆಯಿಂದ ಕೂಡಿದೆ. ತಿರುವಿಟ್ಟ ಕಮಲದಂತೆ [illegible] ಈ ಛತ್ತು [illegible]

ದೊಡ್ಡ ಮಂಟಪದ ಛತ್ತಿನ [illegible] ಕಂಬಗಳ ಮೇಲೆ [illegible] ಕಲ್ಲಿನಿಂದ

[illegible]

ರಾಜಧಾನಿಯಾಗಿ ಮೆರೆದ ಭಾಗ್ಯ ಇದಕ್ಕುಂಟು. ಬನವಾಸಿಯ ಕದಂಬರು [illegible] ಅಷ್ಟೇ ದೊಡ್ಡವರು. ಪಲ್ಲ ಕದಂಬರಲ್ಲಿಯೇ ಹಾನಗಲ್ಲ ಕದಂಬರು ಹಿರಿಯರು ಎಂದು ಇತಿಹಾಸಕಾರರು ಹೇಳುವುದುಂಟು.

ತಾರಕೇಶ್ವರ ದೇವಾಲಯ

ಇಲ್ಲಿಯ ತಾರಕೇಶ್ವರ ದೇವಸ್ಥಾನ [illegible] ವಾಸ್ತುಶಿಲ್ಪದಲ್ಲಿ [illegible] ಕಲಾತ್ಮಕ [illegible] ಈ ದೇವಸ್ಥಾನ ಕದಂಬರ [illegible]

[illegible]

ಕೆತ್ತಿದ ಪದರುಗಳನ್ನು ಜೋಡಿಸಿದ [illegible] ಇದರ ಮಧ್ಯದ [illegible] ಅದಿ [illegible] ವೈಶಿಷ್ಟ್ಯಪೂರ್ಣ ವಾಸ್ತುಶಿಲ್ಪ [illegible] ಈ ಛತ್ತನ್ನು [illegible] ಕಂಬಗಳಲ್ಲಿ ಅಷ್ಟ ದಿಕ್ಪಾಲಕರು ವಿರಾಜಿಸಿದ್ದಾರೆ.

ಈ ಮಂದಿರಕ್ಕೆ [illegible] ಕಂಬಗಳವೆ [illegible] ಜೊತೆಗೆ ಕೆತ್ತಿದ [illegible] ಅಪ್ಸರ [illegible]

ಈ ಆನೆಗಳ [illegible]

ಈ ಮಂದಿರದಲ್ಲಿ [illegible]

[illegible]

ಮ[illegible] ಸೊಲ್ಲಾಪುರ. [illegible] ಕ್ಷೇತ್ರ [illegible] ವಾತ್ರ.

ಹಿಂದೆ ನಗರವನ್ನು ಸೊನ್ನಲಿಗೆ, ಸೊನ್ನಲಾಪುರ, [illegible] ದೇವಸ್ಥಾನ ಭವ್ಯ ಕೆರೆಯ ಮಧ್ಯವಿದೆ. ಜಲಾಶಯದ ತಿಳಿನೀರಲ್ಲಿನ ಪ್ರತಿಬಿಂಬ [illegible].

[illegible] ಸಿದ್ಧರಾಮ, [illegible] ತ್ರಿವಿಧಿ, [illegible] ತ್ರಿವಿಧಿ, [illegible] ತ್ರಿವಿಧಿ, ಮಂತ್ರಗೋಪ್ಯ, [illegible] 1160ರಲ್ಲಿ [illegible]. 68,000 ವಚನ [illegible] ವಚನವಿದ್ದವೆ.

[illegible] ಮಲ್ಲಿಕಾರ್ಜುನ ಅಂಕಿತದ ಎರಡು ವಚನ 1256ರ [illegible] ಶಾಸನದಲ್ಲಿವೆ. ಸೊನ್ನಲಿಗೆ [illegible] 56ರಲ್ಲಿ [illegible] ದೇವರಾಜ [illegible] ದಾನವಾಗಿ ಕೊಟ್ಟ [illegible] ಶಾಸನ ಇತಿಹಾಸವನ್ನು ಆರ್. ಎಸ್. [illegible] ಕಂಡಿದೆ. ಇದರಿಂದ ಸಿದ್ಧರಾಮರು 1256ರ [illegible], ಸೊನ್ನಲಿಗೆಗೆ ಅಭಿನವ ಶ್ರೀಶೈಲ [illegible] ಚಾರಿತ್ರಿಕ ವ್ಯಕ್ತಿಯೆಂದು ಗೊತ್ತಾಗುತ್ತದೆ. ಮಲ್ಲಿಕಾರ್ಜುನ ದೇವಾಲಯಕ್ಕೆ ದತ್ತಿ [illegible] ಶಾಸನಗಳಿಗೆ ಸಿದ್ಧರಾಮರು ಎರಡೆರಡು ವಚನಗಳನ್ನು [illegible] ಅಭಿಪ್ರಾಯ. ಸಿದ್ಧರಾಮರ [illegible] ಮಲ್ಲಿಕಾರ್ಜುನನಲ್ಲಿ [illegible] ಶಾಸನಗಳು [illegible]. ಸಿದ್ಧರಾಮ ಮಹಾಪುರುಷರೆಂದು [illegible] ಕನ್ನಡ ಸಾಹಿತಿಗಳ ಅಭಿಪ್ರಾಯ.

ವಚನ ಸಾಹಿತ್ಯ ಅಭ್ಯಾಸ ಮಾಡುವ [illegible] ಚನ್ನಬಸಪ್ಪನವರು ಸಿದ್ಧರಾಮ ಸಾಹಿತ್ಯ, ಆತನ ಧಾರ್ಮಿಕ [illegible] ಜೀವನ, ಆತನ ಬಗ್ಗೆ [illegible] ಸಿದ್ಧರಾಮ–ಸಾಹಿತ್ಯ–ಸಂಗ್ರಹ ಹೊತ್ತಿಗೆ [illegible]. [illegible] ಅವರ ಗ್ರಂಥದಲ್ಲಿವೆ.

ವಿಘ್ನೇಶ್ವರ – ಅಮೃತಲಿಂಗ ಮಂದಿರ

ಸೊಲ್ಲಾಪುರದ ಸಿದ್ಧರಾಮನ ಜಾತ್ರೆಯ ನೆನಪುಗಳು

● ಎನ್. ಸಿ. ದೇಸಾಯಿ

ದೇವಾಲಯದ ಸುಂದರ ನೋಟ

'ಬಸವಸ್ತೋತ್ರ ತ್ರಿವಿಧಿ'ಯ ಒಂದು ಪದ:

ಪ್ರಥಮಂತು ಬಸವಣ್ಣ, ದ್ವಿತೀಯಂತು ಲಿಂಗವು;
ತೃತೀಯಂತು ತತ್ವ ಬ್ರಂಹಾಡ ಕಲ್ಲ;
ಅಕಳಂಕ ಗುಣನಿಧಿ ಚಿದಾನಂದ ಬಸವಂಗೆ;
ಬಕುತನಾದೆನು ಗುರುವೆ ಯೋಗಿ.

ಸೊನ್ನಲಿಗೆ ಮುದ್ದಯ್ಯ –ಸುಗ್ಗವ್ವ ದಂಪತಿಗಳಿಗೆ ಪೂಜೆಪುನಸ್ಕಾರ ನಿತ್ಯಕಾಯಕ. ಇಳಿವಯಸ್ಸು ಬಂದಂತೆ ಸಂತಾನವಿಲ್ಲದ ಕೊರಗು. ಆಗ ಶಿವಸಿದ್ಧ ಚಕ್ರವರ್ತಿ ರೇವಣಸಿದ್ಧೇಶ್ವರರು ರಾಣಿ ಚಾಮಲಾದೇವಿಯೊಂದಿಗೆ ಸೊನ್ನಲಿಗೆ ಬಳಿ ಶಿಷ್ಯಸಮೂಹದೊಂದಿಗೆ ಪಲ್ಲಕ್ಕಿ ಪ್ರವಾಸದಲ್ಲಿರುತ್ತಾರೆ. ಊರಿನ ಹೊರವಲಯದಲ್ಲಿದ್ದಾಗ ರೇವಣಸಿದ್ಧರು ಕೈಯಿಂದ ಸಂಜ್ಞೆಮಾಡಿ, ಪಲ್ಲಕ್ಕಿಯಿಂದ ಇಳಿದು ಮುದ್ದಯ್ಯ–ಸುಗ್ಗವ್ವೆ ದಂಪತಿಗಳ ಮನೆಗೆ ನಡೆಯುತ್ತಾರೆ. 'ಗುರುವೆ, ತಮ್ಮಂಥವರು ಇಂಥ ಬಡವನ ಮನೆಗೆ ಪಾದಚಾರಿಯಾಗಿ ಬರಬೇಕೆ,' ಎಂದ ರಾಣಿ ಚಾಮಲಾದೇವಿಗೆ, 'ಮಹಾರಾಣಿ, ಇಲ್ಲಿ ಶಿವನ ಅವತಾರವಾಗುವುದೆಂಬ ಭಾವನೆ ಮಿಂಚಿತು, ಎಂತಲೇ ನನ್ನ ದೇಹ ಪಲ್ಲಕ್ಕಿಯಿಂದ ಭೂಮಿಗಿಳಿಯಿತು,' ಎನ್ನುತ್ತಾರೆ. ದಂಪತಿಗಳು ಪಾದಪೂಜೆ ಮಾಡಿದಾಗ, ಸುಗ್ಗವ್ವೆಗೆ, 'ನೀನೊಬ್ಬ ಮಹಾಪುರುಷನಿಗೆ ಜನ್ಮ ಕೊಡುವವಳಿದ್ದೀಯ,' ಎಂದು ಹೇಳುತ್ತಾರೆ. ಸುದ್ದಿ ಹರಡಿ ಅವರ ಮನೆ ಯಾತ್ರಾಸ್ಥಳವಾಗುತ್ತದೆ.

ಸುಗ್ಗವ್ವೆಗೆ ಗಂಡುಮಗುವಾದಾಗ ಧೂಳಿಮಾಕಾಳ ಎಂದು ಮನೆದೇವರ ಹೆಸರಿಡುತ್ತಾರೆ. ಆದರೆ ಈ ಹೆಸರಿಂದ ಕರೆದರೆ ಮಗುವಿಗೆ ಗಮನವಿಲ್ಲ. ಸಿದ್ಧರಾಮ ಎಂದರೆ ನಗು. ರೇವಣಸಿದ್ಧರು ಸೂಚಿಸಿದ್ದ ಹೆಸರದು.

ಆದರೆ ಮಗು ಬೆಳೆದಂತೆ ದೈವೀಶಕ್ತಿ ಬದಲು, ಮಂಕುತನ ತೋರಿದ ಕಂಡು ದಂಪತಿಗಳಿಗೆ ಆಘಾತ. ಹೆಚ್ಚು ಮಾತಿಲ್ಲ, ಉಳಿದ ಮಕ್ಕಳೊಂದಿಗೆ ಆಟಪಾಠವಿಲ್ಲದೆ ಮೂಲೆಯಲ್ಲೆ ಕಾಲಹರಣ. ಗೋಸೇವೆಯಲ್ಲಿ ಮಾತ್ರ ಆಸಕ್ತಿ. ಎಂತಲೆ ತಂದೆತಾಯಿಯರು ದನಕಾಯಲು ಕಳಿಸಿದರು. ಅಲ್ಲೊಂದು ಶಿವಮಂದಿರ. ಗೋಪಾಲರೆಲ್ಲ ಸಂಜೆ ಶಿವಮಂದಿರಕ್ಕೆ ಹೋಗಿ ದರ್ಶನ ಪಡೆವ ರೂಢಿ. ಇಲ್ಲಿ ಮಾಕಾಳ ತನ್ನ ಬುತ್ತಿಯನ್ನು ಸ್ವಲ್ಪವೇ ಸ್ವೀಕರಿಸಿ ಉಳಿದುದನ್ನು ಗೆಳೆಯರಿಗೆ ಹಂಚುತ್ತಿದ್ದ.

ಅದೊಂದು ದಿನ ತಂದೆ ಬಿತ್ತಿದ್ದ ನವಣೆ ಹೊಲದ ಬದು ಮೇಲೆ ಬಾಲಕನದು ಅದೇನೋ ಧ್ಯಾನ. ಹಾಲು ತುಂಬಿದ ತೆನೆ ಮೇಲೆ ಬಿದ್ದ ಸೂರ್ಯಕಿರಣ ಚಿನ್ನದೆಂಬ ಭಾವನೆ ಮೂಡಿಸುತ್ತಿದೆ. 'ಸಿದ್ಧರಾಮಾ,' ಎಂಬ ಕೂಗು. ಹಿಂತಿರುಗಿದಾಗ ಒಬ್ಬ ಜಂಗಮ. ಬಾಲಕ ಆತನ ಪಾದಕ್ಕೆರಗಿ, ಹೆಗಲ ಕಂಬಳಿ ಹಾಸಿ ಕೂರಿಸುತ್ತಾನೆ. 'ಏಳು ಮಗು,' ಎಂದು ಜಂಗಮರು ಹೇಳುತ್ತಾರೆ. 'ಗುರುವೆ, ತಮ್ಮ ಹೆಸರೇನೆಂದು ಕೇಳಬಹುದೆ' ಎಂದು ಸಿದ್ಧರಾಮನ ಪ್ರಶ್ನೆ. ಜಂಗಮ, 'ಮಲ್ಲಯ್ಯ,' ಎನ್ನುತ್ತಾರೆ. ಸ್ಥಳ' ಶ್ರೀಶೈಲ. ತಾನೂ ಬರಬಹುದೆ ಎಂದಾಗ, ತಂದೆತಾಯಿ ಅಪ್ಪಣೆ ಬೇಕೆಂದು ಹೇಳಿ, ತಮಗೆ ಹಸಿವೆಯೆಂದೂ ಅಂಬಲಿ–ಮಜ್ಜಿಗೆ ತಾರೆಂದೂ ಹೇಳುತ್ತಾರೆ. ಸಿದ್ಧರಾಮ ಮನೆಯಲ್ಲಿ ತಾಯಿಗೆ ವಿಷಯ ತಿಳಿಸಿ ಅಂಬಲಿ–ಮಜ್ಜಿಗೆಯೊಂದಿಗೆ ಹೊಲಕ್ಕೆ ಓಡಿದನಾದರೂ, ಅಲ್ಲಿ ಕಂಬಳಿ ಮಾತ್ರವಿದೆ. ಜಂಗಮ ಮಾಯ.

'ಮಲ್ಲಿನಾಥ ನೀನೆಲ್ಲಿ ಮಾಯವಾದೆ,' ಎಂದು ನಿರಾಶೆಯಿಂದ ಅರಚಿದ ಸಿದ್ಧರಾಮ, ಆತನನ್ನು ಕಾಣದೆ ಮರಳುವುದಿಲ್ಲವೆಂದು ಶಪಥ ಮಾಡಿ ಕಾಡುದಾರಿ, ಕಲ್ಲುಮುಳ್ಳು ಲೆಕ್ಕಿಸದೆ ನಡೆಯುತ್ತಾನೆ.

ಐದನೇ ಪುಟ ನೋಡಿ

ಒಂದನೆ ಪುಟದಿಂದ

ಸೊಲ್ಲಾಪುರದ ಸಿದ್ಧರಾಮ

ಯಾತ್ರಿಕರ ಗುಂಪೊಂದು ಆತನನ್ನು ಶ್ರೀಶೈಲಕ್ಕೆ ಕರೆದೊಯ್ಯುತ್ತದೆ. ಮಗನನ್ನು ಕಾಣದೆ ತಂದೆತಾಯಿ ನವೆಯುತ್ತಾರೆ.

ಶ್ರೀಶೈಲದಲ್ಲಿ ಸಿದ್ಧರಾಮನನ್ನು ಮಲ್ಲಿಕಾರ್ಜುನ ದೇವಾಲಯಕ್ಕೆ ಕರೆದೊಯ್ದ ಯಾತ್ರಿಕರು, 'ನಿನ್ನ ಮಲ್ಲಯ್ಯ ಇಲ್ಲಿದ್ದಾನೆ, ನೋಡು,' ಎಂದಾಗ, ತನಗೆ ಕಲ್ಲು ಮಲ್ಲಯ್ಯ ಬೇಡ, ತಾ ಕಂಡ ಮಲ್ಲಯ್ಯನೆ ಬೇಕು ಎಂದು ಮತ್ತೆ ಹೊರಟ ಸಿದ್ಧರಾಮ, ಅಲೆದ ಲೆದು ಪರ್ವತ ಶೃಂಗ ತಲುಪಿ, ಮಲ್ಲಯ್ಯನನ್ನು ಕೂಗಿ ಸಾಕಾಗಿ ಕೊಳ್ಳಕ್ಕೆ ಧುಮುಕಲು ಸಿದ್ಧನಾಗುತ್ತಾನೆ. ಇನ್ನೇನು ಬೀಳಬೇಕು, ಅಷ್ಟರಲ್ಲಿ ಯಾರೋ ಕೈಹಿಡಿದು ಜಗ್ಗಿದಂತಾಗುತ್ತದೆ. ತಿರುಗಿ ನೋಡಿದರೆ ಅದೇ ಮಲ್ಲಯ್ಯ.

'ನಿನ್ನಿಷ್ಟ ಕೈಗೂಡಿತಲ್ಲ, ಸೊಲ್ಲಾಪುರಕ್ಕೆ ಮರಳಿ ತಂದೆತಾಯಿಯರ ಸಮಾಧಾನ ಮಾಡು,' ಎಂಬ ಮಲ್ಲಯ್ಯನ ಮಾತನ್ನು ಸಿದ್ಧರಾಮ ಕೇಳುವುದಿಲ್ಲ. 'ನಾನೇ ನಿನ್ನೊಂದಿಗೆ ಬರುತ್ತೇನೆ, ಆದರೆ ಈ ರೂಪದಲ್ಲಲ್ಲ, ಲಿಂಗರೂಪದಲ್ಲಿ ಉದ್ಭವಿಸುತ್ತೇನೆ.' ಎಂದು ಮಲ್ಲಯ್ಯ ಭರವಸೆ ನೀಡುತ್ತಾನೆ.

ಇದೇ ವೇಳೆಗೆ ಸೊನ್ನಲಿಗೆ ರಾಜ ನನ್ನಪ್ಪನಾಯಕನ ರಾಣಿ ಚಾಮಲಾದೇವಿಗೆ ಸಿದ್ಧರಾಮನ ಮಲ್ಲಿಕಾರ್ಜುನ ಮಂದಿರಕ್ಕೆ ಸರ್ವಸ್ವನೆರವನ್ನೂ ನೀಡಲು ಪ್ರೇರಣೆಯಾಗುತ್ತದೆ. ಸೋದರ ಬೊಮ್ಮಣ್ಣನೊಂದಿಗೆ ಸಿದ್ಧರಾಮ ಸೊಲ್ಲಾಪುರದ ಮಂದಿರ ನಿರ್ಮಿಸುತ್ತಾನೆ. ಮುಂದೆ ಅಲ್ಲಮಪ್ರಭು ಆದೇಶದ ಮೇಲೆ ಕಲ್ಯಾಣಿಗೆ ಹೋಗಿ ಬಸವಣ್ಣ, ಚನ್ನಬಸವಣ್ಣ, ಮಡಿವಾಳ ಮಾಚಿದೇವ, ನುಲಿಯ ಚಂದಯ್ಯ, ಅಂಬಿಗರ ಚೌಡಯ್ಯ, ಅಕ್ಕಮಹಾದೇವಿ, ಆಯ್ದಕ್ಕಿ ಮಾರಯ್ಯ ಮುಂತಾದವರ ಅನುಭವ ಮಂಟಪದಲ್ಲಿ ಕೆಲಕಾಲ ಕಳೆಯುತ್ತಾರೆ.

ಕಲ್ಯಾಣ ಕ್ರಾಂತಿಯಾದೊಡನೆ ಸೊಲ್ಲಾಪುರಕ್ಕೆ ಮರಳಿದ ಸಿದ್ಧರಾಮರು ಅಲ್ಲೆ ಕೊನೆಗಾಲ ಕಳೆಯುತ್ತಾರೆ; ಸಮಾಧಿ [illegible] ಲ್ಲಿದೆ.

●

ಮುಂದುವರಿದ

ಕೌತುಕಗಳ ಆಗರ–ನಳದುರ್ಗ

(ಒಂದನೇ ಪುಟದಿಂದ)

ಸ್ವಾ. ಸಂಸ್ಕೃತಿ ಪ್ರಚಾರ ಗದಗ

ಶ್ರೀ ಚಿದಂಬರ ಸ್ವಾಮಿಯ ಚಿತ್ರಪ್ರದರ್ಶನದ ಸಿಹಿ-ಕಹಿ ನೆನಹುಗಳು

ಎನ್. ಸಿ. ದೇಸಾಯಿ

ಒಳ್ಳೆಯ ಕೆಲಸ ಮಾಡಬೇಕಾದರೆ ನೂರೆಂಟು ವಿಘ್ನಗಳು. ಧೈರ್ಯದಿಂದ ಅವನ್ನು ಎದುರಿಸಿದಾಗಲೇ ಕಾರ್ಯವು ಕೈಗೂಡುವುದು. ಖ್ಯಾತ ಕಲಾವಿದ, ಛಾಯಾ ಚಿತ್ರಕಾರ ಶ್ರೀ ಎನ್. ಸಿ. ದೇಸಾಯಿ ಶ್ರೀ ಚಿದಂಬರ ಸ್ವಾಮಿಯ ಚಿತ್ರಪ್ರದರ್ಶನ ಏರ್ಪಡಿಸಲು ಮುಂದಾದಾಗ ತಮಗೆ ಬಂದ ಸಿಹಿ-ಕಹಿ ಅನುಭವಗಳನ್ನು ಇಲ್ಲಿ ನಿವೇದಿಸಿದ್ದಾರೆ.

ಮಲಾಪಹಾರಿ ನದಿಗೆ ಒಡ್ಡು ಹಾಕಿ ನವಿಲುತೀರ್ಥದ ನಿರ್ಮಾಣವಾದಾಗ ಅನೇಕ ಹಳ್ಳಿಗಳು ಮುಳುಗಿದವು. ಗುರ್ಲಹೊಸೂರ ಅವುಗಳಲ್ಲಿ ಒಂದು.

ಈ "ಗುರುವಿನ ಹೊಸ ಊರು" (ಗುರ್ಲಹೊಸೂರು) ಎಂದು ಪ್ರಸಿದ್ಧವಾಗಿದ್ದ ಸ್ಥಳ ಶ್ರೀ ಚಿದಂಬರ ಮಹಾ ಸ್ವಾಮಿಗಳ ಕ್ಷೇತ್ರಗಳಲ್ಲಿ ಒಂದು ಮಹತ್ವದ ಸ್ಥಾನವಾಗಿತ್ತು. ಮುರಗೋಡವು ಸ್ವಾಮಿಯ ಮೂಲ ಸ್ಥಾನವಾಗಿದ್ದರೂ, ಈ ಸ್ಥಳದಿಂದ ಸ್ವಾಮಿಗಳು ಮಾಡಿದ ಧಾರ್ಮಿಕ, ಸಾಮಾಜಿಕ, ಕೆಲವಟ್ಟಿಗೆ ರಾಜಕೀಯ ಕಾರ್ಯಗಳು ಬಹುಮಹತ್ವದವು. ಹಾಗು ಇಲ್ಲಿ ನಿರ್ಮಾಣವಾದಿದ್ದ, ಚಿದಂಬರ ದೇವಸ್ಥಾನಗಳು ಭವ್ಯವಾದಿದ್ದವು. ನಡೆಯುತ್ತಿದ್ದ ಉತ್ಸವಗಳು ವಿಜೃಂಭಣೆಯವಾಗಿದ್ದವು. ಇಂಥ ಗುರ್ಲಹೊಸೂರು ನವಿಲುತೀರ್ಥದಲ್ಲಿ ಮುಳುಗಿತು!

ಈ ಗುರುಸ್ಥಾನ-ಚಿದಂಬರರ ಕ್ಷೇತ್ರ ಇನ್ನು ನವಿಲುತೀರ್ಥದಲ್ಲಿ ಲೀನವಾಗುವದೆಂದು ತಿಳಿದಾಗ ಸ್ವಾಮಿಯ ಭಕ್ತವೃಂದ ಈ ಸ್ಥಾನದ ಕೊನೆಯ ದರ್ಶನವನ್ನು ಪಡೆಯಲು ಧಾವಿಸಿತು. ದೂರದ ಮುಂಬೈಯಲ್ಲಿದ್ದ ನನಗೂ ಈ ಇಚ್ಛೆಯಾಯಿತು. ನನ್ನಲ್ಲಿ ಬರೀ ದರ್ಶನದ ಇಚ್ಛೆ ಮಾತ್ರವಾಗಿರಲಿಲ್ಲ. ಇನ್ನು ಕಾಣೆಯಾಗುತ್ತಿರುವ ಆ ಗುರುಸ್ಥಾನ ಕ್ಷೇತ್ರವನ್ನು ಸಾಧ್ಯವಿದ್ದಷ್ಟೂ ವಿವರವಾದ ಛಾಯಾಚಿತ್ರಗಳಲ್ಲಿ ಸೆರೆಹಿಡಿಯಬೇಕೆಂಬುದೇ ಉದ್ದೇಶ. ಈ ಇಚ್ಛೆ ನನಗೆ ಸ್ವಯಂಪ್ರೇರಣೆಯಿಂದಲೇ ಆದುದು, ಯಾರೂ ನನಗೆ ಈ ಬಗ್ಗೆ ಹೇಳಿರಲೂ ಇಲ್ಲ.

ಸರಿ ದಿನವನ್ನು ಗೊತ್ತುಮಾಡಿಕೊಂಡು ಸಕುಟುಂಬನಾಗಿ ಹೊರಟೆ. ನನ್ನ ಕ್ಷೇತ್ರದರ್ಶನದ ಉದ್ದೇಶ ಎರಡು ರೀತಿಯದಾಗಿದ್ದರಿಂದ ಖರ್ಚು ಡಬಲ್ ಏಕೆ ಹೆಚ್ಚೇ ಆಗಿರಬೇಕು. ಪ್ರವಾಸದ ಖರ್ಚಲ್ಲದೇ ಛಾಯಾಚಿತ್ರಕ್ಕೆ ಬೇಕಾಗುವ ಸಲಕರಣೆಗೂ ನಾನು ಹಣವನ್ನು ಅಣಿಮಾಡಿಕೊಳ್ಳಬೇಕಿತ್ತು.

ಸಂಯುಕ್ತ ಕರ್ನಾಟಕ 10-1-1973

ಸಂಕ್ರಾಂತಿಯ ಮೋಜು

(೧ ನೇ ಪುಟದಿಂದ)

ರಟಿಂಹ ಚೌಧರಿಯವರಿಂದ ಸಂಗ್ರಹಾಲಯದ ಉದ್ಘಾಟನೆಯಾಯಿತು.

ಈ ಸಂಗ್ರಹಾಲಯವನ್ನು ಅಹಮದಾಬಾದಿನ "ಸಂಸ್ಕಾರ ಕೇಂದ್ರ"ದಲ್ಲಿ ಅಳವಡಿಸಲಾಗಿದೆ. ಪತಂಗಗಳ ಸಂಗ್ರಹವಲ್ಲದೇ, ಇಲ್ಲಿನ ಟೋಕಿಯೋದಲ್ಲಿದೆ. ಮೂರನೇಯದು ಬಹುಶಃ ಅಮೆರಿಕಾದಲ್ಲಿಯೂ ಆಗಿರುವ ಊಹೆ ಇದೆ.

ಈ ಸಂಗ್ರಹಾಲಯದ ಇನ್ನೊಂದು ವೈಶಿಷ್ಟ್ಯವೆಂದರೆ ಗಾಳಿಪಟಗಳನ್ನು ತಯಾರಿಸುವ

ಗಾಳಿಪಟ ಹಾರಿಸುವ ಸಂಭ್ರಮದಲ್ಲಿ

ಗಾಳಿಪಟದ ಇತಿಹಾಸ, ವಿಜ್ಞಾನಕ್ಕೆ ಅದರ ಕೊಡುಗೆ, ಮನುಕುಲಕ್ಕೆ ಅದರ ಕೊಡುಗೆ ಮುಂತಾದುವನ್ನು ವಿವರಿಸುವ ಇಪ್ಪತ್ತಕ್ಕೂ ಹೆಚ್ಚು ಫಲಕಗಳು ಇಲ್ಲಿವೆ! ಈ ರೀತಿ ಭಾರತದಲ್ಲಿ ಪ್ರಪ್ರಥಮವಾಗಿ ಈ ಗಾಳಿಪಟ ಸಂಗ್ರಹಾಲಯ ಅಸ್ತಿತ್ವಕ್ಕೆ ಬಂದು ವಿಶ್ವದಲ್ಲಿ ಎರಡನೇಯದಾಗಿದೆ. ಮೊದಲಿನದು ಜಪಾ ಪ್ರಾತ್ಯಕ್ಷಿಕೆ, ಅದರಲ್ಲಿ ತಜ್ಞರಾದವರಿಂದ ನಡೆದೇ ಇರುತ್ತದೆ.

ಗಾಳಿಪಟವು ಕ್ರಿ.ಶ ಪೂರ್ವ ನಾಲ್ಕುನೂರು ವರ್ಷ ಮೊದಲೇ ಹುಟ್ಟಿತ್ತೆಂದು ಹೇಳುತ್ತಾರೆ. ಆದರೆ ಇತ್ತೀಚೆಗೆ ಮಾನವನು ವಿಜ್ಞಾನದ ಶೋಧನೆಗೆ ಅದನ್ನು ಉಪಯೋಗಿಸಿದ್ದನ್ನು ಮರೆಯುವಂತಿಲ್ಲ. ಕ್ರಿ.ಶ. ೧೭೫೨ರಲ್ಲಿ ಬೆಂಜಮಿನ್ ಫ್ರಾಂಕ್ಲಿನ್ನನು ಅದನ್ನು ವಿದ್ಯುತ್ ಶೋಧನೆಗೆ ಉಪಯೋಗಿಸಿದರೆ ರೈಟ್ ಬಂಧುಗಳು ವಿಮಾನದ ಶೋಧನೆಗೆ ಉಪಯೋಗಿಸಿದರು, ಹಿಂದೆ ವಾಯು (ಏರಿಯಲ್) ಛಾಯಾಚಿತ್ರಕ ಪತಂಗವನ್ನು ಉಪಯೋಗಿಸಿದರೆ, ಭೂಶೋಧಕರು, ನಾವಿಕರೂ ಇದನ್ನು ತಮ್ಮ ಕಾರ್ಯಗಳಿಗೂ ಉಪಯೋಗಿಸಿದ್ದಾರೆ.

ಕರ್ನಾಟಕದಲ್ಲಿ

ಮಂಡ್ಯ ಜಿಲ್ಲೆಯ ಪಾಂಡವಪುರ-ತಾಲೂಕಿನ "ಚಿಕ್ಕ ಬೇಡರ ಹಳ್ಳಿ"ಯಲ್ಲಿ, ಆಷಾಢಮಾಸದ ಪ್ರಥಮ ವಿಜಯದಶಮಿಯ ದಿನ ಗಾಳಿಪಟ ಹಾರಿಸುವ ಸ್ಪರ್ಧೆ ನಡೆಯುತ್ತದೆ ಎಂದು ಹೊರಗಿನ ಬಹುಜನಕ್ಕೆ ಗೊತ್ತಿಲ್ಲ. ವೀಳ್ಯದೆಲೆಯ ಗಾತ್ರದಿಂದ ಹಿಡಿದು ೬ ಅಡಿ ಅಗಲ ೧೨ ಅಡಿ ಎತ್ತರದ ಪತಂಗಗಳು ಇಲ್ಲಿ ಸಿದ್ಧವಾಗುತ್ತವೆ ಎಂದರೆ-ಆಶ್ಚರ್ಯವಾಗದೇ ಇರದು. ಇಂಥವಕ್ಕೆ ಸೇರುವ ಹಗ್ಗವೇ ದಾರ.

ಈ ಹಳ್ಳಿಯ ಗುರ್ತು "ಪಟದ ಗುರ್ತು." ಅಂದು ಹಳ್ಳಿಗೆ ಹಳ್ಳಿಯೇ ಈ ಚಟ್ಟವನ್ನು ಆವರಿಸುತ್ತದೆ. ಗಂಡು ಮಕ್ಕಳು ಪಟ ಹಾರಿಸುವಲ್ಲಿ ಮಗ್ನರಾಗಿದ್ದರೆ ಹುಡುಗಿಯರು ಬೆಟ್ಟಕ್ಕೆ ಹೋಗಲೆಂದೇ ಸಿದ್ಧಮಾಡಿದ ವಿಶೇಷ ಅಡಿಗೆಯೊಂದಿಗೆ ಹೊಸ ಬಟ್ಟೆಯುಟ್ಟು ಅಲಂಕೃತರಾಗಿ ಬೆಟ್ಟವೇರುತ್ತಾರೆ. ಈ ಹಬ್ಬವನ್ನು ಒಂದು ವಿಹಾರದ ದಿನವಾಗಿ ಆಚರಿಸುತ್ತಾರೆ. ಮಧ್ಯಾಹ್ನದ ಬಿಸಿಲೇರುತ್ತಿದ್ದಂತೆ ತಂದ ಬುತ್ತಿ ಗಂಟನ್ನು ಬಿಚ್ಚುತ್ತಾರೆ. ಬಣ್ಣ ಬಣ್ಣದ ಉಡಿಗೆಯಲ್ಲಿ ಇವರು ಅಡ್ಡಾಡುವಾಗ ಪತಂಗಗಳೇ ಓಡಾಡುತ್ತಿವೆಯೋ ಎಂಬ ಭಾವ ಆವರಿಸುತ್ತದೆ. ಹಳ್ಳಿಯ ಪ್ರತಿ ಮನೆಯವರೂ ಜಾತಿ ಭೇದವಿಲ್ಲದೆ ಈ ಹಬ್ಬಗಳಲ್ಲಿ ಭಾಗವಹಿಸುತ್ತಾರೆ.

ಜಪಾನಿನಲ್ಲಿ ಅಹಮದಾಬಾದಿನಂತೆ ಹಬ್ಬವನ್ನಾಚರಿಸದಿದ್ದರೂ ಪತಂಗ ತಯಾರಿಸುವಲ್ಲಿ ಹಾರಿಸುವದರಲ್ಲಿ ಎತ್ತಿದ ಕೈ. ಅಂತೆಯೇ ಚೀನಾ, ಮಲೇಶಿಯಾ, ಇಂಡೋನೇಶಿಯಾ ಮುಂತಾದಲ್ಲಿ ಇವುಗಳನ್ನು ತಯಾರಿಸುತ್ತಾರೆ, ಹಾರಿಸುತ್ತಾರೆ ಒಂಬತ್ತನೇ ತಿಂಗಳ ಒಂಭತ್ತನೇ ದಿನದಂದು ಚೀನಾದಲ್ಲಿ 'ಪತಂಗದ ದಿನ'ವೆಂದು ಆಚರಿಸುತ್ತಾರೆ.

ಪ್ರಜಾವಾಣಿ ಸಾಪ್ತಾಹಿಕ ಪುರವಣಿ
3-6-1990

ಕರ್ಜಗಿ ಎತ್ತುಗಳ ಓಟ: ಕಾರಹುಣ್ಣಿಮೆಗೆ ಹೊಸ ಕಳೆ

[illegible] ಎರೆಯ ಕರ್ಜಗಿಯ [illegible] ಯುವ ಎತ್ತಿನ ಓಟಗಳ ಸ್ಪರ್ಧೆ ವಿಶಿಷ್ಟವಾದದು. ಈ ದಿನ ಎತ್ತುಗಳಿಗಷ್ಟೇ ಹಬ್ಬವಲ್ಲ ಇಡೀ [illegible] ರೈತ [illegible] ಜನಕನ ಬೆನ್ನೆಲುಬಾದ [illegible] ಮೋವಲಕ್ಷಂತವಾಗಿ ಈ ಹಬ್ಬ [illegible] ಇರುವ ಎತ್ತುಗಳು ಬೇಸಾಯಕ್ಕೆ ಹೋಗ್ತವೇ ಎಂಬುದನ್ನು ಪರೀಕ್ಷಿಸುವುದೇ ಈ ಎತ್ತುಗಳ [illegible]

ಚಿತ್ರ-ಲೇಖನ :
ಎಸ್. ಪಿ. ದೇಸಾಯಿ

ದೀಪಾವಳಿಯ ಹಬ್ಬ ಮುಗಿಯುವ ಸಮಯಕ್ಕೆಂದರೆ [illegible] ಎಕ್ಕಲು ಮುಗಿದಿರುವ ಸಮಯ- ಚಳಿಗಾಲ ಪ್ರಾರಂಭವಾದಂತೆ ಅಲ್ಲಲ್ಲಿ ಜಾತ್ರೆಗಳು ನಡೆಯುವವು. ವರ್ಷವಿಡೀ ದುಡಿದ ರೈತನಿಗೆ ಇವು ಮನರಂಜನೆಯ [illegible] ಇದ್ದಂತೆ- ಖರೀದಿಯ ತಾಣಗಳು ಅಹುದು. ಮುಂದೆ ಬೇಸಾಯಕ್ಕೆ ಬೇಕಾಗುವ ಸಲಕರಣೆ, ಎತ್ತುದನಗಳನ್ನು [illegible] ಸಮಯವೂ ಇದುವೆ.

ಚಳಿಗಾಲ ಮುಗಿದು ಬೇಸಿಗೆ ಕಳೆದು ಮಳೆಗಾಲ ಪ್ರಾರಂಭವಾಗುವ ಸಮಯಕ್ಕೆ ರೈತ ಎಲ್ಲ ರೀತಿಯಿಂದಲೂ ಬೇಸಾಯಕ್ಕೆ [illegible] ಆಗಿರುತ್ತಾನೆ. ತಂದಿರುವ ಎತ್ತುಗಳು ಇದ್ದ ಬಸವಣ್ಣ ದೇಸಾಯಿಕ್ಕೆ ಯೋಗ್ಯನೇ ಎಂದು ನೋಡಬೇಕು. ಈ ಸಮಯಗಳಲ್ಲಿ ಬೇರೆ ಬೇರೆ ಸ್ಥಳಗಳಲ್ಲಿ ವಿವಿಧ ರೀತಿಯ ದನಗಳ ಸ್ಪರ್ಧೆ ನಡೆಯುತ್ತವೆ ಕರ್ಜಗಿಯಲ್ಲಿ ನಡೆಯುವ ಈ ಸ್ಪರ್ಧೆ ಒಂದು ವಿಶೇಷ.

ಕರ್ಜಗಿ [illegible] ಮೊದಲು ಒಂದು ತಾಲ್ಲೂಕು ಸ್ಥಳ (ಧಾರವಾಡ ಜಿಲ್ಲೆ). ಈಗ ಅದು ಹಾವೇರಿ ತಾಲ್ಲೂಕಿನಲ್ಲಿಯ ಒಂದು ಊರು. (ಆದರೂ ಕರ್ಜಗಿ ಹೋಬಳಿ ಎಂದು ಇನ್ನೂ ಕೆಲ ಹಿರಿಯರ ತಲೆಯಲ್ಲಿ ಇದೆ) ವರದಾ ನದಿಯ ದಂಡೆಯ ಮೇಲಿನ ಒಂದು ಪ್ರಶಾಂತ ಸ್ಥಳ. ಈ ಊರು.

[illegible] ಹುಣ್ಣಿಮೆಗೆ ಉತ್ತರ ಕರ್ನಾಟಕದಲ್ಲಿ ಕಾರಹುಣ್ಣಿಮೆ ಎಂದು ಕರೆಯುತ್ತಾರೆ. (ಇದುವೆ ವಟ ಪೌರ್ಣಿಮೆ) ಈ ದಿನ ಅಲ್ಲಲ್ಲಿ ಎತ್ತುಗಳ ಮೆರವಣಿಗೆ, [illegible] ಕಾರ್ಯಗಳು ನಡೆಯುತ್ತವೆ. [illegible] ಈ ಹುಣ್ಣಿಮೆ ಜೂನ್ 8 ರಂದು ಬರುವದು.

ಕರ್ಜಗಿಯಲ್ಲಿ ಈ ಹುಣ್ಣಿಮೆಯಂದು ನಡೆಯುವ ಎತ್ತಿನ ಹಬ್ಬಕ್ಕೊಂದು ವಿಶೇಷ ಮೆರುಗು. [illegible] ಒಂದು [illegible] ಈ ರೀತಿಯ ಹಬ್ಬ- ಬೇರೆಡೆ [illegible]

[illegible]

(ಹೊನ್ನು + ಹುಗ್ಗಿ) "ಬಸವಣ್ಣನ" (ಎತ್ತಿನ ಕಾಲಿಗೆ) ಪಾದಕ್ಕೆ ಹೊನ್ನು ಏರಿಸಿ ಹುಗ್ಗಿಯ ನೈವೇದ್ಯಮಾಡಿ ಬಸವನನ್ನು ಪೂಜಿಸುತ್ತಾರೆ. ಈ ದಿನವನ್ನವರು 'ಹೊನ್ನುಗ್ಗಿ' ದಿನವೆಂದು ಕರೆಯುತ್ತಾರೆ ಕರ್ಜಗಿಯ ಜನ.

ಊರ ಮಧ್ಯೆ ಒಂದು ಚಿಕ್ಕ ದೇವಸ್ಥಾನ. ದೇವಸ್ಥಾನವೆಂದೂ ತಿಳಿಯದು. ಸುತ್ತಲೂ ನಾಲ್ಕು ಗೋಡೆ. ಮೊದಲು ಗುಡಿಯ ಹತ್ತಿರವಿದ್ದ ಬೇವಿನ ಮರವೇ ಚಪ್ಪರವಾಗಿತ್ತು, ಈಗ ತಗಡಿನ ಹೊದಿಕೆಯನ್ನು ಹೊತ್ತು ನಿಂತಿದೆ ಈ ದೇವಸ್ಥಾನ ಮಧ್ಯ ಇರುವದು. ಮೂರ್ತಿಯಲ್ಲ ಒಂದು ಬಂಡೆಗಲ್ಲು 'ಭರಮಪ್ಪ' ದೇವರು ಎಂದು ಕರೆಯುತ್ತಾರೆ. ಆದರೆ ಇದು ಬ್ರಹ್ಮದೇವನ ಮಂದಿರ.

ಬುಧವಾರ ಬ್ರಹ್ಮದೇವನಿಗೆ ವಿಶೇಷ ಪೂಜೆ. ಅಲಂಕಾರ. ಅಂದು ಬೆಳಿಗ್ಗೆ ರೈತರೆಲ್ಲರೂ ತಮ್ಮ ಎತ್ತುಗಳನ್ನು ಮೈದೊಳೆದು ಅಲಂಕರಿಸಿ. ಬ್ಯಾಂಡು. ಬಜಂತ್ರಿಗಳೊಂದಿಗೆ ಮೆರವಣಿಗೆಯಲ್ಲಿ ಬ್ರಹ್ಮದೇವನ ಗುಡಿಗೆ ಬಂದು ಕಾಯಿ ಒಡೆಸಿಕೊಂಡು ಹೋಗುತ್ತಾರೆ. ಈ ಸಮಯದಲ್ಲಿ ಊರಲ್ಲಿಯ ಉತ್ಸಾಹ ನೋಡುವಂತಹದು ಎತ್ತುಗಳನ್ನು ಅಲಂಕರಿಸಿದಂತೆಯೇ ಪುರುಷರು. ಮಹಿಳೆಯರೂ ಹೊಸ ಬಟ್ಟೆಗಳನ್ನು ತೊಟ್ಟು, ಸಿದ್ಧರಾಗಿರುತ್ತಾರೆ. ಮಕ್ಕಳ ಸಂತೋಷಕ್ಕೆ ಎಣೆಯಿಲ್ಲ, ಹಿರಿಯರು ಹೋಗಿ ಎತ್ತುಗಳನ್ನು ಅಲಂಕರಿಸಿದಂತೆ ಇವರು ಹೋರಿಗರುಗಳನ್ನು ಶೃಂಗರಿಸಿರುತ್ತಾರೆ. ಅವುಗಳೊಡನೆ ಆಟ. ಅವುಗಳ ಚಲ್ಲಾಟ ನೋಟಕನ ಮನಕ್ಕೆ ರಸದೂಟ.

ಕರಜಗಿಯಿಂದ ಮದುವೆಯಾಗಿ ಹೊರಹೋದ ಮಹಿಳೆಯರು ತಮ್ಮ ಪತಿ ಮಕ್ಕಳೊಂದಿಗೆ ಈ ಹಬ್ಬಕ್ಕೆ ಬರಲೇಬೇಕು ಹಾಗೆಯೇ ಆಪ್ತರು. ಸ್ನೇಹಿತರೂ ಸೇರಿರುತ್ತಾರೆ. ಅವರಿಗೆಲ್ಲ ಮೃಷ್ಟಾನ್ನ ಭೋಜನವಾದಮೇಲೆ. ಮಧ್ಯಾಹ್ನ ಪ್ರಾರಂಭವಾಗುತ್ತವೆ-"ಕಾರಹುಣ್ಣಿಮೆಯ" ಬಂಡಿಗಳ ಓಡಾಟ. ಸ್ಪರ್ಧೆ ಈ ಸಂದರ್ಭದಲ್ಲಿ ಒಂದು ಮಾತನ್ನು ತಿಳಿಸಬೇಕು ಸ್ಪರ್ಧೆಯೆಂದರೆ ಬಂಡಿಗಳೆಲ್ಲ ಒಟ್ಟಾಗಿ ಓಡುತ್ತವೆ ಎಂಬ ಭಾವನೆ ಬರುವದು ಸಹಜ. ನನ್ನಲ್ಲಿಯೂ ಅದೇ ಕಲ್ಪನೆಯೇ ಇತ್ತು ಆದರೆ. ಬಂಡಿಗಳಿರುವದು ಎರಡೆ. ಅವು ನಿರ್ದಿಷ್ಟ ಮನೆತನಕ್ಕೆ ಸೇರಿವೆ- ಒಂದು 'ಹೊಸಮನೆ'ಯವರದು ಎರಡನೆಯದು. 'ಹಮಣ್ಣನವರ' ಮನೆಯದು. ಈ ಬಂಡೆಗಳನ್ನು ಬಿಟ್ಟ ಮೊದಲದಿನ ಬೇರೆಯ ಯಾರ ಬಂಡಿಗಳು ಓಡಾಡುವದಿಲ್ಲ.

ವೀರಗಾರರು

ಬಂಡಿಯನ್ನು ಯಾರುಬೇಕೆಂದರೆ ಅವರು ಓಡಿಸುವಂತಿಲ್ಲ, ಈ ಕಾರ್ಯಕ್ಕಾಗಿಯೇ ಹಕ್ಕುದಾರರು ಇದಾರೆ. 'ಈರಗಾರರು'(ವೀರಗಾರರು) ಎಂದು ಕರೆಯುತ್ತಾರೆ ಅವರಿಗೆ- ಇವರು ಮಂಗಳವಾರ ಸಾಯಂಕಾಲದಿಂದ ಉಪವಾಸವಿದ್ದು ಹಬ್ಬ ಮುಗಿದದಿನ ಗುರುವಾರ ಸಾಯಂಕಾಲ ಉಪ್ಪೋಷಣ ಮಾಡಬೇಕೆಂಬ ಕಟ್ಟಳೆ ಇದೆಯಲ್ಲದೆ ವೀರಗಾರರಾಗುವವರಿಗೆ ಕೆಲ ನಿಯಮಗಳೂ ಇವೇ. ಮದುವೆಯಾದವನಿರಬೇಕು. ವಿಧುರನಾಗಿರಬಾರದು. ಅಂಗವಿಕಲನಾಗಿರಕೂಡದು ಎಂದು ವೀರಗಾರರ ಹಕ್ಕು ವಂಶಪಾರಂಪರ್ಯವಾಗಿ ಬಂದಿದ್ದು ವೀರಶೈವರಿಗೆ ಮಾತ್ರ ಅದು ಮೀಸಲಾಗಿದೆ. ವೇಷಗಳು. ಎರಡು ದಿನಕ್ಕೆ ಪ್ರತ್ಯೇಕವಾಗಿರುತ್ತವೆ.

ಬುಧವಾರ ಪೂಜೆಗೆ ಮುಂಚೆ ಬ್ರಹ್ಮದೇವನನ್ನು ಮಗ್ಗಲಿನ ಹಳ್ಳಿ ಮಂಟಗಣಿಯಿಂದ ಕರೆತರುತ್ತಾರೆ. ಇಷ್ಟುದಿನ ಅವನು ಅಲ್ಲಿಯೇ ಇರುತ್ತಾನಂತೆ. ಮಂಟಗಣಿಯಲ್ಲಿ ಅವನಿಗೊಬ್ಬ ಪ್ರೇಯಸಿ ಇರುವಳೆಂದು ಅವನು ಅಲ್ಲಿರುತ್ತಾನೆಂದೂ ಕರ್ಜಗಿಯ ಜನ ಹೇಳುತ್ತಾರೆ. ಆದರೆ ಬ್ರಹ್ಮ ಉತ್ಸವವಾದಮೇಲೆ ಯಾವಾಗ ಕಾಲುಕಿತ್ತಿರುತ್ತಾನೆಂಬುದುಮಾತ್ರ ಜನಕ್ಕೆ ತಿಳಿಯದು ಮುಂದಿನ ಉತ್ಸವಕ್ಕೆ ಮತ್ತೆ ಅವನನ್ನು ತರುವದು.

ಒಟ್ಟು ಹದಿನಾಲ್ಕು ಜನ ವೀರಗಾರರು. ಓಡುವ ಬಂಡಿಗಳು ಎರಡು. ಪ್ರತಿ ಬಂಡಿಯಲ್ಲೂ ಏಳೇಳುಜನ ವೀರಗಾರರು. ಇಬ್ಬರು ವೀರಗಾರರು ಮಾತ್ರ ಬಂಡಿಯ ಮೂಕದಮೇಲೆ ಕುಳಿತುಕೊಳ್ಳುವರುಉಳಿದವರು ಬಂಡಿಯಲ್ಲಿ ನಿಂತಿರಬೇಕು. ಬುಧವಾರ ನಡೆಯುವ ಬಂಡಿಯ ಓಟಕ್ಕೇ ರಭಸ ಹೆಚ್ಚು, ಇಂದು ಕಟ್ಟುಮಸ್ತಾದ ಬೇಸಾಯದ ಉಪಯೋಗದಲ್ಲಿದ್ದ ದನಗಳಿಗೆ ಮಾತ್ರ ಪ್ರವೇಶ.

ನಿರ್ದಿಷ್ಟ ಸ್ಥಳದಿಂದ ಈ ಬಂಡಿಗಳ ಓಟ ಪ್ರಾರಂಭವಾಗಿ ಬ್ರಹ್ಮದೇವನ ಗುಡಿಯ ಹತ್ತಿರ ಕೊನೆಗೊಳ್ಳುತದೆ. ಕರ್ಜಗಿಯ ಇಕ್ಕಟ್ಟಾದ ರಸ್ತೆಯಲ್ಲಿ ಈ ರಭಸದ ಓಟ ನೋಡಲು ಒಂದು ರೀತಿಯ ಭಯಹುಟ್ಟಿಸುತ್ತದೆ. ಬಂಡಿಯ ಹಿಂದುಗಡೆಯಿಂದ ಅಸಂಖ್ಯಾತ ಎತ್ತು ಹೋರಿಗಳನ್ನು ಆಯಾ ಮಾಲೀಕರು ಆಳುಗಳು ಓಡಿಸುತ್ತಿರುತ್ತಾರೆ.

ಓಣಿಯ ಇಕ್ಕೆಲದ ಮನೆಯ ಮಾಳಿಗೆಗಳು. ಮಹಿಳೆಯರು ಮಕ್ಕಳು ಮುದುಕರು ಹುಡುಗರುಗಳಿಂದ ಕಿಕ್ಕಿರಿದು ತುಂಬಿರುತ್ತವೆ. ಎಲ್ಲರು ಹೊಸಬಟ್ಟೆಗಳನ್ನು ತೊಟ್ಟು ಜಾತ್ರೆಯ ಸಂಭ್ರಮದಲ್ಲಿ ಬಂದಿರುತ್ತಾರೆ. ತುಂಬಿದ ಜನಸ್ತೋಮ ಬಂಡಿಯ ಹಿಂದೆ ಎತ್ತು ಓಡಿಸುವವರ ಕೇಕೆ. ಚೀರಾಟ. ವೀರಗಾರರ "ಹೋ. ಹೋ" ಎಂಬ ಕೂಗು. ದಿಗಂತವನ್ನೇ ಭೇದಿಸುವದೇ ಎಂಬ ಭಾವನೆ ನೋಡುಗನನ್ನು ಆವರಿಸುತ್ತದೆ.

ವೀರಗಾರರ "ಹೋ. ಹೋ" ಎಂಬ ಕೂಗಿಗೂ ಒಂದು ಹಿನ್ನೆಲೆಯಿದೆ- ಪರಮೇಶ್ವರನು. ಮಲ್ಹಾರಿಯ ಅವತಾರ ತಾಳಿ ಉಳಿದ ದೇವತೆಗಳೊಂದಿಗೆ 'ಮಣಿಮಲ್ಲ'ರನ್ನು ದೇವರಗುಡ್ಡದಲ್ಲಿ ಸಂಹರಿಸಿದ ಯುದ್ಧಕಾಲಕ್ಕೆ ಬ್ರಹ್ಮನು ಕರಜಗಿಯಲ್ಲೇ ಇದನಂತೆ. ಆ ಯುದ್ಧ ಮುಕ್ತಾಯವಾದುದು ಕರಜಗಿಯ ಬಳಿಯಲ್ಲಿಯೇ ಎಂದು ಹೇಳುತ್ತಾರೆ. "ಹೋ. ಹೋ" ಎಂಬ ಅರ್ಜುನ ಯುದ್ಧ ಮುಕ್ತಾಯದ ಸೂಚನೆಯೆಂದೂ ಅದೇ ಕೂಗು ಇಂದಿಗೂ ಉಳಿದುಬಂದಿದೆಯೆಂದು ಇಲ್ಲಿಯ ಜನ ಹೇಳುತ್ತಾರೆ.

ಇಂದು. ವೀರಗಾರರು. ಬಂಡಿಯ ಓಟ ಪ್ರಾರಂಭಿಸುವ ಮೊದಲು- ಪೂಜಾರ ಮನೆಯಲ್ಲಿ ಸಿದ್ಧವಾದ ಹೋಳಿಗೆ ತುಪ್ಪದೊಂದಿಗೆ ನೈವೇದ್ಯಕ್ಕಾಗಿ ಇಂದಿನ ವಿಶೇಷ ವೇಷದಲ್ಲಿ ಮೆರವಣಿಗೆಯಲ್ಲಿ ಬ್ರಹ್ಮದೇವರ ಗುಡಿಗೆ ಬರುತ್ತಾರೆ. ಈ ನೈವೇದ್ಯಕ್ಕೆ 'ತರಗಿನ ಗಣ' ಎಂದು ಕರೆಯುತ್ತಾರೆ. 14 ಜನ ವೀರಗಾರರು. ವಿಶೇಷ ವೇಷದಲ್ಲಿ ಮೆರವಣಿಗೆಯಲ್ಲಿ ಬರುವ ದೃಶ್ಯ ನೋಡುಗನನ್ನು ಒಂದು ಹೊಸ ಜಗತ್ತಿಗೆ ಕರೆಯುತ್ತದೆ.

ಆಯಾ ಮನೆತನದವರು. ತಮ್ಮ ವೀರಗಾರರನ್ನು ಮನೆಗೆ ಕರೆತಂದು. ಮೈಗೆ ಗಂಧಸವರಿ ಪೂಜಿಸುತ್ತಾರೆ. ಅಂದು ಅವರೇ ದೇವರು ಎಂದು ಭಾವಿಸುತ್ತಾರೆ.

ಬುಧವಾರದ ಬಂಡಿ ಈರೀತಿಯಾಗಿ ನಡೆದು. ಸಾಯಂಕಾಲ ವಿಶ್ರಾಂತಿ ಹೊಂದುತ್ತವೆ ಆದರೆ ವೀರಗಾರರು ಇನ್ನೂ ಉಪವಾಸದಲ್ಲಿಯೇ ಇರುತ್ತಾರೆ.

ಗುರುವಾರದ ಬಂಡಿಗಳು

ಇಂದಿನ ಬಂಡಿಗಳಿಗೆ ಒಂದು ವಿಶೇಷತೆ ಬೆಳಿಗ್ಗೆ ಹಾಲುಗರುಗಳಿಗೆ ಈ ಶಿಕ್ಷೆ, ಶಿಕ್ಷೆಯೆಂದರೆ ಶಿಕ್ಷೆಯಲ್ಲ, ಈ ಎಳೆತನದಲ್ಲಿ ಮುಂದೆ ತಾನುನೊಗಕ್ಕೆ ಹೆಗಲುಕೊಡಬೇಕು ಎಂಬ ಅರಿವು ಮಾಡಿಕೊಡಲು ಅವುಗಳನ್ನು ಬಂಡಿಗೆ ಹೂಡಿ ಓಡಿಸುತ್ತಾರೆ. ನಿನ್ನೆಯ ದೊಡ್ಡ ಬಂಡೆಗಲ್ಲ ಇವನ್ನು ಹೂಡುವದು. ಇವುಗಳಿಗಾಗಿಯೇ ನಿರ್ಮಿತವಾದ ವಿಶೇಷ ಬಂಡೆಗೆ ಇವನ್ನು ಹೂಡುತ್ತಾರೆ. ಹಳ್ಳಿಯಲ್ಲಿ ಮಕ್ಕಳು ಆಡುವ ಬಂಡಿಯಂಥರ ಚಿಕ್ಕಗಾಲಿಗಳಿಂದ ಕೂಡಿದ್ದರೂ ನೊಗಮಾತ್ರ ದೊಡ್ಡ ಬಂಡೆಯದೇ!

ಗುರುವಾರ ಮಧ್ಯಾಹ್ನ ಹೋರಿಗಳಿಗೆ ಪ್ರಾಧಾನ್ಯ ಅಂದರೆ ಬೆಳೆದುನಿಂತ ಆದರೆ ಇನ್ನು ವ್ಯವಸಾಯಕ್ಕೆ ಪ್ರವೇಶವಾಗಿರದ ಹೋರಿಗಳನ್ನು ಬಂಡಿಗೆ ಹೂಡಿ ಓಡಿಸುತ್ತಾರೆ-ಈ ಸಂದರ್ಭದಲ್ಲಿ ಮನೆಯ ಹರೆಯದ ಹುಡುಗರದೇ ಎತ್ತಿನ ಕೈ, ಅವರು ಕಾಲೇಜಿನಲ್ಲಿ ಬೇರೆಡೆ ಓದುತ್ತಿರಲಿ ಎಲ್ಲಿಯೋ ನೌಕರಿ ಮಾಡುತ್ತಿರಲಿ ಈ ಸಮಯಕ್ಕೆ ಕರ್ಜಗಿಗೆ ಬರಲು ತಪ್ಪುವದಿಲ್ಲ,

ಕರಕ್ಕಿ ಬಂಡಿ

ಇಂದಿನ ಕೊನೆಯ ಬಂಡಿಗೆ ಕರಕ್ಕಿ ಬಂಡಿ ಎಂದು ಕರೆಯುವರು. ಕರಕ್ಕಿ ಬಂಡಿಯೆಂದರೆ- ಕಂಬಳಿಯಲ್ಲಿ ಜೋಳವನ್ನು ಕಟ್ಟಿಕೊಂಡು ಹೋಗಿರುತ್ತಾರೆ. ಆ ಜೋಳವನ್ನು ಎಲ್ಲರಿಗೂ ಹಂಚುತ್ತಾರೆ. ಈ ಜೋಳವನ್ನು ಬಿತ್ತುವ ಕಾಳಿನಲ್ಲಿ ಬೆರೆಸಿದರೆ ಬೆಳೆ ಹುಲುಸಾಗಿ ಬರುತ್ತದೆ ಎಂಬುದು ಭಾವನೆ. ಬೆಳಿಗ್ಗೆ ನಡೆಯುವ ಬಂಡಿಗೆ 'ಅಗಳಬೇರಿ' ಬಂಡಿಯೆಂತಲೂ ಮಧ್ಯಾಹ್ನದ ಬಂಡಿಗೆ 'ಬಂಡೋಪಂತ' ಬಂಡಿಯೆಂತಲೂ ಕರೆಯುವರು.

ಕರಕ್ಕಿ ಬಂಡಿಯ ವೀರಗಾರರಿಗೆ ಇಂದು ತಲೆಯಲ್ಲಿ ಕೇದಿಗೆಯ ಅಲಂಕಾರ. ಕೇದಿಗೆಯನ್ನು ವಿಶಿಷ್ಟ ಅಲಂಕಾರದಲ್ಲಿ ಕತ್ತರಿಸಬೇಕು. ಕತ್ತರಿಸಿಕೊಡುವ ಕಾರ್ಯ ಶಿಂಪಿಗರದು (ಮರಾಠಾ) ಅಂದು ಅವರು ಊರಲ್ಲಿಲ್ಲದಿದ್ದರೂ ಬರಲೇಬೇಕು.

ಕರಕ್ಕಿ ಬಂಡಿಯೊಂದಿಗೆ ಉತ್ಸವದ ಮುಕ್ತಾಯವಾಗುತ್ತದೆ.

ಕರ್ಜಗಿಯ ಈ ಉತ್ಸವದಲ್ಲಿ ಎಲ [illegible] ಭಾಗವಹಿಸುವ [illegible] ಕಲ್ಪಿಸಿಕೊಟ್ಟಿದ್ದಾರೆ. ಇದೇ ರೀತಿಯ ಉತ್ಸವ ಇದೇ ಸಮಯಕ್ಕೆ ಹುಬ್ಬಳ್ಳಿಯ ಬಳಿ [illegible] ನಡೆಯುತ್ತದೆ ಆದರೆ ಅದು ನಡೆಯುವದು ಬ್ರಾಹ್ಮಣ [illegible] ಮಾತ್ರ.

ಈ ಹಬ್ಬಕ್ಕೆ ಎತ್ತುಗಳನ್ನು [illegible] ಸರಿಯಾಗಿ ಕಟ್ಟುಮಸ್ತಾಗಿ ಇಡುವ [illegible] ಎಂದು ಬೇರೆ ಹೇಳಬೇಕಿಲ್ಲ, ಒಟ್ಟಾಗಿ [illegible] ಬಂದಮೇಲೆ ಕೆಲಕಾಲ ದನಗಳಿಗೆ ವಿಶ್ರಾಂತಿ ಆ ಸಮಯದಲ್ಲಿ ಅವುಗಳಿಗೆ ಸರಿಯಾದ ಕಾಳಜಿ ಮಾಡಲು [illegible] ಕಾರಹುಣ್ಣಿಮೆ ಮುಗಿಯುತ್ತಲೇ ಮತ್ತೆ [illegible] ಹೊಲಗಳಲ್ಲಿಯ ಕೆಲಸ

ಓಟಕ್ಕೆ ಸಿದ್ಧವಾದ ಬಂಡಿ.

ಬಂಡಿಯ ಓಟ ನೋಡಲು ಕಾತರದಿಂದ ಕುಳಿತ ಊರ ಜನರು

ವೀರಗಾರರಿಗೆ ಮನೆ ಮಂದಿಯಿಂದ ಪೂಜೆ.

ಸರ್ವ ಕೋಮುಗಳಿಗೆ ಪೂಜನೀಯ ಮೈಲಾರದೇವ

ನಮ್ಮಲ್ಲಿ ಕೆಲದೇವತೆಗಳು ಎಲ್ಲ ಕೋಮುಗಳ ಜನತೆಯಿಂದ ಸಮಾನ ಭಕ್ತಿಭಾವದಿಂದ ಪೂಜಿಸಲ್ಪಡುವ ದೇವತೆಗಳೆನಿಸಿವೆ. ಅಂತಹ ದೇವತೆಗಳ ಶ್ರೇಣಿಯಲ್ಲಿ ಮೈಲಾರ ದೇವರೂ ಪ್ರಮುಖರು. ಅತ್ಯಂತ ಕಾರಣಿಕ ದೈವವೆನಿಸಿರುವ ಮೈಲಾರ ದೇವರಿಗೆ ಮಲ್ಲಾರಿ, ಮೈಲಾರ ಲಿಂಗ, ಮಾರ್ತಾಂಡ, ಏಳುಕೋಟಿಗ, ಗುಡದಯ್ಯ, ಖಂಡೋಬ ಮುಂತಾದ ಅನೇಕ ಹೆಸರುಗಳಿವೆ. ಮೈಲಾರ ದೇವರು ಉತ್ತರ ಕರ್ನಾಟಕ, ಆಂಧ್ರದ ಕೆಲವು ಭಾಗ, ಮಹಾರಾಷ್ಟ್ರ ಭಾಗಗಳಲ್ಲಿ ಬಹುಪೂಜನೀಯ. ತುಂಗಭದ್ರೆಯ ತಟಾಕಿನಲ್ಲಿರುವ ಬಳ್ಳಾರಿ ಜಿಲ್ಲೆಯ ಹೂವಿನ ಹಡಗಲಿ ಮೈಲಾರ ಸ್ವಾಮಿಯ ಪ್ರಸಿದ್ಧ ಕ್ಷೇತ್ರಗಳಲ್ಲೊಂದು.

ಹೂವಿನ ಹಡಗಲಿ ತಾಲೂಕಿನಲ್ಲಿರುವ ಮೈಲಾರ ಕ್ಷೇತ್ರ ವಿಜಾಪುರದ ಆದಿಲಶಾಹಿ ಸುಲ್ತಾನರ ಆಳ್ವಿಕೆಯ ಕಾಲದಲ್ಲಿ ಅಸ್ತಿತ್ವಕ್ಕೆ ಒಂದಿರಬೇಕೆಂದು ಪ್ರತೀತಿ. ಆದಿಲಶಾಹಿಗಳ ಆಳ್ವಿಕೆಯ ದಿನಗಳಲ್ಲಿ ಮೈಲಾರ ಲಿಂಗನ ಹಾವನೂರ, ಸಂಸ್ಥಾನದ ಹನುಮಂತ ಗೌಡರ ಮನೆತನದ ಕುಲದೇವತೆಯಾಗಿದ್ದನು. ಹಾವನೂರು ಮತ್ತು ಗುತ್ತಲದ ಮಧ್ಯದಲ್ಲಿ ಚಿಕ್ಕ ಮೈಲಾರ ಎಂಬ ಕ್ಷೇತ್ರವಿದೆ. ಚಿಕ್ಕ ಮೈಲಾರದ ಮೈಲಾರ ದೇವರ ಪತ್ನಿ

ಪೂಜನೀಯ ಮೈಲಾರದೇವ

ಗಂಗಿ ಮಾಳವ್ವನ ಗುಡಿಯ ಸಮೀಪ ಅರಮನೆಯ ಕೋಟೆಯ ಬಾವಿ ಹಾಗೂ ಸೋಪಾನಗಳ ಕುರುಹು ಕಂಡು ಬರುತ್ತದೆ. ಬಹದ್ದೂರ ಹನುಮಂತ ಗೌಡರು ಪ್ರತಿವರ್ಷ ಭಾರೀ ಭಕ್ತಿ ಶ್ರದ್ಧೆಯಿಂದ ಮೈಲಾರ ದೇವರ ಉತ್ಸವವನ್ನು ಆಚರಿಸುತ್ತಾ ಬಂದರು.

ಕೃತಯುಗದಲ್ಲಿ ತಪಸ್ವಿಗಳಿಗೆ, ಜನಸಾಮಾನ್ಯರಿಗೆ ವಿಧವಿಧದ ಹಿಂಸೆ ನೀಡಿ ಕಾಡುತ್ತಿದ್ದ ಮಣಿಮಲ್ಲರೆಂಬ ರಾಕ್ಷಸರನ್ನು ಸಂಹರಿಸಲು ಶಿವ ಮಾರ್ತಾಂಡನ ರೂಪದಲ್ಲಿ ಧರೆಗಿಳಿದು ಅವರೊಡನೆ ಯುದ್ಧಮಾಡಿ ಸಂಹರಿಸುತ್ತಾನೆ. ಕ್ರೂರ ದೈತ್ಯ ಮಣಿಮಲ್ಲರೊಂದಿಗೆ ಹೋರಾಡುತ್ತಿರುವ ಸಂದರ್ಭದಲ್ಲಿ ಮಾರ್ತಾಂಡ ಭೈರವ ಬೆವರೆ ಅಪ್ಪಳಿಸುತ್ತಾನೆ. ಅದರ ಪರಿಣಾ[illegible] ಭೀಕರ ಶಕ್ತಿ ದೇವತೆಯ ನಿರ್ಮಾಣವಾಗುತ್ತದೆ. ಈ ಶಕ್ತಿ ದೇವತೆಯನ್ನು ಶಾಂತಗೊಳಿಸಲು ತುಪ್ಪದ ಅಭಿಷೇಕವನ್ನು ಮಾಡುತ್ತಾರೆ. ಹೀಗಾಗಿ ಆ ದೇವತೆಗೆ ಘೃತಮಾರಿ, 'ತುಪ್ಪದ ಮಾಳವ್ವ' ಎಂದೂ ಕರೆಯುತ್ತಾರೆ.

[illegible] ದಾನವರನ್ನು ಸಂಹರಿಸಲು ಧರೆಗಿಳಿದು ಮಾರ್ತಾಂಡ ಭೈರವನನ್ನು ಭಕ್ತರು ಅಪಾರ ಶ್ರದ್ಧೆಯಿಂದ ಆರಾಧಿಸತೊಡಗಿದರು. ಅವನ ಭಕ್ತಗಣ ವಿಶಾಲವಾಯಿತು. ಅಲ್ಲಲ್ಲಿ ಪುಣ್ಯಕ್ಷೇತ್ರಗಳು ಬೆಳೆದವು. ಭಕ್ತಜನ ಪರಂ[illegible] ಸರ್ವಾಪರ್ವಾಗಿ ಮಲ್ಲಾರಿಯನ್ನು [illegible] ಪ್ರತಿ ಹುಣ್ಣಿಮೆಗೆ ಮೈಲಾರನಿಗೆ ವಿಶೇಷ ಪೂಜೆ ಸಲ್ಲುತ್ತದೆ. ರವಿವಾರ ಈ ದೇವರ ವಾರ. ಅಂದು ಮೈಲಾರ ದೇವರ ಭಕ್ತರು, ಒಪ್ಪತ್ತು ಉಪವಾಸ ಮಾಡಿ ದೇವರನ್ನು ಪೂಜಿಸುತ್ತಾರೆ. ಮೈಲಾರ ಕ್ಷೇತ್ರದಲ್ಲಿ ಪ್ರತಿವರ್ಷ ಭಾರತ ಹುಣ್ಣಿಮೆಗೆ ಭಾರೀ ಜಾತ್ರೆ ಜರುಗುತ್ತದೆ. ಈ ವರ್ಷ ಮೈಲಾರ ದೇವರ ಜಾತ್ರೆ ಜನವರಿ ೨೭ ರಂದು ಜರುಗುತ್ತದೆ. ಜಾತ್ರೆಯ ಸಂಭ್ರಮದಲ್ಲಿ ಲಕ್ಷಾವಧಿ ಜನ ಪಾಲುಗೊಳ್ಳುತ್ತಾರೆ. ಕಾರ್ಣಿಕದ ಅಯ್ಯ ಅಂದು ಬಿಲ್ಲನೇರಿ ಕಾರ್ಣಿಕವನ್ನು ಹೇಳುತ್ತಾನೆ. ಅದು ದೇಶದಲ್ಲಿಯ ಆಗು-ಹೋಗುಗಳ ಭವಿಷ್ಯವಾಣಿ. ಈ ವಾಣಿಯಲ್ಲಿ ಮೈಲಾರನ ಭಕ್ತರಿಗೆ ಪರಮ ವಿಶ್ವಾಸ.

ಇದೇ ರೀತಿ ಮಹಾನವಮಿಯಂದು ದೇವರ ಗುಡ್ಡದಲ್ಲಿ ಜಾತ್ರೆ, ಕಾರ್ಣಿಕ ನಡೆಯುತ್ತದೆ. ಆ ಸಂದರ್ಭದಲ್ಲಿ ಪವಾಡಗಳು ನಡೆಯುವುದುಂಟು.

ಮೈಲಾರ ಕ್ಷೇತ್ರಗಳು

ಮಹಿಮಾನ್ವಿತ ದೇವರು ಮೈಲಾರದ ಕ್ಷೇತ್ರಗಳು ಕಾವೇರಿಯಿಂದ ಗೋದಾವರಿ ವರೆಗೆ ವ್ಯಾಪಿಸಿದೆ. ಕರ್ನಾಟಕದಲ್ಲಿ ಧಾರವಾಡ ಜಿಲ್ಲೆಯ ದೇವರಗುಡ್ಡ, ಬಳ್ಳಾರಿ ಜಿಲ್ಲೆಯ ಮಣ್ಣೆ ಮೈಲಾರ, ಬೆಳಗಾವಿ ಜಿಲ್ಲೆಯ ಕಾರಿಮನಿ, ಮಂಗಸೂಳಿ, ಬೀದರ ಜಿಲ್ಲೆಯ ಮೈಲಾಪುರ, ವಿಜಾಪುರ ಜಿಲ್ಲೆಯ ದೇವರ ಹಿಪ್ಪರಗಿ, ಬೆಂಗಳೂರು ಜಿಲ್ಲೆಯ ಆನೇಕ ತಾಲೂಕಿನ ಎಳ್ಳಾಗರ, ಮೈಸೂರು ಜಿಲ್ಲೆಯ ಮುಡುಕತೊರೆ, ಮಂಡ್ಯ ಜಿಲ್ಲೆಯ ಮೈಲಾರ ಪಟ್ಟಣ, ಶಿವಮೊಗ್ಗ ಜಿಲ್ಲೆಯ ಕುಬಟೂರು, ರಾಯಚೂರು ಜಿಲ್ಲೆಯ ಆನೆಗೊಂದಿ ಮುಂತಾದವು ಪ್ರಸಿದ್ಧ ಮೈಲಾರ ಕ್ಷೇತ್ರಗಳು. ಇವುಗಳಲ್ಲಿ ಧಾರವಾಡ

> **ಮಹಿಮಾನ್ವಿತ ದೇವರು ಮೈಲಾರನ ಕ್ಷೇತ್ರಗಳು ಕಾವೇರಿಯಿಂದ ಗೋದಾವರಿಯವರೆಗೆ ವ್ಯಾಪಿಸಿದೆ. ಪರಮ ಕಾರಣಿಕ ದೈವ ಮೈಲಾರನ ಬಗೆಗೆ ಭಕ್ತರಿಗೆ ಅಪಾರ ಭಕ್ತಿ ಗೌರವ. ಪ್ರತಿವರ್ಷ ಭಾರತ ಹುಣ್ಣಿಮೆಯಿಂದ ಮೈಲಾರ ಕ್ಷೇತ್ರದಲ್ಲಿ ಜಾತ್ರೆ ನಡೆಯುತ್ತದೆ. ಈ ವರ್ಷ-ಫೆಬ್ರುವರಿ ೨೭ ರಂದು ಈ ಉತ್ಸವ ಸಂಭ್ರಮದಿಂದ ಜರುಗುತ್ತದೆ.**

ಜಿಲ್ಲೆಯ ದೇವರಗುಡ್ಡಕ್ಕೆ ಮಹತ್ವದ ಸ್ಥಾನವಿದೆ.

ಮಹಾರಾಷ್ಟ್ರದ ಮೈಲಾರ ದೇವರನ್ನು 'ಖಂಡೋಬಾ' ಎಂದೂ ಕರೆಯುತ್ತಾರೆ. ಮಹಾರಾಷ್ಟ್ರದ ಉಸ್ಮಾನಬಾದ ಜಿಲ್ಲೆಯ ಅಣದೂರು ನಲದುರ್ಗ, ಪುಣೆ ಜಿಲ್ಲೆಯ ಜೆಜೂರಿ, ನಿಂಬಗಾಂವ್, ನಗರ ಜಿಲ್ಲೆಯ ಟಾಕಳಿ ಖಂಡೇಶ್ವರಿ, ಶೆಗೂಡ ಅಹ್ಮದನಗರ ಜಿಲ್ಲೆಯ, ನೇವಾಸೆ, ಸಾತಾರಾ ಜಿಲ್ಲೆಯ ಪಾಲಿ, ಬೀಡ ಜಿಲ್ಲೆಯ ಬೀಡ, ನಾಂದೇಡ ಜಿಲ್ಲೆಯ ಮಾಲೇಗಾವ್ ಮುಂತಾದವು ಮೈಲಾರ ದೇವರ ಪ್ರಸಿದ್ಧ ಕ್ಷೇತ್ರಗಳೆನಿಸಿವೆ.

ಮೈಲಾರ ಕ್ಷೇತ್ರ ಹಾಗೂ ದೇವರ ಬಗ್ಗೆ ಮಹಾರಾಷ್ಟ್ರದಲ್ಲಿ ಹೆಚ್ಚಿನ ಸಂಶೋಧನೆಗಳು ಕಾಲದಿಂದ ಕಾಲಕ್ಕೆ ನಡೆಯುತ್ತಾ ಬಂದಿವೆ. 'ಪ್ರಸಾದ' ಎಂಬ ಮಾಸಪತ್ರಿಕೆ 'ಖಂಡೋಬಾ' ಎಂಬ ವಿಶೇಷ ಸಂಚಿಕೆಯನ್ನು ಪ್ರಕಟಿಸಿದ್ದು ಮಲ್ಲಾರಿಯ ಆರಾಧನೆ ಸಂಸ್ಕೃತಿಯ ಬಗ್ಗೆ ತಜ್ಞರುಗಳು ಬರೆದ ಅಧ್ಯಯನಶೀಲ ಲೇಖನಗಳು ಅದರಲ್ಲಿವೆ ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ಲೇಖನಗಳನ್ನು ಸ್ಥೂಲವಾಗಿ ಗಮನಿಸಿದರೆ ಮಹಾರಾಷ್ಟ್ರದಲ್ಲಿ ಮೈಲಾರಿಯ ೨೪೫ ಪುಣ್ಯಕ್ಷೇತ್ರಗಳಿವೆ ಎಂಬುದು ತಿಳಿದುಬರುತ್ತದೆ

ಧಾರವಾಡ ಜಿಲ್ಲೆಯ ರಾಣೇಬೆನ್ನೂರು ತಾಲೂಕಿನಲ್ಲಿ ದೇವರಗುಡ್ಡ ಎಂದು ಇನ್ನೊಂದು ಸುಪ್ರಸಿದ್ಧ ಮೈಲಾರಲಿಂಗನ ಕ್ಷೇತ್ರ. ಅದು ಗುಡ್ಡಗುಡ್ಡಾಪುರವೆಂದು ಸರಕಾರಿ ದಾಖಲೆಯಲ್ಲಿ ನೋಂದಣಿ ಆಗಿದೆ. ಇದು ಕರ್ನಾಟಕದಲ್ಲಿಯ ಮೈಲಾರದೇವರ ಅತ್ಯಂತ ಹಿರಿಯ ಕ್ಷೇತ್ರ.

ಇಲ್ಲಿ ಮೈಲಾರದೇವರು ಬಹುಜಾಗೃತ. ಈ ಏಳುಕೋಟಿದೇವರ ಉದ್ಭವವು ಒಂದು ಆಶ್ಚರಿಯರೀತಿಯಲ್ಲೇ ಆಗಿದೆ. ಈ ಕ್ಷೇತ್ರಕ್ಕೆ ಸಂಬಂಧಿಸಿದ ಪೌರಾಣಿಕ ಕತೆ ಹೀಗಿದೆ. ಈ ಗುಡ್ಡಗುಡ್ಡಾಪುರ ಹಾವನೂರು ಸಂಸ್ಥಾನದ ರಾಜಮನೆತನದ ಹಿಂದುವ ದನಗಳ ಕೊಟ್ಟಿಗೆಯಾಗಿತ್ತು. ಈ ದನಗಳಲ್ಲಿ "ಕಲ್ಯಾಣಿ" ಎಂಬ ಗೋವು ಹಾಲು ಕೊಡುತ್ತಿರಲಿಲ್ಲವಂತೆ ಏಕೆ ಹೀಗೆ ಎಂದು ಆಶ್ಚರಿ, ಇದರ ಗುಟ್ಟೇನು ಎಂದು ಎಲ್ಲರಿಗೂ ಒಂದು ರೀತಿಯ ಅನುಮಾನ, ಕೆಲ ಜಾತಿಯ ಹಾವುಗಳು ಗೋವಿನ ಕಾಲಿಗೆ ಸುತ್ತಿ ಅವು ಅಲುಗಾಡದಂತೆ ಮಾಡಿ ಮೊಲೆಯಿಂದ ಹಾಲು ಕುಡಿಯುತ್ತವೆ ಎಂದು ಒಂದು ಪ್ರತೀತಿ ಇದೆ. ಹಾಗೇನಾದರೂ ಆಗುತ್ತಿದೆಯೇ ಎಂದು ಈ ಕೊಟ್ಟಿಗೆಯ ಅಧಿಕಾರಿ ಕಲ್ಯಾಣಿಯ ಮೇಲೆ ನಿಗಾ ಇಡುತ್ತಾನೆ. ಆದರೆ ಕಂಡದ್ದೇ ಬೇರೆ, ಈ ಕಲ್ಯಾಣಿ ಮನೆಗೆ ಮರಳುವ ಮುನ್ನಾ ದಿನವೂ ಸಾಯಂಕಾಲ ಈ ಗುಡ್ಡದ ತುದಿಗೆ ಹೋಗಿ ಸ್ವಲ್ಪೇ ಹೊರಗೆ ಕಾಣುತ್ತಿದ್ದ ಒಂದು ಬಂಡೆಯ ತುದಿಯಮೇಲೆ ನಿಂತು ಹಾಲುಕರೆದು, ಆ ಬಂಡೆಗೆ ಅಭಿಷೇಕ ಮಾಡುತ್ತಿತ್ತಂತೆ. ಈ ದೃಶ್ಯ ಎಲ್ಲರನ್ನೂ ಅಚ್ಚರಿಯಲ್ಲಿ ಕೆಡುವಿತು. ವಿಷಯ ಹನುಮಂತಗೌಡನ ಕಿವಿಗೂ ಬಿತ್ತು. ಅವನು ಪ್ರತ್ಯಕ್ಷ ಬಂದು ನೋಡಿ ಓ, ಇದೊಂದು ದಿವ್ಯ ಸ್ಥಾನ ತನ್ನ ಕುಲದೇವರೇ ಇಲ್ಲಿ ಪ್ರತ್ಯಕ್ಷನಾಗಿದ್ದಾನೆ ಎಂಬ ಸಂತೋಷ, ಭಕ್ತಿ ಅವನಲ್ಲಿ ತುಂಬಿ ಬಂತು.

ಪುಣೆಯ ಸಮೀಪವಿರುವ ಮೈಲಾರದ ಪುಣ್ಯ ಕ್ಷೇತ್ರ ಜೆಜೂರಿ

ಚಿತ್ರ-ಬರಹ
ಎನ್.ಸಿ. ದೇಸಾಯಿ

ಅದರ ಪರಿಣಾಮ, ದೇವಸ್ಥಾನ ನಿರ್ಮಿಸಿ ಅಲ್ಲಿ ಪೂಜೆ ಪುನಸ್ಕಾರದ ಪೂಜಾರಿಗಳಿಗೆ ಪಲ್ಲಕ್ಕಿ ಸೇವೆಯವರಿಗೆ ವಾಲಗದವರಿಗೆ, ದೀವಟಿಗೆ, ಚಾಮರದವರಿಗೆ, ಡೊಳ್ಳಿನವರಿಗೆ, ಕಸಗೂಡಿಸುವವರಿಗೆ ಹೀಗೆ ದೇವಸ್ಥಾನ, ಮತ್ತು ಉತ್ಸವಗಳು ಸುಗಮವಾಗಿ ನಡೆಯುವಂತೆ ಪ್ರತಿ ಚಾಕರಿಯವರಿಗೂ ಉಂಬಳಿ ಹಾಕಿ ಕೊಟ್ಟಿದ್ದಾನೆ. ಇಂದಿಗೂ ಈ ಸನದುಗಳನ್ನು ಇಲ್ಲಿ ಕಾಣಬಹುದು!

ನವರಾತ್ರಿಯಲ್ಲಿ ನಡೆಯುವ ಇಲ್ಲಿಯ ಉತ್ಸವವೇ ಬಹುದೊಡ್ಡ ಉತ್ಸವ, ಜಾತ್ರೆಯೂ ಅದೇ ಕಾಲಕ್ಕೇ ನಡೆಯುತ್ತದೆ. ಬಹುಕ್ರೂರ ರೀತಿಯಲ್ಲಿ ಅರ್ಪಿಸುವ ದೈಹಿಕ ದಂಡ 'ಕಾರ್ಣಿಕವು' ಮಹಾನವಮಿ ಸಮಯದಲ್ಲಿ ನಡೆಯುತ್ತದೆ. ಕಾರ್ಣಿಕವೆಂದರೆ ದೇಶದ ಆಗು ಹೋಗುಗಳನ್ನು ನುಡಿಯುವ ಭವಿಷ್ಯವಾಣಿ. ಕಾರ್ಣಿಕ ಹೇಳುವ ಪೂಜಾರಿ ನವರಾತ್ರಿಯ ಸಮಯ ಉಪವಾಸವಿರಬೇಕೆಂಬ ಕಟ್ಟಳೆ.

ಪವಾಡದ ಕ್ರೂರ ರೀತಿಗಳು ಇಲ್ಲಿ ಬಹು ಭಯಾನಕ, ಕಾಲಲ್ಲಿ ಬಗನೆ ಕೂಟ ಬಡಿದು ರಂಧ್ರ ಮಾಡಿಕೊಳ್ಳುತ್ತಾರೆ, ಆ ರಂಧ್ರದಲ್ಲಿ ಒಟ್ಟು ಗಾತ್ರದ ಮಿಣಿಯನ್ನು ಪೋಣಿಸಿ ಅತ್ತಿಂದ ಇತ್ತಿಂದ ಎಳೆದುಕೊಳ್ಳುತ್ತಾರೆ. ಇದೇ ರೀತಿಯ ಮುಳ್ಳು ಕಂಟೆಯನ್ನು ಪೋಣಿಸಿಕೊಳ್ಳುತ್ತಾರೆ. ಕಲ್ಲುಕಂಬಕ್ಕೆ ಕಟ್ಟಿದ ಕಬ್ಬಿಣದ ಸರಪಳಿಯನ್ನು ಜಗ್ಗಿ ಹರಿಯುತ್ತಾರೆ.

ಹನುಮಂತಗೌಡ ನಿರ್ಮಿಸಿದ ಈ ಗುಡಯ್ಯನ ದೇವಸ್ಥಾನದ ಕಾರ್ಯಗಳು ಇಂದಿಗೂ ಅವಿಚ್ಛಿನ್ನವಾಗಿ ನಡೆದಿವೆ. ಹಾವನೂರು ಸಂಸ್ಥಾನ ಟಿಪ್ಪುವಿನ ರಾಜ್ಯ ವಿಸ್ತಾರದ ದಾಹಕ್ಕೆ ಬಲಿಯಾಯಿತು. ನಂತರ ಈ ಮನೆತನ ಮುರುಗೋಡು ಚಿದಂಬರ ಸ್ವಾಮಿಗಳ ಪುಣ್ಯದಿಂದ ಅಗಡಿಯ ದೇಸಾಯರಿಗೆ ದೊರೆಕಿತು. ಪೇಶ್ವೆಯವರಿಂದ ಈ ಗ್ರಾಮವನ್ನು ಇವರಿಗೆ ಕೊಡಿಸಲು ಕಾರಣ ಪುರುಷರಾದವರೇ ಚಿದಂಬರ ಮಹಾಸ್ವಾಮಿಗಳು.

ಗೊರವರು

ಮಲ್ಲಾರಿಯ ಭಕ್ತರಲ್ಲಿ ಕೆಲವರು ದೀಕ್ಷೆ ಪಡೆದು ಗೊರವರೆನಿಸಿಕೊಳ್ಳುತ್ತಾರೆ. ಅವರ ವೇಷವೂ ವಿಶಿಷ್ಟವಾಗಿರುತ್ತದೆ. ಕಂಬಳಿಯ ನಿಲುವಂಗಿ, ಕೆಂಪುಪೇಟದ ತಲೆಕಟ್ಟು, ಕೈಯಲ್ಲಿ ತ್ರಿಶೂಲ, ಢಮರು- ಇವುಗಳಿಂದ ಒಡಗೂಡಿದ ಗೊರವರು ಉತ್ತರ ಕರ್ನಾಟಕದ ಕಡೆ ಪ್ರತಿಯೊಂದು ಸಣ್ಣಪುಟ್ಟ ಊರುಗಳಲ್ಲಿ ಕಂಡು ಬರುತ್ತಾರೆ. ಮೈಸೂರು ಸೀಮೆಯ ಕಡೆ ಗೊರವರನ್ನು 'ವಗ್ಗಯ್ಯ' ಎಂದೂ ಮಹಾರಾಷ್ಟ್ರದಲ್ಲಿ ಗೊರವರನ್ನು ವಾಘ್ಯಾಮುರಳಿ ಎಂದೂ ಕರೆಯುತ್ತಾರೆ ವಾಘ್ಯ ಮುರಳಿಗರು ಜಾನಪದ ಗೀತೆಗಳಲ್ಲಿ ಖಂಡೋಬನ ಗುಣಗಾನ ಮಾಡುತ್ತಾ ತಿರುಗುತ್ತಾರೆ.

ಕರ್ನಾಟಕದಲ್ಲಿ ಗೊರವರನ್ನು ಆಮಂತ್ರಿಸಿ, ಅವರಿಗೆ ಹಾಲು ತುಪ್ಪ ನೀಡಿ ಗೌರವಿಸುವ ಪದ್ಧತಿಯುಂಟು. ಗೊರವರು ತಮ್ಮ ಸಂಪ್ರದಾಯಕ್ಕನುಗುಣವಾಗಿ ಮೈಲಾರಿಯ ಗುಣಗಾನದ ಭಕ್ತಿಗೀತೆಗಳನ್ನು ಹಾಡುತ್ತ, ನಾಯಿಗಳ ಹಾಗೆ ಬೊಗುಳುತ್ತಾ ನೀಡಿದ ಹಣ್ಣು ತುಪ್ಪವನ್ನು ಸ್ವೀಕರಿಸುತ್ತಾರೆ. ಭಂಡಾರ ಗೊರವರಿಗೆ ಪ್ರೀತಿಯ ಗಂಧ. ಅದನ್ನು ಹಣೆಗೆ ಬಳಿದುಕೊಂಡ ಭಕ್ತರು ದೀವಟಿಗೆ ಹಿಡಿದು ಏಳುಕೋಟಿ, ಏಳುಕೋಟಿ, ಚಾಂಗಮಲೋ ಘೋಷಣೆಯನ್ನು ಕೂಗುತ್ತಾರೆ. ಹಬ್ಬ ಹರಿದಿನಗಳಲ್ಲಿ ಎಲ್ಲ ಮೈಲಾರ ಕ್ಷೇತ್ರಗಳಲ್ಲಿ ಈ ಘೋಷಣೆ ದಿಗಂತವನ್ನು ಮುಟ್ಟುತ್ತದೆ.

ರಾಜಸ್ಥಾನ್: ಪ್ರವಾಸಿಗರ ನಂದನವನ!

ಸಾಂಪ್ರದಾಯಿಕ [illegible]ನಲ್ಲಿ ರಾಜಸ್ಥಾನಿ ಪುರುಷ

(1ನೇ ಪುಟದಿಂದ)

ವಸ್ತ್ರಾಲಂಕಾರ ಮತ್ತು ಆಭರಣಗಳು

ವರ್ಣಮಯ ಚಿತ್ರಗಳಿಂದ ಕೂಡಿದ ರಾಜಸ್ಥಾನದ ಬಟ್ಟೆಗಳು ಅಲ್ಲಿಯ ಜನರ ಸೌಂದರ್ಯಪ್ರಜ್ಞೆಯನ್ನು ಪ್ರತಿನಿಧಿಸುತ್ತದೆ. ಸಾಮಾನ್ಯ ಜನರು ಒಣ್ಣದ ಅಂಚಿರುವ ಧೋತಿಗಳನ್ನು ಉಡುತ್ತಾರೆ. ವಿಶೇಷ ಸಂದರ್ಭಗಳಲ್ಲಿ ರಜಪೂತರು ಮತ್ತು ಮೇಲು ವರ್ಗದ ಜನರು ಚೂಡಿದಾರ್ ಪೈಜಾಮ್, ಶೆರ್ವಾನಿ ಅಥವಾ ಅಂಗಿ ಧರಿಸುತ್ತಾರೆ.

ರಾಜಸ್ಥಾನಿ ಮಹಿಳೆಯರು ವಸ್ತ್ರ ಮತ್ತು ಕಂಚೋಳಿಗಳನ್ನು ಧರಿಸುತ್ತಾರೆ ಆಭರಣಗಳನ್ನು ಅದಿಯಿಂದ ಮುಡಿಯವರೆಗೂ ಬಳಸುತ್ತಾರೆ ಕೈತುಂಬ ಕಡಗ, ಬಳೆಗಳು ತೊಡುತ್ತಾರೆ ವೆಳ್ಳಿ ಮತ್ತು ಕಂಪು ವರ್ಣದ ಬಳೆಗಳನ್ನು ಮದುವೆಯಾದ ಸ್ತ್ರೀಯರು ಮಾತ್ರ ಉಪಯೋಗಿಸುತ್ತಾರೆ. ಬಹಳ ಮಹಿಳೆಯರು ಮೂಗಿನಲ್ಲಿ ನತ್ತು ಧರಿಸುತ್ತಾರೆ. ಬೆಳ್ಳಿ ಅಥವಾ ಬಂಗಾರದ ಒಂದು ಸರವನ್ನು ಕುತ್ತಿಗೆಯಲ್ಲಿ ಹಾಕುತ್ತಾರೆ

ವರ್ಣಚಿತ್ರ

ರಾಜಸ್ಥಾನದ ವರ್ಣಚಿತ್ರಗಳಲ್ಲಿ ಮೂಡಿರುವ ಪ್ರೇಮ, ಆಧ್ಯಾತ್ಮದ ದೃಶ್ಯಗಳು ಸಾರ್ವಜನಿಕ ಮನ್ನಣೆ ಪಡೆದವುಗಳಾಗಿವೆ. ಈ ಚಿತ್ರಗಳಲ್ಲಿ ಅವರ ಭಾವನಾತ್ಮಕ ಜೀವನದ ಪ್ರತಿಬಿಂಬಗಳನ್ನು ಮೂಡಿಸಿರುತ್ತಾರೆ. ಪ್ರಾಚೀನ ಕಾಲದಲ್ಲಿ ರಾಜಸ್ಥಾನದಲ್ಲಿ ಜೈನಮತಕ್ಕೆ ಸಂಬಂಧಿಸಿದ ಚಿತ್ರಗಳು ರಾರಾಜಿಸುತ್ತಿದ್ದವು. ಆ ನಂತರದ ಕಾಲದಲ್ಲಿ ಕೃಷ್ಣಾರಾಧನೆಗೆ ಸಂಬಂಧಿಸಿದ ಚಿತ್ರಗಳು ಹೆಚ್ಚಾಗಿ ಕಾಣಸಿಗುತ್ತವೆ.

ಶ್ರೀಕೃಷ್ಣನ ಬದುಕಿಗೆ ಸಂಬಂಧಿಸಿದ ಘಟನಾವಳಿಗಳನ್ನು ಆಧರಿಸಿ ಬರೆದಿರುವ ಚಿತ್ರಗಳು ಹೆಚ್ಚು ಚಲಾವಣೆಯಲ್ಲಿವೆ. ಭಾರತೀಯ ನಾರಿಯ ನಿಜವಾದ ಸೌಂದರ್ಯವನ್ನು ರಾಜಸ್ಥಾನಿ ವರ್ಣಚಿತ್ರಗಳಲ್ಲಿ ಕಾಣಬಹುದು. ತಾವರೆಗಣ್ಣು, ವಿಪುಲ ಕೇಶರಾಶಿ, ಕುಂಭಕುಚ, ತೆಳುನಡು, ಗುಲಾಬಿ ವರ್ಣದ ಕೈಯಿಂದ ಕೂಡಿದ ಹೆಣ್ಣಿನ ಚಿತ್ರ ಹಿಂದೂ ಸ್ತ್ರೀಯ ಸೌಂದರ್ಯದ ಪ್ರತೀಕವಾಗಿದೆ. ರಾಜಸ್ಥಾನದ 'ರಾಗಮಾಲಾ' ಚಿತ್ರಗಳು ಜಗತ್ಪ್ರಸಿದ್ಧವಾಗಿವೆ.

ವಾಸ್ತುಶಿಲ್ಪ

ಗುಪ್ತರ ಕಾಲ ರಾಜಸ್ಥಾನಿ ವಾಸ್ತುಶಿಲ್ಪದ ಸುವರ್ಣಯುಗವೆಂದು ಕರೆಯಲಾಗಿದೆ. ಈ ಸಂದರ್ಭದಲ್ಲಿ ರಾಜಸ್ಥಾನದಲ್ಲಿ ಹಲವಾರು ದೇವಸ್ಥಾನಗಳು ನಿರ್ಮಾಣವಾಗಿವೆ. ಇವುಗಳಲ್ಲಿ ಕೆಲವು ಮುಸ್ಲಿಮರ ದಾಳಿಗೆ ಬಲಿಯಾದದ್ದೂ ಇದೆ. ರಾಜಸ್ಥಾನದ ದೇವಸ್ಥಾನದ ವಾಸ್ತುವಿನಲ್ಲಿ ಅಲ್ಲಿಯ ಕಲಸತನದ ಪ್ರತಿಭೆಯನ್ನು ಗುರುತಿಸಬಹುದು. ಗುಪ್ತರ ನಂತರದ ಕಾಲದಲ್ಲಿ ನಿರ್ಮಾಣವಾದ ದೇವಸ್ಥಾನಗಳು ರಾಜಸ್ಥಾನಿ ವಾಸ್ತುಶಿಲ್ಪದ ಪ್ರತಿಬಿಂಬಗಳಾಗಿವೆ. ದೊಡ್ಡ ದೊಡ್ಡ ಬಂಡೆಗಳನ್ನು ಕೊರೆದು ನಿರ್ಮಿಸಿದ ದೇವಾಲಯಗಳೂ ಇಲ್ಲಿವೆ. ಚಿತ್ತೋರ್‌ನ ಕಾಲಿಕಾಮಾತಾ ದೇವಸ್ಥಾನ ಮತ್ತು ಬುಂದಿಯ ಶಿವನ ದೇವಸ್ಥಾನ ಹತ್ತನೇ ಶತಮಾನದ ವಾಸ್ತುವಿಗೆ ಉದಾಹರಣೆಯಾಗಿವೆ.

ಮೌಂಟ್ ಅಬುವಿನಲ್ಲಿರುವ ದಿಲ್‌ವಾರ್ ದೇವಾಲಯ, ಹಾಗೂ ರನಕ್‌ಪುರ್, ಜೈಸಲ್ಮೀರ್ ಮತ್ತು ಚಿತ್ತೋರ್‌ಗ್ರಹ್‌ನ ದೇವಾಲಯಗಳು ಜೈನ ವಾಸ್ತುವಿನ ಉತ್ಕೃಷ್ಟ ಕಲೆಗಳಾಗಿವೆ.

ಕರಕೌಶಲ

ರಾಜಸ್ಥಾನದ ವೈವಿಧ್ಯಮಯವಾದ ಕರಕೌಶಲವು ಅದರ ಸಹಜ ಅಂದ ಮತ್ತು ಉಪಯೋಗದ ದೃಷ್ಟಿಯಿಂದ ಹೆಚ್ಚು ಪ್ರಸಿದ್ಧಿ ಪಡೆದಿದೆ. ಕೈಮಗ್ಗದಲ್ಲಿ ತಯಾರಾದ ಮಸ್ಲಿನ್ ಬಟ್ಟೆ, ವಿವಿಧ ಚಿತ್ತಾರಗಳಿಂದ ಕೂಡಿದ ಹತ್ತಿಯ ಬಟ್ಟೆಗಳು, ಮಡಕೆ, ಕಂಚಿನ ಮತ್ತು ತಾಮ್ರದ ಪ್ರತಿಮೆಗಳು ರಾಜಸ್ಥಾನೀ ಕಲೆಯನ್ನು ಪ್ರತಿಬಿಂಬಿಸುತ್ತವೆ.

ಬಿಕಾನೇರ್

ಥಾರ್ ಮರುಭೂಮಿಯಲ್ಲಿರುವ 'ಬಿಕಾನೆರ್' ರಾಜಸ್ಥಾನದ ಸುಂದರ ನಗರಗಳಲ್ಲಿ ಒಂದಾಗಿದೆ. ಅಲ್ಲಿರುವ 'ಬಿಕಾನೆರ್ ಕೋಟೆ' ಭಾರತದ ಪ್ರವಾಸಿ ಕೇಂದ್ರಗಳ ಭೂಪಟದಲ್ಲಿ ಮಹತ್ವದಸ್ಥಾನ ಗಳಿಸಿದೆ. ಕ್ರಿ.ಶ. ೧೪೮೮ ರಲ್ಲಿ ರಾಜಾವ್ ಬಿಕಾ ಎಂಬವನು ಈ ನಗರವನ್ನು ಕಟ್ಟಿದನು.

'ಬಿಕಾನೆರ್ ಕೋಟೆ' ನಗರದ ನೈಋತ್ಯ ಭಾಗದಲ್ಲಿದೆ. ಕೋಟೆಯ ಸುತ್ತಲೂ ನಾಲ್ಕೂವರೆ ಮೈಲು ದೂರದವರೆಗೆ ಆರು ಅಡಿ ಎತ್ತರದ ಗೋಡೆಯಿದೆ. ಐದು ಪ್ರವೇಶ ದ್ವಾರಗಳಿರುವ ಕೋಟೆಯಿದು. ಈ ಕೋಟೆಯ ವಾಸ್ತುಶಿಲ್ಪ ಶೈಲಿ ಹೆಚ್ಚೂ ಕಡಿಮೆ ದಿಲ್ಲಿಯ ಫತೇಪುರ ಸಿಕ್ರಿ ಹಾಗೂ ಕೆಂಪುಕೋಟೆಯ ವಾಸ್ತುಶಿಲ್ಪ ಶೈಲಿಯನ್ನು ಹೋಲುತ್ತದೆ. ಕೆಂಪುಕೋಟೆಯ ಒಳಗಿರುವ ದರ್ಬಾರ್ ಹಾಲ್‌ನಂತೆ 'ಬಿಕಾನೆರ್ ಕೋಟೆ'ಯೊಳಗೂ ಕರನ್ ಮಹಲ್ ಇದೆ. ಕೋಟೆಯ ಒಳಗಡೆ ಇರುವ ಕೆಲವು ಮಂದಿರಗಳ ಹೆಸರುಗಳಂತೂ ಅತೀ ಆಕರ್ಷಕವಾಗಿವೆ. ಡುಂಗ್ ಮಹಲ್, ಫೂಲ್ ಮಹಲ್, ಅನೂಪ್ ಮಹಲ್, ಚಂದ್ರ ಮಹಲ್, ಶೀಶ್ ಮಹಲ್, ಬಿಜಯ್ ಮಹಲ್ ಇತ್ಯಾದಿ.

'ಮಹಾರಾಜ ಗಂಗಾಸಿಂಗ್' ಬಿಕಾನೆರ್‌ನ್ನು ಆಳಿದ ರಾಜರಲ್ಲಿ ಹೆಚ್ಚು ಪ್ರಗತಿಪರ ಮನೋಭಾವವುಳ್ಳವನಾಗಿದ್ದ.

ಈತ ಬ್ರಿಟಿಷ್ ಎಂಜಿನಿಯರ್ ಸರ್ ಸ್ವಿಂಟನ್ ಜಾಕೋಬ್‌ನ ಸಹಾಯದಿಂದ ನಗರದ ಹೊರಗೆ ಅತ್ಯಂತ ವೈಭವೋಪೇತ ಹಳದಿ ಅರಮನೆಯೊಂದನ್ನು ಕಟ್ಟಿಸಿದ. ಸಂಪೂರ್ಣ ಕೆಂಪು ಮರಳುಗಲ್ಲಿನಿಂದ ನಿರ್ಮಾಣವಾದ ಈ ಅರಮನೆ ಅದ್ಭುತ ದೃಶ್ಯ ವೈಭವಕ್ಕೆ ನಿದರ್ಶನವಾಗಿದೆ.

ಬಿಕಾನೆರ್‌ನ ಸಾದುಲ್ ಮ್ಯೂಸಿಯಂ ಮತ್ತು ಅನುಪ್ ಸಂಸ್ಕೃತ ಗ್ರಂಥಾಲಯ ಪ್ರವಾಸಿಗರ ಆಕರ್ಷಣೆಯ ಪ್ರಮುಖ ಕೇಂದ್ರಗಳು. ಗಂಗಾಸಿಂಗ್ ಮಹಾರಾಜನ ಸ್ವರ್ಣ ಮಹೋತ್ಸವ ಮ್ಯೂಸಿಯಂನಲ್ಲಿ ಮೊಘಲ ಚಕ್ರವರ್ತಿಗಳಿಂದ ಬಂದ ಫರ್ಮಾನುಗಳು, ಪೆಯಿಂಟಿಂಗ್‌ಗಳು, ಆಭರಣಗಳು, ಜಹಾಂಗೀರ ಬಾದಷಹನ ಕಾಲದ ರಾಜರು ಧರಿಸುವ ರೇಶ್ಮೆ ಉಡುಪುಗಳು ಒಳಗೊಂಡಿವೆ. ಬಿಕಾನೆರ್ ಸಮೀಪವಿರುವ ಗಂಡೆರ್ ಸುಪ್ರಸಿದ್ಧ ಪಕ್ಷಿಧಾಮ.

ಬಿಕಾನೆರ್ ರಾಜಪುತ್ರರ ಇತಿಹಾಸದೊಂದಿಗೆ ಬೆಸೆದುಕೊಂಡಿರುವ ಇನ್ನೊಂದು ಪ್ರಮುಖ ಸ್ಥಳವೆಂದರೆ 'ಕಾರಂಜಿ ದೇವಾಲಯ'. ಇದು ಬಿಕಾನೆರ್‌ದಿಂದ ಸುಮಾರು ೩೩ ಕಿ.ಮೀ. ದಕ್ಷಿಣದಲ್ಲಿದೆ. ಶ್ವೇತ ಅಮೃತ ಶಿಲೆಯಲ್ಲಿ ನಿರ್ಮಾಣವಾಗಿರುವ ಈ ದೇವಾಲಯ ಅತ್ಯಂತ ಸುಂದರವಾಗಿದೆ. ಈ ದೇವಾಲಯದ ಒಂದು ವಿಶಿಷ್ಟತೆಯೆಂದರೆ, ದೇವಾಲಯದ ಒಳಗೂ ಹೊರಗೂ ನಿರಂತರ ಓಡಾಡುತ್ತಿರುವ ಇಲಿಗಳು. ಹೀಗೆ ಸುಳಿದಾಡುವ ಇಲಿಗಳನ್ನು ಯಾರೂ ಕೊಲ್ಲುವುದಿಲ್ಲ. ಪವಿತ್ರ ಜೀವಿಗಳೆಂದು ಪರಿಗಣಿಸಿ ಪೂಜಿಸುತ್ತಾರೆ.

ಜೈಪುರ

೧೮ ನೇ ಶತಮಾನದಲ್ಲಿ ಎರಡನೆಯ ಮಹಾರಾಜ ಜೈಸಿಂಗ್ ಈ ನಸುಗೆಂಪು ವರ್ಣದ ನಗರವನ್ನು ನಿರ್ಮಿಸಿದ. ಇಡೀ ನಗರ ಕೋಟೆಯಿಂದ ಆವೃತವಾಗಿದ್ದು, ಅದಕ್ಕೆ ಒಟ್ಟು ೭ ಮಹಾದ್ವಾರಗಳಿವೆ.

ಜೈಪುರದ ಏಳನೇ ಒಂದು ಭಾಗದಷ್ಟು ಸ್ಥಳದಲ್ಲಿ ಅರಮನೆ ಆವರಿಸಿಕೊಂಡಿದೆ. ಈಗ ಈ ನಗರ ಆಧುನಿಕತೆಗೆ ತೆರೆದುಕೊಂಡಿದ್ದು; ಬ್ಯಾಂಕ್‌ಗಳು, ಉದ್ಯಮಗಳು, ಆಸ್ಪತ್ರೆ ಮತ್ತು ವಿಶ್ವವಿದ್ಯಾಲಯದ ಸಂಕೀರ್ಣಗಳು ತಲೆ ಎತ್ತಿವೆ.

ಎರಡನೇ ಸವಾಯಿಮಾನ್ ಸಿಂಗ್ ಮ್ಯೂಸಿಯಂನಲ್ಲಿ ಮೂರ್ತಿಶಿಲ್ಪ, ವರ್ಣಚಿತ್ರಗಳು, ಜಮಖಾನೆಗಳು, ಹಸ್ತಪ್ರತಿಗಳು ಮತ್ತು ಹಳೆಯ ಕಾಲದ ಶಸ್ತ್ರಾಸ್ತ್ರಗಳನ್ನು ಅಂದವಾಗಿ ಜೋಡಿಸಿಡಲಾಗಿದೆ. ಇಲ್ಲಿ ಪರ್ಷಿಯನ್ ಮತ್ತು ಅರೇಬಿಯನ್ ವರ್ಣಚಿತ್ರಗಳೂ ಇವೆ.

ಜೈಪುರದಿಂದ ಸುಮಾರು ೧೦ ಕಿ.ಮೀ. ದೂರದಲ್ಲಿ ಸಿಸೋದಿಯಾ ರಾಣಿ ಬಾಗ್ ಇದೆ. ಈ ಅರಮನೆಯ ಗೋಡೆಗಳೆಲ್ಲ ಪೆಯಿಂಟಿಂಗ್‌ಗಳಿಂದ ಅಲಂಕೃತವಾಗಿವೆ. ಅಲ್ಲದೆ ಮೇಲ್ಭಾವಣಿಯಲ್ಲಿ ಸುಂದರವಾದ ಹೂತೋಟವೂ ಇದೆ. ಇಲ್ಲಿ ಹರಿ-ಹರರ ಹಾಗೂ ಹನುಮಂತನಿಗೆ ಮೀಸಲಾದ ಕೆಲವು ದೇವಾಲಯಗಳೂ ಇವೆ.

ಜಗತ್ತಿನಲ್ಲೇ ಹೆಸರುವಾಸಿಯಾದ ಬ್ಲಾಕ್ ಪ್ರಿಂಟಿಂಗ್ ಕೇಂದ್ರ, ಸಂಗನೇರ್‌ನಲ್ಲಿದೆ.

ಲೇಕ್ ಪ್ಯಾಲೆಸ್ (ಉದಯ್‌ಪುರ್)

ಅಲ್ವಾರ್

ಇದು ರಾಜಸ್ಥಾನದ ಪೂರ್ವ ದಿಕ್ಕಿಗೆ ಇರುವ ಸುಂದರ ನಗರ. ಇಡೀ ನಗರ ಗುಡ್ಡ-ಕಾಡುಗಳಿಂದ ಸುತ್ತುವರಿಯಲ್ಪಟ್ಟಿದೆ. ಅಧಿಕ ವನ್ಯಮೃಗಗಳಿಂದ ಕೂಡಿರುವ ಅಲ್ವಾರ್, ರಾಜಸ್ಥಾನದ ಪವಿತ್ರ ಆರಾಧನಾ ಕೇಂದ್ರವೂ ಹೌದು.

ಅಲ್ವಾರ್ ಸಮೀಪದ ಸಿರಸ್ಕಾರ್ ಪಕ್ಷಿಧಾಮ ವನ್ಯಮೃಗ ಪ್ರಿಯರಿಗೆ ಆಕರ್ಷಣೆಯ ಕೇಂದ್ರವಾಗಿದೆ. ಜಿಂಕೆ, ಕಡವೆ, ಮೊಲ, ಕಾಡು ಬೆಕ್ಕು, ಕಾಡುಕೋಣ, ನವಿಲು, ಕವುಜುಗ, ಮುಂತಾದ ಪ್ರಾಣಿ ಪಕ್ಷಿಗಳು ಹಿಂಡು ಹಿಂಡಾಗಿ ವಾಸಿಸುತ್ತಿವೆ.

ಸಿರಸ್ಕಾರ್‌ದಿಂದ ೧೬ ಕಿ.ಮೀ. ದೂರದಲ್ಲಿರುವ ಪಾಂಡವರ ಕಂಬ ಎನ್ನುವ ಸ್ಥಳಕ್ಕೆ ಐತಿಹಾಸಿಕ ಮಹತ್ವವಿದೆ. ಪಾಂಡವರು ತಮ್ಮ ಒಂದು ವರ್ಷದ ಅಜ್ಞಾತವಾಸದಲ್ಲಿ ಕೆಲವು ಸಮಯ ಇಲ್ಲಿಯ ಗುಹೆಗಳಲ್ಲಿ ಕಳೆದಿದ್ದರೆಂಬ ಪ್ರತೀತಿ ಇದೆ.

ಮರುಭೂಮಿಯ [illegible] ಹಿಂಡು

ಭರತ್‌ಪುರ್

ಒಂದು ಕಾಲದಲ್ಲಿ ಮುಘಲ್ ಚಕ್ರವರ್ತಿಗಳಿಗೆ ಪ್ರತಿಸ್ಪರ್ಧಿಯಾಗಿದ್ದ ರಾಜ್ಯವಾಗಿತ್ತು. ಆದರೆ ಇಂದು ಸುಂದರ ಪಕ್ಷಿಧಾಮವೆಂದು ಹೆಸರು ಪಡೆದಿದೆ. ಪ್ರತಿವರ್ಷ ಸೈಬೀರಿಯಾದ ಕಡೆಯಿಂದ ಸಾವಿರಾರು ಪಕ್ಷಿಗಳು ಇಲ್ಲಿಗೆ ವಲಸೆ ಬರುತ್ತವೆ. ಮುಂಜಾನೆ ಒಂದಷ್ಟು ಹೊತ್ತು ಪಕ್ಷಿ ವೀಕ್ಷಣೆಗೆ ನಿಂತರೆ ವಿದೇಶಗಳಿಂದ ಬಂದಿರುವ ಬೇರೆ ಬೇರೆ ಜಾತಿಗಳ ಪಕ್ಷಿಗಳನ್ನು ಕಂಡು ಆನಂದಿಸಬಹುದು.

ಅಜ್‌ಮೀರ್

ಜೈಪುರದಿಂದ ಸುಮಾರು ೧೩೦ ಕಿ.ಮೀ. ದಕ್ಷಿಣಕ್ಕೆ ಪ್ರಯಾಣಿಸಿದರೆ ಅಜ್‌ಮೀರ್ ನಗರ ಸಿಗುತ್ತದೆ. ಅಜ್‌ಮೀರ್‌ನ ಪ್ರಯಾಣಕ್ಕೆ ಒಂಟೆಗಳ ಸಹಾಯ ಅಗತ್ಯವಾಗಿ ಬೇಕಾಗುತ್ತದೆ. ಹಲವಾರು ಮುಸ್ಲಿಂ ಸ್ಮಾರಕಗಳು ಇಲ್ಲಿವೆ. ಮುಹಮ್ಮದ್ ಘೋರಿ ಮತ್ತು ತೈಮೂರ್ ಹಲವು ಬಾರಿ ಈ ನಗರವನ್ನು ಲೂಟಿ ಹೊಡೆದು ಇಸ್ಲಾಂ ಮತವನ್ನು ಪ್ರಚುರಪಡಿಸಿದ್ದರು. ಜಗತ್ತಿನ ಬೇರೆ ಬೇರೆ ಕಡೆಗಳಿಂದ ಹಲವಾರು ಮುಸ್ಲಿಮರು ಇಲ್ಲಿಗೆ ಬಂದು, ಸಂತ ಮೈನುದ್ದೀನ್ ಚಿಸ್ತಿ ಮಸೀದಿಯಲ್ಲಿ ಪ್ರಾರ್ಥನೆ ಸಲ್ಲಿಸುತ್ತಾರೆ.

ಅಜ್‌ಮೀರ್‌ನಿಂದ ೧೧ ಕಿ.ಮೀ. ದೂರದಲ್ಲಿ ಪುಷ್ಕರ ಸರೋವರ ಇದೆ.

ರಾಜಸ್ಥಾನದ ನಗರಗಳ ಸೌಂದರ್ಯ ಒಂದು ರೀತಿಯಲ್ಲಿ ವೈಭವೋಪೇತವಾಗಿದ್ದರೆ, ಹಳ್ಳಿಗಳ ಸೌಂದರ್ಯವೇ ಬೇರೆ. ಐತಿಹಾಸಿಕ ಸ್ಥಳಗಳಿಗೆ ಎಷ್ಟು ಮಹತ್ವವಿದೆಯೋ ಅಷ್ಟೇ ಮಹತ್ವ ಅಲ್ಲಿಯ ಜನರ ಜೀವನ, ವೇಷಭೂಷಣ, ತಿಂಡಿ-ತಿನಿಸು ಎಲ್ಲವೂ ಪ್ರವಾಸಿಗರನ್ನು ಸೆಳೆಯ ಲೋಕಕ್ಕೆ ಒಯ್ಯಬಲ್ಲದು.

ಹಳ್ಳಿಗಳಲ್ಲಿ ಸಾಲಿಯಾದಂತೆ ಒಂಟೆಗಳನ್ನು ಮೇಯಿಸಿ ಹಿಂತಿರುಗುವ ದೃಶ್ಯ, ಅತ್ಯಂತ ಸುಂದರವಾಗಿ ಕಾಣುತ್ತದೆ. ಒಂಟೆ ರಾಜಸ್ಥಾನದಲ್ಲಿ ಬಹುಉಪಯೋಗಿಯಾದ ಪ್ರಾಣಿ. ಬೇಸಾಯ, ಸರಕು ಸಾಗಣೆ, ಪ್ರಯಾಣಕ್ಕೆಲ್ಲ ಒಂಟೆಗಳನ್ನೇ ಬಳಸುತ್ತಾರೆ. ಹಳ್ಳಿಯ ಹೂ ಮಾರುವ ಹುಡುಗಿಯರು, ಹಣ್ಣು ಮಾರುವ ಮಹಿಳೆಯರು ಅವರ ವಿಶಿಷ್ಟವಾದ ವೇಷಭೂಷಣ ಕಣ್ಣಿಗೊಂದು ರಸದೂಟ!

ಪ್ರಸಿದ್ಧ ಐತಿಹಾಸಿಕ ಸ್ಥಳಗಳಿಗೆ ಹೋಲಿಸಿದರೆ ರಾಜಸ್ಥಾನದ ಹಳ್ಳಿಗಳೂ ಕಡಿಮೆಯೇನಲ್ಲ.

‘ಝುಣಕಾ ಭಾಕರ’

ರುಚಿಯಾದ
ಪುಷ್ಟಿಕರ ಆಹಾರ
ದುಬಾರಿಯಾಗಿಯೇ
ಇರಬೇಕೆಂಬ
ನಿಯಮವೇನಿಲ್ಲ

‘ಝುಣಕ’ವೆಂದೂ, ನೀರಾಗಿರುವುದನ್ನು ‘ಪಿಟ್ಲೆ’ಯೆಂದೂ ಕರೆಯುತ್ತಾರೆ. ಆದರೆ ಇವೆರಡಕ್ಕೂ ಕರ್ನಾಟಕದಲ್ಲಿ ಒಂದೇ ಹೆಸರು – ‘ಝುಣಕಾ.’

ಸಾಮಾನ್ಯ ಮನುಷ್ಯನಿಗೆ ಅಲ್ಪ ಬೆಲೆಯಲ್ಲಿ ಉತ್ತಮ ಆಹಾರವನ್ನು ನೀಡಬೇಕೆಂದು ಉದ್ದೇಶವಿದ್ದ ಜನರಿಂದ ಮುಂಬೈಯಲ್ಲಿ ಈ ಪ್ರಯತ್ನ ಆರಂಭವಾಗಿದೆ. ಪ್ರಥಮ ಪ್ರಯತ್ನ ನಡೆದುದು ಪುಣೆಯ ತರಕಾರಿ ಪೇಟೆಯಲ್ಲಿ. ಮುಂಬೈಯಲ್ಲಿ ಪ್ರಾರಂಭವಾಗಲು ಅದೇ ಪ್ರೇರಣೆ.

ಕೆಲಕಾಲದ ಹಿಂದೆ, ಸುಧೀರಜೋಶಿ ಹಾಗೂ ಮನೋಹರ ಜೋಶಿ ಎಂಬಿಬ್ಬರು ಮುಂಬೈ ಮೇಯರರಾಗಿ ಹೋದರು.

ಚಿತ್ರ ಮತ್ತು ಲೇಖನ :
ಎನ್. ಸಿ. ದೇಸಾಯಿ

ಮುಂಬೈ ಬೋರಿಬಂದರ್ ನಿಲ್ದಾಣದ ಎದುರಿನಲ್ಲಿರುವ ‘ಝುಣಕಾ ಭಾಕರ’ ಸ್ಟಾಲ್

ಬೋರಿಬಂದರ್ ಸ್ಟೇಶನ್ ಇಳಿದು ಫ್ಲೋರಾಫೌಂಟನ್ ಕಡೆಗೆ ನೀವುಹೊರಟರೆ, ಕ್ಯಾಪಿಟಲ್ ಸಿನಿಮಾ ಪಕ್ಕದ ಓಣಿಯ ಬದಿಯಲ್ಲಿ ತಿಂಡಿತಿನಸುಗಳ ಕೆಲವು ಅಂಗಡಿಗಳಿವೆ. ಬಟಾಟವಡಾ, ಪಾವಭಾಜಿ, ಪಾವವಡಾ, ಸಮೋಸಾ ಮುಂತಾದ ವಸ್ತುಗಳು ಇಲ್ಲಿ ಸಿಗುತ್ತವೆ.

ಇತ್ತೀಚೆಗೊಮ್ಮೆ ಅಲ್ಲಿ ಹೋದಾಗ ಎಂದೂ ನೋಡದ ಗದ್ದಲ ಕಂಡು ಹೊಸದೇನೋ ಇದೆ ಇಲ್ಲಿ ಎಂಬ ಶಂಕೆ ಬಂತು. ಇನ್ನಷ್ಟು ಹತ್ತಿರಹೋದೆ. ಒಂದೆಡೆ, ಕಛೇರಿಗಳಲ್ಲಿ ದುಡಿಯುವ ಹುಡುಗಿಯರು, ಇನ್ನೊಂದೆಡೆ ಪೋಲೀಸರು, ಅತ್ತ ಕೂಲಿಯವರು, ಇತ್ತ ಟ್ಯಾಕ್ಸಿ ಚಾಲಕರು, ಸ್ವಲ್ಪ ದೂರದಲ್ಲಿ ಆಫೀಸಿನ ಜನ, ಆಚೆ ಹಮಾಲರು ಹೀಗೆ – ಎಲ್ಲರ ಕೈಯಲ್ಲೂ ಕಾಗದ ಪ್ಲೇಟುಗಳು. ಅದರಲ್ಲಿ ಜೋಳದ ರೊಟ್ಟಿ, ಬಟ್ಟಲಿನಲ್ಲಿ ಅರಿಸಿನ ಬಣ್ಣದ ಪಲ್ಯದಂಥ ಪದಾರ್ಥ 3 – 4 ಉಳ್ಳಾಗಡ್ಡಿಯ (ನೀರುಳ್ಳಿ) ತುಂಡುಗಳು – ನೋಡಿ ನನ್ನ ಬಾಯಲ್ಲೂ ನೀರೂರಿತು. ತಲೆ ಎತ್ತರಿಸಿದರೆ ‘ಝುಣಕಾ ಭಾಕರ’ ಬೋರ್ಡು. ನಿಜ ಹೊಟ್ಟೆ ತುಂಬಿತ್ತು. ಆದರೂ, ತಿನ್ನುವ ಆಶೆ ಹಿಂಗಲಿಲ್ಲ. ಸ್ಟಾಲಿನ ಹತ್ತಿರಕ್ಕೆ ಹೋದೆ. ‘ಕೂಪನ್ ಕೊಳ್ಳಿ’ ಎಂಬ ಉತ್ತರ ಬಂತು. ಕೇವಲ ಐವತ್ತೇ ಪೈಸೆ.

ಇಂದಿನಕಾಲದಲ್ಲಿ, ಒಂದು ಕಪ್ಪು (ಚಿಕ್ಕ ಕಪ್ಪು) ಚಹ ಕುಡಿಯಲೂ ಕಡಿಮೆಯೆಂದರೆ ನಲವತ್ತುಪೈಸೆ ಬೇಕು. ಅಂತಹದರಲ್ಲಿ ಒಂದು ದೊಡ್ಡ ಜೋಳದ ರೊಟ್ಟಿ, ಉತ್ತಮ ರುಚಿಕಟ್ಟಾದ ಝುಣಕಾ ಹಾಗೂ ರೊಟ್ಟಿಯ ಜೊತೆಗಾರ ನೀರುಳ್ಳಿ–ಇವೆಲ್ಲ ಕೇವಲ ಐವತ್ತು ಪೈಸೆಗೆ ಸಿಗುತ್ತದೆಂದರೆ, ನಿಜವಾಗಿಯೂ ಈ ಕಾರ್ಯ ಕೈಕೊಂಡವರನ್ನು ಹೊಗಳಲೇಬೇಕು – ಅದು ಕೂಡ ಮುಂಬೈ ಮಹಾನಗರದಲ್ಲಿ.

★

ಉತ್ತರ ಕರ್ನಾಟಕದವರಿಗೆ ‘ಝುಣಕಾ’ ಅರಿಯದ್ದಲ್ಲ. ‘ಭಾಕರ’ ಕೂಡ ಅವರಿಗೆ ದಿನದ ಊಟ.

ಹರಿದು ಹಂಚಿಹೋದ ನಾಡು ಒಂದಾಗಿ ಕರ್ನಾಟಕವಾದ ಮೇಲೆ ಎಷ್ಟೋ ಪ್ರಾದೇಶಿಕ ಭಿನ್ನಾಭಿಪ್ರಾಯಗಳು ದೂರಾಗುತ್ತಲಿವೆ. ಬೆಂಗಳೂರಿನವರಿಗೆ ಜೋಳದ ರೊಟ್ಟಿ ಎಂದರೇನೆಂದು ಈಗ ವಿವರಿಸಿ ಹೇಳಬೇಕಿಲ್ಲ. ಧಾರವಾಡದವರಿಗೆ ಮೈಸೂರಿನ ‘ರಾಗಿಮುದ್ದೆ’, ಮಂಗಳೂರಿನ ‘ಗಂಜಿ’ ಎಂದರೆ ಏನೆಂದು ಈಗ ಗೊತ್ತು. ನೌಕರಿಯಿಂದಾಗಿ ಅಲ್ಲಿಯ ಜನ ಇಲ್ಲಿ, ಇಲ್ಲಿಯ ಜನ ಅಲ್ಲಿ. ವ್ಯಾಪಾರಕ್ಕಾಗಿಯೂ ಜನ ಎಲ್ಲೆಡೆ ತಿರುಗುತ್ತಾರೆ. ಹೀಗಾಗಿ ಒಂದು ಕಾಲಕ್ಕೆ ಭಿನ್ನವಾಗಿದ್ದ ನೀತಿ ನಡಾವಳಿ, ಉಡುಗೆ ತೊಡುಗೆ, ಮಾತು ಒಂದಾಗುವ ಹಾದಿಯಲ್ಲಿದೆಯೆನ್ನಬಹುದು.

‘ಝುಣಕಾ’ – ಇದು ಕಡಲೆ ಹಿಟ್ಟಿನಿಂದ ಸಿದ್ಧವಾಗುವ ಪದಾರ್ಥ. ತುಂಬ

ಸಾಮಾನ್ಯ ಮಧ್ಯಮ ವರ್ಗದವರ ಸ್ವಾದಿಷ್ಟ ಆಹಾರ, ಝುಣಕಾ ಭಾಕರ

ನೀರುಳ್ಳಿ (ಉಳ್ಳಾಗಡ್ಡಿ) ತುಂಡುಗಳನ್ನು ವಗ್ಗರಣೆಹಾಕಿ, ಸ್ವಲ್ಪ ಎಣ್ಣೆಯಲ್ಲಿ ಬೆಂದ ಮೇಲೆ ನೀರು ಸುರಿಯುತ್ತಾರೆ. ಹಸಿ ಮೆಣಸಿನಕಾಯಿ, ಇಲ್ಲವೇ ಖಾರದ ಪುಡಿ ಹಾಕುತ್ತಾರೆ. ಉಪ್ಪು ಹಾಕಿದ ಮೇಲೆ, ನೀರುಳ್ಳಿ ಹೋಳುಗಳು ಬೇಯುತ್ತಿರುವಾಗಲೇ ಕಡಲೆ ಹಿಟ್ಟನ್ನು ಬೆರೆಸುತ್ತಾರೆ. ಹೆಚ್ಚು ಹಿಟ್ಟು ಬೆರೆಸಿ ಪಲ್ಯದ ರೂಪದಲ್ಲಿ ಅದು ರೊಟ್ಟಿ ಜೊತೆಯ ಪದಾರ್ಥ. ಹಿಟ್ಟು ಕಡಿಮೆಹಾಕಿ, ನೀರಾಗಿ ಮಾಡಿದರೆ ಅದು ಅನ್ನಕ್ಕೆ ಸಾರಿನ ಸ್ಥಳದಲ್ಲಿ. ಗಟ್ಟಿಯಿದ್ದುದನ್ನು ಮರಾಟಿಗರು

ಇವರ ಅತ್ಯಂತ ಹತ್ತಿರದ ಸ್ನೇಹಿತರೊಬ್ಬರು ಕೋಕಣೆ ಎಂಬವರು. ಇವರೊಬ್ಬ ಉತ್ತಮ ಸಮಾಜ ಸೇವಕರು. ಸ್ವಂತ ಕಾರಖಾನೆಯಿದೆ. ವಿದ್ಯಾದಾನಕ್ಕಾಗಿ ತರಗತಿಗಳನ್ನು ನಡೆಸುತ್ತಾರೆ. ಸಮಾಜಸೇವೆಯ ಉತ್ಸಾಹವೇ ಇವರನ್ನು ಈ ವಿಚಾರದೆಡೆಗೆ ಎಳೆಯಿತೆಂದು ಕಾಣುತ್ತದೆ. ಕೈಗೊಂಡ ಕಾರ್ಯಕ್ಕೆ ಅನುಕೂಲಗಳೂ ಒದಗಿ ಬಂದವು. ಮನದಲ್ಲಿ ಮೂಡಿಬಂದ ವಿಚಾರ ಕಾರ್ಯಗತವಾಗುವಲ್ಲಿ ತಡವಾಗಲಿಲ್ಲ. ಜಾಗೆಯ ಅನುಕೂಲವಾಯಿತು. ನೀರಿಗೆ

ಝುಣಕಾ ಭಾಕರ ಪಾಕಶಾಲೆ: ತಯಾರಿಕೆಯ ಹಂತದಲ್ಲಿ ರೊಟ್ಟಿಗಳು

ನಲ್ಲಿ ಸಿಕ್ಕಿತು. ಮುಂಬೈ ನಗರಸಭೆ ಕಾರ್ಪೊರೇಶನ್‌ನವರು ಇವರಿಗೆ ನೀರನ್ನು ಪುಕ್ಕಟೆ ನೀಡಿದ್ದಾರೆ.

ಉದ್ಘಾಟನೆ

ಕಳೆದ ಫೆಬ್ರುವರಿ 18ರಂದು ವಿ. ಶಾಂತಾರಾಮರಿಂದ ಕೋಕಣೆಯವರು ‘ಝುಣಕಾ ಭಾಕರ್’ಸ್ಟಾಲಿನ ಉದ್ಘಾಟನೆ ಮಾಡಿಸಿಯೇ ಬಿಟ್ಟರು. ಉದ್ಘಾಟನೆಗೆ ಆಮಂತ್ರಿಸಲು ಹೋದಾಗ ಶ್ರೀ ಶಾಂತಾರಾಮ ಹೇಳಿದರಂತೆ – “ದಯವಿಟ್ಟು ನಾನು ಬರಲು ಒಪ್ಪಿಕೊಂಡಿದ್ದೇನೆಂದು ನನ್ನ ಪತ್ನಿಗೆ ತಿಳಿಯದಂತಿರಲಿ” ಎಂದು. ಕೋಕಣೆಯವರಿಗೆ ದಿಗಿಲು. “ಏನಿಲ್ಲ, ನಾನು ‘ದೋ ಆಂಖೇ ಬಾರಾ ಹಾತ್’ನ ಪಾತ್ರದಲ್ಲಿ ರೊಟ್ಟಿ ಸುಡುವ ಪ್ರಸಂಗವನ್ನು ಮನೆಯವಳು ನೆನೆದು, ಉದ್ಘಾಟನೆಯೆಂದರೆ ರೊಟ್ಟಿ ಸುಡಲೆಂದೇ ನನ್ನನ್ನು ಕರೆದುಕೊಂಡು ಹೋಗುತ್ತಿದ್ದೀರಿ ಎಂದು ತಿಳಿದಾಳು” ಎಂದು ಹಾಸ್ಯದಲ್ಲಿ ನಕ್ಕರಂತೆ. ಕೋಕಣೆಯವರ ಪ್ರಯತ್ನವನ್ನು ಶ್ಲಾಘಿಸಿ ಶಾಂತಾರಾಮರು ರೊಟ್ಟಿಯೊಂದಿಗೆ “ಉಳಿದ ವಸ್ತುಗಳನ್ನೇನನ್ನಾದರೂ ಕೊಡಿ. ಆದರೆ, ಜೊತೆಗೆ ನೀರುಳ್ಳಿಯನ್ನು ಮಾತ್ರ ಕೊಡಲು ಮರೆಯಬೇಡಿ” ಎಂದರಂತೆ.

ಮುಂಬೈ ನಗರಸಭೆಯ ಕಮಿಶನರ್ ಶ್ರೀ ದೇಶಮುಖರು ಈ ಕಾರ್ಯದಲ್ಲಿ ಎಲ್ಲ ಸಹಕಾರ ನೀಡಿದ್ದಾರೆ. ಮುಂದೆ ನೀಡುವ ಭರವಸೆ ಕೊಟ್ಟಿದ್ದಾರೆ. ‘ಝುಣಕಾ ಭಾಕರ’ ಎಂದೇ ಈ ಸಂಸ್ಥೆ ‘ಟ್ರಸ್ಟ್’ ಆಗಲಿದೆ. ಚಾರಿಟಿ ಕಮಿಶನರ್ ಬಳಿ ರಿಜಿಸ್ಟರ ಮಾಡಲು ಹೋದಾಗ ಅವರು ಶ್ರೀ ಕೋಕಣೆಯವರಿಗೆ “ನೀವು ಮುಂಬೈ ನಿವಾಸಿಗಳಲ್ಲಿ ಶೇ. 1ರಷ್ಟು ಸಂಖ್ಯೆಯವರಿಗಾದರೂ ಈ ಸೌಲಭ್ಯವನ್ನು ಪೂರೈಸಲು ಸಿದ್ಧರಿದ್ದರೆ, ನಾನು ಸಂಸ್ಥೆಯನ್ನು ರಿಜಿಸ್ಟರ್ ಮಾಡುತ್ತೇನೆ” ಎಂದು ಚೇಷ್ಟೆಗೆ ಹೇಳಿದರಂತೆ. ಆದರೆ ಅದು ನಿಜವಾಗುತ್ತಲಿದೆ! ಈಗಿರುವ ಸ್ಟಾಲಿನಲ್ಲಿ ದಿನಕ್ಕೆ ಎರಡು ಸಾವಿರ ಐದುನೂರು ಜನ ಇದರ ಲಾಭ ಪಡೆಯುತ್ತಿದ್ದಾರೆ. ಮುಂಬೈ ಶೇಕಡ ಒಂದು ಜನವಿಭಾಗಕ್ಕೆ ಈ ಸೌಲಭ್ಯ ದೊರೆಯಬೇಕಾದರೆ, 30 ಸ್ಟಾಲ್‌ಗಳು ಸಿದ್ಧವಾಗಬೇಕು. ಕೊನೆಪಕ್ಷ ಪ್ರತಿದಿನ 60 ಸಾವಿರ ಜನ ಈ ರೊಟ್ಟಿ ತಿನ್ನಬೇಕು. ಇದಕ್ಕಾಗಿ ಬೃಹನ್ಮುಂಬಯಿ ಪರಿಸರದಲ್ಲಿ 30 ಸ್ಟಾಲುಗಳು ಸಿದ್ಧವಾಗಲಿವೆ. ದಾದಾಯ ಕುರ್ಲಾ ತರಕಾರಿ ಪೇಟೆಯಲ್ಲಿ ಬಹುಶಃ ಇದೇ ತಿಂಗಳು ಎರಡನೆಯ ಸ್ಟಾಲ್ ರೂಪುಗೊಳ್ಳುವುದು.

ಒಂದು ಸ್ಟಾಲನ್ನು ಸಿದ್ಧಮಾಡಬೇಕಾದರೆ, ಆರಂಭದ ವೆಚ್ಚ ಬಂಡವಾಲು ಸೇರಿ, ಇಪ್ಪತ್ತುಸಾವಿರ ಬರುವುದಂತೆ. ಮುಂದಿನ ಸ್ಟಾಲುಗಳಿಗೆ ಹಣದ ಸೌಕರ್ಯವನ್ನು ಒದಗಿಸಲು ಕೆಲವು ಬ್ಯಾಂಕುಗಳು ಮುಂದೆ ಬಂದಿವೆ. ಮಹಾರಾಷ್ಟ್ರ ಸರಕಾರ ಮತ್ತು ಮುಂಬೈ ನಗರಸಭೆಯವರು ಒಂದೊಂದು ಲಕ್ಷ ಕೊಡುತ್ತಾರೆಂದು ತಿಳಿದಿದೆ. ನೀರು ಪುಕ್ಕಟೆ. ಅಲ್ಲದೆ ಜಾಗೆಯ ಅನುಕೂಲ ಮಾಡಿಕೊಡುತ್ತಾರೆ.

ಉತ್ತಮ ಆಹಾರ, ಅತಿ ಸುಲಭ ಬೆಲೆಯಲ್ಲಿ ಜನತೆಗೆ ಸಿಕ್ಕರೆ, ಈ ಸಾಹಸದಿಂದಾಗಿ ಕೆಲವು ಜನರಿಗೆ ಕೆಲಸದ ಅನುಕೂಲತೆಯೂ ಆಗುತ್ತಿದೆ. ಈ ಸ್ಟಾಲಿನಲ್ಲಿ ಮಹಿಳೆಯರು – ಪುರುಷರು ಐವತ್ತು ಜನ ಕೆಲಸ ಮಾಡುತ್ತಾರೆ. ಮೂವತ್ತು ಸ್ಟಾಲುಗಳು ಸಿದ್ಧವಾದರೆ, 1500 ಜನರಿಗೆ ನೌಕರಿ, 60 ಸಾವಿರ ಜನರಿಗೆ ರೊಟ್ಟಿ ಸಿಗುವುದಲ್ಲದೆ, ಈ ಪ್ರಯತ್ನದಿಂದ ಏನಾದರೂ ಆರ್ಥಿಕ ಲಾಭವಿದೆಯೆಂದು ತಿಳಿಯಲು ಪ್ರಯತ್ನಿಸಿದಾಗ ‘ಲಾಭವೂ ಇಲ್ಲ ಹಾನಿಯೂ ಇಲ್ಲ’ ಎಂದು ತಿಳಿದುಬಂತು.

ಪ್ರೇರಣೆ

ಶ್ರೀ ಕೋಕಣೆ ಅಚ್ಚ ಮರಾಟಿಗರು, ಸ್ವಾಭಿಮಾನಿ – “ನೋಡಿ, ನಿಮ್ಮ ಇಡ್ಲಿ, ಸಾಂಬಾರ್, ಏರೀ ಅಮೇರಿಕಾ ಅಷ್ಟೇ ಏಕೆ ಬಹುಶಃ ವಿಶ್ವದ ಎಲ್ಲೆಡೆಯಲ್ಲೂ ಪ್ರಸಾರವಾಗಿದೆ, ಅದರ ರುಚಿಯನ್ನು ನೀವು ಎಲ್ಲರಿಗೂ ಹಚ್ಚಿದ್ದೀರಿ. ನಮ್ಮದೂ ಹಾಗೇನೂ ಬೇಡವೇ? ಮುಂಬೈಯ ಉಳಿದವರೂ ಝುಣಕಾ ಭಾಕರ ರುಚಿ ನೋಡಲಲ್ಲ? ಇದೂ ಒಂದು ನನ್ನನ್ನು ಈ ಕಾರ್ಯಕ್ಕೆ ಇಳಿಯಲು ಪ್ರೇರೇಪಿಸಿದ್ದು” ಎಂದರು.

ಮುಂಬೈಯಲ್ಲಿ ಪ್ರಾರಂಭವಾಗಲು, ಪುಣೆಯ ಪ್ರೇರಣೆ – ಪುಣೆಯವರಿಗೆ ಈ ವಿಚಾರ ಹೇಗೆಬಂತು? ಪಂಢರಪುರದ ಜಾತ್ರೆಯಲ್ಲಿ ಯಾತ್ರಿಕರಿಗೆ ಒದಗಿಸಲಾಗುತ್ತಿರುವ ಅನುಕೂಲವೇ ಇವರಿಗೆ ಪ್ರೇರಣೆ. ಗಣೇಶೋತ್ಸವದಲ್ಲಿ ಗುಲಾಲ ಬುಕ್ಕಿಟ್ಟಿಗೆ ಖರ್ಚಾಗುತ್ತಿದ್ದ ಹಣವನ್ನು ಉಳಿಸಿ, ಪ್ರಥಮ ಸ್ಟಾಲ್ ಪ್ರಾರಂಭವಾಯಿತು. ಪ್ರತಿದಿನ ತರಕಾರಿ ಪೇಟೆಯವರಿಂದ ಧಾನ್ಯ ಕಾಯಿಪಲ್ಲೆ ದಾನರೂಪವಾಗಿಯೂ ಬರುತ್ತಿದೆ. ಇದನ್ನು ನೋಡಿ ಪುಣೆಯ ಭವಾನಿ ಪೇಟೆಯಲ್ಲಿರುವ “ಹಮಾಲ ಪಂಚಾಯತ”ದವರು ‘ಕಷ್ಟಾಚಿ ಭಾಕರ’ ಎಂದು ಪ್ರಾರಂಭಿಸಿದ್ದಾರೆ. ಇಲ್ಲಿ ಪ್ರತಿದಿನ ಮೂರುಸಾವಿರ ಹಮಾಲರು ಇದರ ಲಾಭ ಪಡೆಯುತ್ತಿದ್ದಾರೆ. ಐವತ್ತು ಪೈಸೆಯಲ್ಲಿ, ಮೇಲೆ ಹತ್ತು ಪೈಸೆಗೆ ಇಲ್ಲಿ ಸಿರಾ ಕೂಡಾ ಸಿಗುತ್ತದಂತೆ. ಇದನ್ನು ನೋಡಿ ಪಲ್ಟಣ ಹಾಗೂ ಸಾತಾರಾಗಳಲ್ಲಿಯೂ ಸ್ಟಾಲುಗಳು ಶುರುವಾಗಿವೆ.

ಈ ಪ್ರಯತ್ನ ಜನಸಾಮಾನ್ಯರಿಗೆ ಬಹಳ ಅನುಕೂಲವಾಗಿದೆ. ಧಾರವಾಡದವರಿಗೆ ಜೋಳದ ರೊಟ್ಟಿಯೆಂದರೆ ಹೊಟ್ಟೆ ಎರಡಾಗುತ್ತದೆ. ಸಾವಿರಾರು ಜನ ಸ್ವಂತ ನಾಲಿಗೆಯ ಚಪಲಕ್ಕೂ ಇಲ್ಲಿ ಬಂದಾರು. ಆದರೆ ಸಾಮಾನ್ಯನಿಗೆ ಇದೊಂದು ಮಹದುಪಕಾರ. ಬೆಂಗಳೂರು, ಹುಬ್ಬಳ್ಳಿ, ಬೆಳಗಾವಿಗಳಲ್ಲಿ ಇಂಥ ಪ್ರಯತ್ನಗಳೇಕೆ ನಡೆಯಬಾರದು?

ಬಟ್ಟೆಗಳ ಮೇಲೆ ಜಾನಪದ ಚಿತ್ರಗಳ ಅನುಕರಣೆ

1-11-1998

ಚಿತ್ರ-ಲೇಖನ
● ಎಸ್.ಸಿ. ದೇಸಾಯಿ
ಹುಬ್ಬಳ್ಳಿ

ಮನೆಯವಳು ತವರು ಮನೆಗೆ ಧಾರವಾಡಕ್ಕೆ ಹೋದವಳು ಬರುವಾಗ ಒಂದು ದೊಡ್ಡ ಗಂಟನ್ನು ಹೊತ್ತು ತಂದಿದ್ದಳು. ಹಬ್ಬ ಅಲ್ಲ, ಹುಣ್ಣಿಮೆಯಲ್ಲ ತವರು ಮನೆಯವರು ಈಗ ಇವಳಿಗೇನು ನೀಡಿದರು? ಎಂದು ಅಚ್ಚರಿ! ಆತುರನಾಗಿಯೇ ಗಂಟು ಬಿಚ್ಚಿದೆ. ನೋಡಿದರೆ ಮೂರಾಯಿತು ಹತ್ತೆಂಟು ಮಗಳಿಗೆ ಗೆಗಳು, ಕೈಮಗ್ಗದ ಹಾಸಿಗೆಯ ಹೊದಿಕೆಗಳು ನನಗೆ ಒಂದಿಷ್ಟು ಕೋಪವೂ ಬಂತು. ಏನು ಇಷ್ಟೊಂದು ಖರೀದಿಸಿದ್ದಿಯಾ ಎಂದು ಕೇಳಿದೆ. ಕಾರಣ ನಂತರ ತೆರಬೇಕಾದವನು ನಾನೇ ಅಲ್ಲವೆ?

ಮನೆಯವಳು ಶಾಂತ ರೀತಿಯಿಂದಲೇ ನನ್ನನ್ನು ಸಮಾಧಾನಪಡಿಸಲು ಪ್ರಯತ್ನಿಸಿದಳು. ಗಾಬರಿಯಾಗಬೇಡಿ. ನಿಮ್ಮ ತಮ್ಮನ ಪತ್ನಿ ಹೊತ್ತು ಕಳೆಯಲೂ ಹಾಗೂ ಒಂದಿಷ್ಟು ಗಳಿಸಲು ಮನೆಯಲ್ಲಿಯೇ ಈ ವ್ಯಾಪಾರ ಪ್ರಾರಂಭಿಸಿದ್ದಾಳಂತೆ. ನೀವೂ ನಿಮ್ಮ ಕಾಲನಿಯಲ್ಲಿ ಮಾರಿರಿ. ಮಾರಿದ್ದಕ್ಕೆ ನಿಮಗೂ ಕಮಿಶನ್ ಸಿಗುವುದು ಎಂದು ಹೇಳಿದ್ದಾಳೆ ಎಂದು ಹೇಳಿದಳು.

ಆ ಬಟ್ಟೆಗಳನ್ನು ಒಂದೊಂದಾಗಿ ನೋಡಿದೆ. ಅದರಲ್ಲಿ ಒಂದು ಮಾತ್ರ ನನ್ನ ಮನಸ್ಸನ್ನು ಸೆಳೆಯಿತು. ಆಗ ಮನೆಯವಳಿಗೆ ಹೇಳಿದೆ ಅದನ್ನು ನಮಗೇ ಇಟ್ಟುಕೋ ಎಂದು. 'ಏಕೆ ಇವನ್ನು ತಂದುದಕ್ಕೆ ಕೋಪಗೊಂಡಿದ್ದಿರಿ. ಈಗೇಕೆ ಈ ಸನ್ನಾಹ ಎಂದು ಮನೆಯವಳು ಚುಚ್ಚಿದಳು. ಆಗ ಅವಳೊಂದಿಗೆ ಚರ್ಚೆಗೆ ಇಳಿಯಲಿಲ್ಲ. ನಾನು ಮೆಚ್ಚಿದ್ದ ಆ ಹೊದಿಕೆಯನ್ನು ತೋರಿಸುತ್ತ ನೀನೇ ಹೇಳು ನಾನ್ಯಾಕೆ ಇದನ್ನು ಮೆಚ್ಚಿದ್ದೇನೆಂದು' ಎಂದು ಅವಳಿಗೆ ಸವಾಲು ಹಾಕಿದೆ.

ಕ್ಷಣ ಹೊತ್ತು ಸುಮ್ಮನಾಗಿ ಒಮ್ಮೆಲೆ ಉಸುರಿದಳು. ''ಅಹುದು ಈ ಹೊದಿಕೆಯ ಮೇಲಿರುವ ಚಿತ್ರ ನೀವು ಲೇಖನ ಬರೆದ ವಾರಳಿ ಜಾನಪದ ಚಿತ್ರಕಲೆಯನ್ನೇ ಹೋಲುತ್ತದೆ'' ಎಂದಳು.

ಈ ರೀತಿಯಾಗಿ ಇಂಥ ಜಾನಪದ ಚಿತ್ರಕಲೆಯನ್ನು ಬಟ್ಟೆಯ ಅಲಂಕಾರಕ್ಕಾಗಿ ಉಪಯೋಗಿಸುವುದು ಇದೇ ಮೊದಲಲ್ಲ. ಹಿಂದೆ ಒಂದೆರಡು ಬಟ್ಟೆಯ ಅಂಗಡಿಗಳಲ್ಲಿ ನೋಡಿದ್ದೆ. ಮಧ್ಯಪ್ರದೇಶದ 'ಪಟ್ಟಾಚಿತ್ರ'ದ ಅನುಕರಣೆ, ಉತ್ತರ ಪ್ರದೇಶದ ಜಾನಪದ ಚಿತ್ರಕಲೆ ''ಮಧುಬಣಿ''ಯ ಅನುಕರಣೆ ಇನ್ನು ಯಾವ ಯಾವ ಚಿತ್ರಕಲೆಯ ಅನುಕರಣೆಯೂ ಆಗಿತ್ತು. ಅದೇಕೆ ಮಹಾರಾಷ್ಟ್ರ ಚಿತ್ರ ಕಲಾವಿದರೊಬ್ಬರು ಜಯದೇವ ಕವಿಯ ಗೀತಗೋವಿಂದ ಕಾವ್ಯವನ್ನಾಧರಿಸಿ ಮಾಡಿದ ಚಿತ್ರಗಳ ಅನುಕರಣೆಯನ್ನು ದಿಂಬಿನ, ಲೋಡಿನ ಹೊಂದಿಕೆಯ ಮೇಲೂ ಮಾಡಿದ್ದುಂಟು.

ಈ ಅನುಕರಣೆ ಅಪರಾಧವೇನಲ್ಲ. ನಡೆದೇ ಬರುತ್ತಿದೆ. ಉತ್ತಮ ನಕ್ಷೆಯ ಬಟ್ಟೆಗಳಿಗೆ ಬೇಡಿಕೆ ಹೆಚ್ಚು, ಅಲ್ಲದೇ ನಕ್ಷೆಗಳಲ್ಲಿ ಬದಲಾವಣೆಯಿಲ್ಲದೇ ಅದೇ ನಕ್ಷೆಯನ್ನೇ ಮತ್ತೆ ಮತ್ತೆ ಮಾಡಿದರೆ ಕೊಳ್ಳುವವರಿಗೆ ಬೇಜಾರವಾಗುತ್ತದೆ ಅಂತಲೇ ಇಂಥ ಅನುಕರಣೆ ಅನಿವಾರ್ಯ!

ಅದರಲ್ಲೂ ನೇಕಾರರಲ್ಲಿ ಪೈಪೋಟಿ, ಎಲ್ಲರೂ ಹೆಚ್ಚು ಆಕರ್ಷಕ ನಕ್ಷೆಯ ಬಟ್ಟೆಯನ್ನು ಮಾರುಕಟ್ಟೆಗೆ ತಳ್ಳಬೇಕೆಂಬುದೇ ಉದ್ದೇಶ. ಇದೂ ಕೂಡ ಅನುಕರಣೆಯನ್ನು ಪ್ರೋತ್ಸಾಹಿಸುವುದೇ ನಕ್ಷೆಕಾರರು ಹೊಸ ನಕ್ಷೆಗಳನ್ನು ಎಷ್ಟೆಂತ ಪೂರೈಸಲು ಸಾಧ್ಯ!

ವಾರಳಿ ಚಿತ್ರಕಲೆ/ಜನಾಂಗ

ಇದೊಂದು ಜಾನಪದ ಚಿತ್ರಕಲೆ. ಮಹಾರಾಷ್ಟ್ರದ ಠಾಣೆ ಜಿಲ್ಲೆಯ ಸಹ್ಯಾದ್ರಿ ಪರ್ವತದಲ್ಲಿ ವಾಸವಾಗಿರುವ 'ವಾರಳಿ' ಎಂಬ ಜನಾಂಗದಲ್ಲಿ ಬೆಳೆದುಬಂದ ಕಲೆ. ಮುಂಬೈಯಿಂದ ಪಶ್ಚಿಮ ರೈಲ್ವೆಯಲ್ಲಿ ಪ್ರವಾಸ ಮಾಡಿ 'ದಹಾನು' ರೋಡ ನಿಲ್ದಾಣದಲ್ಲಿಳಿದು 13 ಕಿಲೋಮೀಟರ್ ಬಸ್ಸಿನಲ್ಲಿ ಪ್ರವಾಸ ಮಾಡಿದರೆ 'ಗಂಜಾಡ' ಎಂಬೊಂದು ಹಳ್ಳಿಯು ಈ ಸಹ್ಯಾದ್ರಿ ಕಂದರದಲ್ಲಿ ಸಿಗುವ ಒಂದು ಜಾಗ. ಇಲ್ಲಿಯ ಸುತ್ತಮುತ್ತ ಈ ಆದಿವಾಸಿಗಳ ವಾಸ್ತವ್ಯ ಇರುವುದು ಹುಲ್ಲಿನ ಗುಡಿಸಲುಗಳಲ್ಲಿ ಈ ಗುಡಿಸಲುಗಳ ನೆರಕೆಯು ಬಹುತೇಕ ಸಗಣಿಯಿಂದ ಬಳಿದದ್ದಾಗಿರುತ್ತವೆ. ಹಬ್ಬ ಹುಣ್ಣಿಮೆ, ಮದುವೆ ಮುಂತಾದ ಶುಭ ಕಾರ್ಯಗಳಲ್ಲಿ ಈ ನೆರಕೆಗಳು ವಿಶಿಷ್ಟ ಚಿತ್ರಗಳಿಂದ ಅಲಂಕೃತವಾಗಿರುತ್ತವೆ. ಈ ವಿಶಿಷ್ಟ ಚಿತ್ರಗಳಲ್ಲಿ ಅವರ ದೇವರು, ಹಳ್ಳಿಯ ಚಟುವಟಿಕೆಗಳು, ಬೇಸಾಯದ ವಿಷಯಗಳು ಮುಂತಾದ್ದೆಲ್ಲ ಚಿತ್ರಿತವಾಗಿರುವವು. ಇವರು ವಿಶೇಷವಾಗಿ ಚಿತ್ರಿಸುವ ಇವರ ದೇವತೆ ಚಿತ್ರ ಹೊಂದಿದೆ. ಅದು ಮಾತ್ರ ಪಾರಂಪರಿಕವಾಗಿ ಬಂದ ರೀತಿಯಲ್ಲೇ ಚಿತ್ರಿತವಾದರೆ ಮಾತ್ರ ಅದು ಪೂಜೆಗೆ ಯೋಗ್ಯವಾದುದು. ಇನ್ನು ಆಲಂಕಾರಿಕ ಚಿತ್ರಗಳೂ ಬೇರೆ. ಹಾಗೆಯೇ ಇವರು Expressionists ಕೂಡ. ಆ, ಆ, ಚಿತ್ರಕಾರನ ಯೋಗ್ಯತೆಗೆ ಅನುಗುಣವಾಗುವಂತೆ ಅವನು ಚಿತ್ರ ಬಿಡಿಸಿರುತ್ತಾನೆ. ಉದಾಹರಣೆಗೆ ಒಬ್ಬ ಚಿತ್ರಕಾರ ಒಂದು ಗುಡ್ಡವನ್ನು ಚಿತ್ರಿಸಿ ಅದರಲ್ಲಿ ಹುಲಿ ಮುಂತಾದ ಕಾಡುಮೃಗಗಳು, ವಿಷವುಳ್ಳ ಸರ್ಪ ಮುಂತಾದ್ದನ್ನೆಲ್ಲ ಚಿತ್ರಿಸಿದ್ದಾನೆ. ಗುಡ್ಡದ ಕೆಳಭಾಗದಲ್ಲಿ ಬೇಸಾಯದ ಜನ ಕಾರ್ಯನಿರತರಾಗಿರುತ್ತಾರೆ. ಅಲ್ಲಿಯೇ ಒಂದು ಗುಡಿಯಲ್ಲಿ ಪೂಜೆಯಲ್ಲಿ ನಿರತರಾದ ಜನ ಇರುತ್ತಾರೆ. ಇಂಥ ಗದ್ದಲಲ್ಲಿಯೇ ಹಳ್ಳಿಯ ಪ್ರೇಮಿಗಳೇರ್ವರು ಎಲ್ಲರ ಕಣ್ಣುತಪ್ಪಿಸಿ ಗುಡ್ಡದ ಪೊದೆಯ ಮರೆಯಲ್ಲಿ ಪ್ರಣಯದಲ್ಲಿ ತೊಡಗಿರುತ್ತಾರೆ. ಹೀಗಿದೆ ಇವರ ಕಲ್ಪನಾ ವಿಲಾಸ!

ಇಷ್ಟೆಲ್ಲ ವಿಷಯಗಳನ್ನು ಅವರು ಚಿತ್ರದಲ್ಲಿ ಹೆಣೆಯುತ್ತಾರೆಂದರೆ ಅವುಗಳ ವರ್ಣ ಹೇಗಿರುತ್ತೋ ಎಂದು ಯೋಜಿಸುವ ಗೊಡವೆಗೆ ಹೋಗಬೇಡಿ. ಅದಿರುವುದು ಒಂದೇ ಒಂದು ಬಣ್ಣದಲ್ಲಿ! ನೆರಕೆಯನ್ನು ಸಗಣಿಯಿಂದ ಸಾರಿಸಿದ್ದೇ ಚಿತ್ರದ ಹಿನ್ನೆಲೆ. ಅಕ್ಕಿಯನ್ನು ನೆನೆಹಾಕಿ ರುಬ್ಬಿದ ಹಿಟ್ಟೆ ಚಿತ್ರಕ್ಕೆ ಸಾಧನವಾದ ಬಣ್ಣ. ಶಾಸ್ತ್ರೀಯವಾಗಿ ಹೀಗೆಯೇ ಇರಬೇಕು ಕೂಡ. ಅಂದರೇನೆ ಅದು ಶುಭ ಕಾರ್ಯಕ್ಕೆ ಯೋಗ್ಯವಾದುದು.

ಈ ಜನಾಂಗದವರು ಹಿಂದು ಧರ್ಮಕ್ಕೆ ಸೇರಿದವರಾದರೂ ಇವರ ಸಂಸ್ಕೃತಿಯೊಂದು ವಿಶಿಷ್ಟವೆನಿಸುತ್ತದೆ. ಹುಟ್ಟಿದ ಮಗುವಿಗೇ ಉಪದೇಶ. ''ರಾಜನಿಗೂ ರಾಜ ಮಂಡಳಿಗೂ ಗುಡುಗು ಮಿಂಚಿಗೂ ಅಂಜಬೇಡ'' ಎಂದು. ಆ ಹಸುಗೂಸಿಗೆ ಕಿವಿಯಲ್ಲಿ ಊದಿ ಉಪದೇಶ. ದೇವರಲ್ಲಿ ನಂಬಿಕೆಯಿದ್ದಂತೆ ಭೂತಾರಾಧನೆಯೂ ಉಂಟು.

ಕೆಲ ವರ್ಷಗಳ ಹಿಂದೆ ನಾನು ಈ ಜನಾಂಗದವರನ್ನು ಅವರ ಸ್ಥಳದಲ್ಲಿಯೇ ಕಂಡಾಗ 'ಜೀವ್ಯಾ ಸೋಮಾ ಮಾಸೆ' ಎಂಬುವನು ಈ ಗ್ರಾಮೀಣ ಚಿತ್ರಕಲೆಯ ಅಂದಿನ ಮಾಸ್ಟರ್ ಕ್ರಾಫ್ಟ್‌ಮನ್ ಆಗಿದ್ದನು. ಈ ಚಿತ್ರಕಲೆ ಗುಡಿಸಲುಗಳಿಗೆ ಸೀಮಿತವಾಗಿರಬಾರದೆಂದೆಣಿಸಿ, ಗೋಣಿ ತಟ್ಟಿನ ಕ್ಯಾನ್‌ವಾಸ್ ಫ್ರೇಮ್ ಮಾಡಿ ಅದಕ್ಕೆ ಹಿನ್ನೆಲೆಯನ್ನು ಸಿದ್ಧಪಡಿಸಿ ಅದರ ಮೇಲೆ ಅವರದೇ ರೀತಿಯಲ್ಲಿ ಚಿತ್ರಿಸಿ ಅವನ್ನು ಪೇಟೆಗೆ ತಂದರು. ಆದರಿಂದಾಗಿ ಎಷ್ಟೋ ರಸಿಕರಿಗೆ ಈ ಜಾನಪದ ಕಲೆಯ ಅರಿವಾಯಿತು. ಈ ಬಡವರಿಗೆ ನಾಲ್ಕು ಕಾಸು ಸಿಗುವಂತಾಯಿತು. ಈಗ ಈ ಕಲೆ ಸಮುದ್ರದಾಚೆಗೂ ಹೋಗಿದೆ. ಭಾರತದ ಒಂದು ಜಾನಪದ ಕಲೆ ಎಂಬ ಮನ್ನಣೆಯೂ ದೊರೆತಿದೆ.

ಮಹಾದೇವನಂತೆ 'ಪಾವಸಾ' ಕೂಡ ಇವರ ಇನ್ನೊಬ್ಬ ದೇವತೆ. 'ಪಾವುಸ್' ಎಂದರೆ ಮರಾಠಿ ಭಾಷೆಯಲ್ಲಿ 'ಮಳೆ'. ಅದೂ ಇವರ ದೇವತೆ.

ಕಡುಬಡವರಾದ ಇವರ ಇದ್ದುಬಿದ್ದ ಅಲ್ಪ ಜಮೀನುಗಳನ್ನು ಸಾವಕಾರಿ ಜಮೀನುದಾರಿ ಪ್ರಭಾವಗಳು ಅವನ್ನು ಕಬಳಿಸಲು ಪ್ರಯತ್ನಿಸಿದ್ದೂ ಉಂಟು! ಅಂಥ ಸಂದಿಗ್ಧ ಪರಿಸ್ಥಿತಿಯಲ್ಲಿ ಪುಣೆಯ ಒಬ್ಬ ಮಹಿಳೆ, ಗೋದಾವರಿ ಬಾಯಿ ಗೋಖಲೆ ಎಂಬುವರು ಇವರ ಸಹಾಯಕ್ಕೆ ನಿಂತು ಇವರನ್ನು ಸಂಕಟದಿಂದ ಪಾರುಮಾಡಿದ ವಿಷಯ ಇತಿಹಾಸವನ್ನೇ ನಿರ್ಮಿಸಿತು!

ಇದೇ ಕಲೆಯ ಅನುಕರಣೆಯಲ್ಲಿ ಹೋದ ವರ್ಷ ಒಬ್ಬ ಕಲಾಕಾರರು, ಗಣಪತಿಯ ಚಿತ್ರಗಳನ್ನು ನಿರ್ಮಿಸಿ ವಾರಪತ್ರಿಕೆಯೊಂದರಲ್ಲಿ ಪ್ರಕಟಿಸಿದ್ದನ್ನು ಇಲ್ಲಿ ನೆನೆಯಬಹುದು.

ಈ ರೀತಿಯಾಗಿ ಇಂಥ ಜಾನಪದ ಕಲೆಗಳು ಎಲ್ಲೆಲ್ಲಿಯೂ ನಿರ್ಮಾಣವಾದರೂ ಅವುಗಳ ಅನುಕರಣೆ ಎಲ್ಲಿಯೋ ನಡೆಯುತ್ತಿದೆ. ಯಾರದೋ ಕಲೆ ಯಾರದೋ ಹೊಟ್ಟೆ ತುಂಬುತ್ತದೆ. ಅನಿವಾರ್ಯದ ಈ ಪ್ರಸಂಗಕ್ಕೆ ನಮೋ, ನಮೋ! ●

Udayavani 17th Nov 1998

Karmaveer Prabha

ದಖನ್ನಿನ ರಾಣಿಗೆ ಐವತ್ತು ವರ್ಷ

15th June 1980

2/39

ಭಾರತ [illegible] 1853ರಲ್ಲಿ ಅಂದರೆ 127 ವರ್ಷಗಳ ಹಿಂದೆ. ಪ್ರಥಮ ರೈಲು ಚಲಿಸಿದ್ದು ಮುಂಬೈ ವಿಕ್ಟೋರಿಯಾ ಟರ್ಮಿನಸ್‌ದಿಂದ ಠಾಣೆ ವರೆಗೆ ಮಾತ್ರ. ನಂತರ ಅದು ಹಾಗೆ ಬೆಳೆಯುತ್ತಾ ಹೋಯಿತು. ಬೆಳೆದಂತೆ ರೈಲು ಪ್ರವಾಸದಲ್ಲಿ [illegible]. ಇಂದ್ಯಾವ ಪ್ರವಾಸ ಕಾರ್ಯದಲ್ಲಿ ರೈಲಿಸದು ಅದು [illegible].

[illegible] 'ದಖ್ಖನದ ರಾಣಿ' [illegible] "ಡೆಕ್ಕನ್ ಕ್ವೀನ್" [illegible]. [illegible]-ಪುಣೆಯ ನಡುವೆ ಅಡ್ಡಾಡುವ ಈ ರೈಲೇ ದಖ್ಖನದ ರಾಣಿ. ಅವಳಿಗೆ ಈಗ ಪೂರ್ಣ ಐವತ್ತು ವರ್ಷ. ಅವಳು ಜನ್ಮ ತಾಳಿದ್ದು 1ನೇ ಜೂನ್ 1930ರಂದು, ಅಂದೇ ಅವಳ ಪ್ರಥಮ ಪ್ರವಾಸ.

ಮುಂಬೈ ನಗರ, ಮಹಾರಾಷ್ಟ್ರ ಜನ್ಮ ತಾಳುವ ಮೊದಲೂ ದ್ವಿಭಾಷಿಕ ಪ್ರಾಂತ್ಯದ ರಾಜಧಾನಿ. ಈಗಂತೂ ಹೌದು. ಪುಣೆ [illegible] ಮಹಾರಾಷ್ಟ್ರದ ಸಾಂಸ್ಕೃತಿಕ "ರಾಜಧಾನಿ". [illegible]

ಎಡಬದಿಯಲ್ಲಿ ಅಲಂಕೃತ ದಖನ್ನಿನ ರಾಣಿ, ಬಲಗಡೆ: ಅಜರ ಕುರುವಾಲಾ ಸಿಗ್ನಲ್ ಒತ್ತುತ್ತಿರುವುದು

[illegible] ಗಂಟೆಗೆ ಇಳಿಸಿದಳು. ಅಲ್ಲದೇ ಭಾರತದಲ್ಲಿ ಅತಿ ವೇಗದಿಂದ ಚಲಿಸುವ ಪ್ರಥಮ ರೈಲು ರಾಣಿಯೂ ಇವಳೇ.

ವೇಗದಲ್ಲಿ ಎಷ್ಟು ತೀಕ್ಷ್ಣವೋ ಪ್ರವಾಸಿಗಳಿಗೆ ಅನುಕೂಲತೆಯನ್ನು ಒದಗಿಸುವಲ್ಲಿ ಇವಳೇ ಮೊದಲಿಗಳು. ಇವಳು ಜನ್ಮ

ಈ ಪ್ರಥಮ ರಾಣಿಯ, ಡಬ್ಬೆಗಳ ಕೆಳಭಾಗವನ್ನು ಇಂಗ್ಲಂಡಿನಲ್ಲಿಯೇ ಸಿದ್ಧಪಡಿಸಿದ್ದು, ಮೇಲಿನ ಡಬ್ಬಿ ಕಟ್ಟುವ ಕಾರ್ಯ ಮಾತ್ರ ಇಂದಿನ ಮಾಟುಂಗಾ ವರ್ಕ್‌ಶಾಪಿನಲ್ಲಿಯೇ ಮಾಡಲಾಗಿತ್ತು. ಅದಕ್ಕೆ [illegible] ಬಣ್ಣ ಎಲ್ಲ ಕಣ್ಣಿಗೆ ಅಂದವಾಗಿದ್ದವು.

1955ರವರೆಗೂ ನಡೆದುಕೊಂಡು ಬಂತು. ಆ ನಂತರ ಮಾತ್ರ ಪ್ರಥಮ ದಾರಿಗೆ ಮೂರನೇ ವರ್ಗದ ಡಬ್ಬಿಗಳನ್ನು ಜೋಡಿಸಲಾಯಿತು. ಮುಂದೆ, 1974ರ 4ನೇ ಏಪ್ರಿಲ್ ದಿನಾಂಕದಿಂದ, ಭಾರತೀಯ ಎಲ್ಲ ರೈಲುಗಳಲ್ಲಿಯೂ ಮೂರನೇ ದರ್ಜೆಯನ್ನು ತೆಗೆದು ಹಾಕಿ, ಕೇವಲ ಪ್ರಥಮ ಮತ್ತು ದ್ವಿತೀಯ ದರ್ಜೆಗಳ ವಿಭಾಗ ಮಾಡಿದಾಗ, ಈ ರಾಣಿಯೂ ಅವರಿಂದ ಪಾರಾಗಲಿಲ್ಲ.

ಹಿಂದಿನ ಹಳೆಯ ಡಬ್ಬಿಗಳನ್ನು ಬದಲಿಸಿ, ಪೂರ್ಣ ಹೊಸ ರೈಲು ಸಿದ್ಧವಾದದ್ದು 1966ರಲ್ಲಿ ಈ ರೈಲು ಪೂರ್ಣವಾಗಿ [illegible] ತಯಾರಾಯಿತು. ಈ [illegible]. ಅಂತೆಯೇ, ಈ [illegible] ಪ್ರವಾಸಿಗರ ಅನುಕೂಲತೆಗಳು ಇನ್ನಷ್ಟು ಹೆಚ್ಚಿದವು. [illegible] "ಫೂಡ್‌ಬ್ಯಾಕ್" [illegible]. ತಂಪು [illegible] ಚಲಿಸಲು ಅನುಕೂಲವಿದ್ದ [illegible] ಜೋಡಿದ ಕಕ್ಷೆಗಳು. ಮುಂತಾದ ಅನುಕೂಲತೆಗಳು ಇದರಲ್ಲಿ ಒದಗಿದವು.

ಇಂದಿನ ಸ್ವರೂಪ

ಇಂದು ರಾಣಿಯು ಒಟ್ಟು 12 ಡಬ್ಬಿಗಳಿಂದ ಕೂಡಿದೆ. ಇದರಲ್ಲಿ 5 ಡಬ್ಬಿಗಳು ಪ್ರಥಮ ದರ್ಜೆಯವರಿಗೆ 7. ದ್ವಿತೀಯ ದರ್ಜೆಯವರಿಗೆ ಮೀಸಲು. ಪುಣೆ–ಮುಂಬೈ ಮಧ್ಯ ಪ್ರತಿನಿತ್ಯ ಪ್ರವಾಸ ಮಾಡುವ ಜನರಿದ್ದಾರೆ. [illegible] ಮುಂತಾದವರೂ ಇದ್ದಾರೆ. [illegible] ನಿತ್ಯ ಪ್ರವಾಸ ಮಾಡುವ

ಪ್ರಾರಂಭದಲ್ಲಿ ದಖನಿನ ರಾಣಿ

ಅತ್ಯವಶ್ಯ. ಅತಿ ವೇಗವಾಗಿರುವ ಬೇಗ ತಲುಪುವ. [illegible] ಕೆಲಸ ಮುಗಿಸಿ ಅಂದೇ ಪುಣೆಗೆ ಮರಳುವ ಅನುಕೂಲ ಅವರಿಗಿತ್ತು. ಈ ಎಲ್ಲ ಅನುಕೂಲತೆಗಳನ್ನು ಹೊಂದಿದವಳೇ 'ದಖ್ಖನದ ರಾಣಿ'. ಹಿಂದಿನಿಂದಲೂ ಪುಣೆ ನಗರಕ್ಕೆ 'ದಖ್ಖನದ ರಾಣಿ' "ಡೆಕ್ಕನ್ ಕ್ವೀನ್" ಎಂದು ಕರೆಯುತ್ತಾರೆ. ಆ ನಗರದ ಸೌಂದರ್ಯದ ಪ್ರತೀಕ. ಸಾಂಸ್ಕೃತಿಕ ಕೇಂದ್ರವೆಂದು ಹೀಗ ಕರೆದಿದ್ದಾರೋ ತಿಳಿಯದು. ಅದರೆ ಆ ನಗರದ ಹೆಸರನ್ನೇ ಈ ಅತಿ ವೇಗದಿಂದ ಓಡುವ ಗಾಡಿಗೆ ಇರಿಸಲಾಗಿದೆ.

ತಾಳಿದಾಗ ಇವಳ ಸಂಸಾರ ಏಳು ಡಬ್ಬಿಗಳಿಂದ ಕೂಡಿದ್ದು. ಹಿಂದಿನ ರೈಲಿನಲ್ಲಿ ನಾಲ್ಕು ತರಗತಿಗಳು. ಪ್ರಥಮ. ದ್ವಿತೀಯ. ಇಂಟರ ಮತ್ತು ತೃತೀಯ [illegible] ಈ ರಾಣಿ ಪಡೆದದ್ದು [illegible]. ಪ್ರಥಮ ಹಾಗೂ ದ್ವಿತೀಯ. ಪ್ರಥಮ [illegible] 61

ಪ್ರಾರಂಭದಿಂದ ಹದಿನೆಂಟುವರೆ ವರ್ಷಗಳ ವರೆಗೆ ಯಾವ ಬದಲಾವಣೆಯನ್ನೂ ಹೊಂದದ ಈ ರಾಣಿಗೆ ಸ್ವಾತಂತ್ರ್ಯಾನಂತರ ಬದಲಾವಣೆ ತೋರಿದವು. ಒಂದಿಷ್ಟು ಜನತಾ ಝಳಕು ತೋರಿತು. 1ನೇ ಜನವರಿ 1949 ರಿಂದ ಈ ರೈಲಿಗೆ ಜನತಾಭಿಮುಖದ ರೂಪ ಬಂತು.

ಜೂನ್ ಒಂದರಂದು ರವಿವಾರ ಸಂಜೆ ಮುಂಬೆ ಸಲ್ಲಿ ಅಪೂರ್ವ ಸಮಾರಂಭ. ಐವತ್ತು ತುಂಬಿದ ದಖನ್ನಿನ ರಾಣಿಗೆ ಒಬ್ಬರ 'ಗಾರ್ಡ್' ಸಮಸ್ಯೆಬದ್ಧ ಹಸಿರು ನಿಶಾನೆ ತೋರಿದರು. ಅಜರ 'ಚಾಲಕ' ಕುರುವಾಲ ಸಿಗ್ನಲ್ ನೀಡಿದರು.

ಪ್ರವಾಸಿಗಳೂ, ದ್ವಿತೀಯ [illegible] 156 [illegible]. ಹಾಗೂ ಈ ಪ್ರವಾಸಿಗರು 19 ಜನ ಆಳುಗಳು ಪ್ರವಾಸ ಮಾಡುವ ಅನುಕೂಲವಿತ್ತು ಆಗ.

ಮೊದಲಿದ್ದ ಪ್ರಥಮ ದರ್ಜೆಯನ್ನು ಪೂರ್ಣ ಬದಲಿಸಿ. ಅಂದಿನ ದ್ವಿತೀಯ ದರ್ಜೆಯನ್ನೇ ಪ್ರಥಮ ದರ್ಜೆಗೆ ಪರಿವರ್ತಿಸಲಾಯಿತು. ಈ ವ್ಯವಸ್ಥೆಯು 1ನೇ ಜೂನ್

ಮುಟ್ಟಿದೆ [illegible]. [illegible] ಪ್ರವಾಸಿಗರಿಗೆ ಮಾಸಿಕ ತ್ರೈಮಾಸಿಕ ಪಾಸಿನ ವ್ಯವಸ್ಥೆ ಇದೆ. ಇಂಥ ಕಾಯಂ ಪ್ರವಾಸಿಗಳಿಗಾಗಿ ಪ್ರತಿ ದರ್ಜೆ

50 ವರ್ಷದ ಹಿಂದೆ ರೈಲು [illegible] [illegible]

ಮೂರು ದಿವಸದ ಪ್ರವಾಸ ಮೂರು ಗಂಟೆಯಲ್ಲಿ

[illegible] 119 ಮೈಲಿ. ಅವರ [illegible]

ಪ್ರಥಮ ರಾಣಿ

[illegible] "ಬಿರ್ಡ್‌ವ್ಯಾಕ್" ಪದ್ಧತಿಯಿಂದ, ಪ್ರತಿ 5–6 ನಿಮಿಷಗಳಲ್ಲಿ ಡಬ್ಬಿಯಲ್ಲಿಯ ಗಾಳಿ ಪೂರ್ಣ ಹವೆಯು ಬದಲಾವಣೆಯಾಗುತ್ತಿತ್ತು. [illegible] ಡಬ್ಬದಸ್ಸು ಕಣ್ಣಿಗೆ ಉಳಿಸುತ್ತಿದ್ದವು.

ಪ್ರಥಮ ಹಾಗೂ ದ್ವಿತೀಯ ದರ್ಜೆ [illegible] ಡಬ್ಬಿಗಳು. ಪ್ರವಾಸ [illegible] ವ ವಸ್ತಿ ಇರಲಿಲ್ಲ. ಅದರೆ ವಿವಿಧ [illegible] [illegible]

[illegible] ಮೊದಲಿನ ಪ್ರವಾಸಿಗೆ ರಾತ್ರಿ [illegible] ಮಾತ್ರ [illegible] [illegible] (ಅಂದಿನ [illegible] ಇದ್ದಿರಲಿಲ್ಲ.)

ಆರಾಮದ ಪ್ರವಾಸಕ್ಕೆ ಅಪಾಯವಿಲ್ಲದ ಉಪಾಯ

ಪ್ರವಾಸದ [illegible] ಮುಂತಾದ [illegible] ಆರಾಮದ ಪ್ರವಾಸಕ್ಕೆ ಆತಂಕ ಬರುವದೊಂದು ಈ ಉಪಾಯ. [illegible] ಪ್ರತಿ ದಿನ ಹೋಗಬಹುದು)

ಈ ರಾಣಿಯಲ್ಲಿ 20–25 ವರ್ಷಗಳಿಂದ ಪ್ರವಾಸ ಮಾಡುವ ಜನ ಇದ್ದಾರೆ. [illegible] ಪ್ರವಾಸ [illegible] ಯಾವ ಗೊಡವೆಯೂ ಇಲ್ಲದೆ ತಮ್ಮಷ್ಟಕ್ಕೆ ತಾನೇ ಗುರಾಣಿ ಹೊಡೆಯುತ್ತಾ ವೇಳೆ ಕಳೆಯುವ ಜನರು ಇಲ್ಲದಿಲ್ಲ.

ಮುವ್ವತ್ತು ವರ್ಷಗಳ ಹಿಂದೆ. ಪ್ರಥಮ ದರ್ಜೆಗೆ– 11 ರೂ. 4 ಆಣೆ, ದ್ವಿತೀಯ ದರ್ಜೆಗೆ 11 ರೂ. 10 ಆಣೆ ಕೊಡಬೇಕಾ

ಎನ್.ಸಿ. ದೇಶಪಾಂಡೆ

ಗಿತ್ತು. ಇಂದು ಅನುಕ್ರಮವಾಗಿ ರೂ. 43. ರೂ. 10 ಕೊಡಬೇಕಾಗುತ್ತದೆ. ಅಲ್ಲದೆ [illegible] ಎಂದು [illegible] ಸಿದ್ದರಿಂದ, ಪ್ರಥಮ ದರ್ಜೆಗೆ ರೂ. 5 ದ್ವಿತೀಯ ದರ್ಜೆಗೆ ರೂ. 1. [illegible] ಕೊಡಬೇಕಾಗುತ್ತದೆ. ಈ [illegible] ಪ್ರಾರಂಭವಾದುದು 1ನೇ ಏಪ್ರಿಲ್ 1923 ರಿಂದ.

[illegible] ಬಲ್ಯಾಣದ ಆಚೆ ಪುಣೆಯವರೆಗೆ [illegible] ರೈಲು ಚಲಿಸಿದ್ದ ಕೀರ್ತಿಯು ಇವಳಿಗೇ ಇದೆ.

ಇದೇ ಜೂನ್ ಒಂದರಂದು ರವಿವಾರ ಸಾಯಂಕಾಲ ಈ ರಾಣಿ ಮುಂಬೈಯಿಂದ ಹೊರಟಾಗ ಇವಳಿಗೆ ವಿಶೇಷ ಅಲಂಕಾರ. 50 ವರ್ಷದ ಸೇವೆಯನ್ನು ಮುಗಿಸಿದ ಅಭಿಮಾನದ ದಿನ ಇಂದು ಜೀವಿಸಿರುವ ಅತಿ ಹಳೆಯ ಈ ಬಂಡಿಯನ್ನು ನಡೆಯಿಸಿದ 85 ವರ್ಷದ ಚಾಲಕ ಶ್ರೀ ದ.ಕೋಟ್ವಿ, [illegible] ಈ ಸಮಾರಂಭದ ಸಂಕೇತವಾಗಿ ಸಿಗ್ನಲ್ ನೀಡಿದರು. ಜೀವಿಸಿರುವ 72 ವರ್ಷದ ಗಾರ್ಡ್ ಶ್ರೀ ಜಗನ್ನಾಥ ಸದಾಶಿವ [illegible] ಹಸಿರು ನಿಶಾನೆ ತೋರಿಸಿದರು. ಅದೇ ದಿನ ಪುಣೆಯಿಂದಲೂ [illegible] ಮೆಳೆಯ್ಯಾಗೆ.



ದಖನ್ನಿನ ರಾಣಿ ಇಂದು

ಗುರುವಾರ ಸಂಜೆ ಉಪನಗರ ರೈಲೊಂದರ ಬೋಗಿ ಉರಿದು ಹೋಗಿ [illegible] ಬೆಂದು ಹೋದರು. ಬೋಗಿ ಸಂಪೂರ್ಣವಾಗಿ ಉರಿದು ಹೋಗಿ ಹಂದರ ಮಾತ್ರ ಉಳಿದಿರುವುದನ್ನು ಮೇಲಿನ ಚಿತ್ರದಲ್ಲೂ, ಬೆಂದು ಹೋದ ಎರಡು ಕಾಲುಗಳು, ಒಂದು ತಲೆ ಹಾಗೂ ಒಂದು ಕೈಯನ್ನು ಕೆಳಗಿನ ಚಿತ್ರದಲ್ಲೂ ಕಾಣಬಹುದು.

ಅರೆಬೆಂದ ಶವಗಳ ಗುರುತು ಶೋಧ: ಹೃದಯವಿದ್ರಾವಕ ದೃಶ್ಯ

(ಕನ್ನಡಪ್ರಭ ವಾರ್ತೆ)

ಮುಂಬೈ, ಫೆ. 14—ಉತ್ತರ ಮುಂಬೈನಲ್ಲಿ ಗುರುವಾರ ಸಂಜೆ ಅಗ್ನಿ ಆಹುತಿಗೀಡಾದ ರೈಲು ಬಂಡಿಯಲ್ಲಿ ಬೆಂದು ಮರಣ ಹೊಂದಿದ 24 ಪ್ರಯಾಣಿಕರ ಪೈಕಿ 21 ಜನರನ್ನು [illegible] ಗಳ ಆಧಾರದಿಂದ ಗುರುತು ಹಿಡಿಯುತ್ತಿದ್ದ ದೃಶ್ಯ ಹೃದಯವಿದ್ರಾವಕವಾಗಿತ್ತು.

ಅನಾಹುತಕ್ಕೀಡಾದ ರೈಲು ಬಂಡಿಯನ್ನು ಪರಿಶೀಲನೆಗಾಗಿ ಇಡಲಾಗಿರುವ ಕುರ್ಲಾ ಪಕ್ಕದ [illegible] ರೈಲ್ವೆ ಅಧಿಕಾರಿಗಳು [illegible] ಭೇಟಿ ನೀಡಿದರು.

[illegible]



[illegible] ಕೆಳಗಿನ ಚಿತ್ರದಲ್ಲಿ ಕಾಣಬಹುದು.

ಸುಧಾ

8 ನವೆಂಬರ್ 1981

ಬೆಲೆ ರೂ. 1·50

ಎಷ್ಟೆಂದು ಬಣ್ಣಿಸಲಿ ಗಣಪ, ನಿನ್ನಯ ರೂಪ

ಒಂದನೇ ಪುಟದಿಂದ

ಸ್ವಾತಂತ್ರ್ಯ ದೊರಕಿತೆಂದು ಇಂದು ಸಾರ್ವಜನಿಕ ಉತ್ಸವಗಳು ನಿಂತಿಲ್ಲ. ಅದೇ ಸ್ವಾತಂತ್ರ್ಯ ಜಾಗೃತಿಯ ಜೊತೆಗೆ, ವ್ಯಾಖ್ಯಾನ ಮಾಲೆ, ಭಾಷಾಜ್ಞಾನ, ಬಡವರಿಗಾಗಿ ವೈದ್ಯಕೀಯ ಪರೀಕ್ಷೆ, ಚಿಕಿತ್ಸಾ ಶಿಬಿರ, ಮಕ್ಕಳಿಗಾಗಿ ಸಾಹಿತ್ಯ– ಚಿತ್ರಕಲಾ ಸ್ಪರ್ಧೆಗಳನ್ನು ಏರ್ಪಡಿಸುತ್ತಲಿವೆ.

ಅಂದು ಪುಣೆಯ ನಗರದಲ್ಲಿ ವಿಶಾಲವಾಗಿ ಬೆಳೆದ ಸಂಸ್ಥೆಗಳು ಪುಣೆಯ ನಗರವನ್ನು ದಾಟಿ ಮಹಾರಾಷ್ಟ್ರದ ತುಂಬೆಲ್ಲ ಪಸರಿಸಿವೆ. ಇಡೀ ಮಹಾರಾಷ್ಟ್ರದಲ್ಲಿ ಇಂದು ಇಂಥ ನೋಂದಾಯಿಸಿದ ಸಂಸ್ಥೆಗಳು ನಲವತ್ತು ಸಾವಿರಕ್ಕೂ ಹೆಚ್ಚು ಇವೆಯೆಂದು ತಿಳಿಯುತ್ತದೆ!

ಇಂದು ಈ ಉತ್ಸವ ಮಹಾರಾಷ್ಟ್ರ ದಾಟಿ ಉತ್ತರ ಕರ್ನಾಟಕಕ್ಕೂ ಬಂದಿದೆ, ಕೆಲವರ್ಷಗಳಿಂದ ಹುಬ್ಬಳ್ಳಿಯಲ್ಲಿ ನಡೆಯುವ ಉತ್ಸವ ರಾಷ್ಟ್ರದ ಗಮನವನ್ನು ಸೆಳೆಯುತ್ತಿದೆ ಎಂದು ಹೇಳಬೇಕು. ಇಲ್ಲಿಯೂ ಕಲಾಕಾರನಿಗೆ ಸಿಗುವ ಸುಸಂಧಿ ಸಣ್ಣದಲ್ಲ, ಉತ್ಸವದಲ್ಲಿ ಅಲಂಕಾರಕ್ಕಾಗಿ– ಮಹಾಮಂದಿರಗಳೇ ನಿರ್ಮಾಣವಾಗುತ್ತಿವೆ. ಇಲ್ಲಿ ಉತ್ಸವಕ್ಕಾಗಿ ನಡೆಯುವ ವೆಚ್ಚ ಅಪಾರ. ಅದರಲ್ಲಿ ಸ್ವಲ್ಪ ಅಂಶವನ್ನು ಸಾರ್ವಜನಿಕ

ಪಂಚಮುಖಿ ಗಣಪತಿ

ನೇಪಾಳದ ಮಯೂರಾಸನ ಗಣಪತಿ

ಹಿತಕ್ಕಾಗಿ ಮೀಸಲಿಟ್ಟರೆ ಗಣಪ ಮತ್ತಷ್ಟು ಪ್ರಸನ್ನನಾದಾನು.

•••

ಹಿಂದೆಯೂ ಗಣಪನ ರೂಪ ಎಷ್ಟು ವಿಧ' ಮೈಸೂರು ರಾಜಮನೆತನ ಸಂಗೀತ, ಕಲೆ, ಸಾಹಿತ್ಯಗಳಿಗೆ ನೀಡಿದ ಪ್ರೋತ್ಸಾಹ ಬಹು ಹಿರಿದು. ಮುಮ್ಮಡಿ ಕೃಷ್ಣರಾಜ ಒಡೆಯರು, ಕರ್ನಾಟಕ ಸಾಂಪ್ರದಾಯಕ ಚಿತ್ರ ಕಲೆಗೆ ನೀಡಿದ ಪ್ರೋತ್ಸಾಹ ಇತಿಹಾಸ ಪ್ರಸಿದ್ಧ. ಇವರ ಕೃಪೆಯಿಂದಲೇ 'ತತ್ವನಿಧಿ' ಎಂಬ ಸಚಿತ್ರ ಗ್ರಂಥ ನಿರ್ಮಾಣವಾಯಿತು. ಈ ನಿಧಿಯಲ್ಲಿ ಗಣಪತಿಗೆ ಸಂಬಂಧಿಸಿದ ಮೂವತ್ತೆರಡು ಚಿತ್ರಗಳು– ಅವುಗಳ ವಿವರಗಳೊಂದಿಗೆ ಇವೆ. (ಕರ್ನಾಟಕ ಚಿತ್ರಕಲಾ ಪರಿಷತ್ತಿನವರು ಇದನ್ನು ಪ್ರಕಟಿಸಿ ಕಲಾಸಕ್ತರಿಗೆ ಮಹದುಪಕಾರ ಮಾಡಿದ್ದಾರೆ) ಈ ಚಿತ್ರಗಳ ಬಗ್ಗೆ ವಿವರವಾಗಿ ಬರೆಯುತ್ತ ಗೆಳೆಯರೊಬ್ಬರು 'ಎಷ್ಟೆಂದು ಬಣ್ಣಿಸಲಿ ಗಣಪ, ನಿನ್ನಯ ರೂಪ' ಎಂದಿದ್ದಾರೆ.

ಈ ರೀತಿಯಾಗಿ ವಿನಾಯಕ ಎಂದೆಂದಿಗೂ ಭಕ್ತ ಕಲಾವಿದನ ಇಚ್ಛೆಗನುಗುಣವಾಗಿ ರೂಪ ತಾಳುತ್ತಾನೆ, ನಿಜವಾಗಿಯೂ ಗಣಪ ಕಲಾವಿದನಿಗೊಂದು ಸ್ಫೂರ್ತಿದಾಯಕ ದೇವತೆ ಎಂದು ಬೇರೆ ಹೇಳಬೇಕಿಲ್ಲ.

ಚಿತ್ರ: ಜಿ. ಶ್ರೀನಿವಾಸಮೂರ್ತಿ

ಕಲೆಯಲ್ಲಿ ಗಣಪ

ವಿನಾಯಕ ವೈವಿಧ್ಯ

[illegible]



ಇಡಗುಂಜಿಯ ಗಣೇಶ

ಗಣೇಶನು ಹೊರದೇಶಕ್ಕೆ ಕಾಲಿರಿಸಿದ ವಿಷಯದಲ್ಲಿ ಎರಡು ರೀತಿಯ ಕಲ್ಪನೆಗಳನ್ನು ಊಹಿಸಲಾಗುತ್ತದೆ. ಶಕದ ಆದಿಯಲ್ಲಿ ಬ್ರಾಹ್ಮಣರು ವಲಸೆ ಹೋದ ಸ್ಥಾನಗಳೂ ಗೋಚರವಾಗುತ್ತವೆ. ಅವರ ಜೊತೆ [illegible] ಎಂದು ಒಂದು ಕಲ್ಪನೆಯಾದರೆ, ಇನ್ನು ವ್ಯಾಪಾರಸ್ಥರು ವ್ಯಾಪಾರಕ್ಕೆ ಹೊರದೇಶಕ್ಕೆ ಹೋದಾಗ ತಮ್ಮ ರಕ್ಷಣೆ, [illegible] ಈ ವಿಘ್ನಹರ್ತನನ್ನು ಕರೆದೊಯ್ದಿರಬಹುದಾಗಿದೆ. ಈ ರೀತಿಯಾಗಿ ಗಣಪ್ಪ ಹೊರದೇಶಕ್ಕೆ ಹೋದವನು ಅಲ್ಲಿ ಸ್ಥಾಯಿಯಾಗಿ ಆಯಾ ಜನತೆಯ ರಕ್ಷಕನಾಗಿ ಅಲ್ಲಿಯೇ ಉಳಿದಿದ್ದಾನೆ. ಮುಂದೆ ಅಲ್ಲಿಯ ಶಿಲ್ಪಿಗಳು ತಮ್ಮ ಪರಿಸರಕ್ಕೆ ಹೊಂದುವಂತೆ ಇವನನ್ನು ನಿರ್ಮಿಸಿದ್ದಾರೆ. ಪೂಜಿಸಿದ್ದಾರೆ.

(ಗ್ರಂಥ : 'ಕಲಾಚಿಯ ಗಣೇಶ')

ಕಲಾವಿದರಿಗೆ ಸ್ಫೂರ್ತಿಯ ಸೆಲೆ "ವಿನಾಯಕ"

'ಕಲಾಚಿಯ ಕರಿವದನ' ಎಂದು ವಿನಾಯಕನು ಪರ ದೇಶಗಳಲ್ಲಿ ಇದ್ದರೂಪ, ಅಲ್ಲಿಗೆ ಹೋದಬಗೆ, ಅವನನ್ನು ಆರಾಧಿಸುವ ವಿಧಾನ ಇವೆಲ್ಲವುಗಳ ವಿವರಗಳೊಂದಿಗೆ ನಾನು ಕೆಲ ಸಚಿತ್ರ ಲೇಖನಗಳನ್ನು ಬರೆದಿದ್ದೆ. ಪ್ರದರ್ಶನಕ್ಕೆಂದು ಚಿತ್ರಗಳೇ ಮೊದಲು ಸಿದ್ಧವಾಗಿದ್ದವು. ಅವುಗಳನ್ನು ಚಿತ್ರಿಸುವಾಗ ನನಗಾದ ಅನುಭವ ವಿಶಿಷ್ಟವಾದದು. ಆನಂದ ಅಪರಿಮಿತ! ಆಗ ಚಿತ್ರಿಸಿದ್ದು, ಆ ಆ, ದೇಶಗಳಲ್ಲಿದ್ದ ವಿನಾಯಕನ ರೂಪದ ಅನುಕರಣೆ ಮಾತ್ರ.

ಆ ದೇಶಗಳಿಗೆ ಹೋಗಿ ಅಲ್ಲಿರುವ ವೈವಿಧ್ಯಮಯ ಗಣೇಶರನ್ನು ಪ್ರತ್ಯಕ್ಷ ನೋಡಿ ಚಿತ್ರಿಸುವ ಭಾಗ್ಯ ನನ್ನದಾಗಿರಲಿಲ್ಲ. ಗೆಳೆಯ ಗೋವರ್ಧನ ಅಂಕೋಲೆಕರರು (ಸಾಗರ) ಈ ದಿಶೆಯಲ್ಲಿ ಮಹತ್ವದ ಕಾರ್ಯ ಮಾಡಿದ್ದಾರೆ. ಅವರ ಪೂರ್ಣ ಸಹಕಾರ ನನಗೆ ದೊರೆಯಿತೆಂದೇ ಅಲ್ಪವಾದರೂ ಕಾರ್ಯ ನನ್ನ ಮಾಡಲು ಅನುವಾಯಿತು. ಆ ಸಮಯದಲ್ಲೇ ನನಗನಿಸಿದ್ದು ಈ ಅನುಕರಣೆಯಲ್ಲದೇ ನನ್ನದೇ ಆದರೀತಿಯಲ್ಲಿ ವಿನಾಯಕನ ಹಲವಾರು ಚಿತ್ರಗಳನ್ನು ವಿವಿಧ ರೀತಿಯಲ್ಲಿ ಬಿಡಿಸಬೇಕು ಎಂದು. ವಿನಾಯಕ ಗಣಪತಿ, ವಕ್ರತುಂಡ, ಏಕದಂತ, ಲಂಬೋದರ, ಗಜಾನನ, ಗಜಮುಖ ಎಂದು ಹಲವು ನಾಮಗಳಿಂದ ಕರೆಯಿಸಿಕೊಳ್ಳುವ ಈ ಗಣಪ ಕಲಾವಿದನ ಮನದಲ್ಲಿ ಏನೇನೋ ರೀತಿಯಲ್ಲಿ ರೂಪುಗೊಳ್ಳುತ್ತಾನೆ. ಕಲಾವಿದನ ಒಳಹೊಕ್ಕು ಭಕ್ತಿ ಪರವಶನನ್ನಾಗಿಸಿ ಮಾಡುತ್ತಾನೆ. ಈ ವಕ್ರತುಂಡ!

ನಮ್ಮ ನಾಡಿನಲ್ಲಿ ಅತಿ ಪ್ರಾಚೀನ ವಿನಾಯಕನ ವಿಗ್ರಹಗಳು ಎಂದರೆ ಗೋಕರ್ಣ ಮತ್ತು ಇಡಗುಂಜಿಯಲ್ಲಿರುವ ವಿಗ್ರಹಗಳು ಎಂದು ಹೇಳಲಾಗುತ್ತದೆ. ಹೋಲಿಕೆಗಳಲ್ಲಿ ಎರಡಕ್ಕೂ ಬಹುಸಾಮ್ಯವಿದೆ, ನಿಂತಿರುವ ಶೈಲಿ ಎರಡೇ ಕೈಗಳು ತಲೆಗೆ ಮುಕುಟವೂ ಇಲ್ಲ ಮೈಮೇಲೆ ಯಾವ ಒಡವೆಯೂ ಇಲ್ಲ. ಇಷ್ಟು ಸರಳವಾದ ಮೂರ್ತಿಯೊಂದು [illegible]. ಅಲ್ಲಿಯ ಒಂದು ವಿಶೇಷವೆಂದರೆ, ಗಣಪನ ಕೈಯಲ್ಲೊಂದು ದಂಡವಿದೆ. ಅಲ್ಲಿ ಅವನು ವಿಘ್ನಹರ್ತನಲ್ಲ, ಅಲ್ಲಿ 'ರಕ್ಷಕನು' ಆಗುವನು.

[illegible] ಈ ಮಂಗಲಮೂರ್ತಿ ಶಿಲೆಯಲ್ಲಿ [illegible], [illegible] ಗುಹೆಗಳಲ್ಲಿ, ತಾಮ್ರಪಟಗಳ ಮೇಲೆ [illegible] ಪ್ರಕಟವಾಗಿದ್ದಾನೆ. ಜಗದಲ್ಲಿ ಅವನು [illegible] ಬಣ್ಣದಲ್ಲಿ [illegible] ರೂಪಗೊಳ್ಳುತ್ತಾನೆ. ಮುದಗಲ್ [illegible]

ತಗಡಿನಲ್ಲಿ ಸಿದ್ಧವಾಗುವ ಈ ಸಿದ್ಧಿವಿನಾಯಕನ ರೂಪವಂತೂ ಹೇಳುವುದೇ ಬೇಡ. ಉತ್ಸವಕ್ಕಾಗಿ ಸಕ್ಕರೆಗಳಲ್ಲಿ ಮಣ್ಣಿನಲ್ಲಿ ಸಿದ್ಧವಾದರೆ ಶಿಲ್ಪಗಳಲ್ಲಿ ಅವನು ರೂಪತಾಳುವುದು ಪ್ರಾಕಾರದಲ್ಲಿ, ಗಾತ್ರದಲ್ಲಿಯೂ ಅದೇ ವೈವಿಧ್ಯತೆ.

ಈ ಸಾರ್ವಜನಿಕ ಗಣಪನ ಗಾತ್ರ ಬೃಹದಾಕಾರವಾದಂತೆ ಮಾಧ್ಯಮವೂ ವಿವಿಧ [illegible] (ಸುಣ್ಣದ) [illegible]

ವಿವಿಧ ರೀತಿಯಲ್ಲಿ ಮಾಡಿ ನಿರ್ಮಿಸಿದ್ದರು! [illegible] ತುಂಡುಗಳನ್ನು ಜೋಡಿಸಿ ಮಾಡಿದ್ದಾರೆ, [illegible] ದಂತ, ಗಂಧದಲ್ಲಿಯೂ ಸಿಗುವ. [illegible] ಮಾಧ್ಯಮಗಳಲ್ಲಿ ಸಿದ್ಧವಾಗುತ್ತಾನೆ ಈ ವಿನಾಯಕ

[illegible]

ರಷ್ಯಾ ಭಾರತದ ಜನಪದ ಕಲೆಯಲ್ಲಿ
ಮೂಡಿಬಂದ, ಬಿಡಲು ಮೇಲೆ
ಮೂಷಿಕವಾಹನನಾಗಿ ರಾಜಸ್ಥಾನ ಗಣಪ

[illegible]

● ಎಸ್.ಬಿ.

ಗಣೇಶೋತ್ಸವ ಐತಿಹಾಸಿಕ ಪರಂಪರೆ

[illegible] ಬಂದ ಬ್ರಿಟಿಷ್ ಅಧಿಕಾರಿಗಳಿಂದ ನಿರ್ಬಂಧ [illegible] ಮೇಳಗಳಲ್ಲಿ [illegible] ಬರುತ್ತಿರುವ ಕಿರಿಯರ ಹಿರಿಯರ ಹಾಡು ವಿಳಾಸ [illegible] ಆಗ ಶ್ರೀ [illegible] ಮಹಾರಾಜ ಈ [illegible] ಎಲ್ಲೆಲ್ಲೂ ಕೇಳಿಬರ [illegible] ಸಿದ್ಧಗೊಳಿಸಿತು. [illegible] ಉತ್ಸವ ವಿಜೃಂಭಣೆ [illegible] ವಿನಾ ಇನ್ನಿಲ್ಲ. ೧೯೧೪- [illegible] ಜನತೆಯಲ್ಲಿ ಧೈರ್ಯ ಹಬ್ಬಾ [illegible] ಸಮಯದಲ್ಲಿ, [illegible] ಲೀಗ್ ಸ್ಥಾಪನೆಯಾಯಿತು. 'ಸ್ವರಾಜ್ಯ ನನ್ನ ಜನ್ಮಸಿದ್ಧಹಕ್ಕು' ಎಂಬ ಅವರ ಘೋಷಣೆ ದೇಶಾದ್ಯಂತ ಪ್ರತಿಧ್ವನಿಸಿತು. ರಾಜಕೀಯ ಚಳುವಳಿಗೆ ಮೊನಚು ಹೆಚ್ಚಾಯಿತು.

೯ ನೇ ಆಗಸ್ಟ್ ೧೯೪೨ 'ಭಾರತದಿಂದ ತೊಲಗಿರಿ' ಎಂಬ ಘೋಷಣೆ ವ್ಯಕ್ತವಾಯಿತು. ಈ ವರ್ಷದ ಉತ್ಸವದ ಮಂಟಪದ ಬದಿಯಲ್ಲಿ ಒಂದೊಂದು ಪೋಲಿಸ [illegible] ಬಂದವು. ಉತ್ಸವದ ಜನಕ್ಕೆ [illegible] ಬಂಧನಗಳನ್ನು ಹಾಕಲಾಯಿತು. ಲಾಠಿ ಹಿಡಿಯುವವರಿಗೇ ಲೇಜಿಮ ಹಿಡಿಯುವವರೂ ಬಂಧನಕಾರಿ [illegible] ತಷ್ಟೇ ಅಲ್ಲ ಮೆರವಣಿಗೆ ಪೋಲೀಸರೊಂದಿಗೇ ಹೊರಡಬೇಕು ಅವರು ಹೇಳಿದ ಮಾರ್ಗದಲ್ಲಿಯೇ ಹೋಗಬೇಕು, ಅವರು ಹೇಳಿದಲ್ಲಿಯೇ ವಿಸರ್ಜನವಾಗಬೇಕೆಂಬ [illegible] ಗಳನ್ನು ಜಾರಿ ಮಾಡಲಾಯಿತು. ಈ ಪರಿಸ್ಥಿತಿಯಲ್ಲಿ [illegible] ವಿಸರ್ಜನಕ್ಕೆ ಹೊರಬಿದ್ದವು. ಉಳಿದವರು ಮಂತ್ರಪ್ರಕ್ಷೆ [illegible] ದರು.

ಮುಂದೆ ಶರದ್ ಪೂರ್ಣಿಮೆಯ ದಿನದಂದು ಮಧ್ಯಾಹ್ನ ಗಣಪತಿಯ ವಿಸರ್ಜನ ಮಾಡುವದೆಂದು ಪುಣೆಯ ಇಬ್ಬರು ಪ್ರಮುಖರು ನಿರ್ಧರಿಸಿದ್ದನ್ನು, ಜನ ಒಪ್ಪಿದರು. ಆ ಪ್ರಕಾರ ವಾದ್ಯಸಹಿತ ಮೆರವಣಿಗೆಯೂ ಹೊರಟಿತು. ಆದರೆ ಈ ಸಮಯ ಜಾರಿಯಲ್ಲಿದ್ದ "ಡಿಫೆನ್ಸ ಆಫ್ ಇಂಡಿಯಾ" [illegible] ಕೊಂಡು ಪೋಲೀಸರು ಮೆರವಣಿಗೆಯನ್ನು ತಡೆದರು. ಆದರೆ ಈ ಕಾಯಿದೆ ನಮಗೂ ಗೊತ್ತಿದೆ ಅದರ ಪ್ರಕಾರ ನೀವು ಈ ಮೆರವಣಿಗೆಯನ್ನು ತಡೆಯಲು ಸಾಧ್ಯವೇ ಇಲ್ಲವೆಂದು ಆ ಇಬ್ಬರು ಪ್ರಮುಖರಾದ ಶ್ರೀ ಕೇಳಕರ ಮತ್ತು ಶ್ರೀ ಡಾವರೆ ಎಂಬುವರು ವಾದಿಸಿದರು. ಬಂದಿದ್ದ ಪೊಲೀಸ ಅಧಿಕಾರಿ ತಬ್ಬಿಬ್ಬಾಗಿ, ಈ ಕಾಯಿದೆಯ ವಿವರವನ್ನು ವರಿಷ್ಟರೊಡನೆ ಕೇಳಿಬರಲೆಂದು ಹೋದಾಗ ವಿಸರ್ಜನೆಯ ಕಾರ್ಯ ಮುಗಿದು ಹೋಗಿತ್ತು. ಜನರು ಅವರೀರ್ವರಿಗೂ ಹಾರಹಾಕಿ ಸನ್ಮಾನಿಸಿದರು. ಆದರೆ ಅವರನ್ನು 'ಡಿಫೆನ್ಸ್ ಆಫ್ ಇಂಡಿಯಾ' ಕಾಯಿದೆಯ ೨೯ ನೇ ಕಲಮಿನ ಪ್ರಕಾರ ಅಂದೇ ರಾತ್ರಿ ಬಂಧಿಸಿ, ಎರಡು ತಿಂಗಳ ಕಾಲ ಯರವಡಾ ಜೇಲಿಗೆ ಕಳುಹಿದರು.

೧೯೪೭ ನೇ ವರ್ಷ ಭಾರತಕ್ಕೆ ಸ್ವಾತಂತ್ರ್ಯ ಬಂದ ಸಮ್ಯಯ ಆಂಗ್ಲರು, ಭಾರತವನ್ನು ವಿಭಜಿಸಿ ತಮ್ಮೂರಿಗೆ ತೆರಳಿದರು. ಈಗ ಜನರಿಗೆ, ಯಾವ ಉತ್ಸವವನ್ನು ಆಚರಿಸಲೂ ಭಯವಿರಲಿಲ್ಲ. ಪುಣೆಯಲ್ಲಿ ಗಣೇಶ ಉತ್ಸವ ಮಂಡಳಿಗಳು ಬೃಹದಾಕಾರವಾಗಿ ಬೆಳೆದವು. ಉತ್ಸವದಲ್ಲಿಯ ವ್ಯಾಖ್ಯಾನ ಪ್ರವಚನ ಶಾಸ್ತ್ರೀಯ ಸಂಗೀತ ಇವುಗಳಲ್ಲಿಯೂ ಬದಲಾವಣೆಕಂಡುಬಂತು, ವಿಡಂಬನೆಯ ಮನರಂಜನೆ, ಪಾಪಸಾಂಗ, ಡಿಸ್ಕೋಡಾನ್ಸ, ತರುಣಿಯರ ಅರೆನಗ್ನ ನೃತ್ಯ ಇವೆಲ್ಲ ನಡೆದವು. ನೋಟಿಕರ ಗುಂಪಿನಿಂದ ಕೇಕೆ ಸೀಟಿಯ ವಿಡಂಬನ ಪ್ರಾರಂಭವಾಯಿತು. ವಿನಾಯಕನ ಮೂರ್ತಿಗೆ ವಿಕೃತಸ್ವರೂಪ ಬರತೊಡಗಿತು. ರಾಜಕಾರಣಗಳ ಸ್ವರೂಪಬಂತು, ಆರ್.ಕೆ. ಸ್ಟುಡಿಯೋದ ಲಾಂಛನದ (ರಾಜಕಪೂರ ನರ್ಗೀಸ್) ರೂಪಕ್ಕೂ ಗಣಪತಿ ಇಳಿದ. ಪೂಜೆ ಪುನಸ್ಕಾರಗಳು ಮಾತ್ರ ನಿಯಮಕ್ಕಾಗಿ ನಡೆದವು. ಆಸ್ಥೆ, ಭಕ್ತಿ, ಶ್ರದ್ಧೆ [illegible] ಮೆರವಣಿಗೆಯ [illegible] ಒದಗಿಸುತ್ತದೆಯೇ, 'ಗಮ್ಮತ್' ಎಂಬ ಮೆರವಣಿಗೆಯಲ್ಲಿ [illegible] ವಾಡಿಯುಂಟು.

ಇತ್ತೀಚಿಗೆ ಸಾರ್ವಜನಿಕ ಗಣೇಶೋತ್ಸವ ಸ್ವರೂಪ ಬದಲಾಗುತ್ತಿದೆ. ಗಣೇಶ ಮಂಡಳಿಗಳ ಪರಿಯಿಂದ, ಭಾಷಾ ಜ್ಞಾನಯಜ್ಞ, ಚಿತ್ರಕಲಾ ಸಂಗೀತ ಸ್ಪರ್ಧೆ, ವ್ಯಾಖ್ಯಾನಮಾಲೆ, ವೈದ್ಯಕೀಯ ತಪಾಸಣೆ ಮುಂತಾದ ಸಾಮಾಜಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಪುಣೆಯ ಉತ್ಸವಗಳನ್ನು ಅನುಸರಿಸಿ, [illegible] ಉತ್ಸವ [illegible] ಧಾರ್ಮಿಕತೆಯೊಂದಿಗೆ [illegible] ರೂಪಾಯಿಗಳ ವಿನಿಮಯ ನಡೆಯುತ್ತಿರಬೇಕು. ಅದರಲ್ಲಿಯ ಅಲ್ಪಭಾಗವನ್ನಾದರೂ ಸಮಾಜ ಕಾರ್ಯಕ್ಕೆ ವಿನಿಯೋಗಿಸಿದರೆ, ಬಡ ಬಗ್ಗರಿಗೆ ಹಿತವಾದೀತಲ್ಲವೆ?

ಭಕ್ತರ ಇಷ್ಟಾರ್ಥ ಪೂರೈಸುವ ಸಾಧ್ವಿ ತುರುಡಗಿಯ ತಿಮ್ಮಮ್ಮ

★ಎನ್.ಸಿ. ದೇಸಾಯಿ

ಭಾರತದಲ್ಲಿ ಇಂದು ಬಾಲ್ಯವಿವಾಹ ಕಾನೂನುಬಾಹಿರವಾಗಿದೆ. ಅದೊಂದು ಸಮಾಜಕ್ಕೆ ಒದಗಿಬಂದ ಸುಧಾರಣೆ. ಹಿಂದೆ ಅದು ಪ್ರಚಲಿತದಲ್ಲಿತ್ತು. ಅದರಿಂದ ಅನಾಹುತಗಳು ಆದುದನ್ನೂ ಕಾಣುತ್ತೇವೆ. ಅಂಥ ಒಂದು ಪ್ರಸಂಗ ಎರಡು ಶತಮಾನಗಳ ಹಿಂದೆ ರಾಯಚೂರು ಜಿಲ್ಲೆಯ ಲಿಂಗಸೂಗೂರು ತಾಲೂಕಿನ (ಹೂನೂರು) ತುರುಡಗಿ ಗ್ರಾಮದಲ್ಲಿ ನಡೆದುದನ್ನು ಇತಿಹಾಸ ಸಾರಿ ಹೇಳುತ್ತದೆ.

ಈ ಗ್ರಾಮದ ಜೋಯಿಸರು ಶ್ರೀ ನರಸಿಂಹಾಚಾರ್ಯ ಜೋತಿಷಿ. ಕಣ್ವಶಾಖೆಯ ತಪೋನಿಷ್ಠ ಬ್ರಾಹ್ಮಣರು, ಯಜ್ಞ ಯಾಗಾದಿಗಳನ್ನು ಜರುಗಿಸುವ ವೈದಿಕರು. ಇವರ ಪತ್ನಿ ಚಂದ್ರಲಾದೇವಿ ಪತಿಗೆ ತಕ್ಕ ಧರ್ಮನಿಷ್ಠೆ. ಈ ದಂಪತಿಗಳಿಗೆ ಶಕೆ 1650ರಲ್ಲಿ ಕನ್ಯಾರತ್ನ ಜನಿಸಿದಳು. ಅವಳಿಗೆ ತಿಮ್ಮಕ್ಕವೆಂಬ ನಾಮಕರಣವೂ ಆಯಿತು. ಈ ಮನೆತನದ ಆರಾಧ್ಯ ದೇವತೆ ತಿರುಪತಿಯ ತಿಮ್ಮಪ್ಪ, ಮನೆಯ ಹಿರಿಯ ಆಚಾರ್ಯರು ಭಾಗವತ ಪುರಾಣಗಳನ್ನು, ಪುರಂದರ, ಕನಕರ ಕೃತಿಗಳನ್ನೂ ಪಠಿಸುತ್ತಿದ್ದರು.

ಇವನ್ನೆಲ್ಲ ಕೇಳುವಲ್ಲಿ ತಿಮ್ಮಮ್ಮನಿಗೆ ಬಲು ಆಸಕ್ತಿ. ಈ ಬಾಲಕಿಗೆ ತನಗರಿಯದೇ ದೇವರಲ್ಲಿ ಭಕ್ತಿ ಮೂಡಿ ಬಂದಿತ್ತು. ಅದು ಆಟಪಾಟದಲ್ಲಿಯೂ ಕೂಡ ಬರುತ್ತಿತ್ತು. ಅವಳ ಆಟಿಕೆಗಳು ದೇವಮೂರ್ತಿಗಳೇ ಆಗಿರುತ್ತಿದ್ದವು. ತಂದೆಯ ಪೂಜೆಗೆ ಅನುವು ಮಾಡಿ ಕೊಡುವಲ್ಲಂತೂ ಬಹು ಆಸಕ್ತಿ!

ಹಿಗೇಯೇ ಮಗು ಬೆಳೆಯುತ್ತಿದ್ದಳು. ಏಳು ವರ್ಷಗಳು ದಾಟುತ್ತಿದ್ದಂತೆಯೇ ತಂದೆ ತಾಯಿಗೆ ಈ ಬಾಲೆಯ ವಿವಾಹದ ಚಿಂತೆ ಪ್ರಾರಂಭವಾಯಿತು. ತಡಮಾಡಲಿಲ್ಲ. ಹತ್ತಿರದ ಹಳ್ಳಿ ಮುದ್ದಲಗುಂದಿಯ ಶ್ರೀ ವೆಂಕಟನರಸಿಂಹ ನಾಯಕರ ಪುತ್ರ ಅಶ್ವತ್ಥನೊಂದಿಗೆ ಈ ಬಾಲೆಯ ಮದುವೆ ಜರುಗಿ ಹೋಯಿತು. ಆ ಚಿಕ್ಕ ವಯಸ್ಸಿನಲ್ಲಿಯೇ ಗಂಡನ ಮನೆಯನ್ನೂ ಸೇರಿಯಾಯಿತು. ತಂದೆಯಿಂದ ಬಂದ ಸಂಸ್ಕಾರ ಇಲ್ಲಿಯೂ ಮುಂದುವರೆಯಿತು. ದಾಸರ ಪದ, ಭಕ್ತಿ ಸಂಗೀತ, ಪೂಜೆ ಪುನಸ್ಕಾರಗಳಿಗೆ ಹಿರಿಯರಿಗೆ ಅನುವು ಮಾಡಿಕೊಡುವುದು ಇಂಥೆಲ್ಲ ಕಾರ್ಯ ಇಲ್ಲಿಯೂ ಮುಂದುವರೆದವು. ಅತ್ತೆ ಮಾವಂದಿರಿಗೆ ಪ್ರೀತಿಯ ಪುಟ್ಟ ಸೊಸೆಯಾದಳು.

ಒಂದು ಪ್ರಬುದ್ಧ ಸಂಸ್ಕಾರದಲ್ಲಿ ಬೆಳೆಯುತ್ತಿದ್ದ ಈ ಎಳೆಯ ಸೌಭಾಗ್ಯವತಿಗೆ ವಿಧಿ ಬಲು ಕ್ರೂರವಾಗಿತ್ತು. ಆ ಚಿಕ್ಕ ಪತಿ ಅಕಾಲ ಮೃತ್ಯುವಿಗೆ ತುತ್ತಾದನು. ತಂದೆಯಿಂದ ಭಾಗವತ ಪುರಾಣಗಳ ಪ್ರಸಂಗಗಳನ್ನು ಕೇಳಿ ತಿಳಿದಿದ್ದ ಇವಳಿಗೆ ಪ್ರಪಂಚದ ಆಗು ಹೋಗುಗಳ ಅರಿವಿತ್ತು. ಬಹುಶಃ ಆ ಸಂಸ್ಕಾರವೇ ಇಂಥ ಕಠಿಣ ಘಟನೆಯಲ್ಲಿ ಬದುಕನ್ನು ಮುಂದುವ ರಿಸಲು ಅನುವಾಯಿತೋ ಏನೋ. ಆದರೆ ತಂದೆ-ತಾಯಿ, ಅತ್ತೆ-ಮಾವರಿಗೆ ಈ ಘಟನೆ ಬಹು ದುಃಖದಾಯಕವಾಯಿತು. ಹೇಗೆ ಮುಂದುವರೆಯಬೇಕೆಂದು ತಿಳಿಯ ದಾದಾಗ ಮಗಳು ತವರು ಮನೆಯಲ್ಲಿಯೇ ಜೀವನ

ಮುಂದುವರಿಸಬೇಕೆಂಬ ನಿರ್ಧಾರ.

ತಂದೆ ಆಧ್ಯಾತ್ಮವನ್ನು ಅರೆದು ಕುಡಿದವರಾದುದರಿಂದ ಅದರ ಕಂಪು ಮಗಳಿಗೂ ತಲುಪತೊಡಗಿತು. ನರಸಿಂಹಾಚಾರ್ಯರಿಗೆ ತಿರುಪತಿಯ ತಿಮ್ಮಪ್ಪನಲ್ಲಿ ಅನನ್ಯ ಭಕ್ತಿ. ಈಗ ತಿಮ್ಮಪ್ಪನ ದರ್ಶನದ ದಾಹ ಹೆಚ್ಚಾಯಿತು. ಹೋದಾಗಲೆಲ್ಲ ಮಗಳು ತಿಮ್ಮಮ್ಮನು ಜೊತೆಯಾಗುವಳು.

ಈ ದರ್ಶನದ ಲಾಭದಿಂದ ಮಗಳ ಮನಸ್ಸು ಹಗುರವಾದೀತೆಂಬ ಹಂಬಲ. ಪ್ರವಾಸದ ವೇಳೆಯಲ್ಲಿ ಆಧ್ಯಾತ್ಮ ಚಿಂತನ, ದಾಸರ ಉಕ್ತಿ, ಮಹಾತ್ಮರ ಚರಿತ್ರೆ ಇಂತಹ ಕಾರ್ಯಕ್ಕೆ ಉಪಯೋಗವಾಗುತ್ತಿತ್ತು. ಸಹಜವಾಗಿಯೇ ತಿಮ್ಮಮ್ಮನಲ್ಲಿ ಆಧ್ಯಾತ್ಮ ಪ್ರವೃತ್ತಿ ಅಂಕುರಿಸಿತು. ಶ್ರೀ ವೆಂಕಟರಮಣನ ಎಡಬಿಡದ ದರ್ಶನ, ತಿರುಪತಿಯ ವಾತಾವರಣ ಇದನ್ನು ವೃದ್ಧಿಸಿದವು.

ಅಲ್ಲಿರುವಾಗಲೇ ಒಮ್ಮೆ ಮಹಾತ್ಮರ ದರ್ಶನದ ಲಾಭ. ದೇವದುರ್ಗದ ಗಿರಿಯಪ್ಪನವರ ಭೆಟ್ಟಿ. ಅವರು ಶ್ರೀ ಮಾತಂಪಲ್ಲಿ ಕ್ಷೇತ್ರದ ಆಂಜನೇಯನ ಸಾಕ್ಷಾತ್ಕಾರವನ್ನು ಪಡೆದ ಸಿದ್ಧಿ ಪುರುಷರು. ಅಂಥವರ ಗುರುಸ್ಥಾನ ತಿಮ್ಮಮ್ಮನಿಗೆ ಲಭ್ಯವಾಗಿತ್ತು.

ಸಮಯ ನಿಲ್ಲುತ್ತದೆಯೇ? ವೇಳೆ ಸರಿಯುತ್ತ ಹೋಯಿತು. ಮಾತಾ, ಪಿತೃಗಳೂ ಇಹಲೋಕ ಸೇರಿದರು. ನಂತರ ಕೂಡ ತಿರುಪತಿಯ ಯಾತ್ರೆ ಅವಿಚ್ಛಿನ್ನವಾಗಿ ಸಾಗಿತು. ಈಗ ತಿಮ್ಮಮ್ಮ ತಬ್ಬಲಿಯಾದಳು. ಆದರೆ ಆಧ್ಯಾತ್ಮ ಕಾರ್ಯದಲ್ಲಿ ತನ್ನನ್ನು ಇನ್ನೂ ಹೆಚ್ಚು ತೊಡಗಿಸಿಕೊಂಡಳು.

ಈ ಸಂದರ್ಭದಲ್ಲಿ ತುರುಡಗಿಯಿಂದ ಹತ್ತಿರದ ಹೂನೂರು ಗ್ರಾಮಕ್ಕೆ ವಾಸ್ತವ್ಯವನ್ನು ಬದಲಾಯಿಸಿದಳು. ಆ ಹಳ್ಳಿಯ ಹಳ್ಳದ ದಡದಲ್ಲಿದ್ದ ಪ್ರಾಣದೇವರ ದೇಗುಲವೇ ಇವರ ವಾಸಸ್ಥಾನವಾಯಿತು. ಇವರಿಗೆ ತಿರುಪತಿಯ ದೇವಸ್ಥಾನದಿಂದ ಒಂದು ತಾಮ್ರದ ಗೋಪಾಳ ಬುಟ್ಟಿ ಲಭ್ಯವಾಗಿತ್ತು.

ಅದರಲ್ಲಿ ಭಕ್ತರು ನೀಡಿದ ಧಾನ್ಯದವಸಗಳೇ ಇವರ ಆಹಾರಕ್ಕೆ ಆಧಾರ. ಇವರ ಭಕ್ತಗಣ ಬೆಳೆಯಿತು. ಆ ಚಿಕ್ಕ ಮಾರುತಿಯ ಮಂದಿರದ ಆವಾರದಲ್ಲಿಯೇ ಅನ್ನಸಂತರ್ಪಣೆಯೂ ನಡೆಯತೊಡಗಿತು. ಇವರ ಪೂಜೆ ಪುನಸ್ಕಾರಗಳನ್ನು ಇವರ ಇರುವನ್ನು ಕಂಡು ಭಕ್ತರು ಇವರಿಗೆ 'ಸಾಧ್ವಿ' ಎಂಬ ಉಪನಾಮವನ್ನು ಸೇರಿಸಿದರು.

ಇವರ ವಾಕ್‌ಸಿದ್ಧಿಯನ್ನು ಕಂಡು ಇವಳೊಬ್ಬ ಪವಾಡ ಪುರುಷೆ ಎಂದರು.

ತಂದೆಯ ಸಮಯದಲ್ಲಿ ನಡೆ ದಂತೆಯೇ ಈಗಲೂ ಕೂಡ ತಿರುಪತಿಯ ಯಾತ್ರೆ ನಡೆಯುತ್ತಿದ್ದವು. ಕಾಲ್ನಡಿಗೆಯಲ್ಲೇ ಈಗ ಅದರ ಸ್ವರೂಪ ಬದಲಾಗಿತ್ತು.

ಹೀಗೆ ಭಕ್ತರ ಇಷ್ಟಗಳನ್ನು ಪೂರೈಸುತ್ತಲೇ ಸಾಧ್ವಿ ತಿಮ್ಮಮ್ಮನವರು ಶಕೆ 1735ರ ಶ್ರೀಮುಖ ಸಂವತ್ಸರದಲ್ಲಿ, ತಿರುಪತಿಯ 60ನೆಯ ಪಾದಯಾತ್ರೆಯನ್ನು ಸಾಂಗಗೊಳಿಸಿ ಮಾಘ ಶುದ್ಧ ಪ್ರತಿಪದೆಯ ದಿನ ದೇಹತ್ಯಾಗ ಮಾಡಿದರು ಹಾಗೂ ಅದರ ಮುನ್ಸೂಚನೆಯನ್ನು ಮೊದಲೇ ಭಕ್ತರಿಗೂ ಅರುಹಿದ್ದರು. ಅವರ ಇಚ್ಛೆಯ ಮೇರೆಗೆ ಎಲ್ಲವೂ ನೆರವೇರಿದವು.

ಅವರು ದೇಹತ್ಯಾಗ ಮಾಡಿ ಎರಡು ಶತಮಾನಗಳೇ ಸಂದಿವೆ. ಇಂದಿಗೂ ಅವರ ಭಕ್ತಗಣ ಬೆಳೆಯುತ್ತಲೇ ಇದೆ. ಆರಾಧನೆ ಉತ್ಸವಗಳೂ ಜರುಗುತ್ತಲಿವೆ. ಎಲ್ಲ ಕಾರ್ಯಗಳನ್ನು ವ್ಯವಸ್ಥಿತವಾಗಿ ನೆರವೇರಿಸಲು ಒಂದು ವಿಶ್ವಸ್ಥ ಸಮಿತಿಯು ನಿರ್ಮಾಣವಾಗಿದೆ.

ದ್ವಿ ಶತಮಾನೋತ್ಸವವನ್ನು ಬರುವ ಫೆಬ್ರುವರಿ 5-6ರಂದು ಸಾಧ್ವಿಯ ಹುಟ್ಟೂರಾದ ಹೂನೂರು ಗ್ರಾಮದಲ್ಲಿ ಶ್ರೀಮದ್ ವಿದ್ಯಾಭಾಸ್ಕರ ತೀರ್ಥ ಸ್ವಾಮೀಜಿ ಹಾಗೂ ಆನಂದವನದ ಶ್ರೀ ಚಿದಂಬರಮೂರ್ತಿ ಚಕ್ರವರ್ತಿಗಳವರ ಹಿರಿತನದಲ್ಲಿ ನಡೆಯಲಿದ್ದು, ಧಾರ್ಮಿಕ ಕಾರ್ಯಕ್ರಮಗಳಲ್ಲದೆ ಗಣ್ಯರಿಗೆ ಸತ್ಕಾರಗಳು ನಡೆಯಲಿವೆ.

ವಿಜಯ ಕರ್ನಾಟಕ 4-2-2000

ಚಿತ್ತಾಳೆ ಗಣಪ



ಸಾರಾನಾಥದಲ್ಲಿನ ಬುದ್ಧನ ಚಿತ್ತಾಳೆ ಪ್ರತಿಕೃತಿ

ನೆರೆ ನಾಡಿನ ಕನ್ನಡ ಕಲಾವಿದ ಸಾಬಣ್ಣವರ

[illegible]

...ಎಂದು ಇವ ... ಆಗಲಿ!

ಜೆ.ಜೆ. ಶಾಲೆಯಲ್ಲಿ ... ಟೀಚರ್ ಎಂದು ಕರೆದ, ಸಾಬಣ್ಣವರ ಅವರು ... ಎಂದು ... ಅವರನ್ನು ನೋಡಿದರೆ ಅವರ ... ಚಿತ್ರಿಸಿದರೆ ಅವರು ಕೃತಿ ನಿರ್ಮಾಣ ಮಾಡುವವನ್ನು ಕಂಡರೆ ಇವರು ನಿವೃತ್ತರಾದವರೆ? ಎಂದು ಯಾರೂ ಆಶ್ಚರ್ಯ ಪಡುವಂತಹದು!

ನಾಣ್ಯಗಳ ನಕ್ಷೆ

ಇವರು ಮೆಟಲ್ ಕ್ರಾಫ್ಟ್‌ನಲ್ಲಿ ಮಾಡಿದ ಕಾರ್ಯ ಅಗಾಧವಾದದ್ದು. ನಮ್ಮ ಕೆಲ ನಾಣ್ಯಗಳ ನಕ್ಷೆಗಳು ಇವರಿಂದ ಸಿದ್ಧವಾಗಿವೆ ಎಂದು ಬಹುಜನ ಕನ್ನಡಿಗರಿಗೆ ತಿಳಿಯದೆ ಹೋಗಿದೆ. ಭಾರತದ ಸ್ವಾತಂತ್ರ್ಯದ ಬೆಳ್ಳಿಹಬ್ಬ ನಿಮಿತ್ತವಾಗಿ ಹೊರ ತಂದ ವಿಶೇಷ ನಾಣ್ಯದ ನಕ್ಷೆ ಹಾಗೂ 'ಮಾಸ್ಟರ್ ಮಾಡೆಲ್' ಕೂಡ ಇವರಿಂದಲೇ ಸಿದ್ಧವಾಗಿದೆ. ಭಾರತ ಸರಕಾರದ ಟಂಕಸಾಲೆಗಾಗಿ "ಗ್ರೋ ಮೋರ್ ಫುಡ್" ಸಂದೇಶ ಬೀರುವ ವಿಶೇಷ ನಾಣ್ಯದ ನಕ್ಷೆ ಮಾಸ್ಟರ್ ಮಾಡೆಲ್ ಇವರಿಂದ ನಿರ್ಮಿತವಾಗಿವೆ. ಭೂತಾನ ಸರಕಾರಕ್ಕೆ ಮಹಾರಾಜರ ರಾಜ್ಯ ಪಟ್ಟಾಭಿಷೇಕದ ಸಮಯದಲ್ಲಿ ವಿಶೇಷ ನಾಣ್ಯವನ್ನು ಬಿಡುಗಡೆಗೊಳಿಸುವ ... ನಕ್ಷೆಯೊಂದಿಗೆ ಹೊರಡಿಸಬೇಕೆಂದು ನಿರ್ಧರಿಸಿದಾಗ ಅದಕ್ಕೆ ನಕ್ಷೆ ಸಿದ್ಧವಾದುದು ಸಾಬಣ್ಣನವರಿಂದಲೇ.

ಮಾಸ್ಟರ್ ಮಾಡೆಲ್ ... ಇವರೇ ಮಾಡಿದ್ದಾರೆ. ಅಂತರಾಷ್ಟ್ರೀಯ ಮಹಿಳಾ ವರ್ಷ (1975)ದ ಸಮಯಕ್ಕೆ ಈಕ್ವಾಲಿಟಿ ಡೆವಲಪ್‌ಮೆಂಟ್, ಪೀಸ್ ಈ ವಿಷಯಗಳನ್ನು ಸೂಚಿಸುವ ಪಿಸ್ಸಿಲಿಯನಿಸ್ಟ್ರಕೊಂಡ ನಾಣ್ಯದ ನಕ್ಷೆ- ಭಾರತ ಸರಕಾರದ ಟಂಕಸಾಲೆಗೆ ಇವರಿಂದ ಸಿದ್ಧವಾಯಿತು. ಇದೇ ವರ್ಷ ಭೂತಾನ ಸರಕಾರಕ್ಕೆ ಇನ್ನೊಂದು ನಾಣ್ಯದ ನಕ್ಷೆ ಇವರ ಕೈಯಿಂದಲೇ ಮೂಡಿ ಬಂತು. ಈ ರೀತಿಯಾಗಿ ನಾಣ್ಯಗಳ ನಕ್ಷೆಗಳು ಮೂಡಿಬಂದವರೆ. ಮಹಾರಾಷ್ಟ್ರ, ಕರ್ನಾಟಕ ಹಾಗೂ ಕೇಂದ್ರ ಸರಕಾರಗಳ ಕೆಲ ಮಹತ್ವದ ಬಾತೆಗಳಿಗೆ ಇವರು ಸಲ್ಲಿಸಿದ ಸೇವೆ ಗಣನೀಯವಾದುದು:

ವೀರಭದ್ರ - ಪೆನ್ಸಿಲ್ ರಚನೆ

ಭಾರತ ಸರಕಾರ 'ಟ್ರೇಡ್ ಫೇರ್ ಅಥಾರಿಟಿ ಆಫ್ ಇಂಡಿಯಾ' ಇವರಿಗೆ (1981) ಮೊಮೆಂಟೋಗಳನ್ನು, ಮುಂಬೈ ನಗರ ಸಂಬರನವರಿಗೆ ರೋಯಿಂಗ ಟ್ರೋಫಿ (1983) ಬಿ.ಪಿ.ಆರ್.ಸಿ.ಯವರಿಗೆ ಸಂಸ್ಥೆಯ ಬೆಳ್ಳಿ ಹಬ್ಬದ ಸಮಯದಲ್ಲಿ (1983) "ಮೊಹಿಬಾಬಾ" ಪ್ಲಾಕನ್ನು ತಯಾರಿಸಿದ್ದು ಇವರು. ಮಹಾರಾಷ್ಟ್ರ ರಾಜ್ಯ ಕಲಾಪ್ರದರ್ಶನದ ಬೆಳ್ಳಿಹಬ್ಬದ ವಿಶೇಷ ಪಾರಿತೋಷಕ ನಕ್ಷೆಯನ್ನು, ಕರ್ನಾಟಕ ರಾಜ್ಯೋತ್ಸವದ ಪಾರಿತೋಷಕದ (ಅವಾರ್ಡ್) ನಕ್ಷೆಯನ್ನು (1985) ತಯಾರಿಸಿದ್ದು ಇವರು.

ಕರ್ನಾಟಕ ರಾಜ್ಯದ ಪ್ರಾಚ್ಯ ವಸ್ತುಸಂಗ್ರಹಾಲಯದ ಶತಮಾನೋತ್ಸವ ...

[illegible]

ಈಗ ಅವರಿಗೆ 63 ವಯಸ್ಸಾಗಿದ್ದರೂ ... [illegible]

ಪಾರಿತೋಷಕಗಳು

ಇವರ ಲೋಹ ಕೃತಿಗಳಿಗೆ ಮಹಾರಾಷ್ಟ್ರ ರಾಜ್ಯ ಕಲಾ ಪ್ರದರ್ಶನದಲ್ಲಿ ಅಗ್ರ ಪಾರಿತೋಷಕ ದೊರೆತಿವೆಯಲ್ಲದೆ 1966ರಲ್ಲಿ ...

8ನೇ ಪುಟ ನೋಡಿ

ಮರಾಟಿಗರು "ಸಾಬ್ದಾರ"

[illegible]

—ಎಸ್.ಸಿ. ದೇಸಾಯಿ

...ಶಿಗಸ - ಪ್ಲಾಸ್ಟರ್ ಆಫ್ ಪ್ಯಾರಿಸ್

ಭೂತಾನ ಸರಕಾರಕ್ಕೆ ವಿನ್ಯಾಸ ಮಾಡಿದ ಒಂದು ನಾಣ್ಯ

ಹೊಯ್ಸಳ ಲಾಂಛನ - ಚಿತ್ತಾಳೆ

ಗಂಡಭೇರುಂಡ - ಚಿತ್ತಾಳೆ

ಕೃಷಿಯಲ್ಲಿ ಸಿದ್ಧಿ- ಕಲೆಯಲ್ಲಿ ಪ್ರಸಿದ್ಧಿ. #3 30-11-1975

ಶ್ರೀ ಸಿಂಧೂರರು

ಕಲಾವಿದ ಸಿಂಧೂರರ ಸಾಧನೆ

ಕೆಲವು ವಿಶ್ವವಿಖ್ಯಾತ ಚಿತ್ರಕಲಾವಿದರಿಗೆ ಜನ್ಮಕೊಟ್ಟ ಪುಣ್ಯಭೂಮಿ ಕರ್ನಾಟಕ. ಆದರೆ ದುರ್ದೈವದ ವಿಷಯವೆಂದರೆ ಅವರಿಗೆ ನಾಡಿನಲ್ಲಿ ನೆಲೆಯಿಲ್ಲ. ಬೇರೆಡೆಯಲ್ಲಿ ಅವರ ತಾಣ. ನಾಡ ಹೊರಗಣ ನೆಲವೇ ಅವರ ಕಾರ್ಯಕ್ಷೇತ್ರ. ನಾಡಿನಲ್ಲಿಯೇ ನೆಲೆಸಬೇಕೆಂಬ ಕೆಚ್ಚಿನ ಕಲಾವಿದರೂ ಇದ್ದಾರೆ. ನಾಡಿನಲ್ಲಿ ವಾಸಿಯೂ ಇದ್ದಾರೆ, ಆದರೆ ಅವರಿಗೆ ಪ್ರೋತ್ಸಾಹದ ಕೊರತೆ. ಪೂರ್ತಿಯಾಗಿ ಕಲೆಯ ಮೇಲೆ ಅವಲಂಬಿಸಿರಲು ಅವರಿಗೆ ಅಸಾಧ್ಯ. ಜೀವನ ನಿರ್ವಹಣೆಗೆ ಬೇರೊಂದು ದಾರಿ ಹಿಡಿಯಬೇಕಾದ್ದು ಅನಿವಾರ್ಯ.

ಅವರು ತಮ್ಮ ಕಲೆಯನ್ನು ರಸಿಕರ ಮುಂದಿಡಲು ಪಟ್ಟಣಗಳಿಗೇ ಬರಬೇಕು. ನಾಡಿನಲ್ಲಿ ಪ್ರೋತ್ಸಾಹ ಕಡಿಮೆಯೆಂದು ಹೇಳಿದ್ದೇನಲ್ಲವೇ. ಅದಕ್ಕಾಗಿ ಅವರು ಮುಂಬೈ-ದಿಲ್ಲಿಗಳತ್ತ ಸಾಗಬೇಕು. ಅಲ್ಲಿ ತಮ್ಮ ಕಲೆಯನ್ನು ಪ್ರದರ್ಶಿಸಬೇಕು. ದೂರದೂರಿನ ಜನ ಅವರ ಕಲೆಯನ್ನು ಮೆಚ್ಚಿ ಪ್ರಶಂಸಿಸಿದಾಗ ಅವರು ಸಮಾಧಾನ ಪಟ್ಟುಕೊಳ್ಳಬೇಕು.

ಹೀಗೆ ಮುಂಬೈನಲ್ಲಿ ತಮ್ಮ ಕಲಾಪ್ರದರ್ಶನ ಏರ್ಪಡಿಸಿದವರು ಕರ್ನಾಟಕದ ಕಲಾವಿದರಾದ ಜಮಖಂಡಿಯ ವಿಜಯ ಸಿಂಧೂರರು. ಅವರ ಕಲಾಪ್ರದರ್ಶನ ನಡೆದುದು ಮುಂಬಯಿನ ಮಹಾತ್ಮಾ ಗಾಂಧಿ ರಸ್ತೆಯ ಜಹಾಂಗೀರ ಆರ್ಟ ಗ್ಯಾಲರಿಯಲ್ಲಿ. ಸಪ್ಟೆಂಬರ ೧೬ರಿಂದ ೨೨ರ ವರೆಗೆ ಪ್ರತಿದಿನ ಮಧ್ಯಾಹ್ನ ೧೨ ರಿಂದ ಸಂಜೆ ೭ರ ವರೆಗೆ ಅಲ್ಲಿ ರಸಿಕರ ಸಂದಣಿ.

ಹೂವಿನ ಸಂಗಾತಿ ಪತಂಗ— ಶ್ರೀ ಸಿಂಧೂರರ ಕಲ್ಪನೆಯ ಸ್ಫುರಣ.

ವಿಜಯ ಸಿಂಧೂರ

ಕರ್ನಾಟಕ ಕಲಾವಿದರಲ್ಲಿ 'ವಿಶಿಷ್ಟ'ರೆನಿಸುವ ಕೆಲವೇ ಮಂದಿಯಲ್ಲಿ ಒಬ್ಬರು ವಿಜಯ ಸಿಂಧೂರ. ವಿಜಾಪುರ ಜಿಲ್ಲೆಯ ಜಮಖಂಡಿ ಅವರೂರು. (ಜನನ ೭ ಜೂನ್ ೧೯೪೦)

ಬಾಲ್ಯದಿಂದಲೂ ಚಿತ್ರಕಲೆಯಲ್ಲಿ ಆಕರ್ಷಣೆ. ಅದರಲ್ಲಿ ಸಾಧನೆಯೆ ತವಕ. ೧೯೬೦-೬೪ರಲ್ಲಿ ಮುಂಬೈನ ಜೆ. ಜೆ. ಸ್ಕೂಲ ಆಫ ಆರ್ಟ ಮೂಲಕ ಕಲಾಭ್ಯಾಸ ಪಡೆದು ೧೯೬೪ರಲ್ಲಿ ಅದೇ ಶಾಲೆಯಲ್ಲಿ ಭಿತ್ತಿ ಅಲಂಕರಣ (Mural Decoration) ಅಭ್ಯಾಸಕ್ಕಾಗಿ ಸ್ಕಾಲರ್‌ಶಿಪ್ ಪಡೆದು ಅಭ್ಯಾಸ ಮುಂದುವರಿಸಿದರು.

ಸಿಂಧೂರ ಈಗಾಗಲೇ ಚಿತ್ರಕಲೆಯಲ್ಲಿ ಸಾಕಷ್ಟು ಸಿದ್ಧಿ-ಪ್ರಸಿದ್ಧಿ ಗಳಿಸಿದ್ದಾರೆ. ಭಾರತದ ಅನೇಕ ಕಲಾಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ. ತಮ್ಮವೇ ಆದ ವರ್ಣಕಲಾಕೃತಿಗಳನ್ನು ಬಾಂಬೆ ಆರ್ಟ ಸೊಸೈಟಿ, ದಿ ಆರ್ಟ ಸೊಸೈಟಿ ಆಫ್ ಇಂಡಿಯಾ; ಮುಂಬೈ, ದೆಹಲಿಯ ಸ್ಕೂಲ್ ಆಫ್ ಆರ್ಟ, ಹೈದರಾಬಾದ ಆರ್ಟ ಸೊಸೈಟಿ, ಮೈಸೂರು ಲಲಿತಕಲಾ ಅಕಾಡೆಮಿ-ಬೆಂಗಳೂರು ಮುಂತಾದೆಡೆಗಳಲ್ಲಿ ಪ್ರದರ್ಶಿಸಿದ್ದಾರೆ.

ಅವರು ವ್ಯಕ್ತಿಚಿತ್ರ ಬಿಡಿಸುವಲ್ಲಿ ಎತ್ತಿದ ಕೈ. ಅದಕ್ಕಾಗಿ ಅನೇಕ ಪ್ರಶಸ್ತಿಗಳೂ ಅವರಿಗೆ ಸಿಕ್ಕಿವೆ. ಈ ಕೆಳಗೆ ಅವುಗಳ ಪಟ್ಟಿಯನ್ನು ಕೊಡಲಾಗಿದೆ.

೧೯೬೪ : ಮುಂಬೈ ಆರ್ಟ ಸೊಸೈಟಿಯವರ ವ್ಯಕ್ತಿಚಿತ್ರ (ವರ್ಣ) ಪ್ರಶಸ್ತಿ, ಜೆ. ಜೆ. ಸ್ಕೂಲ ಆಫ್ ಆರ್ಟ (ಮುಂಬೈ) ನ ಡೀನ್ ಸ್ಟಿಫ್ ಕ್ಲಾರ್ಕ್‌ನವರು ಸ್ಥಾಪಿಸಿದ ವ್ಯಕ್ತಿಚಿತ್ರ (ವರ್ಣ) ಪ್ರಶಸ್ತಿ.

೧೯೬೭: ಮುಂಬಯಿಯಲ್ಲಿ ನಡೆದ ಬಾಂಬೆ ಆರ್ಟ ಸೊಸೈಟಿಯ ೭೫ ನೆಯ ವಾರ್ಷಿಕೋತ್ಸವದಲ್ಲಿ ವ್ಯಕ್ತಿಚಿತ್ರ (ವರ್ಣ) ಕ್ಕಾಗಿ ೩೦೦ ರೂ. ಗಳ ನಗದು ಬಹುಮಾನ.

ಆರ್ಟ ಸೊಸೈಟಿ ಆಫ ಇಂಡಿಯದ 'ಪಟೇಲ ಟ್ರಾಫಿ'ಯನ್ನು ಪಡೆದು ೩೦೦ ರೂ. ನಗದು ಬಹುಮಾನವನ್ನೂ ಪಡೆದರು. ಪಟೇಲ ಟ್ರಾಫಿ ಪಡೆದ ತರುಣ ಕಲಾವಿದ.

೧೯೬೯: ರಾಜ್ಯ ಲಲಿತಕಲಾ ಅಕಾಡೆಮಿ ನಡೆಸಿದ ವ್ಯಕ್ತಿಚಿತ್ರ (ವರ್ಣ) ಸ್ಪರ್ಧೆಯಲ್ಲಿ ದ್ವಿತೀಯ ಬಹುಮಾನ.

೧೯೭೦: ಮೇಲಿನ ಬಹುಮಾನವನ್ನೇ ಮತ್ತೊಮ್ಮೆ ಪಡೆದರು.

ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯ ನಡೆಸಿದ ವ್ಯಕ್ತಿಚಿತ್ರ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ.

೧೯೭೧: ಮುಂಬೈನ ಆರ್ಟ ಸೊಸೈಟಿ ಆಫ ಇಂಡಿಯದವರು ನಡೆಸಿದ ವ್ಯಕ್ತಿಚಿತ್ರ (ವರ್ಣ) ಸ್ಪರ್ಧೆಯಲ್ಲಿ ೨೦೧ ರೂ. ಗಳ ನಗದು ಬಹುಮಾನ.

೧೯೭೩: ಧಾರವಾಡದ ಕರ್ನಾಟಕ ಆರ್ಟ ಸೊಸೈಟಿಯಿಂದ ವ್ಯಕ್ತಿಚಿತ್ರ (ವರ್ಣ) ಕ್ಕಾಗಿ ದ್ವಿತೀಯ ಬಹುಮಾನ.

ಮೈಸೂರು ದಸರಾ ಕಲಾಪ್ರದರ್ಶನದಲ್ಲಿ ದ್ವಿತೀಯ ಬಹುಮಾನ.

೧೯೭೪: ಮುಂಬೈನ ಆರ್ಟ ಸೊಸೈಟಿ ಆಫ ಇಂಡಿಯ ನಡೆಸಿದ ವ್ಯಕ್ತಿಚಿತ್ರ (ವರ್ಣ) ಸ್ಪರ್ಧೆಯಲ್ಲಿ ೨೦೧ ರೂ. ಗಳ ಬಹುಮಾನ.

ಅವರ ಕಲಾ ಪ್ರದರ್ಶನವನ್ನು ನೋಡಹೋದವರಲ್ಲಿ ನಾನೂ ಒಬ್ಬ. ಪ್ರದರ್ಶನಕ್ಕೆ ಒಂದು ವಿಶಿಷ್ಟ ವಿಷಯ ಆರಿಸಿಕೊಂಡು ಚಿತ್ರ ರಚಿಸಿದ ಕಲಾವಿದನ ಕಲ್ಪನಾ ಶಕ್ತಿಯನ್ನು, ಅಭಿವ್ಯಕ್ತಿ ಸಾಮರ್ಥ್ಯವನ್ನು, ವರ್ಣಸಂಯೋಜನೆಯನ್ನು ಮೆಚ್ಚಿಕೊಂಡೆ. ಚಿತ್ರಗಳನ್ನು ವೀಕ್ಷಿಸಿದೆ. ಅವುಗಳಲ್ಲಿ ಅಡಕವಾದ ಸ್ವಾದವನ್ನು ಕಾಡುಕೊಂಡೆ. "ಪಾತರಗಿತ್ತಿ ಮತ್ತು ಹೂವುಗಳು" ಈ ಚಿತ್ರ ಸಮೂಹಗಳ ವಿಷಯ. ಅದನ್ನವರು "Butterfly Series" ಎಂದು ಕರೆದಿದ್ದಾರೆ.

ಚಿತ್ರಗಳೆಲ್ಲ "ನವ್ಯ" ವೆನಿಸಿದರೂ ಸಾಮಾನ್ಯರಿಗೂ ಅರ್ಥವಾಗುವಂತೆ ಬಿಡಿಸಿದ್ದು ಸಿಂಧೂರರ ಕಲೆಯ ವೈಶಿಷ್ಟ್ಯ. ವಿಷಯವನ್ನೂ ಅವುಗಳನ್ನು ಸ್ವಾದಿಸಬಲ್ಲ ವರ್ಣಸಂಯೋಜನೆಯೂ ಹೂವುಗಳೊಂದಿಗೆ ಪಾತರಗಿತ್ತಿಗಳನ್ನು ಜೋಡಿಸಿರುವ ರೀತಿ ಇವೆಲ್ಲವುಗಳ ಹೊಂದಾಣಿಕೆಯಲ್ಲಿ ಅವರು ಗೈದ ಶ್ರಮ ಸಿಂಧೂರರ ಶೈಲಿಯನ್ನು ಸಾರುವಂಥವು. ಎಳೆಯ ಕಲಾವಿದ ಸಿಂಧೂರರು ಅದನ್ನು ಉಳಿಸಿಕೊಂಡು ಬೆಳೆಸಿಕೊಂಡು ಹೆಸರು ಗಳಿಸಿಕೊಳ್ಳುವುದು ನಿಃಸಂಶಯ.

ಸಿಂಧೂರರು ಈ ವಿಷಯವನ್ನು ಆರಿಸಿಕೊಂಡುದೂ ಒಂದು ಆಕಸ್ಮಿಕ ವಿಶೇಷವೇ ... ಬಾಲ್ಯದಿಂದಲೇ ... ಹೂವಿಗೆ ಮಾರುಹೋಗುವ ಪಾತರಗಿತ್ತಿ, ಅವುಗಳ ನೈಸರ್ಗಿಕ ವರ್ಣ, ಹೂವುಗಳ ಅಂದ ಈ ಕಲಾವಿದನ ... ಸ್ಫೂರ್ತಿಯ ... ಪುಟ್ಟಕ್ಕು ಚಿಮ್ಮಿತು. ಕಲೆಯಲ್ಲಿನ ವಿಚಾರ ಮನದಲ್ಲಿನ ಉತ್ಸಾಹಗಳು ವರ್ಣ-ಕುಂಚಗಳೊಡನಾಡಿದಾಗ ಈ Butterfly series ಮೂಡಿಬಂತು.

ಮುಂಬೈನ ಈ ಕಲಾಪ್ರದರ್ಶನದಲ್ಲಿ ಅವರು ಪ್ರದರ್ಶಿಸಿದ ಚಿತ್ರಗಳು ಒಟ್ಟು ೩೩. ಪ್ರತಿಯೊಂದರಲ್ಲೂ ಪಾತರಗಿತ್ತಿಯ ಚಿತ್ರ, ಹೂವುಗಳೊಂದಿಗೆ 'ಧಾರಾವಾಹಿ'ಯಾಗಿ ಹರಿದಿದೆ.

ಸಿಂಧೂರರು ಮುಂಬೈಯಲ್ಲೋ-ಬೆಂಗಳೂರಲ್ಲೋ ಇರುವವರೆಂದು ನಾವು ತಿಳಿದರೆ ತಪ್ಪು. ನಾನು ಈ ಮೊದಲೇ ಹೇಳಿದಂತೆ ಅವರು ಜಮಖಂಡಿಯಲ್ಲಿ ವಾಸಿಸುವವರು. ಪ್ರಚಾರಪ್ರಿಯರಾಗದ್ದರಿಂದ ನ್ಯಾಯವಾಗಿ ಸಿಗಬೇಕಾಗಿದ್ದ ಪ್ರಚಾರ ಸಿಕ್ಕಿಲ್ಲ. ತಮ್ಮೂರಿನಲ್ಲಿ ಕೃಷಿಯಲ್ಲಿ ತೊಡಗಿದ್ದಾರೆ. ಜತೆಗೆ ಕಲೆಯನ್ನೂ ಬೆಳೆಸಿಕೊಂಡು ಹೊರಟಿದ್ದಾರೆ. ಆಗಾಗ ಕೆಲ ಪಟ್ಟಣಗಳಲ್ಲಿ ಕಲಾಪ್ರದರ್ಶನ ಏರ್ಪಡಿಸುತ್ತಿದ್ದಾರೆ. ೧೯೭೩ ರಲ್ಲಿ ಬೆಂಗಳೂರಿನ ಮ್ಯಾಕ್ಸ್‌ಮುಲರ (Max Muler) ಭವನದಲ್ಲಿ ಇವರ ಕಲಾಪ್ರದರ್ಶನ ಏರ್ಪಡಿಸಲಾಗಿತ್ತು. ಆಗ ಅವರ ಕಲಾ ಸಾಮರ್ಥ್ಯವನ್ನು ಇತರ ಕಲಾವಿದರೂ ... ಜನರೂ ಪತ್ರಿಕೆಗಳೂ ಮುಕ್ತಕಂಠದಿಂದ ಪ್ರಶಂಸಿಸಿದ್ದು ... ಎಳೆಯರೆಯ ... ಕೃಷಿಯಲ್ಲಿ ... ಕಲೆ ... ಮುಂದೆ ... ಆದಾರ ಉಳಿಸುತ್ತಿರುವ ... ಸಿಂಧೂರರ ಬಗ್ಗೆ ಕನ್ನಡಿಗರಿಗೆ ಹೆಮ್ಮೆ ಎನಿಸುತ್ತದೆ.

ಹೂವು ದಳ-ಪತಂಗ ಚಿತ್ರ - ಸಾಂಕೇತಿಕ ವರ್ಣಚಿತ್ರ.

ಪುಷ್ಕರ ಸರೋವರ

ಗಾಯತ್ರಿ ಉದ್ಭವಿಸಿದ ಪುಷ್ಕರ

... [illegible] ... ಈ ಕಾರ್ಯಭಾರವನ್ನು ದಕ್ಷತೆಯಿಂದ ... ಈ ವರ್ಷದ ಆಡಳಿತ ಸಮಿತಿ ... ಹೊತ್ತಿದೆ. ಸಮಿತಿಯಲ್ಲಿ ... ಈ ಸಮಿತಿಯ ಉಪಾಧ್ಯಕ್ಷರು, ಎಚ್. ಎಸ್. ... ಎಂ. ಎಸ್. ಚಂದ್ರಶೇಖರ ಮತ್ತು ಕೋಶಾಧಿಕಾರಿ ಎಚ್. ಎಸ್. ಶ್ರೀನಿವಾಸ. ಅಲ್ಲದೇ ಆರು ಜನ ಆಡಳಿತ ಸಮಿತಿಗೆ ಸದಸ್ಯರಾಗಿದ್ದಾರೆ.

ಕನ್ನಡಿಗರ ಸಾಂಸ್ಕೃತಿಕ ಸಂಭ್ರಮ

ನಾರಿಗೆ ಜೈಲ್ ಕರೆ

... [illegible]

"... ಬಲಿದಾನದ ಸ್ಪೂರ್ತಿ..."

... [illegible]

ಶಿಕ್ಷಕರು, ಅದೇ ಮಾತನ್ನೇ ಬೇರೆ ರೀತಿಯಲ್ಲಿ ತಿಳಿಸಿದರು, ದಾಬೆಯವರು ಆದ್ಯರೊಬ್ಬರು ಈ ನಿಟ್ಟಿನಲ್ಲಿ ಯುಗಪ್ರವರ್ತಕರೇ ಎಂದರು. ಅಧ್ಯಕ್ಷರ ಭಾಷಣದ ನಂತರ ಭೋಜನಕೂಟದೊಂದಿಗೆ ಕಾರ್ಯಕ್ರಮ ಮುಗಿಯಿತು;

ಈ ಕಾರ್ಯಕ್ರಮಗಳನ್ನು ನಡೆಸಿದ ಮೈಸೂರು ಅಸೋಸಿಯೇಶನ್‌ದ ಅಧ್ಯಕ್ಷ ನಾಗಭೂಷಣರಾಯರು ಆದ್ಯರಂಗಾಚಾರ್ಯರು ಈ ಸಂದರ್ಭದಲ್ಲಿ ನಮ್ಮೊಟ್ಟಿಗಿಲ್ಲವಲ್ಲವೆಂದು ಸಂತಾಪಿಸಿದರು. ಕಾರ್ಯಕ್ರಮ ನಡೆಸಿಕೊಟ್ಟದುದಕ್ಕೆ ಸಂಬಂಧಿಸಿದ ಜನರಿಗೆ ಅಸೋಸಿಯೇಶನ್ ಆಭಾರಿಯಾಗಿದೆಯೆಂದು, ಕಾರ್ಯದರ್ಶಿ ಡಾ॥ ಮಂಜುನಾಥ ತಿಳಿಸಿದರು.

ಇನ್ನೊಂದು ದತ್ತಿ ಉಪನ್ಯಾಸ

ದಿನಾಂಕ ೧೮ರಂದು, ಕನ್ನಡ ಸಾಹಿತ್ಯ ಪರಿಷತ್ತು, ಮುಂಬೈ ಸಮಿತಿ ಹಾಗೂ ರಾಷ್ಟ್ರೀಯ ಕನ್ನಡ ಶಿಕ್ಷಣ ಸಮಿತಿ, ವಡಾಲಾ ಇವುಗಳ ಸಂಯುಕ್ತ ಆಶ್ರಯದಲ್ಲಿ, ವಡಾಲಾ ಕನ್ನಡ ಶಾಲಾ ಆವರಣದಲ್ಲಿ 'ಟಿ. ಪಿ. ಕೈಲಾಸಂ' ಎಂದು ಆಧ್ಯಾಯ ... ಉಪನ್ಯಾಸಕರು, ಮುಂಬೈ ಪ್ರಸಿದ್ಧ ನಾಟಕ

ಎನ್. ಸಿ. ದೇಸಾಯಿ

ಕಾರರಾದ ಶ್ರೀ ಸದಾನಂದ ಸುವರ್ಣರು, (ಇದು ಜನ್ಮಭೂಮಿ ... ಟಿ. ಎಸ್. ಗುಪ್ತ ಅವರ ದತ್ತಿ ಉಪನ್ಯಾಸ) ಹಾಗೂ ಪಿ. ಎಸ್. ಪಯ್ಯರ, ಬೆಳ್ಳಾವೆ ವೆಂಕಟ ನಾರಾಯಣಪ್ಪ. ಎಲ್. ನಾರಾಯಣರಾವ್ ದತ್ತಿ ಉಪನ್ಯಾಸದ ಪರವಾಗಿ "ಮಾಸ್ತಿಯವರ ಕೃತಿಗಳು." ಉಪನ್ಯಾಸಕರು ಶ್ರೀಮತಿ ಶಾರದಾ ಶೆಟ್ಟಿಯವರು. ಮುಖ್ಯ ಅತಿಥಿಗಳಾಗಿ ಶ್ರೀ. ವಿ. ಎಸ್. ಶ್ರೀಕೃಷ್ಣರು, ಬಂದಿದ್ದು ಅಧ್ಯಕ್ಷತೆಯನ್ನು ಶ್ರೀ ಅ. ಸು. ಕೃಷ್ಣರಾಯರು ವಹಿಸಿದ್ದರು.

ಅಂತರ ಕಾಲೇಜು ಸ್ಪರ್ಧೆ

ತಿಂಗಳ ಕೊನೆಯ ಕಾರ್ಯಕ್ರಮವಾಗಿ ವಿದ್ಯಾವಿಹಾರದ ಕೆ. ಜೆ. ಸೋಮಯ್ಯ ಕಾಲೇಜಿನ ಕನ್ನಡ ಸಂಘದವರು ಅಂತರ್ ಕಾಲೇಜು "ಪ್ರತಿಭಾ ಸ್ಪರ್ಧೆ"ಯನ್ನು ಏರ್ಪಡಿಸಿದ್ದು ಈ ಕಾರ್ಯಕ್ರಮದಲ್ಲಿ ೧೧ ಕಾಲೇಜಿನ ನೂರಾರು ವಿದ್ಯಾರ್ಥಿಗಳು ಭಾಗವಹಿಸಿದ್ದರು. ವಾಕ್ ಸ್ಪರ್ಧೆಯ ವಿಷಯ "ಭಾರತದ ಲೋಕಸಭೆಯಲ್ಲಿ ಆಳುವ ಪಕ್ಷಕ್ಕೆ ಬಲವಾದ ವಿರೋಧ ಪಕ್ಷವಿರದಿದ್ದರೆ ರಾಷ್ಟ್ರದ ಏಳಿಗೆ ಕುಂಠಿತವಾಗುತ್ತದೆ" ಎಂಬುದಿತ್ತು. ಪಕ್ಷ-ವಿಪಕ್ಷ ಎಂಬ ಎರಡು ಮತಗಳಲ್ಲಿಯೂ ವಿದ್ಯಾರ್ಥಿ ವಿದ್ಯಾರ್ಥಿನಿಯರು ಉತ್ತಮವಾಗಿ ಅಭ್ಯಾಸ ಮಾಡಿದ್ದರಲ್ಲದೇ ಅವರ ಭಾಷಣದ ರೀತಿ ಕಾರ್ಯಕ್ರಮದಲ್ಲಿದ್ದ ಆಸ್ಥೆ ಹೊಗಳುವಂತಹದು. ಸ್ವಾಗತ ನೀಡುತ್ತ ಕಾಲೇಜಿನ ಮುಖ್ಯ ಪ್ರಾಧ್ಯಾಪಕರು ಕನ್ನಡದ ಚಟುವಟಿಕೆ, ಅವರ ಶಿಸ್ತು, ಆಸ್ಥೆ ಎಲ್ಲ ಮೆಚ್ಚುವಂಥವೂ ಅನುಕರಣೀಯವೂ ಆಗಿದೆ ಎಂದು ಹೇಳಿ ಇಂಥ ಕಾರ್ಯಕ್ರಮಗಳಿಗೆ ತಾವು ಎಲ್ಲ ರೀತಿಯ ಸಹಕಾರ ಸಹಾಯ ನೀಡುವವರಾಗಿ ವಚನ ನೀಡಿದರು. ಕಾಲೇಜಿನ ಕನ್ನಡ ಪ್ರಾಧ್ಯಾಪಕ ಪ್ರೊ. ಎ. ಎ. ಕುಲಕರ್ಣಿ ಈ ರೀತಿಯ ಕಾರ್ಯಕ್ರಮಗಳನ್ನು ಕಳೆದ ಹತ್ತು ವರ್ಷಗಳಿಂದ ನಡೆಸಲಾಗುತ್ತಿದ್ದು, 'ದ. ರಾ. ಬೇಂದ್ರೆ' ರೋಲಿಂಗ ಶೀಲ್ಡ ಎಲ್ಲ ವಿಷಯಗಳಲ್ಲಿ ಹೆಚ್ಚು ಗುಣ ಪಡೆದ ಕಾಲೇಜಿಗೆ ಹೋಗುವವೆಂದರು. ವಾಕ್‌ಸ್ಪರ್ಧೆಯೊಂದಿಗೆ ಭಾವಗೀತ, ಸಮೂಹ ಗೀತ ಸ್ಪರ್ಧೆಗಳೂ ನಡೆದವು. ಪರೀಕ್ಷಕರಾಗಿ, ಶ್ರೀ ಎನ್. ಸಿ. ದೇಸಾಯಿ, ಶ್ರೀ ಸಂಜೀವ ಲಕ್ಷ್ಮೇಶ್ವರ ಹಾಗೂ ಶ್ರೀ ದೇಶಪಾಂಡೆಯವರನ್ನು ಆಮಂತ್ರಿಸಲಾಗಿತ್ತು. ಪರೀಕ್ಷಕರ ಪರವಾಗಿ ತೀರ್ಪನ್ನು ಶ್ರೀ. ಎನ್. ಸಿ. ದೇಸಾಯಿಯವರು ಪ್ರಚಾರಪಡಿಸಿದರು. ಈ ಸಲ ಬೇಂದ್ರೆ ರೋಲಿಂಗ ಶೀಲ್ಡ ಕೆ. ಬಿ. ಎಸ್. ಕಾಲೇಜಿಗೆ ಸೇರಿತು. ಪ್ರಜಾರಾಜ್ಯದ ದಿನ ನಡೆದ ಈ ಕಾರ್ಯಕ್ರಮ ... ದಿನ ನಡೆಯಿತು.



ಶಿವಮೊಗ್ಗ ಮಠದ ಶ್ರೀಗಳವರು ಸಂಗೀತ ಕಾರ್ಯಕ್ರಮವನ್ನು ನೀಡಿದ ಶ್ರೀ ವಿದ್ಯಾಭೂಷಣ ತೀರ್ಥ ಶ್ರೀಪಾದಂಗಳಿಗೆ ಅವರಿಗೆ ಪುಷ್ಪಹಾರ ನೀಡಿ ಆಶೀರ್ವದಿಸುತ್ತಿದ್ದಾರೆ. ಚಿತ್ರ: ಗಿರೀಶ ಕಲ್ಯಾಣಪುರ.

ಅಗಡಿಯ ಸಾಧುಗಳ ಪರಮಶಿಷ್ಯ ನಾರಾಯಣ ಭಗವಾನರು

VIJAY KARNATAKA 25/6/2001

ನಗರದ ನಾರಾಯಣಾಚಾರ್ಯರು [illegible] ಸರೂ. ಮಾಸಿಕ ಸಂಬಳ ಗಳಿಸುವ ಕನ್ನಡ ಶಾಲೆಯ ಶಿಕ್ಷಕರು ಗದುಗಿನ ಬಳಿ [illegible] ಅವಲಿಪ್ತಾಗ ಹತ್ತಿರದ ಇನ್ನೊಂದು ಹಳ್ಳಿಯಲ್ಲಿ ಆಗಿನಕಾಲಕ್ಕೆ ಶಾಂತಕವಿಗಳೆಂದು ಪ್ರಸಿದ್ಧರಾಗಿದ್ದ ಸಕ್ಕರಿ ಬಾಳಾಚಾರ್ಯರು ಇದ್ದರು. ಕವಿ ಅಲ್ಲದೆ ಅವರಿಗೆ ನಾಟಕ-ದೊಡ್ಡಾಟಗಳಲ್ಲಿ ಆಸಕ್ತಿ. ನಾರಾಯಣಾಚಾರ್ಯರಿಗೂ ಈ ಹವ್ಯಾಸಗಳಲ್ಲಿ ಇಷ್ಟ. ಸಹಜವಾಗಿಯೇ ಈರ್ವರಲ್ಲಿ ಸ್ನೇಹ. ಹೀಗಾಗಿ ಪಾಲಕರು, ಜನತೆಯಲ್ಲಿ ಇವರು ಜನಪ್ರಿಯರಾಗಿದ್ದರು. ಅದೇ ನಾರಾಯಣಾಚಾರ್ಯರಿಗೆ ಮುಳುವಾಯಿತು. ಇವರಜನಪ್ರಿಯತೆಯನ್ನು ಕಂಡು ಉಳಿದ ಶಿಕ್ಷಕರಿಗೆ ಹೊಟ್ಟೆಕಿಚ್ಚು. ಮೇಲಾಧಿಕಾರಿಗಳಿಗೆ ಏನಾದರೊಂದು ಚಾಡಿ. ಇವರು ಶಿಕ್ಷಕನ ಕರ್ತವ್ಯವನ್ನು ಬದಿಗಿಟ್ಟು, ನಾಟಕ ದೊಡ್ಡಾಟಗಳಲ್ಲಿ ಇವರ ಆಸಕ್ತಿ ಹೆಚ್ಚು, ಮಕ್ಕಳಿಗೂ ಅದನ್ನೇ ತಲೆಯಲ್ಲಿ ತುಂಬುತ್ತಾರೆಂಬ ದೂರು. ಅಧಿಕಾರಿಗಳು ಇವರ ಸಂಬಳವನ್ನು 8 ರೂ. ನಿಂದ 6ರೂ.ಗೆ ಇಳಿಸಿದರು. ಸ್ವಾಭಿಮಾನಿಗಳಾದ ನಾರಾಯಣಾಚಾರ್ಯರಿಗೆ ಇದು ಸಹನೆಯಾಗಲಿಲ್ಲ. ತಕ್ಷಣ ಆ ಹುದ್ದೆಗೆ ರಾಜೀನಾಮೆ ನೀಡಿ ತಮ್ಮ ಹಳ್ಳಿ ಅಗಡಿಗೆ ಮರಳಿದರು.

ಈಸಂದರ್ಭದಲ್ಲಿ ಆಚಾರ್ಯಸ್ನೇಹಿತರು ಅಗಡಿಯವರೇ ಆದ ''ಸಾಧು ಶೇಷಾಚಲ'' ಎಂದು ಪ್ರಸಿದ್ಧರಾದ ಗುರುವನ್ನು ಕಂಡರೆ ಕಾರ್ಯ ಸುಲಭವಾದೀತು ಎಂದು ಸೂಚಿಸಿದರು.

ಆ ಸಮಯ ಸಾಧುಗಳ ವಾಸ್ತವ್ಯ ಚಿದಂಬರನ ಸ್ಥಾನ ಮುರಗೋಡಿನಲ್ಲಿತ್ತು. ಅಲ್ಲಿಗೆ ಧಾವಿಸಿದರು. ಆಚಾರ್ಯರು ಕೆಂಗೇರಿ (ಮುರಗೋಡ)ದಲ್ಲಿ ಸಾಧುಗಳನ್ನು ಕಂಡರು. ಅವರು ಬರುತ್ತಲೇ ನಾರಾಯಣಾಚಾರ್ಯರನ್ನು ಕರೆದು ಸಾಧುಗಳು, ನೋಡಿ ಆಚಾರ್ಯರೇ ನೀವೇನು ಕೆಲಸವಿಟ್ಟುಕೊಂಡು ಬಂದೀರಿ, ಅದನ್ನು ಗುರುರಾಯರಿಗೆ ಹೇಳಿರಿ ಅವರು ಮಾಡಿಕೊಡುತ್ತಾರೆಂದು ಹೇಳಿದರು. ಗುರುರಾಯರೇ ಅವರ ಕೆಲಸ ಮಾಡಿಕೊಡಿ ಎಂದು ಮಜಲಿಯವರಿಗೆ ಹೇಳಿದರು.

ಮುರಗೋಡದ ಸೇವೆಯನ್ನು ಮುಗಿಸಿ

ಅಗಡಿಯ ಸಾಧುಗಳ ಶಿಷ್ಯ ಶ್ರೀ ನಾರಾಯಣ ಭಗವಾನರ ಜಯಂತಿ ನಾಳೆ ದಿ.26 ರಂದು ಆನಂದವನದಲ್ಲಿ ನಡೆಯಲಿದೆ. ತನ್ನಿಮಿತ್ತ ಈ ಲೇಖನ.

ಸಾಧುಗಳು ಶಿಷ್ಯರೊಂದಿಗೆ ಅಗಡಿಗೆ ಹೊರಟರು. ಅಗಡಿಗೆ ಬಂದ ಮೇಲೆ ಆಚಾರ್ಯರು ತಮ್ಮ ಮನೆಗೆ ಹೋಗಲಿಲ್ಲ. ಸಾಧುಗಳ ಮನೆಯನ್ನೇ ಸೇರಿದರು.

ಕಾದಂಬರಿಕಾರರಾದ 'ಗಳಗನಾಥ' ಎಂದು ಪ್ರಸಿದ್ಧರಾಗಿದ್ದ ವೆಂಕಟೇಶ ತಿರಕೋ ಕುಲಕರ್ಣಿಯವರೂ , ಗುತ್ತಲದ ಯಲ್ಲೋಗುಡ್ಡೋ ಕುಲಕರ್ಣಿಯವರೂ ಸ್ವಾಮಿಯ ಸೇವೆಯನ್ನು ಸದಾಕಾಲ ಬಯಸಿ ಇಲ್ಲಿಯೇ ಸ್ಥಾಯಿಯಾದರು.

ನಾರಾಯಣಾಚಾರ್ಯರಿಗೆ 'ಭಗವಾನ್' ಪದವಿ : ಜಮಖಂಡಿಗೆ ಸಂಚಾರಕ್ಕೆ ಹೋದಾಗ ಬಾಪುನಾಯಕ ಎಂಬ ಭಕ್ತರಲ್ಲಿ ಸಾಧುಗಳೂ, ಶಿಷ್ಯರು ಉಳಿದಿದ್ದರು. ಆ ಗೃಹಸ್ಥರಿಗೆ ಕ್ಷಣಕ್ಕೊಮ್ಮೆ ''ಹೇರಾಮ್ ಭಗವಾನ್'' ಎಂದು ಉಸಿರುವ ರೂಢಿ, ಅದನ್ನೇ ಈ ಶಿಷ್ಯರೆಲ್ಲರಿಗೂ 'ಭಗವಾನ್' ಎಂದೇ ಅವರು ಸಂಬೋಧಿಸುತ್ತಿದ್ದರು. ಆಗ ಭಗವಾನ್ ಎಲ್ಲರಿಗೆ ಸರಿಹೋಗುವುದಿಲ್ಲ. ಅದು ನಾರಾಯಣಾಚಾರ್ಯರಿಗೆ ಮಾತ್ರ ಯೋಗ್ಯವಾದ ಪದವಿ ಎಂದು ಸಾಧುಗಳಿಗೆ ತಿಳಿಸಿದ ಅವರು, ಆಚಾರ್ಯರನ್ನು 'ಭಗವಾನ್' ಎಂದೇ ಕರೆದರು.

[illegible] ಅವರ ಪತ್ನಿ [illegible] ನಗರ ವೆಂಕಟಾಚಾರ್ಯ ಪತ್ನಿ ಸುಂದರಾ[illegible] ಈ ದಂಪತಿಗೆ ಮೂವರು ಗಂಡು ಮಕ್ಕಳು ಈ ದಂಪತಿಗೆ [illegible] ಸಂತಾನ[illegible] ಅಗಲಿ ದಂಪತಿಗಳು ಮಾತನಾಡಿಕೊಂಡರು. ಮುಂದಿನ ಮಗು ಗಂಡೇ ಆಗಲಿ ಹೆಣ್ಣೇ ಆಗಲಿ ಅದನ್ನು ಸಾಧುಗಳ ಜೋಳಿಗೆಯಲ್ಲಿ ಹಾಕಿ ಸಂತಾನವಿಲ್ಲದ ಅವರ ಸಂತಾಪವನ್ನು ಕುಗ್ಗಿಸುವುದು

ಎಂದು ಅದನ್ನು ನಡೆಸಿಯೂ ಕೊಟ್ಟರು. ಮುಂದಿನ ಮಗು ಕೂಡ ಗಂಡೇ. ನಾರಾಯಣ ಎಂಬ ನಾಮಕರಣ- ಅದೇ ಸಾಧುಗಳ ಶಿಷ್ಯ 'ಭಗವಾನ'ನಾದ ನಾರಾಯಣಾಚಾರ್ಯ!

ಪೃಥ್ವಿಯ ನಿಯಮದಂತೆ ಎಲ್ಲವೂ ನಡೆಯಲೇಬೇಕಲ್ಲ. ಶೇಷಾಚಲ ಸಾಧುಗಳಿಗೆ ವೃದ್ಧಾಪ್ಯ ಸಮೀಪಿಸಿತು. ತಮ್ಮ ನಿರ್ವಾಣದ ವೇಳೆಯೂ ಅವರಿಗೆ ಮೊದಲೇ ಗೊತ್ತಿತ್ತು ದೇಹಬಿಡುವ ಮೊದಲು ಆನಂದವನದ ಮುಂದಿನ ಕಾರುಬಾರು ನೋಡುವವರೊಬ್ಬರು ಯಾರೆಂದು ಅವರಿಗೆ ತಿಳಿಯಬೇಕಿತ್ತು. ಕೆಲವರು ನಾನು ಮಾಡುತ್ತೇನೆಂದು ಮುಂದೆ ಬಂದವರನ್ನು ಬದಿಗಿಟ್ಟರು. ''ಏಕೆ ಭಗವಾನರೇ ಈ ಸೇವೆ ನಿಮ್ಮಿಂದಾಗುವುದಿಲ್ಲವೇ? ಎಂದು ನೇರ ಅವರನ್ನೇ ಕೇಳಿದಾಗ ಭಗವಾನರು ''ನೀವು ನಡೆಸಿಕೊಳ್ಳುತ್ತೇನೆ, ಸೇವೆ ತೆಗೆದುಕೊಳ್ಳುತ್ತೇನೆಂದು ಆಶೀರ್ವದಿಸಿದರೆ ಮಾತ್ರ ಈ ಸೇವೆಯ ಜವಾಬ್ದಾರಿ ತೆಗೆದುಕೊಳ್ಳಲು ಸಿದ್ಧ'' ಎಂದ ಗುರುಗಳು, ತಥಾಸ್ತು ಎಂದರು.

ಇಲ್ಲಿಯ ಆರೋಗ್ಯ ಧಾಮಕ್ಕೆ ಸರ್ವಭಕ್ತರ ಅಭಿಪ್ರಾಯದ ಮೇರೆಗೆ 'ಭಗವಾನ್' ಎಂಬ ನಾಮಕರಣ ಮಾಡಿದ್ದಾರೆ. ಆರೋಗ್ಯಧಾಮದ ಸೇವೆಯ ಜವಾಬ್ದಾರಿಯನ್ನು ಡಾ.ಡಿ.ಕೆ.ಕೆರೂರ ಹಾಗೂ ಡಾ.ಬೋಧರಾವ್ ಎಲ್.ಕುಲಕರ್ಣಿ ನಿರ್ವಹಿಸುವ ಜವಾಬ್ದಾರಿ ತೆಗೆದುಕೊಂಡಿದ್ದಾರೆ.

ಹೀಗೆ ಶೇಷಾಚಲ ಸಾಧುಗಳು ನೆಟ್ಟ ಪಾರಮಾರ್ಥಿಕ, ಆಧ್ಯಾತ್ಮಿಕ, ಶೈಕ್ಷಣಿಕ, ಲೌಕಿಕ ವೃಕ್ಷದ ಸಸಿ ಭಗವಾನರಿಂದ ಪೋಷಣೆಯಾಗಿ ಈಗ ಹೆಮ್ಮರವಾಗಿ ನಿಂತಿದೆ.

★ಡಿ.ನಾರಾಯಣಮೂರ್ತಿ

ಅಗಡಿಯ ಸಾಧು ಶೇಷಾಚಲರು - ನಾರಾಯಣ ಭಗವಾನರು

ಹಾವೇರಿ ಜಿಲ್ಲೆ ಅಗಡಿ ಆನಂದವನದಲ್ಲಿ ಶೇಷಾಚಲ ಸಾಧುಗಳ ಶಿಷ್ಯರಾಗಿದ್ದ ನಾರಾಯಣ ಭಗವಾನರ ಜಯಂತಿ ಇದೇ ದಿ. 26 ರಂದು ನಡೆಸುಲಿದೆ. ತನ್ನಿಮಿತ್ತ ಈ ಲೇಖನ.

ಬಹುಶಃ ದೇವನು ಅವತಾರತಾಳಿ ಇಲ್ಲವೆ ವರಪುತ್ರನಾಗಿ ಧರೆಗಿಳಿದಾಗ ಅವನಿಗೊಬ್ಬ ಪರಮ ಭಕ್ತನಾದ ಶಿಷ್ಯನೂ ಕೂಡ ಭೂಮಿಗಿಳಿದಿರುತ್ತಾನೆಂದು ಕಾಣುತ್ತದೆ. ಅಂತ ಘಟನೆ, ಸಂದರ್ಭಗಳಲ್ಲಿ ನಾವು ಪ್ರಾಚೀನ ಕಾಲದಿಂದಲೇ ಕಾಣುತ್ತ ಬಂದಿದ್ದೇವೆ. ಅನುಭವಿಸಿದ್ದೇವೆ. ಮುರಗೋಡದ ಚಿದಂಬರಸ್ವಾಮಿಗಾಗಿ ದೂರದ ಪರಪ್ರಾಂತ ಮಹಾರಾಷ್ಟ್ರದಲ್ಲಿ ಅವರಿಗಾಗಿಯೇ ರಾಜಾರಾಮನು ಜನ್ಮತಾಳಿದ್ದನೋ ಎಂಬುವಂತೆ ಅವರ ಸಂಬಂಧ ಹೇಳುತ್ತದೆ. ಆದರೆ ಅವರ ಸಮಾಗಮಕ್ಕೆ ಕಾಲ ಒದಗಿ ಬರಬೇಕಷ್ಟೆ!

'ಅಗಡಿಯ ಸಾಧುಗಳು' ಎಂದು ಕರ್ನಾಟಕ ಮಹಾರಾಷ್ಟ್ರಗಳಲ್ಲಿ ಪ್ರಸಿದ್ಧರಾದ ಆನಂದವನದ ಶ್ರೀ ಶೇಷಾಚಲ ಸದ್ಗುರುಗಳಿಗೂ ಒಬ್ಬ ಶಿಷ್ಯ ಇದ್ದೂರಲ್ಲಿಯೇ ಜನ್ಮತಾಳಿದನು. ಈರ್ವರ ಸಮಾಗಮವಾದರೂ ಬಹಳ ಕಾಲದ ನಂತರ ಸಾಧುಗಳದು ಚಕ್ರವರ್ತಿ ಮನೆತನ. ಅದೇ ಊರ [illegible] 'ನಗರ' ಎಂದು ಇನ್ನೊಂದು ಮಧ್ಯಮ ವರ್ಗದ [illegible] ಮಧ್ವ ಸಂಪ್ರದಾಯ ಬ್ರಾಹ್ಮಣ ಮನೆತನ. ಈ ಮನೆತನದಲ್ಲಿಯೇ ಇದ್ದ ಜಮೀನುಗಳು [illegible] ಮನೆತನದ [illegible] ಆ ಮನೆತನದಲ್ಲಿಯ [illegible] ಆಗಿನ ಆಂಗ್ಲ ಸರ[illegible] ಕನ್ನಡ ಶಾಲೆಯ ಶಿಕ್ಷಕ ಕೆಲಸಕ್ಕೆ ಸೇರಿಕೊಂಡಿದ್ದರು.

[illegible]

ಶಿಕ್ಷಕನೆಂದೂ ಜನಪ್ರಿಯನಾಗಿದ್ದ ನಾರಾಯಣಾಚಾರ್ಯರ ಕೀರ್ತಿಯು ಸಹ ಶಿಕ್ಷಕರಿಗೆ ಅಸಮಾಧಾನ ಮಾಡಿತು. ಹೇಗಾದರೂ ಮಾಡಿ ಆಚಾರ್ಯರಿಗೆ ತೊಂದರೆ ಕೊಡಬೇಕೆಂದು ಮೇಲಧಿಕಾರಿಗಳಿಗೆ "ಮೂಕ ಅರ್ಜಿಗಳು" ಹೋದವು. ಅದು ಪರಿಣಾಮ ಬೀರದೇ ಇರಲಿಲ್ಲ. ಅವರಿಗೆ ಬಡ್ತಿಯಂತೂ ಸಿಗಲಿಲ್ಲ ಬದಲಾಗಿ ಅವರ 8 ರೂ. ಇದ್ದ ಸಂಬಳವನ್ನು 6 (ಆರು) ರೂ.ಗಳಿಗೆ ಇಳಿಸಿದರು. ಸ್ವಾಭಿಮಾನಿಯಾದ ಆಚಾರ್ಯರು ರಾಜಿನಾಮೆ ನೀಡಿ ಮನೆಗೆ ಮರಳಿದರು.

ಸುಮ್ಮನೆ ಕುಳಿತುಕೊಳ್ಳುವದು ಸಾಧ್ಯವಿರಲಿಲ್ಲ. ಮುಲ್ಕಿ ಖಾತೆಗೆ ಸೇರಿದರೆ ಸಂಬಳ ಹೆಚ್ಚು ಸಿಗುವದೆಂದು ಯೋಚಿಸಿದರು. ಆ ಸಂದರ್ಭದಲ್ಲಿ ಹಿತಚಿಂತಕರೊಬ್ಬರು ನಿಮ್ಮಲ್ಲಿಯೇ ಇರು(ಅಗಡಿ) ಸಾಧು ಶೇಷಾಚಲರನ್ನು ಕೆಲಸ ಸುಲಭವೂ ಬೇಗವೂ ಆದೀತು, ಸಾಧುಗಳ ಕೀರ್ತಿ ಸುತ್ತಲು ಹಬ್ಬಿದೆ. ಅವರ ಶಿಷ್ಯ ಸಂಪತ್ತು ಬಹುದೊಡ್ಡದು ಬೆಳಗಾವಿಯಲ್ಲಿ ಮಜಲಿ ಗುರುರಾಯರೆಂಬೊಬ್ಬ ಅವರ ಶಿಷ್ಯರಿದ್ದಾರೆ. ಮುಲ್ಕಿಖಾತೆಯಲ್ಲಿ ದೊಡ್ಡ ಅಧಿಕಾರಿ ಅವರಿಂದ ಕೆಲಸ ಸುಲಭವಾಗಿ ಆದೀತು ಎಂದು ಹೇಳಿದರು.

ಈ ಮಾತನ್ನು ಕೇಳುತ್ತಲೇ ನಾರಾಯಣಾಚಾರ್ಯರಿಗೆ ಹೊಳೆದಂತಾಯಿತು. ಆಧ್ಯಾತ್ಮಿಕವಾಗಿ ಇಷ್ಟು ಎತ್ತರಕ್ಕೆ ಹೋದ ಸಾಧುಗಳಿದ್ದರು ಹಳ್ಳಿಯ ಬದಿಯಲ್ಲಿ ಓಣಿಯಲ್ಲಿಯೇ ಇದ್ದರೂ ತಮಗೆ ತಿಳಿದಿಲ್ಲವಲ್ಲ ಎಂದು ಹಳಹಳಿಸಿದರು. [illegible] ಸಾಧುಗಳನ್ನು ಕಂಡು ತಮ್ಮ ಕಾರ್ಯ [illegible] ನಿರ್ಧರಿಸಿ, ಆಗ ಮುರಗೋಡ [illegible] ಸಾಧುಗಳೆಡೆ ಧಾವಿಸಿದರು.

[illegible] ಸಾಧುಗಳು "[illegible] ಈಗ [illegible]?" ಎಂದರು. [illegible] ಸಾಷ್ಟಾಂಗ [illegible] ಮಾಡಿ [illegible]



ರಿಗೆ ಕೇಳಿಸಿದ್ದರೂ ಮಾತಿನ ಮರ್ಮವೇ ಅವರಿಗೆ ಹೊಳೆದಿರಲಿಲ್ಲ.... ಈ ಮಾತಿನಲ್ಲಿ ಲೌಕಿಕ ಹಾಗೂ ಆಧ್ಯಾತ್ಮಿಕ ಸಂದೇಶ ಅಡಗಿಸಿದ್ದವು. ಅದರ ಅರ್ಥ ಆಚಾರ್ಯರಿಗೆ ಹೊಳೆಯಲು ಆಗ ಸಾಧ್ಯವೂ ಇರಲಿಲ್ಲ!

ತಾವು ಬಂದ ವಿಷಯವನ್ನು ಸಾಧುಗಳಿಗೆ ಹೇಳಬೇಕೆಂದರೆ [illegible] ಕೇಳುವಷ್ಟು [illegible] ಇರಲಿಲ್ಲ. ಸಾಧುಗಳೂ ಕೇಳಲಿಲ್ಲ, ಆದರೆ [illegible]

ಸಾಧುಗಳು ಪರಮಭಕ್ತಿಯಿಂದ ಚಿದಂಬರ ಸೇವೆ ಮಾಡುವದನ್ನು ಉಳಿದಭಕ್ತರಿಗೆ ಚಿದಂಬರನ ಬಗ್ಗೆ ಆಧ್ಯಾತ್ಮಿಕ ವಿಷಯದ ಬಗ್ಗೆ ಬೋಧಿಸುತ್ತಿದ್ದ ಅಮೃತವಾಣಿಯನ್ನು ಆಲಿಸುವ ಭಾಗ ಮಾತ್ರ ಲಭ್ಯವಾಯಿತು. ಸಾಧುಗಳ ಜೊತೆಗೆ ಮಲ್ಹಾರಿ ನಾಯಕರೆಂಬ ಭಕ್ತರೊಬ್ಬರು ಬಂದಿದ್ದರು. ಬೆಳಗಿನಿಂದ ರಾತ್ರಿಯವರೆಗೂ ಅವರದು ಸಾಧುಗಳ ಸೇವೆ ಮಾಡ್ತರ, ನಾರಾಯಣಾಚಾರ್ಯರರು ಅವರಿಗೆ ಸಹಾಯ ಮಾಡುವದನ್ನು ಪ್ರಾರಂಭಿಸಿದರು. ಆ ಕಾರ್ಯದಲ್ಲಿ ಅವರಿಗೊಂದು ಅಪ್ರತಿಮ ಆನಂದ, ಸಾಧುಗಳ ಅಮೃತವಾಣಿಯನ್ನು ಕೇಳುವಲ್ಲಿ ಆನಂದ ಸಾಗರದಲ್ಲಿ ತೇಲಿದರು. ಈ ಎಲ್ಲ ಸಂದರ್ಭಗಳೂ ಆಚಾರ್ಯರಲ್ಲಿ ಭಕ್ತಿ ಶ್ರದ್ಧೆಯ ಮೊಳಕನ್ನು ಮೂಡಿಸಿದವು.

ಕೆಲದಿನ ಕಳೆದವು. ಮಜಲಿಗುರುರಾಯರು ಸಾಧುಗಳ ದರ್ಶನಕ್ಕೆಂದು (ಕೆಂಗೇರಿ) ಮುರಗೋಡಕ್ಕೆ ಬಂದರು ಆಗ ಸಾಧುಗಳು ಆಚಾರ್ಯರನ್ನು ಕರೆದು, ಮಜಲಿಗುರುರಾಯರು ಬಂದಿದ್ದಾರೆ ನಿಮ್ಮದೇನೋ ಕೆಲಸ ಹಿಡಿದುಕೊಂಡು ಬಂದಿದ್ದೀರಲ್ಲ ಅವರಿಗೆ ಹೇಳಿ ಎಂದು ಆಚಾರ್ಯರಿಗೆ ಹೇಳುತ್ತಾ ಗುರುರಾಯರೆ ಅವರ ಕೆಲಸ ಬೇಗ ಮಾಡಿಕೊಡಿ" ಎಂದು ಗುರುರಾಯರಿಗೆ ಹೇಳಿದರು. ಈ ಮಾತನ್ನು ಕೇಳಿದ ಆಚಾರ್ಯರು ಹೌಹಾರಿದರು. ಕಾರಣ, ಸಾಧುಗಳಿಗೆ ಏನನ್ನೂ ಹೇಳಿದ್ದಿಲ್ಲ. ಆದರೂ ಮನದಲ್ಲಿ ಗೌಪ್ಯವನ್ನು ತಿಳಿದುಕೊಂಡು ಸಾಷ್ಟಾಂಗ ನಮಸ್ಕಾರ ಮಾಡಿ, [illegible] "...[illegible] ಗುರುರಾಯರಿಗೆ ತೊಂದರೆ ಕೊಡುವುದು ಬೇಡ. [illegible] ನಿಮ್ಮ ಚರಣ ಸೇವೆ ಮಾತ್ರ ಎಂದರು ಸಾಧುಗಳು ಮಾತ್ರ [illegible]... !

ನಾರಾಯಣಾಚಾರ್ಯರಿಗೆ "ಭಗವಾನ್" ಪದವಿ

ಸಾಧುಗಳು ತಮ್ಮ ಶಿಷ್ಯಪರಿವಾರದೊಂದಿಗೆ ಸಂಚಾರ ಹೋಗುವ ಪದ್ಧತಿ ಅಂಥ ಒಂದು ಪ್ರಸಂಗದಲ್ಲಿ ಜಮಖಂಡಿಯ ವಾಸ್ತವ್ಯದಲ್ಲಿ ಬಾಪೂನಾಯಕ ಎಂಬುವರಲ್ಲಿ ವಾಸ್ತವ್ಯ. ನಾಯಕರಿಗೆ ಕ್ಷಣಕ್ಕೊಮ್ಮೆ ಹೇ, ರಾಮ-ಭಗವಾನ್ ಎಂದು ಉಚ್ಚರಿಸುವ ರೂಢಿ ಸಾಧುಗಳ ಶಿಷ್ಯರನ್ನೂ ಭಗವಾನ ಎಂದೇ ಸಂಬೋಧಿಸುತ್ತಿದ್ದರು. ಶಿಷ್ಯರೆಲ್ಲ ಸೇರಿ ಈ ಭಗವಾನ ಸಂಬೋಧನೆ ನಾರಾಯಣಾಚಾರ್ಯರಿಗೆ ಮಾತ್ರ ಒಪ್ಪುವಂತಹದು. ಅವರೊಬ್ಬರಿಗೆ ಅದಿರಲಿ ಎಂದು ಸಾಧುಗಳಿಗೆ ಹೇಳಿದರು ಅವರು 'ತಥಾಸ್ತು' ಎಂದರು ಅಂದಿನಿಂದ ನಾರಾಯಣಾಚಾರ್ಯರು "ನಾರಾಯಣ ಭಗವಾನ್" ರಾದರು.

ಆನಂದವನ ನಿರ್ಮಾಣದ ನಂತರ ಗಳಗನಾಥರು, ಯಲ್ಲೋಗುಡ್ಡೋ ಕುಲಕರ್ಣಿಯವರು, ಸಾಧುಗಳೆಡೆಗೆ ಆಗಾಗ ಬರುತ್ತಿದ್ದವರು ಅವರು ಕೂಡ ಸದಾಕಾಲವೂ ಸ್ವಾಮಿಯ ಸಾನಿಧ್ಯವನ್ನೇ ಬಯಸಿದರು. ಅವರು ಈ ಪವಿತ್ರ ಸ್ಥಾನದಿಂದ ವಿದ್ಯಾದಾನ, ಕನ್ನಡದ ಜಾಗೃತಿ ಭಾಷಾಸೇವೆಯೂ ನಡೆಯಲಿ ಎಂದು ಬಯಸಿದರು. ಪರಿಣಾಮ ಶ್ರೀ ಶೇಷಾಚಲ ಸದ್ಗುರು ವೇದ ಸಂಸ್ಕೃತ ಪಾಠಶಾಲೆ (ಕ್ರಿ.ಶ. 1903) ಕನ್ನಡದ ಮಾಸ ಪತ್ರಿಕೆ "ಸದ್ಬೋಧ ಚಂದ್ರಿಕೆ" ಪ್ರಕಟಣೆ ಪ್ರಾರಂಭವಾದವು. ಇಂಥ ಕಾರ್ಯಗಳಿಗೆಲ್ಲ ಸಾಧುಗಳು [illegible] ಒಪ್ಪಿದವರಲ್ಲಿ ನಾವು ಬದುಕು [illegible] ನೀಗಿಸಲಾದೀತೆ ಎಂಬ ಅರ್ಥದಲ್ಲಿ ಅವರು [illegible] ಅಂಥ ಸಂದರ್ಭದಲ್ಲಿ ಭಗವಾನರೇ [illegible]!

ಶೇಷಾಚಲ ಸದ್ಗುರುಗಳು [illegible] ತಮ್ಮನಂತರ ಆನಂದವನದ [illegible] ಭಗವಾನರೇ [illegible] ಈ [illegible] "[illegible]" ಆಗಿದ್ದಾರೆ.

✤ ನಾನಾಸಾಹೇಬ ದೇಸಾಯಿ

ಮುಂಬೈ ಪತ್ರ

ಅಗಲಿದ ಕನ್ನಡದ ಹಿರಿಯರಿಗೆ ಶ್ರದ್ಧಾಂಜಲಿ

ನಾ. ದೇಶಾಯಿ

ಕವಾಸ್ಜಿ ಜಹಾಂಗೀರ್ ಹಾಲ್‌ನಲ್ಲಿ ನಡೆದ ದುಃಖಸೂಚಕ ಸಭೆಯಲ್ಲಿ ಶ್ರೀ ವೀರೇಂದ್ರ ಕುಮಾರ ಹೆಗ್ಗಡೆ ಮಾತನಾಡುತ್ತಿದ್ದಾರೆ. ಕುಳಿತಿರುವವರು (ಎಡದಿಂದ ಬಲಕ್ಕೆ): ಸರ್ವಶ್ರೀ ಸಂಜೀವರಾವ್ ಮೂಡಬಿದ್ರಿ, ನಾರಾಯಣ ಬಲ್ಲಾಳ, ರಾಮಚಂದ್ರ ಉಚ್ಚಿಲ, ಡಿ. ಕೆ. ಮೆಂಡನ್ ಮತ್ತು ಎಸ್. ಎಸ್. ರಂಗನಾಥ ರಾವ್,

---

11-7-1999

...ಗರದಲ್ಲಿಂದು ಮಾರ್ತಾಂಡ ...ಕ್ಷಿತರ ಅಭಿನಂದನಾ ...ಮಾರಂಭ



ಚಿದಂಬರ ಸೇವಾ ಮಂಡಳ ಸಹಾಯಾರ್ಥ ಗೀತರಾಮಾಯಣ

ಡೊಂಬಿವಲಿ - ಶ್ರೀ ಚಿದಂಬರ ಸೇವಾ ಮಂಡಳದಿಂದ ... ಶ್ರೀ ... ಮಾಡಗೂಳಕರ ರಚಿತ ಗೀತ ರಾಮಾಯಣ ... ಏರ್ಪಡಿಸಲಾಗಿದೆ.

ಅ ಭಾ ಕಾವ್ಯ ಪರಿಷತ್ತು ಸೇರಿಸಲು ನಿರ್ಧಾರ

... ಆನಂದವನದಲ್ಲಿ ಶ್ರೀ ... ಸೇರಿದ ಸಮಾಲೋಚನ ಸಭೆ ... ಸಮ್ಮೇಳನ ಕರೆಯಲು ... ಸಮ್ಮೇಳನ ಆನಂದವನದಲ್ಲೇ ಸೇರಲೆಂದು ಶ್ರೀ ಚಿದಂಬರಮೂರ್ತಿ ಸ್ವಾಮಿಗಳು ಅಪೇಕ್ಷೆ ವ್ಯಕ್ತಪಡಿಸಿದರು.

... ಗುಡಾಚಿ ಹಾಗೂ ಚಿದಂಬರ ನಗರದ ಶ್ರೀ ಸುಂದರೇಶ ದೀಕ್ಷಿತರಲ್ಲದೆ ಕರ್ನಾಟಕ ಹಾಗೂ ಮಹಾರಾಷ್ಟ್ರಗಳಿಂದ ಬಂದ ಅನೇಕ ಪ್ರಮುಖ ಕಾವ್ಯಕಾರರು ...

ಹುಬ್ಬಳ್ಳಿಯಲ್ಲೊಂದು ಚಿದಂಬರ ದೇವಸ್ಥಾನ

ಕ್ರಿ. ಶ. ೧೯೯೭ ರ ಒಂದು ಸಾಯಂಕಾಲ ಮನೆಯಲ್ಲೇ ಇದ್ದೆ ಗೋಕುಲ ಮಾರ್ಗ (ಹುಬ್ಬಳ್ಳಿ) ದಲ್ಲಿಯ ಸೆಂಟ್ರಲ್ ಎಕ್ಸೈಜ್ ಕಾಲನಿಯಲ್ಲಿಯೇ ವಾಸವಾಗಿರುವ ಶ್ರೀ ಎಂ. ಎಂ. ಪಾಟೀಲ (ಅಸುಂಡಿ) ಬಂದಿದ್ದರು ಮಾತಿಮಾತುನಲ್ಲಿಯೇ ನಾವೆಲ್ಲ ಇಷ್ಟು ಜನ ಭಕ್ತರಿದ್ದೇವೆ ಚಿದಂಬರ ಜಯಂತಿಯನ್ನು ಏಕೆ ಮಾಡಬಾರದು. ಎಂಬ ಸೂಚನೆಯನ್ನು ಮಾಡಿದರು. ಮಾಡಬಹುದು ಆದರೆ ಒಮ್ಮೆ ಪ್ರಾರಂಭ ಮಾಡಿದ ಮೇಲೆ ಪ್ರತಿವರ್ಷ ತಪ್ಪದೇ ಅದನ್ನು ಮಾಡಬೇಕಾಗುತ್ತದೆ. ನೋಡಿ



ಎಂದೆ ಅವರಿಗೊಂದು ಮನೋಧೈರ್ಯ ಆಗಲಿ ಎಂದು ಒಪ್ಪಿಕೊಂಡರು. ಆ ವರ್ಷ ಗೋಕುಲ ಮಾರ್ಗದ ಬ್ರಾಹ್ಮಣ ಸಂಘದ ಅಧ್ಯಕ್ಷರಾದ ಶ್ರೀ ಕುಲಕರ್ಣಿಯವರ ಮನೆಯಲ್ಲೇ ಧಾರ್ಮಿಕ ಕಾರ್ಯ ಮಾಡಿ ತೊಟ್ಟಿಲಲ್ಲಿ ಹಾಕಿ ಸಕ್ಕರೆ - ಖೊಬ್ಬರಿ ಪ್ರಸಾದದ ಮೇಲೆಯೇ ಅಂದಿನ ಕಾರ್ಯಕ್ರಮ ಮುಗಿಸಿದರು. ನಾನು ನಮ್ಮ ವಾಡೇದಲ್ಲಿ ನಡೆಯುವ ಚಿದಂಬರುತ್ಸವಕ್ಕೆ ಅಗಡಿಗೆ ಹೋದೆ ಸಂಕ್ಷೇಪ್ತವಾಗಿ ನೆರವೇರಿಸಿದರೂ ಕೂಡ ಅಂದು ಭಕ್ತರು ನೀಡಿದ ದೇಣಿಗೆ ರೂ. ೨೦೦೦. (ಎರಡು ಸಾವಿರ) ಶೇಖರಣೆಯಾಗಿತ್ತು.

೧೯೯೮ ನೇ ವರ್ಷ, ಅದು ಮಹಾಸ್ವಾಮಿಯ ೨೪೦ ನೇ ಜಯಂತುತ್ಸವ ಅದೇ ಪಾಟೀಲರು ಮತ್ತೆ ಬಂದು ಉತ್ಸವದ ವಿಷಯ ತೆಗೆದಾಗ ನಾನು ಬಿಚ್ಚು ಮನಸ್ಸಿನಿಂದ ಉತ್ಸವ ಮಾಡುವದೇ ಆದರೆ ಅನ್ನ ಸಂತರ್ಪಣೆಯನ್ನು ಮಾಡುವಂತಿದ್ದರೇ ನನ್ನನ್ನು ಇದರಲ್ಲಿ ಸೇರಿಸಿಕೊಳ್ಳಿ ಇಲ್ಲವಾದರೆ

ಭಗವಾನರ ಲೀಲೆಗಳಲ್ಲಿ ಕೆಲ ಘಟನೆಗಳು
ಭಗವಾನರ ಉಜ್ವಲವಾಣಿ

✍- ಎನ್. ಸಿ. ದೇಸಾಯಿ.

ಪಂಚಕನ್ಯೆಯರನ್ನು ಪಡೆದ ತಮಣಾಚಾರ್ಯರು :-

ಅಗಡಿಯ ರಾಜಪುರೋಹಿತ ಮನೆತನದಲ್ಲಿ ಸುಬ್ಬಾಭಟ್ಟ ಮತ್ತು ತಮ್ಮಣ್ಣ ಭಟ್ಟ ಎಂಬ ಈರ್ವರು ಸಹೋದರರು. ಸುಬ್ಬಣ್ಣ ಊರಲ್ಲಿ ಒಬ್ಬ ಹಿರಿಯ, ತಮ್ಮಣಾಚಾರ್ಯರು ಪೌರೋಹಿತ್ಯ ಮಾಡಿಕೊಂಡು ಇದ್ದವರು ಸ್ವಾಮಿಯಲ್ಲಿ ಸದ್ಭಕ್ತಿ ಆದರೆ ಸ್ವಭಾವದಿಂದ ಕೃಪಣ!

ಆನಂದವನದ ಸರ್ವಕಾರ್ಯ, ಭಕ್ತರು ನೀಡಿದ ಸಹಾಯದಿಂದಲೇ ನಡೆಯಬೇಕು. ಸತ್ತೆಯಿದ್ದಲ್ಲಿ ಭಗವಾನರು ಜುಲುಮೆಯಿಂದಲೇ ಕಿತ್ತುಕೊಳ್ಳುತ್ತಿದ್ದರು ಭಗವಾನರ ವಾಸ್ತವ್ಯ ಆನಂದವನದಲ್ಲಿದ್ದ ಸಂದರ್ಭ ತಮಣಾಚಾರ್ಯರಿಗೆ ಒಂದು ಹಳ್ಳಿಯಲ್ಲಿ ಪೌರೋಹಿತ್ಯ ಆಮಂತ್ರಣ, ಆನಂದವನದ ಮುಂದು ಹಾಸಿಯೇ ಅಲ್ಲಿಗೆ ಹೋಗಬೇಕು. ಕಾರ್ಯ ಮುಗಿಸಿ ಮರಳುವಾಗ ಸ್ವಾಮಿಯ ದರ್ಶನಕ್ಕಿಂತ ಹೋಗಲೇಬೇಕು ಆದರೆ ಈಗ ಭಗವಾನರು ಅಲ್ಲಿದ್ದಾರೆ ನಿಶ್ಚಯವಾಗಿಯೂ ನನ್ನಿಂದ ವಸೂಲು ಮಾಡುತ್ತಾರೆ, ಕಾಡುತ್ತಾರೆಂದು, ಬಂದ ದಕ್ಷಿಣೆಯನ್ನು ಸೊಂಟಕ್ಕೆ ಸೇರಿಸಲಿಲ್ಲ ಕಚ್ಚೆಯಲ್ಲಿ ಬಚ್ಚಿಟ್ಟರು. ಆನಂದವನ ಮಹಾದ್ವಾರದ ಎದುರಿಗಿನ ಕಟ್ಟೆಯ ಮೇಲೆಯೇ ಭಗವಾನರು ಕುಳಿತಿದ್ದರು. ಇವರನ್ನು ನೋಡುತ್ತಲೇ ''ಏನ್ ಆಚಾರ್ ಗಂಧ ಅಕ್ಷತೆ ಬಹಳ ರಬ್ಬ ಅದ, ಬ್ಯಾಟ ಛಲೋನ ಆಗೇದ ಕಾಣತದs? ಎಂದಂದರು. ತಮಣಾಚಾರ್ಯರ ಉತ್ತರ ಸಿದ್ಧವಾಗಿಯೇ ಇತ್ತು ''ಹೌದು ದೇವರು, ಆದರ ಹೋದ ಸಲ ಹೋದಾಗ ಅಲ್ಲೆ ಒಂದು ಕಿರಾಣಿ ಅಂಗಡ್ಯಾಗ ಒಂದಿಷ್ಟು ಸಾಮಾನು ಉದ್ರಿ ತಂದಿದ್ದೆ ಅವಬಿಡಲೇ ಎಲ್ಲಾ ಕೊಟ್ಟು ಬರಿಗೈಲೇ ಹೊಂಟೇನಿ'' ಎಂದರು. ಆಚರೀ ಇದ್ದು ಇಲ್ಲ ಅನಬಾಡ ಪಾಠಶಾಲಿ ಹುಡುಗರನ ಕರದರ ನಿನ್ನ ಪಂಚೆನ ಕಿತ್ತು ಬಿಡುತ್ತಾರೆಂದೂ ಹೇಳಿದರು. ಸ್ವಲ್ಪಾದರೂ ಕೊಡು ಸ್ವಾಮಿಗೆ ಸಹಾಯ ನಿನಗೆ ಕಲ್ಯಾಣ ಎಂದೂ ಬೋಧಿಸಿದರು. ಝಪ್ ಎಂದರೂ ತಮಣಾಚಾರ್ಯರು ಕಾಸು ಬಿಚ್ಚಲಿಲ್ಲ. ಇನ್ನೇನು ಆಚಾರ್ಯ ಮನೆಗೆ ಹೊರಡಲು ಅನುವಾದರು. ಆಗ ಮತ್ತೊಮ್ಮೆ ಭಗವಾನರು ನೋಡು ತಮ್ಮಣ್ಣ

ಸದ್ಬೋಧ ಚಂದ್ರಿಕೆ. ಜೂನ-2001

ಹುಬ್ಬಳ್ಳಿಯಲ್ಲೊಂದು ಚಿದಂಬರ ದೇವಸ್ಥಾನ

ಕ್ರಿ. ಶ. ೧೯೯೭ ರ ಒಂದು ಸಾಯಂಕಾಲ ಮನೆಯಲ್ಲೇ ಇದ್ದೆ ಗೋಕುಲ ಮಾರ್ಗ (ಹುಬ್ಬಳ್ಳಿ) ದಲ್ಲಿಯ ಸೆಂಟ್ರಲ್ ಎಕ್ಸೈಜ್ ಕಾಲನಿಯಲ್ಲಿಯೇ ವಾಸವಾಗಿರುವ ಶ್ರೀ ಎಂ. ಎಂ. ಪಾಟೀಲ (ಅಸುಂಡಿ) ಬಂದಿದ್ದರು ಮಾತಿಮಾತುನಲ್ಲಿಯೇ ನಾವೆಲ್ಲ ಇಷ್ಟು ಜನ ಭಕ್ತರಿದ್ದೇವೆ ಚಿದಂಬರ ಜಯಂತಿಯನ್ನು ಏಕೆ ಮಾಡಬಾರದು. ಎಂಬ ಸೂಚನೆಯನ್ನು ಮಾಡಿದರು. ಮಾಡಬಹುದು ಆದರೆ ಒಮ್ಮೆ ಪ್ರಾರಂಭ ಮಾಡಿದ ಮೇಲೆ ಪ್ರತಿವರ್ಷ ತಪ್ಪದೇ ಅದನ್ನು ಮಾಡಬೇಕಾಗುತ್ತದೆ. ನೋಡಿ



ಎಂದೆ ಅವರಿಗೊಂದು ಮನೋಧೈರ್ಯ ಆಗಲಿ ಎಂದು ಒಪ್ಪಿಕೊಂಡರು. ಆ ವರ್ಷ ಗೋಕುಲ ಮಾರ್ಗದ ಬ್ರಾಹ್ಮಣ ಸಂಘದ ಅಧ್ಯಕ್ಷರಾದ ಶ್ರೀ ಕುಲಕರ್ಣಿಯವರ ಮನೆಯಲ್ಲೇ ಧಾರ್ಮಿಕ ಕಾರ್ಯ ಮಾಡಿ ತೊಟ್ಟಲಲ್ಲಿ ಹಾಕಿ ಸಕ್ಕರೆ - ಕೊಬ್ಬರಿ ಪ್ರಸಾದದ ಮೇಲೆಯೇ ಅಂದಿನ ಕಾರ್ಯಕ್ರಮ ಮುಗಿಸಿದರು. ನಾನು ನಮ್ಮ ವಾಡೇದಲ್ಲಿ ನಡೆಯುವ ಚಿದಂಬರುತ್ಸವಕ್ಕೆ ಅಗಡಿಗೆ ಹೋದೆ ಸಂಕ್ಷೇಪ್ತವಾಗಿ ನೆರವೇರಿಸಿದರೂ ಕೂಡ ಅಂದು ಭಕ್ತರು ನೀಡಿದ ದೇಣಿಗೆ ರೂ. ೨೦೦೦. (ಎರಡು ಸಾವಿರ) ಶೇಖರಣೆಯಾಗಿತ್ತು.

೧೯೯೮ ನೇ ವರ್ಷ, ಅದು ಮಹಾಸ್ವಾಮಿಯ ೨೪೦ ನೇ ಜಯಂತುತ್ಸವ ಅದೇ ಪಾಟೀಲರು ಮತ್ತೆ ಬಂದು ಉತ್ಸವದ ವಿಷಯ ತೆಗೆದಾಗ ನಾನು ಬಿಚ್ಚು ಮನಸ್ಸಿನಿಂದ ಉತ್ಸವ ಮಾಡುವದೇ ಆದರೆ ಅನ್ನ ಸಂತರ್ಪಣೆಯನ್ನು ಮಾಡುವಂತಿದ್ದರೇ ನನ್ನನ್ನು ಇದರಲ್ಲಿ ಸೇರಿಸಿಕೊಳ್ಳಿ ಇಲ್ಲವಾದರೆ

ಇದ್ದು ಇಲ್ಲ ಅಂತ ಸ್ವಾಮಿಗೆ ಸುಳ್ಳು ಹೇಳಿದಿ, ನಿನಗ ಓಸೂ ಹೆಣ್ಣ ಹುಟ್ಟತಾವ್ ಎಂದು ಚೇಷ್ಟೆ ಮಾಡಿದರು......

ತಮಣಾಚಾರ್ಯರ ಧರ್ಮಪತ್ನಿ ಗರ್ಭಿಣಿಯಾದರು ಹುಟ್ಟಿದ ಮಗು ಹೆಣ್ಣು, ಎರಡನೇಯ ಹೆರಿಗೆ ಆದೂ ಹೆಣ್ಣು, ಮೂರು-ನಾಲ್ಕು ಮಕ್ಕಳೂ ಕನ್ಯಾರತ್ನಗಳೇ ೫ ನೇ ಸಲ ಗರ್ಭಿಣಿಯಾದಾಗ್ಗ ಈ ಸಲ ಪತ್ನಿ ಗಂಡು ಮಗು ಹೆತ್ತಾಳು ಎಂದು ಕಲ್ಪಿಸಿದರು. ದೇವರಿಗೂ ಹರಿಕೆ ಹೊತ್ತರು. ದೇವರು ಇವರ ಮೊರೆಯನ್ನು ಕೇಳಲಿಲ್ಲ, ಆಚಾರ್ಯರು ಪಂಚಕನ್ಯೆಯರ ಪಿತೃವಾದರು - ಹೀಗೇಕೆ ಎಂದು ವಿಚಾರ ಮಾಡಿದಾಗ ತಕ್ಷಣ ನೆನಪಾಯಿತು ಭಗವಾನರು ಮಾಡಿದ ಚೇಷ್ಟೆಯ ಮಾತು!

ಕೂಡಲೇ ಅಣ್ಣ ಸುಬ್ಬಣ್ಣನಲ್ಲಿ ಹೋಗಿ ಹಿಂದೆ ನಡೆದ ವಿಷಯವನ್ನೆಲ್ಲ ಸವಿಸ್ತಾರವಾಗಿ ಹೇಳಿದರು. ಸುಬ್ಬಣ್ಣ ತಮ್ಮಣ್ಣನನ್ನು ಕರೆದುಕೊಂಡು ಆನಂದವನಕ್ಕೆ ಹೋದರು. ಆ ಸಮಯಕ್ಕೆ ಭಗವಾನರು ದೇಹಬಿಟ್ಟು ಕಾಲವಾಗಿತ್ತು. ಶೇಷಾಚಲ ಸಾಧುಗಳ ಮೊಮ್ಮಕ್ಕಳಾದ ದತ್ತಾತ್ರೇಯ ಗುರುಗಳೇ ಅಂದಿನ ಹಿರಿಯರು ಅವರಿಗೆ ಹೋಗಿ ತಮ್ಮ ಮಾಡಿದ ಕಾರ್ಯವನ್ನು ವಿವರವಾಗಿ ಹೇಳಿದರು, ಅದನ್ನು ಕೇಳುತ್ತಲೇ ದತ್ತಗುರುಗಳು ಮುಗುಳು ನಗೆಯನ್ನು ಬೀರುತ್ತ ತಮಣಾಚಾರ್ಯರೇ ಅಂದು ನೀವು ಬಚ್ಚಿಟ್ಟುಕೊಂಡ ಹಣವೆಷ್ಟಿತ್ತೆಂದು ಕೇಳಿದರು ಈ ಹೊತ್ತಿಗೆ ತಮಣಾಚಾರ್ಯರಿಗೆ ಮುಖದ ಮೇಲೆ ಮುಜಗರ ಕಾಣುತಿತ್ತು ಸುಧಾರಿಸಿಕೊಂಡು 'ಒಂದುಕಾಲು' ರೂಪಾಯಿ ಇತ್ತು ದೇವರು ಎಂದರು. ಒಂದು ಕಾಲು ರೂ ಕೊಡಿ ಇಲ್ಲಿ ಎಂದು ಹೇಳಿ ಆ ಹಣವನ್ನು ತಾಂಬೂಲದಲ್ಲಿರಿಸಿ ಭಗವಾನರ ಗುಡಿಯಲ್ಲಿರಿಸಿ ಕ್ಷಮಿಸಲು ಕೇಳಿಕೊಳ್ಳಲು ಹೇಳಿದರು. ಬಂಧುಗಳೀರ್ವರು ಹೋಗಿ ಹಾಗೆಯೇ ಮಾಡಿ ಮರಳಿ ಬಂದು ದತ್ತಗುರುಗಳಿಗೆ ತಿಳಿಸಿದರು. ಅವರು ಆಗಲಿ ಭಗವಾನರು ನಿಮಗೆ ವರ ನೀಡುತ್ತಾರೆಂದರು ಅವರಮಾತು ಹುಸಿ ಹೋಗಲಿಲ್ಲ ೬ ನೇ ಮಗು ಗಂಡೇ ಆಯಿತು. ಈಗ ಅವನು ಧಾರವಾಡದಲ್ಲಿ ಪೌರೋಹಿತ್ಯ ಮಾಡಿಕೊಂಡಿದ್ದಾನೆ.

ಮೆಂಚೆಸ್ಸರ ಧೋತರದ ಭೀಮನಗೌಡರು : -

ಅಗಡಿ-ಆನಂದವನದ ಹತ್ತಿರವೇ ಇರುವ ಬೂದಗಟ್ಟಿಯ ಗೌಡರು ಭಾರೀ ಜಮೀನುದಾರರು ಮಣ್ಣಿನ ಮಾಲೀಕರಿದ್ದಂತೆ. ಚಿನ್ನವೂ ಭಾರಿಯಿತ್ತು, ಸುಖದ ಸಂಸಾರವೆಂದರು ಒಂದು ಕೊರಗು ಗೌಡರನ್ನು ಕಾಡುತ್ತಿತ್ತು ಸಂತಾನ ಶೂನ್ಯರಾಗಿದ್ದರು. ಹತ್ತು ದೇವರಿಗೆ ಹರಕೆ ಹೊತ್ತರು ಪೂಜೆ ಹವನ ಹೋಮಗಳನ್ನು ಮಾಡಿದರು ಆದರೂ ಅವರಿಗೆ ಕೃಪೆಯಾಗಲಿಲ್ಲ. ಆಗ ಭಗವಾನರೆದುರು ತಮ್ಮ ಕೊರಗನ್ನು ತೋಡಿಕೊಂಡರು ಭಗವಾನರು ಅವರಿಗೆ ಒಂದು ಸಣ್ಣ ಸೇವೆಯನ್ನು ಹೇಳಿದರು. "ಗೌಡರೆ ಅದನ್ನು ಮಾಡಿ, ಸ್ವಾಮಿ ಕೃಪೆ ಮಾಡಿಯಾನು" ಅಂದರು, ಗೌಡರು ಒಪ್ಪಿದರು ಗೌಡರೆ ಜಯಂತಿಯ ಭಗವಾನರು ಹೇಳಿದ ಸೇವೆ ಬಹಳ ಸಾದಾ ಹಾಗು ಸುಲಭವಾದದ್ದೇ ಇತ್ತು. ಪಂಚಮಿಯ ದಿನ ತಾವು ಬ್ರಹ್ಮಭೋಜನದ ನಂತರ ಐದು ಎಲೆಗಳನ್ನು ತೆಗೆದರೆ ಸಾಕು ಎಂದರು. ಗೌಡರು ಒಪ್ಪಿದರು, ಈ ಸೇವೆಗೆ ದಿನವು ಭಕ್ತರು ಮುಕ್ಕುರುತ್ತಾರೆ. ಪಂಚಮಿಯ ದಿನವಂತೂ ಒಂದು ಎಲೆಗೆ ಒಬ್ಬರಗಿಂತ ಹೆಚ್ಚೇ ಇರುತ್ತಾರೆ ಎಲೆ ಮುಂದೆಯೇ ಕಾದಿರುತ್ತಾರೆ.

ಗೌಡರು ಎಲೆ ಹತ್ತಿರ ನಿಲ್ಲುವವರಲ್ಲ ಜಮೀನುದಾರರೆಂಬ ಅಭಿಮಾನ, ಎಲೆ ತೆಗೆಯಬೇಕು ಆದರೆ ಉಳಿದವರು ನೋಡಕೂಡದೆಂಬುದು ಇಷ್ಟ ಮೇಲಾಗಿ ಉಟ್ಟ ಮೆಂಚೆಸ್ಸರ ಧೋತರ

ಹಾಳಾಗಬಾರದು ಅದನ್ನು ಕೈಯಲ್ಲಿ ಹಿಡಿದು ಭೋಜನ ಮುಗಿದು ಏಳುವ ಗಂಟೆಯಾಗುವ ಹೊತ್ತಿಗೆ ಕುಳಿತ ಕಟ್ಟೆಯಿಂದ ಎಲೆ ಹತ್ತಿರಕ್ಕೆ ಹೋಗುವ ಹೊತ್ತಿಗೆ ಪಟಾಂಗಣದಲ್ಲಿಯ ಸಾವಿರಾರು ಎಲೆಗಳು ಮಾಯವಾಗಿ ಕ್ಷಣಾರ್ಧದಲ್ಲಿ ಇಡೀ ಪಟಾಂಗಣವೇ ಸ್ವಚ್ಛವಾಗಿ ಮುಂದಿನ ಪಂಕ್ತಿಗೆ ಅಣಿಯಾಗಿರುತ್ತಿತ್ತು. ಗೌಡರು ಕೆಲವರ್ಷ ಪ್ರಯತ್ನಿಸಿದರು ಸೇವೆಯ ಆ ಭಾಗ್ಯ ಸಿಕ್ಕಲೇ ಇಲ್ಲ.

ಮುಂದೆ ದತ್ತಕ ಪುತ್ರನನ್ನು ಪಡೆದರು.

ಭಗವಾನರು ನೀಡಿದ ಮಂತ್ರಾಕ್ಷತೆಯ ಪ್ರಭಾವ : -

ಮೈಸೂರು ಸೀಮೆ ಮಹಾರಾಜರ ಆಡಳಿತದಲ್ಲಿದ್ದ ಕಾಲವದು. ಅಲ್ಲಿ ರಾಜವಲೋಚನರಾವ್ ಎಂಬುವರು ವಿದ್ಯಾಶಾಲೆಯಲ್ಲಿ ದೊಡ್ಡ ಅಧಿಕಾರಿ, ಸ್ವಾಮಿಯ ಭಗವಾನರ ಪರಮ ಭಕ್ತರು ಭಗವಾನರನ್ನು ಕಾಣಬೇಕೆಂದು ಇಷ್ಟವಾಯಿತೂ ರಜೆ ಸಿಗಲಿ-ಬಿಡಲಿ ನವಕರಿಯ ಪರಿವಿಲ್ಲದೆ ಆನಂದವನಕ್ಕೆ ಹೊರಟು ಬಿಡುವರು. ಹಾಗೊಂದು ಸಲ ಹೊರಟಾಗ ಅರಸಿಕೇರಿಯ ಹತ್ತಿರ ಬರುವಾಗ ಸ್ವಾಮಿಗಳು ಅಲ್ಲಿಯೇ ಇದ್ದಾರೆಂದು ತಿಳಿಯಿತು ಅಲ್ಲಿಯೇ ಇಳಿದು ಭಗವಾನರು ತಂಗುತಿದ್ದ ಮನೆಗೆ ಹೋದಾಗ ಗುರುಗಳು ಹತ್ತಿರದ ಒಂದು ಹಳ್ಳಿಗೆ ಹೋಗಿದ್ದಾರೆಂದು ತಿಳಿಯಿತು ಅಲ್ಲಿಗೆ ಧಾವಿಸಿದರು. ಭಗವಾನರು ಅರಿಸಿ ಆ ಹಳ್ಳಿಯಲ್ಲಿ ಹೊರಟಾಗ ರಾಜವಲೋಚನರಾಯರು ಮಹಿಳೆಯ ಒಂದು ಆರ್ತ ಧ್ವನಿಯನ್ನು ಕೇಳಿದರು ಅವರಿಗೆ ಕನಿಕರಬಂದು ಅತ್ತ ಹೋದರು, ದೃಶ್ಯ ವಿಚಿತ್ರವಾಗಿತ್ತು. ಊರ ಕೆಲವರೆಲ್ಲ ಒಬ್ಬ ಮಹಿಳೆಯನ್ನು ಹೊಡೆಯುವದು, ಬಡೆಯುವದನ್ನು ಮಾಡುತ್ತಿದ್ದರು. ಆ ಮಹಿಳೆ... ಬಿಡ್ರೊ ನನ್ನಪ್ಪ ನನ್ನs ಎಂದು ಕೂಗಿ ಅಳುತ್ತಿದ್ದಳು, ಚೀರುತ್ತಿದ್ದಳು.

ಹತ್ತಿರ ಹೋದ ರಾಜವಲೋಚನರಾಯರಿಗೆ ಮಾನವತೀಯ ದೃಷ್ಟಿಯಿಂದ ಆ ದೃಶ್ಯವನ್ನು ಸಹಿಸಲಾಗಲಿಲ್ಲ. ಹೊಡೆಯುತ್ತಿದ್ದ ಜನರನ್ನು ಹೊಡೆಯಬೇಡಿರೆಂದು ಬಿನ್ನವಿಸಿದರು. ಜನರು ಇಲ್ಲ ಬಿಡ್ರಿ, ದಿನಾಮ ಅಕಿನ್ನ ಕಾಡತಾಳ ನಮಗೂ ತ್ರಾಸ ಕೊಡತೈತಿ ಇದು ಎಂದು ಹೇಳಿದರು. ರಾಜವಲೋಚನರಾಯರಿಗೆ ಇದು ಪಿಶಾಚಿ ಬಾಧೆಯೆಂದು ಹೊಳೆಯಿತು. ಜನರನ್ನು ಸರಿಸಿ ಹತ್ತಿರಕ್ಕೆ ಹೋದರು ಇವರನ್ನು ಹತ್ತಿರ ಕಾಣುತ್ತಲೇ ಆ ಮಹಿಳೆಯ ಕೂಗು ಕುಗ್ಗಿತು. ಆಗ ರಾಜವಲೋಚನರಾಯರು ಭಗವಾನರು ನೀಡಿದ್ದ ಮಂತ್ರಾಕ್ಷತೆಯನ್ನು ಆ ತಾಯಿಯ ತಲೆಯ ಮೇಲೆ ಹಾಕಿದರು, ಹಾಕುತ್ತ ತಾಯಿ ಇವರನ್ನ ಯಾಕಕಾಡತಿ ಸುಮ್ಮನೆ ಹೋಗಬಾರದೇ ಎಂದರು. ಅವಳು "ಎಲ್ಲಿಗೆ ಹೋಗಲೀ" ಎಂದಾಗ. ಅಗಡಿಗೆ ಹೋಗಿಬಿಡು ಎಂದು ಅತೀ ಸಹಜವಾಗಿ ಹೇಳಿದರು ರಾಜೀವಲೋಚನರಾಯರು! ಇಷ್ಟಾದ ಮೇಲೆ ರಾಜೀವಲೋಚನರಾಯರು, ಭಗವಾನರು ತಂಗಿದ್ದ ಸ್ಥಳ ಅರಿಸಿ ಹೋದರು ಅಲ್ಲಿ. ಅವರಿಗೆ ಭಗವಾನರು ಆನಂದವನಕ್ಕೆ ಮರಳಿದ ವಿಷಯ ತಿಳಿಯಿತು. ಆಗ ಇನ್ನು ಮುಂದೆ ಹೋಗುವದು ಬೇಡವೆಂದು ಆನಂದವನದ ಕಡೆ ಹೋಗದೆ ಮರಳಿ ಬೆಂಗಳೂರಿಗೆ ಹೋದರು.

ಇದಾಗಿ ಕೆಲವು ತಿಂಗಳುಗಳೇ ಕಳೆದವು - ಭಗವಾನರನ್ನು ಕಾಣಬೇಕೆಂಬ ಉತ್ಕಟವಾದ ಆಶೆ ದಿನವೂ ನೆನಪಾಗುತ್ತಿತ್ತು. ಅದೊಂದು ದಿನ ಭಗವಾನರು ಆನಂದವನದಲ್ಲಿದ್ದಾರೆಂಬುದನ್ನು ಖಾತ್ರಿ ಮಾಡಿಕೊಂಡು ಹೊರಟು ಬಂದರು.

ಹುಬ್ಬಳ್ಳಿಯಲ್ಲೊಂದು ಚಿದಂಬರ ದೇವಸ್ಥಾನ

ಕ್ರಿ. ಶ. ೧೯೯೭ ರ ಒಂದು ಸಾಯಂಕಾಲ ಮನೆಯಲ್ಲೇ ಇದ್ದೆ ಗೋಕುಲ ಮಾರ್ಗ (ಹುಬ್ಬಳ್ಳಿ) ದಲ್ಲಿಯ ಸೆಂಟ್ರಲ್ ಎಕ್ಸೈಜ್ ಕಾಲನಿಯಲ್ಲಿಯೇ ವಾಸವಾಗಿರುವ ಶ್ರೀ ಎಂ. ಎಂ. ಪಾಟೀಲ (ಅಸುಂಡಿ) ಬಂದಿದ್ದರು ಮಾತಿಮಾತುನಲ್ಲಿಯೇ ನಾವೆಲ್ಲ ಇಷ್ಟು ಜನ ಭಕ್ತರಿದ್ದೇವೆ ಚಿದಂಬರ ಜಯಂತಿಯನ್ನು ಏಕೆ ಮಾಡಬಾರದು. ಎಂಬ ಸೂಚನೆಯನ್ನು ಮಾಡಿದರು. ಮಾಡಬಹುದು ಆದರೆ ಒಮ್ಮೆ ಪ್ರಾರಂಭ ಮಾಡಿದ ಮೇಲೆ ಪ್ರತಿವರ್ಷ ತಪ್ಪದೇ ಅದನ್ನು ಮಾಡಬೇಕಾಗುತ್ತದೆ. ನೋಡಿ



ಎಂದೆ ಅವರಿಗೊಂದು ಮನೋಧೈರ್ಯ ಆಗಲಿ ಎಂದು ಒಪ್ಪಿಕೊಂಡರು. ಆ ವರ್ಷ ಗೋಕುಲ ಮಾರ್ಗದ ಬ್ರಾಹ್ಮಣ ಸಂಘದ ಅಧ್ಯಕ್ಷರಾದ ಶ್ರೀ ಕುಲಕರ್ಣಿಯವರ ಮನೆಯಲ್ಲೇ ಧಾರ್ಮಿಕ ಕಾರ್ಯ ಮಾಡಿ ತೊಟ್ಟಿಲಲ್ಲಿ ಹಾಕಿ ಸಕ್ಕರೆ - ಕೊಬ್ಬರಿ ಪ್ರಸಾದದ ಮೇಲೆಯೇ ಅಂದಿನ ಕಾರ್ಯಕ್ರಮ ಮುಗಿಸಿದರು. ನಾನು ನಮ್ಮ ವಾಡೇದಲ್ಲಿ ನಡೆಯುವ ಚಿದಂಬರುತ್ಸವಕ್ಕೆ ಅಗಡಿಗೆ ಹೋದೆ ಸಂಕ್ಷೇಪ್ತವಾಗಿ ನೆರವೇರಿಸಿದರೂ ಕೂಡ ಅಂದು ಭಕ್ತರು ನೀಡಿದ ದೇಣಿಗೆ ರೂ. ೨೦೦೦. (ಎರಡು ಸಾವಿರ) ಶೇಖರಣೆಯಾಗಿತ್ತು.

೧೯೯೮ ನೇ ವರ್ಷ, ಅದು ಮಹಾಸ್ವಾಮಿಯ ೨೪೦ ನೇ ಜಯಂತುತ್ಸವ ಅದೇ ಪಾಟೀಲರು ಮತ್ತೆ ಬಂದು ಉತ್ಸವದ ವಿಷಯ ತೆಗೆದಾಗ ನಾನು ಬಿಚ್ಚು ಮನಸ್ಸಿನಿಂದ ಉತ್ಸವ ಮಾಡುವದೇ ಆದರೆ ಅನ್ನ ಸಂತರ್ಪಣೆಯನ್ನು ಮಾಡುವಂತಿದ್ದರೇ ನನ್ನನ್ನು ಇದರಲ್ಲಿ ಸೇರಿಸಿಕೊಳ್ಳಿ ಇಲ್ಲವಾದರೆ

ಹಾವೇರಿಯಿಂದ ರಥುಟಕಾದಲ್ಲಿ ಬಂದಿಳಿದು, ಮಹಾದ್ವಾರ ಪ್ರವೇಶಸುತ್ತಿದ್ದಂತೆಯೇ ಭಗವಾನರು ತಮ್ಮ ಖೋಲಿಯ ಎದುರಿಗಿನ ಕಟ್ಟೆಯ ಮೇಲೆಯೇ ಕುಳಿತಿದ್ದರು. ಅವರು ಕುಳಿತ ಸ್ಥಳ ಮಹಾದ್ವಾರಕ್ಕೆ ನೇರವಾಗಿದೆ ಯಾರು ಬಂದರೂ ಕೂಡಲೆ ಕಾಣುತ್ತದೆ. ಅವರು ಶೇಷಾಚಲೇಶ್ವರ ಮಂದಿರಕ್ಕೆ ಹೊರಗಿನಿಂದಲೇ ನಮಸ್ಕರಿಸಿ ಭಗವಾನರೆಡೆಗೆ ಧಾವಿಸಿ ಸಾಷ್ಟಾಂಗ ನಮಸ್ಕಾರ ಮಾಡಿ ಎದ್ದು ನಿಂತರು ಭಗವಾನರು ಕ್ಷೇಮ, ವಿಷಯ ಕೇಳಿ ಒಂದೆರಡು ಉಭಯ ಕುಶಲೋಪರಿಯ ಮಾತನ್ನು ಮುಗಿಸಿ ಅಲ್ಲಾ ರಾಜೀವಲೋಚನರಾವ್ ಊರೊಳಿಗಿನ ದೆವ್ವಗಳನ್ನೆಲ್ಲ ಆನಂದವನಕ್ಕೆ ಕಳಿಸಬೇಕೆಂದಿರೇನು? ಎಂದಂದರು ಈ ಮಾತನ್ನು ಕೇಳಿದ ರಾಜೀವಲೋಚನರಾಯರಿಗೆ ಮಾತಿನ ಅರ್ಥವೇ ಆಗಲಿಲ್ಲ. ಅವರೂ ಅವರ ಜೊತೆ ಬಂದಿದ್ದ ಇನ್ನೊಬ್ಬ ಭಕ್ತರು ಬೆಪ್ಪಾಗಿ ನಿಂತರು. ಹೀಗೆ ಅಚ್ಚರಿಯಿಂದ ನಿಂತುದನ್ನು ನೋಡಿ ಭಗವಾನರು ನೋಡಿ ನೆನಪುಮಾಡಿಕೊಳ್ಳಿ ಎಂದರು. ವಿಚಾರ ಮಗ್ನರಾದ ರಾಜೀವಲೋಚನರಾಯರು ನಿದ್ರೆಯಿಂದ ಎಚ್ಚರವಾದವರಂತೆ... ಅಹುದು ಸ್ವಾಮೀ.. ಎಂದು ಪಾದಕ್ಕೆ ನಮಸ್ಕರಿಸಿ ನಂದು ತಪ್ಪಾಯಿತೋ ಏನೋ'' ಎಂದರು ಆಗ ಅವರಿಗೆ ಅರಸೀಕೆರಿಯ ಬಳಿಯಲ್ಲಿಯ ಹಳ್ಳಿಯಲ್ಲಿ ಆ ದೆವ್ವ ಹಿಡಿದ ಮಹಿಳೆಗೆ ಭಗವಾನರು ನೀಡಿದ್ದ ಮಂತ್ರಾಕ್ಷತೆಯನ್ನು ಹಾಕಿ ಅಗಡಿಗೆ ಹೋಗು ಎಂದು ಹೇಳಿದ ಸಂದರ್ಭ ನೆನಪಾಯಿತು. ಸ್ವಾಮಿಗೆ ಮತ್ತೊಮ್ಮೆ ನಮಸ್ಕರಿಸಿದರು. ಹೀಗಿದೆ ಭಗವಾನರ ಹಸ್ತದಿಂದ ಬಂದ ಮಂತ್ರಾಕ್ಷತೆಯ ಪ್ರಭಾವ.

★★

॥ ಶ್ರೀ ಶೇಷಾಚಲ ಸದ್ಗುರುರ್ವಿಜಯತೇತರಾಮ್ ॥

ಶ್ರೀ ಶೇಷಾಚಲ ಸದ್ಗುರು ಉಚಿತ ಆರೋಗ್ಯ ಚಿಕಿತ್ಸಾ ಸಲಹಾ ಕೇಂದ್ರ, ಆನಂದವನ– ಅಗಡಿ.

ಕರ ಪತ್ರ

ಪ.ಪೂ.ಚೈತನ್ಯಮೂರ್ತಿ ಶ್ರೀ ಚಿದಂಬರಮೂರ್ತಿ ಚಕ್ರವರ್ತಿ ಮಹಾಸ್ವಾಮಿಗಳ ದಿವ್ಯ ಸನ್ನಿಧಿಯಲ್ಲಿ ಡಾ ॥ ಡಿ.ಕೆ.ಕೆರೂರ M.B.B.S.M.D ರಿ. ಡಿಸ್ಟಿಕ್ಟ ಸರ್ಜನ್ ಇವರ ನೇತೃತ್ವದಲ್ಲಿ ಪ್ರತಿ ತಿಂಗಳು ಮೊದಲನೇ ಹಾಗೂ ಮೂರನೇ ರವಿವಾರದಂದು, ಬೆಳಿಗ್ಗೆ ೧೦-೦೦ ಘಂಟೆಯಿಂದ ಮಧ್ಯಾಹ್ನ ೩-೦೦ ಘಂಟೆಯವರೆಗೆ, (15.7.2001, 5.8.2001 19.8.2001 ಹಾಗೂ 2.9.2001 ರಂದು) ''ಭಗವಾನ'' ಕಟ್ಟಡದಲ್ಲಿ ಉಚಿತ ಆರೋಗ್ಯ ಚಿಕಿತ್ಸಾ ಹಾಗೂ ಸಲಹಾ ಕೇಂದ್ರವನ್ನು ನಡೆಸಲಾಗುವುದು. ಸದ್ಭಕ್ತರು ಇದರ ಸದುಪಯೋಗ ಪಡೆದುಕೊಳ್ಳಬೇಕಾಗಿ ವಿನಂತಿ.

ಪ್ರತಿ ತಿಂಗಳ ಕೊನೆಯ ರವಿವಾರ ಆಯುರ್ವೇದ ಚಿಕಿತ್ಸೆ ಜರುಗುವುದು.

ಸಂಚಾಲಕರು, ಉಚಿತ ಆರೋಗ್ಯ ಚಿಕಿತ್ಸಾ ಸಲಹಾ ಕೇಂದ್ರ. ಆನಂದವನ.

ಭಕುತರ ಪಾಲಿಗೆ ವಿಘ್ನ ವಿನಾಶಕ, ವಿದ್ವಾಂಸರಿಗೆ ನಿತ್ಯ ವಿಸ್ಮಯದಾಯಕ. ಈತನನ್ನು ಇಷ್ಟಪಡದವರಿಲ್ಲ. ಆಸ್ತಿಕರು ವಂದಿಪೆ ನಿನಗೆ ಗಣನಾಯಕ ಎಂದು ಹಾಡಿದರೆ, ನಾಸ್ತಿಕರು ಈತನ ರೂಪ-ನಾಮ ವೈವಿಧ್ಯಕ್ಕೆ ಅಭಿನಂದಿಸುತ್ತಾರೆ. ಇವನ ಆಕಾರವೇ ವಿಚಿತ್ರ, ಆದರೆ ಕಲಾವಿದರ ಕಣ್ಣಿಗೆ ಇದೇ ಸಚಿತ್ರ. ಇಂಥಾ ಹತ್ತಾರು ವಿಸ್ಮಯಗಳನ್ನು ತನ್ನ ಹೊಟ್ಟೆಯಲ್ಲಿಟ್ಟುಕೊಂಡಿರುವ ಗಣೇಶನನ್ನು ತರ್ಕದ ತೆಕ್ಕೆಗೆಳೆಯುವ ಪ್ರಯತ್ನ ಇಲ್ಲಿದೆ.

ಕಲಾ ಕಲ್ಪನೆಯಲ್ಲಿ ಕರಿಮುಖಿ

ವಿನಾಯಕ [illegible] ... ಹೇಗಾದರೂ ಇರಲಿ, ಕಲಾವಿದನ ಕೈಗೆ ಸಿಕ್ಕರೆ ಅವನ [illegible] ... ಹುಟ್ಟಿಲ್ಲ. ತಾಯಿ ಪಾರ್ವತಿ ತನ್ನ ಮೈಮಣ್ಣಿನಿಂದ ನಿರ್ಮಿಸಿದ ಈ ಮೂರ್ತಿ ತಂದೆಯ ಕೋಪಕ್ಕೆ ತುತ್ತಾಗಿ, ರುಂಡ ಕಳೆದುಕೊಂಡ – ಪಾರ್ವತಿ ಪುತ್ರ [illegible] ಆನೆಯ ತಲೆಯನ್ನು ತಂದು ರುಂಡವಿಲ್ಲದ ಮುಂಡಕ್ಕೆ [illegible]

[illegible] 'ಗಣಪತಿ ಅಥರ್ವಶೀರ್ಷ'ದ ಬಗ್ಗೆ ಬರೆಯುತ್ತ ಮೇಲಿನ

ರಾಜಸ್ಥಾನದ ಮಂದಿರದಲ್ಲಿ ವಿನಾಯಕ

ಪ್ರಸಂಗವನ್ನು ಕೇಳಿದ ಮಕ್ಕಳು ಅಚ್ಚರಿ ಪಟ್ಟು ಸಂಶಯ ತಾಳಿ ಕೇಳಬಹುದಾದ ಪ್ರಶ್ನೆಗಳಿಗೆ, ಕಥೆ [illegible] ... ಸಾಮಗ್ರಿಯೂ ಸಿಗಲಿಲ್ಲವೇ? ಅವಳ ಮೈಮೇಲೆ ಪುಟ್ಟ ಮಗುವನ್ನು ಮಾಡುವಷ್ಟು ಕೊಳೆ ಇತ್ತೆ! ಅವಳ [illegible] ...

'ಪುರಾಣಗಳಲ್ಲಿ ಕಂಡು ಬರುವ ಎಲ್ಲ ಕಥೆಗಳೂ ಹೀಗೆಯೇ ಇರುತ್ತವೆ. ಇವಕ್ಕೆಲ್ಲ ಸಮಾಧಾನ ನೀಡುವ ಒಂದೇ ಒಂದು ವಾಕ್ಯದ ಸಮರ್ಪಕ [illegible] ... ಕಲ್ಪಿಸಿ ಬರೆದ ಮನೋರಂಜಕವಾದ [illegible] ಈ ಎಲ್ಲ ಪುರಾಣಗಳಾಗಿವೆ! [illegible]

ಮಹಾರಾಷ್ಟ್ರ ಕಲೆ 'ಚಿತ್ರಕಥಿ'. ಪೈಠಣ ಶೈಲಿಯಲ್ಲಿ ನಿರ್ಮಿತ ಗಣಪತಿ

ಅನಿಲ ಬುಗರೆ ರಚಿಸಿದ ತಗಡಿನ ಮೇಲಿನ ಉಬ್ಬುಚಿತ್ರ



ಗುಜರಾಥಿ ಜಾನಪದ ಚಿತ್ರ

ರಾಜಸ್ಥಾನದ ಒಂದು ಭಿತ್ತಿಚಿತ್ರ

ಕಿತ್ತುಕೊಂಡ ಏಕದಂತ! ಭಾರವಾದ ಶರೀರಕ್ಕೇ ಚಿಕ್ಕ ಇಲಿಯೆ ವಾಹನ! ಕೆಂಪು ಶರೀರ, ಕೆಂಪು ವಸ್ತ್ರ ಹಾಗೂ ಕೆಂಪು ಹೂಗಳ ಮೇಲೆ ಪ್ರೀತಿ. ಕೆಂಪು ಚಂದನವೇ ಅವನಿಗೆ ಇಷ್ಟ. ಇಂಥ ಪೌರಾಣಿಕ ಕಲ್ಪನೆಯ ಗಣಪತಿಯ ವಿಷಯವಾಗಿ ಮಕ್ಕಳು ವಿಚಿತ್ರ ಪ್ರಶ್ನೆಗಳನ್ನು ಕೇಳುವ ಸಂಭವವನ್ನು ತಳ್ಳಿ ಹಾಕಲಾದೀತೇ?

ಗಣಪತಿ ಯಾರು!

ಶತ ಶತಮಾನಗಳಿಂದ ದೇಶ ವಿದೇಶಗಳಲ್ಲಿ ಜನಪ್ರಿಯವಾಗಿರುವ ಈ ಗಣಪತಿಯನ್ನು ಮೂಢನಂಬಿಕೆ ಎನ್ನಲಾದೀತೆ?

ಬರೆಹಗಾರರನ್ನು ಈ ಬಗೆಯ ಜಿಜ್ಞಾಸೆ ಬಹು ಕಾಲದಿಂದ ಕಾಡಿತ್ತಂತೆ.

ಮುಂದೆ ಉಪನಿಷತ್ತುಗಳನ್ನು ಅಧ್ಯಯನ ಮಾಡುತ್ತಾ ಹೋದಾಗ ಪೌರಾಣಿಕ ಕಲ್ಪನೆ ಜೊಳ್ಳೆನಿಸಿ ಅದರ ಕಥಾಭಾಗದ ಆವರಣವೆಲ್ಲ ಕಳಚಿ ಹೋಗಿ ಕೇವಲ ತಾತ್ವಿಕ ಮೌಲ್ಯವನ್ನು ಮಾತ್ರ ಗ್ರಹಿಸಿದರೆ ಸಾಕೆನಿಸಿತಂತೆ... ಉಪನಿಷತ್ತು ಕೂಡ ಈ ಬಗೆಯ ಜಿಜ್ಞಾಸೆಯನ್ನು ಪೂರ್ಣ ಪರಿಹಾರ ಮಾಡಿಲ್ಲ!

ಗಣೇಶ ಉಪನಿಷತ್ತಿನ (ಅಥರ್ವಶೀರ್ಷ) ಹತ್ತು ಮಂತ್ರಗಳಲ್ಲಿ ಮೊದಲಿನ ಏಳು ಮಂತ್ರಗಳು ಗಣೇಶನನ್ನೇ ಪ್ರತ್ಯಕ್ಷ ಪರಬ್ರಹ್ಮವೆಂದು ಘೋಷಿಸುತ್ತವೆ! ಅವನೇ ಈ ಜಗತ್ತಿನ ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣವಾದ ಪರಬ್ರಹ್ಮ ಶಕ್ತಿ, ಅವನೇ ಸಕಲ ಜೀವಿಗಳಲ್ಲಿ ನೆಲೆಸಿದ ಜೀವಾತ್ಮ ನಿರ್ಗುಣ ನಿರಾಕಾರ ಸ್ವರೂಪವೆಂದೂ ಆ ಅಂತಿಮ ಐಕ್ಯಕ ಶಕ್ತಿಯೆಂದೂ ವಿವರಿಸಿದ ಬಳಿಕ ಕೊನೆಯ ಮೂರು ಮಂತ್ರಗಳಲ್ಲಿ ಪುರಾಣಗಳ ಕಲ್ಪನೆಯಂತೆ. ಏಕದಂತ, ವಕ್ರತುಂಡ, ಮೂಷಕ ಧ್ವಜ, ರಕ್ತಪುಷ್ಪ ಪೂಜಿತ ಮುಂತಾದ ಸಾಕಾರ ರೂಪಗಳನ್ನು ವರ್ಣಿಸಲಾಗಿದೆ. ಅಷ್ಟೂ ಸಾಲದೆಂಬಂತೆ ಕೊನೆಯಲ್ಲಿ 'ಶಿವ ಸುತಾಯ ಶ್ರೀ ವರದ ಮೂರ್ತಯೇ ನಮಃ' ಎಂದು ಹೇಳಿ ಉಪನಿಷತ್ತನ್ನು ಮುಕ್ತಾಯಗೊಳಿಸಿದೆ.

ಗಣೇಶ ವಿದ್ಯೆ

ಒಂದೆ ಗಾಣಪತ್ಯ ಪಂಥವೆ ಇದ್ದಿತು ಅದಕ್ಕೆ ಸಾಕಷ್ಟು ಅನುಯಾಯಿಗಳೂ ಇದ್ದರು. ಆದರೆ ಅದರ ಸಿದ್ಧಾಂತಗಳು ಇತರ ಉಪನಿಷತ್ತುಗಳ ಸಿದ್ಧಾಂತಕ್ಕೆ ವಿರೋಧವಲ್ಲದುದರಿಂದಲೂ ಇತರ ಪಂಥಗಳಿಗೆ ಇದರ ಕೆಲವು ಸಿದ್ಧಾಂತಗಳು ಮೆಚ್ಚುಗೆಯಾದುದರಿಂದಲೂ ಇವುಗಳೊಳಗೆ ಪರಸ್ಪರ ಕೊಳ್ಳು– ಕೊಡುಗೆಗಳು ನಡೆದವು. ಪರಿಣಾಮವಾಗಿ 'ಗಣಪತಿ' ಕಲ್ಪನೆಯನ್ನು ಎಲ್ಲ ಪಂಥದವರು ಅಲ್ಪ ಸ್ವಲ್ಪ ಮಾರ್ಪಾಡಿನೊಂದಿಗೆ ಒಪ್ಪಿಕೊಂಡರು. ಶೈವ, ವೈಷ್ಣವ ಶಾಕ್ತ ಮೊದಲಾದ ಪಂಥದವರಿಗೆಲ್ಲ ಗಣಪತಿಯು ಪ್ರಥಮ ಪ್ರತಿಯಾಗಿ ಮೊದಲ ಪೂಜೆಯನ್ನು ಸ್ವೀಕರಿಸುವ ದೇವತೆಯಾದ! ಹಾಗಾಗಿ ಗಣಪತಿ ಪಂಥವು ತನ್ನ ರೂಪವನ್ನೇ ಕಳೆದುಕೊಂಡು ಇತರ ಪಂಥಗಳೊಂದಿಗೆ ಐಕ್ಯವಾದರೂ – ಗಣಪತಿ ಮಾತ್ರ ಸರ್ವಮಾನ್ಯನಾದ ಶೈವರಿಗೆ ಶಿವಪುತ್ರನಾದ, ವೈಷ್ಣವರಿಗೆ ಶುಕ್ಲಾಂಬರಧರನಾದ, ವಿಶ್ವಂಭರನಾದ ಜೊತೆಯಲ್ಲೇ ಗಾಣಪತ್ಯ ಸಿದ್ಧಾಂತದ ತ್ರಿಗುಣಗಳು – ಮಾಯೆ, ಮಾಯೆ ಮುಂತಾದ ವಿಶಿಷ್ಟ ವಿಚಾರಗಳನ್ನು ಇತರ ಪಂಥೀಯರೂ ಸ್ವೀಕರಿಸುವಂತಾಯಿತು, ಇವು ದಶೋಪನಿಷತ್ತುಗಳಲ್ಲಿ ಕಾಣದ ವಿಷಯಗಳು!

ಗಾಣಪತ್ಯ ಪಂಥದ ಅವಶೇಷವಾಗಿ 'ಗಣಪತಿ ಅಥರ್ವಶೀರ್ಷ' ಎಂಬ ಉಪನಿಷತ್ತು ಇಂದು ಪ್ರಚಾರದಲ್ಲಿದೆ. ಇದರ ಆಧಾರದ ಮೇಲೆ ಇಂದು ನಾವು ಗಾಣಪತ್ಯ ಪಂಥದ ಗಣೇಶ ವಿದ್ಯೆಯನ್ನು ಊಹಿಸಿಕೊಳ್ಳಬಹುದಾಗಿದೆ!

ಕಲಾಕಲ್ಪನೆಯಲ್ಲಿ ಕರಿವದನ

1ನೇ ಪುಟದಿಂದ

ಸೈಷಾ ಗಣೇಶ ವಿದ್ಯಾ ಎಂಬ ಮಂತ್ರ ಭಾಗವು ಇದನ್ನೇ ಸೂಚಿಸುತ್ತದೆ.

ಈ ಗಣೇಶ ವಿದ್ಯೆಯಲ್ಲಿ 'ಸತ್' ಇದೆ ಸತ್ಯ ಇದೆ. ಇತರ ಉಪನಿಷತ್ತುಗಳು ಹೇಳುವ ವಾಸ್ತವಿಕ ವಿಜ್ಞಾನ ಏನಿದೆಯೋ ಅದನ್ನೇ ಈ ಗಣೇಶ ವಿದ್ಯೆ ಹೇಳುತ್ತದೆ. 'ಸತ್' ಎಂಬ ಸ್ತ್ರೀ ವಿಭಾಗವೂ, 'ತ್ಯತ್' ಎಂಬ ಪುರುಷ ವಿಭಾಗವೂ ಸೇರಿ ಈ ಜಗತ್ತೆಂಬ ಪ್ರತ್ಯಕ್ಷ ಸತ್ಯ ಏನಿದೆಯೋ ಅಷ್ಟನ್ನು ಮಾತ್ರ ಗಣೇಶ ವಿದ್ಯೆ ತಿಳಿಸಿ ಕೊಡುತ್ತದೆ. ಸತ್ ಮತ್ತು ತ್ಯತ್ ಎಂಬ ಈ ಎರಡೂ ಸೇರಿದ ಮಿಥುನವೇ 'ಸತ್ಯ' ಎಂಬ ಜಗತ್ತಾಗಿದೆ.

ಇಲ್ಲಿ ಮಿಥುನತ್ವದ ಬದಲಿಗೆ 'ಮಾಯೆ' ಎಂಬುದನ್ನು ಬಳಸಿದೆ ಅರ್ಕದ್ರವ್ಯವೇ ಮಾಯೆ ಅದರೊಂದಿಗೆ ಬೆರೆತ ಪುರುಷ ವಿಭಾಗವೇ ಮಾಯಾ ಚಾಲಕನಾದ 'ಗಣಪತಿ' ಈ ಜಗತ್ತು ಇಂತಹ ಜಗತ್ತು ಭಗವಾನ್ ಅಥರ್ವಣ ಮುನಿಗಳ ಧ್ಯಾನಕ್ಕೆ ಸುರುಳಿ ಸುತ್ತಿನ ಆನೆಯ ಸೊಂಡಿಲಿನಂತೆ ಕಾಣಿಸಿತು. ಹಾಗಾಗಿ 'ವಕ್ರತುಂಡ' ಎಂದು ಕರೆದರು! ಆದುದರಿಂದಲೇ ಈ ಪ್ರತ್ಯಕ್ಷ ಗಣಪತಿಯು ಗಜಾಕಾರನಾಗಿದ್ದಾನೆ. ಇದರ ತುಂಬ ಕಾರ್ಯೋತ್ಸಾಹದ ರಜೋಗುಣವೆ ತುಂಬಿದೆ. ಹಾಗಾಗಿ ರಕ್ತಾಂಶ, ಕೆಂಪು ಬಣ್ಣದವ ಕೆಂಪನ್ನು ಪ್ರೀತಿಸುವವ, ರಕ್ತವಾಸ ರಕ್ತಪುಷ್ಪ ಪೂಜಿತ....

ಇಂತಹ ಮಾಯೆಯೇ ಸಕಲ ಜೀವಾತ್ಮಗಳನ್ನು ವ್ಯಾಪಿಸಿದೆ. ಶರೀರಧಾರಿಗಳಾದ ಏಕಹಂಸಗಳೆಲ್ಲ ಪರಬ್ರಹ್ಮದಿಂದ ಸಿಡಿದ ಕಿಡಿಗಳು. ಅಮೃತಸ್ಯ ಪುತ್ರಾಃ– ಶಿವನ ಮಕ್ಕಳು ನಿಜಕ್ಕೂ ಅವರೆಲ್ಲ ಪರಬ್ರಹ್ಮವೇ. ಆದರೆ ಜನ್ಮ ಜನ್ಮಾಂತರಗಳಲ್ಲಿ ಪಡೆದ ಜ್ಞಾನ ಅನುಭವ, ಕರ್ಮ ಫಲಗಳೆಂಬ ಸಿದ್ಧಿ ಮತ್ತು ಬುದ್ಧಿಗಳೆಂಬ



ಮಾಯೆಗೆ ಸಿಲುಕಿದ ನರರಾಕಾರದ ಗಣಪತಿಗಳೇ ಈ ಜೀವಾತ್ಮಗಳಾಗಿವೆ.

ಹೀಗೆ ಗಣೇಶ ವಿದ್ಯೆಯ ಪ್ರಕಾರ ಗಣಪತಿಗೆ ಮೂರು ರೂಪಗಳು ಸಿದ್ಧಿ, ಬುದ್ಧಿ, ಚಿತ್ತ–ಅಹಂಕಾರಗಳೆಂಬ ಮಾಯೆಯಿಂದ ಕೂಡಿದ ಮಾಯಾ ಚಾಲಕನಾದ ಏಕಹಂಸನನ್ನು ಚೆನ್ನಾಗಿ ತಿಳಿದುಕೊಳ್ಳಬೇಕು. ಇದು ನರಾಕಾರ ಗಣಪತಿ. ಇವನು ಏಕದಂತ, ಇವನನ್ನು ತಿಳಿಯಬೇಕು. ಏಕದಂತಾಯ ವಿದ್ಮಹೆ– ಇದು ಜ್ಞಾನಯೋಗ.

ಇಂತಹ ಅಸಂಖ್ಯಾತ ಪ್ರತ್ಯಕ್ಷ ಗಣಪತಿಗಳೆಂಬ ಜಗತ್ತುಗಳ ಗಣಗಳಿಗೆ ಪತಿಯಾದ ಅವ್ಯಕ್ತ ಪರಬ್ರಹ್ಮವೆಂಬ ಮಹಾಗಣಪತಿಯನ್ನು 'ಉಪಾಸನಾ ಮಾರ್ಗದಲ್ಲಿ ಸಾಗುವಂತೆ ನನ್ನನ್ನು ಪ್ರಚೋದಿಸು' ಎಂದು ಭಕ್ತಿಯಿಂದ ಪ್ರಾರ್ಥಿಸಬೇಕು. ಇಂಥ ಗಣಪತಿಯು 'ದಂತಿ' ಎನಿಸಿದ್ದಾನೆ– ತನ್ನೋ ದಂತಿ ಪ್ರಚೋದಯಾತ್– ಇದು ಭಕ್ತಿಯೋಗ.

ಜ್ಞಾನಯೋಗ, ಕರ್ಮಯೋಗ, ಭಕ್ತಿಯೋಗಗಳ ಸುಂದರ ಸಮನ್ವಯವೇ– ಗಣೇಶ ವಿದ್ಯೆ. ಗಣಪತಿ ಸರ್ವಮಾನ್ಯ. ಶತಮಾನದ ಹಿಂದೆಯೇ ಲೋಕಮಾನ್ಯ ಟಿಳಕರು, ಅವನನ್ನು ಪರೋಕ್ಷವಾಗಿ ರಾಜಕೀಯಕ್ಕೆ ಎಳೆದರು. ರಾಷ್ಟ್ರ ಜಾಗೃತಿಗೆ ಗಣಪ ಮಾಡಿದ ಕೆಲಸವೂ ಸಣ್ಣದಲ್ಲ. ಆ ಸಮಯದಿಂದಲೇ ಈ ತಲೆಮಾರಿನ ಶಿಲ್ಪಿಗಳು ಚಿತ್ರಕಾರರಿಗೆ ಸ್ಫೂರ್ತಿದಾಯಕ ದೇವನಾದ 'ಗಣಪ'

ಟಿಳಕರು ಗಣಪತಿಯನ್ನು ಹೊರಗೆಡವಿದ ಮೇಲೆ ಈ ತಲೆಮಾರಿನ ಚಿತ್ರಕಾರರು ಶಿಲ್ಪಿಗಳಿಗೆ ಸ್ಫೂರ್ತಿಯ ಬುಗ್ಗೆ ಒಡೆದು ಚಿಮ್ಮಿದೆ ಕಲ್ಪನಾ ವಿಲಾಸ. ವಿವಿಧ ರೀತಿಯಲ್ಲಿ ಹರಿಯುತ್ತಿದೆ ಆದರೆ ಧಾರ್ಮಿಕ ಕಟ್ಟಳೆಯನ್ನು ಮೀರಿ ಹೋಗದಂತೆ [illegible] ಉಂಟು. ಅಂದರೆ ಗಣಪತಿ ಪೂಜ್ಯ ಮೂರ್ತಿಯಾಗಿಯೇ [illegible] ತಾತ್ಪರ್ಯ! ಆ ಮಾತನ್ನು ಕಲಾವಿದರು ಶಿಲ್ಪಿಗಳು ನೆನಪಿಡುವರೇ...

(ಪ್ರೇರಣೆ: ಯು. ಪದ್ಮನಾಭ ಭಟ್ಟ [illegible])



ಚಿತ್ತಾರಗಾರನಿಗೆ ಚಿತ್ರಶಾಂತಿಯ ಹರಕೆ...

ಕಲಾವಿದರ ಬದುಕೇ ಹೀಗೆ. ಅವರ ಸೃಷ್ಟಿ ಸೃಜನಶೀಲತೆಯ ಹೊಚ್ಚ ಹೊಸ ತೋರಣ. ಅಂತರಂಗದ ಆಶಯಗಳ ಅದ್ಭುತ ಅನಾವರಣ. ಆದರೆ ಬದುಕು? ನೋವು ಸಂಕಲನ. ಕರುಳು ಹಿಂಡುವ ಕಥನ...

ಎಪ್ಪತ್ತೇಳರ ಗಡಿ ದಾಟಿರುವ ಹಿರಿಯ ಚಿತ್ರಕಲಾವಿದ ಎನ್.ಸಿ. ದೇಸಾಯಿ ಕೂಡ ಇಂಥವರಲ್ಲೊಬ್ಬರು. ನೋವು ನುಂಗಿ ನಗುವ ಸೃಜನಶೀಲರು. ಹುಬ್ಬಳ್ಳಿಯ ಈ ಹೆಮ್ಮೆಯ ಕಲಾವಿದನ ಕುಂಚ-ಕಷ್ಟಕೋಟಲೆಗಳಿಗೆ ಸೊರಗಲಿಲ್ಲ. ಬದುಕಿನ ಬಣ್ಣ ಮಾಸಿದಾಗಲೂ, ಚಿತ್ರಗಳ ಬಣ್ಣ, ಬೆರಗು, ಬೆಡಗು ಕುಂದಲಿಲ್ಲ. ಸೃಜನಶೀಲತೆ ಸಾಯಲಿಲ್ಲ.

ಹಾವೇರಿ ಜಿಲ್ಲೆಯ ಅಗಡಿಯಲ್ಲಿ ಜನಿಸಿದ (4.4.1924) ನಾನಾಸಾಹೇಬ ಚಿದಂಬರ ಬಹದ್ದೂರ ದೇಸಾಯಿ ಅಭಿಜಾತ ಕಲಾವಿದ. ಸ್ವಾತಂತ್ರ್ಯ ಆಂದೋಲನದಲ್ಲಿ ಆಸಕ್ತಿ ತೋರಿದ ಹುಡುಗ ಹುಬ್ಬಳ್ಳಿಗೆ ಬಂದದ್ದು, ಮುಂಬಯಿ ಸೇರಿದ್ದು, 'ಪ್ರೀಮಿಯರ್ ಆಟೊಮೊಬೈಲ್ಸ್'ನ ಜಾಹೀರಾತು ವಿಭಾಗದಲ್ಲಿ 35 ವರ್ಷಗಳ ಕಾಲ ಕಾರ್ಯನಿರ್ವಹಿಸಿದ್ದು, ಕುಂಚದೊಂದಿಗೆ ಕಚಗುಳಿಯಾಡಿದ್ದು ರೋಚಕ ಕಥನ.

ಎನ್.ಸಿ. ದೇಸಾಯಿ ಮುಂಬೈನಲ್ಲಿ ಜಿ.ಎಸ್. ದಂಡಾವತಿಮಠ ಇವರ 'ನೂತನ ಕಲಾ ಮಂದಿರ'ದಲ್ಲಿ ಅನುಭವ ಸಂಪತ್ತನ್ನು ವೃದ್ಧಿಸಿಕೊಂಡರು. ಜೆ.ಜೆ. ಕಲಾ ಶಾಲೆಯ 'ಜಿ.ಡಿ. ಆರ್ಟ್' ಪದವಿ ಪಡೆದರು. ಕೆ.ಕೆ. ಹೆಬ್ಬಾರರ ಸಖ್ಯದಿಂದ ಸಂಪನ್ನರಾದರು. ಎನ್.ಎಸ್. ಬೇಂದ್ರೆ, ಅಮೃತಾ ಶೇರಗಿಲ್ಲ, ಬಿ. ಪ್ರಭಾ ಮುಂತಾದವರಿಂದ ಸ್ಫೂರ್ತಿ ತುಂಬಿಕೊಂಡರು.

ಕನ್ನಡ ನೆಲದ ಕಲಾ ಪ್ರತಿಭೆ ಮುಂಬೈ ನಗರದಲ್ಲಿ ಮಿಂಚತೊಡಗಿತು. ಜಲವರ್ಣದಲ್ಲಿ ಲ್ಯಾಂಡ್‌ಸ್ಕೇಪ್‌ಗಳ ರಚನೆ. ನಿಸರ್ಗದ ಬೆರಗಿನ ದರ್ಶನ. ಗ್ರಾಮ್ಯ ಬದುಕಿನ ಕಾಂಪೊಸಿಷನ್‌ಗಳ ನಿರ್ಮಾಣ. ಅಪ್ಲೈಡ್ ಆರ್ಟ್‌ನಲ್ಲಿ ನೈಪುಣ್ಯ. ಛಾಯಾಚಿತ್ರ ಕಲೆಯಲ್ಲಿ ಆಸಕ್ತಿ. ದೇಶ ಸುತ್ತುತ್ತಲೇ ಅನುಭವ ವಿಸ್ತಾರ. ಕ್ಯಾಮೆರಾ ಕ್ಲಿಕ್ಕಿಸಿದ ದೃಶ್ಯ ವೈಭವಗಳಿಗೆ ವರ್ಣಗಳ ಚಿತ್ತಾರ. ಇವರು ಹೆಣೆದ ಚಿತ್ರ-ಲೇಖನಗಳು ಕನ್ನಡದ ಹೆಚ್ಚಿನೆಲ್ಲಾ ದೈನಿಕ, ನಿಯತಕಾಲಿಕ, ವಿಶೇಷಾಂಕಗಳಲ್ಲಿ ಸತತವಾಗಿ ಪ್ರಕಟಗೊಂಡಿವೆ. ಜನ ಮೆಚ್ಚುಗೆ ಗಳಿಸಿವೆ.

ಬಣ್ಣಗೆಟ್ಟ ಬದುಕು

ಯಾವ ಸೃಜನಶೀಲ ಸುಖಿ ಹೇಳಿ? ಎನ್.ಸಿ. ದೇಸಾಯಿಯವರ ಹಿರಿಯ ಮಗ ಕೃಷ್ಣ ಇಪ್ಪತ್ತನಾಲ್ಕರ ಹರೆಯದಲ್ಲೇ ರೈಲು ಅಪಘಾತದಲ್ಲಿ ಅಸುನೀಗಿದ (1972). ಇನ್ನೊಬ್ಬ ಮಗ ವಿನೋದ ಅನಾರೋಗ್ಯದಿಂದ ಅಗಲಿದ (1994). ಪತ್ನಿ ಶಾರದಾ ಕಳೆದ ಅಕ್ಟೋಬರ್‌ನಲ್ಲಿ ಕೊನೆಯುಸಿರೆಳೆದರು. ಸೊಸೆ ಭಾರತಿ ಹಾಗೂ ಮೊಮ್ಮಕ್ಕಳಾದ ಆದಿತ್ಯ, ಕಾರ್ತಿಕರನ್ನು ಸಲಹುವ ಹೊಣೆ ಈ ವೃದ್ಧ ಕಲಾವಿದನ ಹೆಗಲೇರಿದೆ.

ಇದೀಗ ಅನಾರೋಗ್ಯದಿಂದ ಬಳಲುತ್ತಿರುವ, ನರ ಸಂಬಂಧಿ ಕಾಯಿಲೆಯಿಂದ ಸುಸ್ತಾಗಿರುವ ಎನ್.ಸಿ. ದೇಸಾಯಿ ಹುಬ್ಬಳ್ಳಿಯ ಸಿಲ್ವರ್‌ಟೌನ್‌ನಲ್ಲಿರುವ 'ಬಾಲಕೃಷ್ಣ'ದಲ್ಲಿ ಬಣ್ಣಗಳೊಂದಿಗೆ ಸರಸವಾಡುತ್ತಿದ್ದಾರೆ. ವರಕವಿ ದ.ರಾ. ಬೇಂದ್ರೆ ಇವರ ನೆಚ್ಚಿನ ಕವಿ. ಅವರ 'ನಾದಲೀಲೆ' ಸಂಗ್ರಹದ 'ಯಾರಿಗೂ ಹೇಳೋಣು ಬ್ಯಾಡಾ' ಗೀತೆಯ ಆಧಾರದಿಂದ ಆರು ಕಾಂಪೊಸಿಷನ್‌ಗಳನ್ನು ಇತ್ತೀಚೆಗೆ ರೂಪಿಸಿದ್ದಾರೆ. ಜಲವರ್ಣದ ಈ ಕಲಾಕೃತಿಗಳು 'ಅಂಬಿಕಾತನಯದತ್ತ'ರಿಗೆ ಅಂದದ ಅರ್ಪಣೆ!

ಎದನೆ ಪುಟಕ್ಕೆ

ಬನಶಂಕರಿಯ ಭಾವುಕತೆ (ಜಲವರ್ಣ)

ಹಿರಿಯ ಚಿತ್ರಕಲಾವಿದ ಎನ್.ಸಿ. ದೇಸಾಯಿ ನೋವು ನುಂಗುವ ಸೃಜನಶೀಲರು. ಅವರ ಬದುಕಿನ ಬಣ್ಣ ಮಾಸಿದಾಗಲೂ ಚಿತ್ರಗಳ ಬಣ್ಣ, ಬೆರಗು, ಬೆಡಗು ಕುಂದಲಿಲ್ಲ...

● ಆರೂರು ಲಕ್ಷ್ಮಣ್ ಶೇಟ್
ಚಿತ್ರಗಳು: ಎನ್.ಸಿ. ದೇಸಾಯಿ

ಮೊದಲ ಪುಟದಿಂದ

ಚಿತ್ರ ಶಾಂತಿಯ ಹರಕೆ

[illegible]

ಸ್ವರೂಪ ಚಿತ್ರಣ (ಪೋರ್ಟ್ರೇಟ್ ಪೇಂಟಿಂಗ್)ದಲ್ಲಿ ಎತ್ತಿದ ಕೈ. [illegible] ಚಿತ್ರಿಸುವುದರಲ್ಲಿ ಪರಿಣತರು. ಗ್ರಾಮ್ಯ ಬದುಕನ್ನು ಕಣ್ಣಿಗೆ ಕಟ್ಟುವಂತೆ ಕ್ಯಾನ್‌ವಾಸ್ ಮೇಲೆ ಮೂಡಿಸುತ್ತಾರೆ. ಇವರ ಚಿತ್ರ-ಲೇಖನಗಳಿಗೆ [illegible] ಅಪಾರ ಬೇಡಿಕೆ. ಕುಂಚ, ಕ್ಯಾಮರಾಗಳ ಚಮತ್ಕಾರ ಇವರ ಅಗ್ಗಳಿಕೆ.

ಕರ್ನಾಟಕ ಲಲಿತಕಲಾ ಅಕಾಡೆಮಿಯು ಪ್ರಶಸ್ತಿ ನೀಡಿದೆ (2000). ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ರಾಜ್ಯೋತ್ಸವ ಪುರಸ್ಕಾರ ನೀಡಿದೆ (1999). ಕೇಂದ್ರ ಸರಕಾರದ ಗೌರವ ಫೆಲೋಶಿಪ್ ಬಂದಿದೆ (1999). ಆತ್ಮೀಯ ಸನ್ಮಾನ ನೀಡಿದ ಸಂಘ ಸಂಸ್ಥೆಗಳೂ ಅಪಾರ. ಆದರೆ, ಅನಾರೋಗ್ಯದ ನಡುವೆಯೂ ಸಂಸಾರ ಸಲಹುವ ಭಾರ.

ಹೌದು!... ಕಲಾವಿದ ದೇಸಾಯಿ ಈಗ ದಣಿದಿದ್ದಾರೆ. ಚಿತ್ತಾಕರ್ಷಕ ಚಿತ್ತಾರಗಳನ್ನು ಅರಳಿಸುವ ಕಲಾವಿದನ ಎದೆಯಲ್ಲಿ ಒಂದು ಬೊಗಸೆ ಖುಷಿ ತುಂಬಬೇಕಾಗಿದೆ. ನಾಡು ಇವರನ್ನು ಸಮರ್ಪಕವಾಗಿ ಗುರುತಿಸಿ ಗೌರವಿಸಬೇಕಾಗಿದೆ. ಸಾಧ್ಯವೇ...?! ■

ಆನೆಗಳ ಮೇಲೆ ದೀಪಾರತಿ

ಕನಕಪ್ರಭಾ

ದೀಪಾವಳಿ ವಿಶೇಷಾಂಕ

2001

ಆನೆಗಳ ಮೇಲೆ ದೀಪಾರತಿ

ನಾಗರಿಕತೆಯನ್ನು ಸಾಧಿಸಿಕೊಂಡು ಬೆಳೆಸಿಕೊಂಡು ಬರುತ್ತಿರುವ ನಾವು, ದೀಪಕ್ಕೆ ಅಗ್ನಿ, ಜ್ಯೋತಿ, ದೀವಿಗೆ, ಹಣತೆ, ಆರತಿ, ಹೀಗೆ ಹತ್ತೆಂಟು ಅಂದವಾದ ಹೆಸರುಗಳನ್ನು ಇರಿಸಿದ್ದೇವೆ. ನಿಜವಾಗಿಯೂ ಈ ಜ್ಯೋತಿ "ಬೆಂಕಿ"ಯೇ! ಅನಾಗರಿಕತೆಯ ಹಿಂದಕ್ಕೆ ಸರಿದು ನೋಡಿದಾಗ, ಮಾನವನ ರೂಪವನ್ನು ತಾಳುತ್ತಿದ್ದ ಆ ಒಂದು ಸಜೀವ ಪ್ರಾಣಿ, ಬೆಳಕು ಸರಿದು ಕತ್ತಲು ಆವರಿಸುತ್ತಿದ್ದಂತೆ, ಸುತ್ತಲ ವಸ್ತುವನ್ನು ಹುಡುಕಲು, ನೋಡಲು ಬೆಳಕಿನ ಆಧಾರಕ್ಕೆ ಮೊರೆ ಹೋದ ಆ ಸಮಯ ಕಲ್ಲು–ಕಲ್ಲಿನ, ತಿಕ್ಕಾಟ – ಹೊಡೆತದಿಂದ ಅಕಸ್ಮಾತ್ ಉದ್ಭವಿಸಿದ 'ಕಿಡಿ' ಅವನ ಗಮನ ಸೆಳೆಯಿತು. ಅವನು ಅದನ್ನು ಹಿಡಿದಿಡಲು ಪ್ರಯತ್ನಿಸಿದ ಆ ಸಮಯ ಅವನ ಗಮನಕ್ಕೆ ಬಂದುದು ಹತ್ತಿಯಂಥ ಯಾವುದೊ ವಸ್ತುವೇ ಆಗಿರಬೇಕು. ಹೂವಿನ ಕುಸುಮವು ಇದ್ದರೂ ಇದ್ದಿರಬೇಕು. ಅದನ್ನೇ ಚಿಕ್ಕದಾಗಿ ಹಿಡಿದು, ನಂತರ ಕಟ್ಟಿಗೆ, ಸೊಪ್ಪು, ಸೆದೆ ಇವುಗಳಿಂದ ಆ ಬೆಂಕಿ ಉರಿಯುವಂತೆ ನೋಡಿಕೊಂಡ ಕತ್ತಲು ಕಳೆದು ಬೆಳಕು ಅವನಿಗೆ ಸಿಕ್ಕಿತು. ಅದಕ್ಕೆ "ಬೆಂಕಿ"ಯೇ ಮೂಲ. ವಾಸವಾಗುತ್ತಿದ್ದ ಗುಹೆಯಲ್ಲಿಯೇ ಇರಲಿ ಗುಡಿಸಲಿನಲ್ಲಿಯೇ ಆಗಲಿ ಆ "ಬೆಂಕಿ"ಯೇ ಬೆಳಕಿನ ಆಧಾರವಾಯಿತು.

ಆ ಬೆಂಕಿ, ಪಂಜು, ದೀವಟಿಗೆ, ಹಿಲಾಲು ಮುಂತಾದ ರೂಪ ತಾಳಿದಾಗ ಅದು ದಾರಿ ದೀಪವಾಯಿತು. ಬೇಟೆಗೆ ಹೋಗಲು ಬೆಳಕಿನ ಸಾಧನವಾಯಿತು. ಮುಂದೆ, ಆ ಮಾನವ ಪ್ರಾಣಿ ಒಂದಿಷ್ಟು ನಾಗರಿಕತೆಯ ಛಾಯೆಗೆ ಬಿದ್ದಾಗ ಆ "ಬೆಂಕಿ" ಆಹಾರ ಬೇಯಿಸುವ ಸಾಧನವಾಯಿತು.

18ನೇ ಶತಮಾನದ ಒರಿಸ್ಸಾ ಕೃತಿ.
ಆನೆ ಮೇಲೆ ಮಹಿಳೆ. ಕೈಯಲ್ಲಿ ಹಣತೆ

5 ಹೆಡೆ ಸರ್ಪದ ಕಾವಲಿನಲ್ಲಿ 'ದೀಪ ಲಕ್ಷ್ಮಿ'
18ನೇ ಶತಮಾನದ ಆಂಧ್ರಪ್ರದೇಶ ಕೃತಿ

ಪಶ್ಚಿಮಕ್ಕೆ ಬೆಟ್ಟದ ಬುಡದಲ್ಲಿರುವ ಪ್ರಾಕ್ತನ ನಿವೇಶನ ಪ್ರಾಗೈತಿಹಾಸಿಕ ಕಾಲದಿಂದಲೂ ಇಲ್ಲಿ ಜನವಸತಿ ಇದ್ದು, ಇತಿಹಾಸ ಕಾಲದಲ್ಲಿ ವಿಜಯನಗರ ಕಾಲದವರೆಗೂ ಇಲ್ಲಿ [illegible] ಬೆಳೆದಿದ್ದುದಾಗಿ ಸಂಶೋಧನೆ ಸಾರುತ್ತದೆ. ಹುಲಿಗೊಂದಿ, ನೇರಲ ಗೊಂದಿ, ಬಾರಲಗೊಂದಿಗಳೆಂಬ ಬೆಟ್ಟದ ಕಣಿವೆ ಪ್ರದೇಶಗಳೂ, ಅಂಕಲಿಮಠವಿರುವ ಗವಿಗಳೂ ಸುತ್ತ ಮುತ್ತಲ ಗುಡ್ಡಗಳೂ, ಇಲ್ಲಿ ನಿರಂತರವಾಗಿ ಹರಿಯುತ್ತಿದ್ದ ಹಳ್ಳವೂ ಪ್ರಾಚೀನ ಕಾಲದಲ್ಲಿ ಜನವಸತಿಗೆ ಅನುಕೂಲವಾಗಿದ್ದವು. ಆದುದರಿಂದಲೇ ಇಲ್ಲಿ ನವಶಿಲಾಯುಗದ ಜನರಿದ್ದ ಕುರುಹುಗಳೂ ಕಂಡು ಬಂದಿವೆ.

ಪುರಾತತ್ತ್ವ ಇಲಾಖೆಯವರು ಇಲ್ಲಿ ಉತ್ಖನನಗಳನ್ನು ನಡೆಸಿದ್ದಾರೆ. ಇಲ್ಲಿ ಪ್ರಾಚೀನ ಸಮಾಧಿಗಳು, ಕೆತ್ತನೆಯಿರುವ ವಿವಿಧಾಕೃತಿಯ ಬಣ್ಣದ ಮಣ್ಣಿನ ಪಾತ್ರೆಗಳೂ, ಮಾಂಡಲಿಕರ ಸೀಸದ ಮತ್ತು ಮಿಶ್ರಲೋಹದ ಹಲವಾರು ನಾಣ್ಯಗಳ ಜೊತೆಗೆ ರೋಮ್ ಚಕ್ರವರ್ತಿಗಳಾದ– ಅಗಸ್ಟಸ್ ಮತ್ತು ಟೈಬೀರಿಯ ಸರ, ನಾಣ್ಯಗಳು ದೊರಕಿವೆ. ಬೃಹತ್ ಶಿಲಾಸಮಾಧಿಯ ಕಲ್ಲಿನ ಶವಪೆಟ್ಟಿಗೆಗಳು ಸಿಕ್ಕಿವೆ.

ಮದ್ದು ಅರೆಯುವ ಕಲ್ಲುಗಳು

ಮಯೂರ ಶರ್ಮನ ಶಾಸನ: ಚಂದ್ರವಳ್ಳಿ ದಾರಿಯಲ್ಲಿ ಎಡಕ್ಕೆ ಮಾರುತಿ ದೇವಾಲಯ ಬಲಕ್ಕೆ ಬಂಡೆಯ ಮೇಲೆ ಭಾರಿ ಹುಲಿಯೊಂದರ ರೇಖಾ ಚಿತ್ರವಿದೆ. ಇಲ್ಲಿರುವ ಹೊಯ್ಸಳ ಶೈಲಿಯ ಭೈರವೇಶ್ವರ ದೇವಾಲಯದ ಹೊರಗೆ ಕೇವಲ ಮೂರು ಸಾಲಿನ ಶಾಸನವಿದೆ. ಬ್ರಾಹ್ಮಿ ಲಿಪಿಯಲ್ಲಿಯ ಇದರ ಭಾಷೆ ಪ್ರಾಕೃತ. ಈ ಶಾಸನ ಕರ್ನಾಟಕದ ಪ್ರಪ್ರಥಮ ಸ್ವತಂತ್ರ ರಾಜನಾದ ಮಯೂರ ಶರ್ಮನದು. ಮಯೂರ ಶರ್ಮನು ಇಲ್ಲಿ ಒಂದು ಕೆರೆಯನ್ನು ನಿರ್ಮಿಸಿದ ವಿಷಯ ಮತ್ತು ಅಭೀರ, ತ್ರೈಕೂಟ, ಜಲ್ಲವ, ಪಾರಿಯಾತ್ರಿಕ, ಶಕಸ್ಥಾನ, ಸಯಿಂದಕ, ಪುನ್ನಾಟ ಮತ್ತು ಮೂಕರಿ– ರಾಜ್ಯಗಳನ್ನು ಗೆದ್ದುದನ್ನು ತಿಳಿಸುತ್ತದೆ. ಭೈರವೇಶ್ವರ ದೇವಾಲಯದಿಂದ ಸ್ವಲ್ಪ ದೂರ ದಿಣ್ಣೇರಿ ಹೋದರೆ ಅಂಕಲಿಮಠ (ಪರದೇಶಪ್ಪನಗುಹೆ) ಕಾಣುವುದು.

ಈ ಅಂಕಲಿಮಠ ಚಿತ್ರದುರ್ಗದ 'ಮುರುಘರಾಜೇಂದ್ರ' ಸ್ವಾಮಿಗಳ ಮಠಕ್ಕೆ ಅಧೀನರಾದ ಅಂಕಲಿ ಮಠದ ಗುರುಗಳ ಆವಾಸಸ್ಥಾನ. ಈ ಮಠದಲ್ಲಿ ಬಹಳ ಪ್ರಸಿದ್ಧವಾದ (ಎಲ್ಲೋರ, ಅಜಂತ ಗುಹೆಗಳಿಗಿಂತಲೂ) ಒಂದು ಗುಹೆ ಇದೆ. ಗವಿಯ ಒಳಭಾಗವು ಕತ್ತಲಲ್ಲಿರುವುದರಿಂದ ಹಗಲು ಹೊತ್ತಿನಲ್ಲಿಯೂ ಟಾರ್ಚ್ ಬೆಳಕಿನಿಂದ ಪ್ರವೇಶ ಮಾಡಬೇಕಾಗುವುದು. ಇಲ್ಲಿ ಅಚ್ಚರಿಯನ್ನುಂಟು ಮಾಡುವ 13 ಗುಹೆಗಳಿವೆ. ಮೆಟ್ಟಲಿನಿಂದ ಇಳಿಯುತ್ತಾ ಮೆಲ್ಲನೆ ಸಾಗಿದರೆ ಮುಂದೆ ಒಂದು ಸಭಾಂಗಣ ಮತ್ತು ಭಾರಿ ಶಿವಲಿಂಗ ಕಾಣುತ್ತವೆ. ನಂತರ ಕಾಣುವ ಗುಹೆಗಳಲ್ಲಿ ಒಂದರಲ್ಲಿ ನೀರಿನ ತೊಟ್ಟಿ ಮತ್ತೊಂದರಲ್ಲಿ ಪೀಠಗಳು, ಇನ್ನೊಂದರಲ್ಲಿ ಪಕ್ಷಿ, ವರ್ಣ ಚಿತ್ರಗಳು, ಶಯನಾಗರ ಕಂಡುಬರುತ್ತವೆ. ಮುಂದುವರಿದಂತೆ ಬಗ್ಗಿ, ಕೂತು, ತೆವಳಿ ಸಾಗಬೇಕಾಗುತ್ತದೆ. ಮಾರ್ಗದರ್ಶಕರಿಲ್ಲದೆ ಹೋದರೆ ಹೊಸಬರು ಹಿಂತಿರುಗಿ ಬರಲು ಸಾಧ್ಯವಾಗುವುದಿಲ್ಲ. ಈ ಗುಹಾಂತರ ಮುಂದಿರದಿಂದ ಹಿಂತಿರುಗಿ ಬಂದಾಗ ಮಾನವನಾಗಿ ಹುಟ್ಟಿದ ಮೇಲೆ ಇಂಥ ಸಾಹಸ ಯಾತ್ರೆ ಮಾಡದಿದ್ದರೆ ಏನು ಪ್ರಯೋಜನ? ಎನ್ನಿಸುವುದು. ಮುರುಘ ಮಠದವರು ಮಠದ ಗವಿಗಳ ಸ್ವಚ್ಛತೆಯನ್ನು ತುಂಬಾ ಚೆನ್ನಾಗಿ ಕಾಪಾಡಿಕೊಂಡು ಬರುತ್ತಿದ್ದಾರೆ.

ಅಂಕಲಿ ಮಠದ ಬಳಿ ಪಂಚಲಿಂಗೇಶ್ವರ ಗುಹಾಂತರ ದೇವಾಲಯವಿದೆ.

165ನೇ ಪುಟ ನೋಡಿ

ಮುರುಘರಾಜೇಂದ್ರ ಮಠದ ಉಯ್ಯಾಲೆ ಕಂಭದ ಸಾಲುಗಳು, ಗಾಳಿ ಮಂಟಪಗಳು.



ಇದು 'ಕೀರ್ತಿಮುಖ'
18ನೇ ಶತಮಾನದ ನೇಪಾಳ ಕೃತಿ

ಚಿತ್ರ ಲೇಖನ

ಎನ್. ಕೆ. ದೇಸಾಯಿ

ಪುರಾಣ ಕಾಲ

ಆನೆಯೇ ಪ್ರಾಮುಖ್ಯವಾಗಿರುವ ತೂಗುದೀಪ.



ಆನೆಯಲ್ಲಿ 'ಐರಾವತ' ಸವಾರ ಸಪ್ತ ಜ್ಯೋತಿಯ ಹಣತೆ 18ನೇ ಶತಮಾನದ ಮಹಾರಾಷ್ಟ್ರ ಕೃತಿ

ಜೋಡು ಆನೆಗಳ ವಿನ್ಯಾಸ

ಶತಮಾನಗಳ ಹಿಂದೆಯಷ್ಟೇ ನಿರ್ಮಿತವಾದವು. ಅಹುದು ಈ ದೀಪಗಳ ಕುರಿತು ಒಂದು ಸಚಿತ್ರ ಲೇಖನ ಬರೆಯುವ ಹಂಬಲ ಬಹು ಕಾಲದಿಂದಲೂ ನನ್ನಲ್ಲಿ ಹುದುಗಿತ್ತು. ಈ ವೈವಿಧ್ಯಮಯ ದೀಪಗಳನ್ನು ಕಂಡಾಗ ಪ್ರಾಣಿ ಪಕ್ಷಿಗಳನ್ನು ಆರಿಸಬೇಕೊ, ದೇವ ದೇವತೆಗಳನ್ನು ನನ್ನ ಬರವಣಿಗೆಯ ವಿಷಯವನ್ನಾಗಿ ಮಾಡಿಕೊಳ್ಳಬೇಕೊ ಎಂಬ ತೊಳಲಾಟ ನಡೆದೇ ಇತ್ತು ಈ ಸಂದಿಗ್ಧ ಪರಿಸ್ಥಿತಿಯಲ್ಲಿ. ನೋಡಿದ ವಸ್ತುಗಳನ್ನೇ ಹತ್ತೆಂಟು ಸಲ ವೀಕ್ಷಿಸಬೇಕಾಯಿತು. ಅದಕ್ಕಾಗಿ ಅಲೆದಾಡುವುದು ಹೆಚ್ಚಾಯಿತು. ಈ ನನ್ನ ಆತುರತೆಯನ್ನು ಸಂಗ್ರಹಾಲಯದ ಸಿಬ್ಬಂದಿಯ



ವಿಷ್ಣುವಿನ ಪೂಜೆಗೆಂದೇ ನಿರ್ಮಿತವಾದ ಸಪ್ತ ಹಣತೆಗಳ ಸಮಯಿ – 18 ಶತಮಾನದ ತಮಿಳುನಾಡು ಕೃತಿ

ಲೋಹಯುಗ

ಾಲ ಸರಿದಂತೆ ಮಾನವನ
ರಿಕತೆಯ ಪ್ರಜ್ಞೆ ಇನ್ನು
ನಚಾಯಿತು. ಬರೀ ಹಣತೆ
ತ್ರವಲ್ಲ, ಗ್ರಹ ಉಪಯೋಗಿ
ಗಳೆಲ್ಲ ಲೋಹದಲ್ಲಿ ಸಿದ್ಧವಾದ
ತಗಿದವು. ಅಡಿಗೆಯ ಪಾತ್ರೆ,
ದ ತಟ್ಟೆ, ತಾಂಬೂಲ
ರಣೆಯ ಡಬ್ಬಿ, ಶಾಯಿಯ
, ಉಜರೆ, ಪೂಜಾ ಸಾಮಗ್ರಿ,
ದೇವತೆಗಳು ಮಕ್ಕಳ ಆಟಿಗೆ,
ಎರಡೇ, ಎಲ್ಲವೂ ವಿವಿಧ
ಹದಲ್ಲಿ ಸಿದ್ಧವಾಗತೊಡಗಿದವು.
ಕತೆಯ ಬೆಳವಣಿಗೆಯೊಂದಿಗೆ,
ಕ ಜ್ಞಾನವೂ ಸೇರಿಕೊಂಡಿತು.
ಸೌಂದರ್ಯ ಪ್ರಜ್ಞೆ ಕಲಾತ್ಮಕ
ಮೂ ಬೆಳೆಯಿತು. ಹೀಗಾಗಿ
ರಿಸುತ್ತಿದ್ದ ಪ್ರತಿ ವಸ್ತುವಿನ
ಕಲಾತ್ಮಕ ದೃಷ್ಟಿ ಇದ್ದೇ
ತ್ತು!
ದು ಈ ದೃಷ್ಟಿ
ಕಾರವಾಗಿ ಬೆಳೆದಿದೆ,
ನಾಡೊ, ಕೇರಳವೊ ಉತ್ತರ
ಯ ಸರಾಕರಗಳೋ, ಇಂದು
ಯಾರಿಸುತ್ತಿರುವ ಇಂಥ
ವಸ್ತುಗಳನ್ನು

ಪ್ರದರ್ಶಿಸುತ್ತವೆ. ಅವುಗಳ ಥಳಕು – ಹೊಳಪು ಹೇಳ ತೀರದು. ಅಷ್ಟೆ ಕೌಶಲ್ಯದ ನಕ್ಷೆಗಳು ಕೂಡ, ಹಿಂದೆ ಬಿದ್ದಿಲ್ಲ. ಆದರೆ, ಹಳೆ ತಲೆಮಾರಿನ ಕಲಾತ್ಮಕ ವಸ್ತುಗಳನ್ನು ನೋಡಿದಾಗ ಆಗುವ ಆನಂದ. ಏಕೋ ಎಂತೋ ಈ ಆಧುನಿಕ ವಸ್ತುಗಳನ್ನು ಕಂಡಾಗ ನನಸಾಗುವುದಿಲ್ಲ!

ಈ ಹಸಿವಿನಿಂದಲೋ, ಏನೋ ಎಲ್ಲೆಲ್ಲಿ ವಸ್ತು ಸಂಗ್ರಹಾಲಯಗಳಿವೆಯೋ ಅವನ್ನು ಅರಿಸಿ ತಿರುಗಾಡುವುದು ನನಗೆ ಅಂಟಿಕೊಂಡ ರೋಗ, ಈ ಪರಿದಾಟದಲ್ಲಿ ನಾನೊಮ್ಮೆ ಪುಣೆಯಲ್ಲಿರುವ ರಾಜಾ ದಿನಕರ ವಸ್ತು ಸಂಗ್ರಹಾಲಯವನ್ನು ಹೊಕ್ಕೆ. ಅಲ್ಲಿ ಅಗಾಧವಾದ ಅಚ್ಚರಿ ನನ್ನನ್ನು ಕಾದಿತ್ತು! ಅದೆಂಥ ಅದ್ಭುತ ಸಂಗ್ರಹಾಲಯವದು. ಮನೆ ಬಳಕೆಯ ಎಲ್ಲ ವಸ್ತುಗಳಲ್ಲದೇ ಕಲಾತ್ಮಕವಾದ ವಸ್ತು ಎಲ್ಲಿ ಸಿಕ್ಕಿದಿಯೋ ಅಲ್ಲಿಂದ ತಂದು ಇಲ್ಲಿ ಸಂಗ್ರಹಿಸಿದ್ದಾರೆ. ಬೀಗ ಬೀಗದ ಕೈ, ಅಡಕೋತು, ತಾಂಬೂಲ ಸಾಮಗ್ರಿ ಬರವಣಿಗೆಯ ವಸ್ತುಗಳು, ದೀಪಗಳು – ದೀಪಗಳ ಸಂಗ್ರಹವಂತೂ ಇಲ್ಲಿ ಬಹು ಮಹತ್ವದ್ದು!

ಪಕ್ಷಿ ಪ್ರಾಣಿಗಳು, ದೇವ ದೇವತೆಗಳು, ವಿವಿಧ ದೇವತೆಗಳ ವಾಹನಗಳು. ಇವನ್ನೆಲ್ಲ ಬಳಸಿಕೊಂ–ಡು ದೀಪಗಳ ನಕ್ಷೆಯನ್ನು ನಿರ್ಮಿಸಿ ಅವನ್ನು ಎರಕ ಹೊಯ್ದು ಕೆತ್ತನೆಯ ಕೆಲಸ ಮಾಡಿದ್ದಾರೆ. ಆಧುನಿಕ ನಿರ್ಮಿತಿಯ ಹೊಳಪಿಲ್ಲದಿದ್ದರೂ ಅವುಗಳಲ್ಲಿ ಅಡಕವಾಗಿರುವ ಕಲಾತ್ಮಕ ದೃಷ್ಟಿ ಮಾತ್ರ ಅದ್ಭುತವಾದುದು!

ನಿರ್ಧಾರಕ್ಕೆ ತೊಳಲಾಟ

ಈ ಕೃತಿಗಲು ಬಹಳ ಹಿಂದಿನ ಕಾಲದವೇನಲ್ಲ. ಕೆಲವೇ

ಕೆಲವರು ಲಕ್ಷ್ಯಕ್ಕೆ ತಂದುಕೊಂಡಿದ್ದರೋ ಏನೋ ಎರಡನೇ ದಿನ ನಾನು ಹೋದಾಗ ಅವರಲ್ಲಿಯ ಒಬ್ಬರು ಬಂದು, ನಿನ್ನೆಯಿಂದಲೇ ನಿಮ್ಮನ್ನು ನೋಡುತ್ತಿದ್ದೇವೆ. ಏನೋ ವಿಶಿಷ್ಟ ವಿಷಯವನ್ನು ಬಹು ಆತುರ, ಆಸ್ಥೆಯಿಂದ ಹುಡುಕುತ್ತಿದ್ದಂತೆ ಕಾಣುತ್ತದೆ. ಏನು ವಿಷಯ? ಎಂದು ಕೆಣಕಿದರು. ವಿಷಯ ತಿಳಿಸಿದೆ. ಅವರು ಮತ್ತೊಮ್ಮೆ ನನ್ನನ್ನು ಸಂಗ್ರಹಾಲಯದ ತುಂಬ ತಿರುಗಾಡಿಸಿದರು. ಆಗ ನಾನು ಹೇಳಬೇಕಾಯಿತು. ಸದ್ಯ ನಾನು

ಅರಿಸಿದ ವಸ್ತು ದೀಪಗಳು ಅವನ್ನೇ ಮತ್ತೊಮ್ಮೆ ನನಗೆ ತೋರಿಸಿದರು.

ವಿಷಯಕ್ಕಾಗಿ ತೊಳಲಾಡುತ್ತಿದ್ದರೂ ನನಗರಿಯದೆ ನನ್ನ ಮನದಲ್ಲಿ Elephant Motif ನನ್ನ ಮನವನ್ನು ಯಾವಾಗಲೋ ಸೇರಿತ್ತು. ಬಹುಶಃ ಅದಕ್ಕೆ ಕಾರಣ ವಿರದೇ ಇಲ್ಲ. ಕೆಲವೇ ದಿನಗಳ ಹಿಂದೆ ನಡೆದು ಹೋಗಿದ್ದ ಗಣೇಶೋತ್ಸವದ ಸಮಯಕ್ಕೆ "ವಿದೇಶಗಳಲ್ಲಿ ವಿನಾಯಕ" ಎಂಬ ವಿಷಯ ಆರಿಸಿಕೊಂಡು, ಅವುಗಳ 30ಕ್ಕೂ ಹೆಚ್ಚು ಚಿತ್ರಗಳನ್ನು ಜಲವರ್ಣದಲ್ಲಿ ನಿರ್ಮಿಸಿ ಪ್ರದರ್ಶನ ಏರ್ಪಡಿಸಿದೆ. ಪ್ರದರ್ಶನ ಜನ ಮೆಚ್ಚಿಗೆಯನ್ನು ಪಡೆದಿತ್ತು.

ನನ್ನ ಮನದಿಂಗಿತವನ್ನು ಜೊತೆಗಿದ್ದ ಆಗಂತುಕನಿಗೆ ಹೇಳುವುದೇ ತಡ ಆನೆ ಹೊತ್ತ, ಆನೆಯ ಮೇಲಿದ್ದ ಹತ್ತಾರು ನಮೂನೆಯ ದೀಪಗಳನ್ನು ತೋರಿಸಿದನು. ಅವುಗಳನ್ನು ನೋಡುತ್ತಿದ್ದಂತೆ ನಾನು Sketch ಮಾಡಿಕೊಳ್ಳಲು ಪ್ರಾರಂಭಿಸಿದಾಗ ಅವನು ನನ್ನನ್ನು ತೆದು ಹೀಗೆ ಇಲ್ಲಿಯೇ ನೀವು Sketch ಮಾಡುವುದಾದರೆ ತಿಂಗಳು ಕಾಲ ಇಲ್ಲಿಯೇ ಕಳೆಯಬೇಕಾದೀತು ಎಂದು ಎಚ್ಚರಿಸಿ ದೀಪಗಳ ವಿಷಯವಾಗಿಯೇ ಇದ್ದ ವಿಶೇಷ ಪ್ರಕಟಣೆಯೊಂದನ್ನು ನನ್ನ ಕೈಗಿತ್ತನು. ಆ ಪುಸ್ತಿಕೆಯ ಪುಟ ತಿರುವುತ್ತಿದ್ದಂತೆ ಸಮಾಧಾನದ ಉಸಿರು ಬಿಸಿಯಾಗಿ ಹೊರ ಬಿತ್ತು!

ಸರಿ, ನಾನು ಯೋಜಿಸಿಕೊಂಡ ಪ್ರಕಟಣೆಯ ಸಮಯ ಸಮೀಪಿಸುತ್ತಿತ್ತು. ತಡ ಮಾಡಿ ನಾನು ಆರಿಸಿಕೊಂಡ "ಗಜಜ್ಯೋತಿ"ಯ ಚಿತ್ರಗಳನ್ನೇ ಒಂದೆಡೆ ಕೂಡಿಸಿಕೊಂ–ಡು ಅದರಲ್ಲಿ ಬೇಕೆಂದಷ್ಟನ್ನೇ ಚಿತ್ರಕ್ಕೆ ಅಳವಡಿಸಿಕೊಂಡ ಚಿತ್ರಿಸಲು ಉದ್ಯುಕ್ತನಾದೆ!

ಅಗಾಧ ಕಾದಿತ್ತು

ಈ ಅಪರೂಪದ ವಸ್ತುಗಳನ್ನು ನನ್ನ ಚಿತ್ರಲೇಖನಕ್ಕಾಗಿ ಒಂದೆಡೆ ಇದ್ದ ಸಂಗ್ರಹದಿಂದಲೇ ಆರಿಸಿ ತೆಗೆಯುವಾಗ ನನಗಾದ ತೊಂದರೆಯನ್ನು ಎಣಿಸಿ, ಇನ್ನು ದೇಶದ ತುಂಬೆಲ್ಲ ಅಲೆದು, ಹಳ್ಳಿ ಹಳ್ಳಿಗೆ ಹೋಗಿ, ಆ ವಸ್ತುಗಳನ್ನು ಹೊಂದಿದ ಮಾಲೀಕರ ಮನವನ್ನು ಒಲಿಸಿ ಸಂಗ್ರಹ ಮಾಡಿದ ಆ ಪುಣ್ಯಾತ್ಮನು ಎಷ್ಟು ಕಷ್ಟಪಟ್ಟರಬೇಕೆಂಬ ಅರಿವಾಯಿತು, ಮರುಕು ಹುಟ್ಟಿತು, ಆ ವ್ಯಕ್ತಿಯ ಬಗ್ಗೆ ಇಲ್ಲದ ಗೌರವ ಉತ್ಪನ್ನವಾಯಿತು.

ಇಂಗ್ಲಿಷಿನಲ್ಲಿ ಒಂದು ಮಾತು



ಗಣಪತಿಯೇ ದೀವಿಗೆ ಹಿಡಿದ ವಿಶಿಷ್ಟ ಹಣತೆ.

ಇದೆ, "ಪೇಯ್ನ್ ಅಂಡ್ ಪ್ಲೆಶರ್" – ಒಂದೇ ಸಮಯಕ್ಕೆ ಘಟಿಸಿದ ಈ ವಾಕ್ಯವನ್ನು ಕೆಲ ಸಂದರ್ಭಗಳಲ್ಲಿ ಉಸಿರುವುದುಂಟು, ಆ ಸಂದರ್ಭ. ಈ ಸಂಗ್ರಹಾಲಯವನ್ನು ನಿರ್ಮಿಸಿದ, ಡಾ। ದಿನಕರ ಗಂಗಾಧರ ಕೆಳ್ಕಾರ ಜೀವನದ ನೆನಪಿನಲ್ಲಿ ಹೇಳಬೇಕಾದ್ದು!

ಕೇಳಕರ ದಂಪತಿಗಳು ತಾರುಣ್ಯದಲ್ಲಿ ಬೆಳೆಯುತ್ತಿದ್ದ ಕಾಲ ಒಂದು ಗಂಡು ಮಗುವಿನ ತಂದೆ ತಾಯಿಗಳು ಕೂಡ ಆಗಿದ್ದರು, ಆದರೆ ವಿಧಿ ತನ್ನ ಕೈ ತೋರಿಸಿತು. ತಾರುಣ್ಯವನ್ನು ತಲುಪಿತಿದ್ದ ಆ ಒಬ್ಬನೇ ಒಬ್ಬ ಮಗ "ರಾಜಾ ದಿನಕರ"ನ್ನು ವಿಧಿ ತೆಗೆದುಕೊಂಡು ಹೋಯಿತು. ತಂದೆ ದಿನಕರ, ತಾಯಿ ಕಮಲಾಬಾಯಿ . ದಿಕ್ಕುಗಾಣದವರಾದರು, ಆದರೆ ನಿರಾಶರಾಗಲಿಲ್ಲ. ಕಳೆದುಹೋದ ಮಗನನ್ನು ತಮ್ಮ ಆತ್ಮದಲ್ಲಿಯೇ ಬೆಳೆಸಿದರು. ಅದರ ಪರಿಣಾಮವಾಗಿಯೇ "ರಾಜಾ ದಿನಕ ಕೇಳಕರ್ ಮ್ಯೂಜಿಯಮ್"ನ ಹುಟ್ಟು ಬೆಳವಣಿಗೆ, ಬೆಳವಣಿಗೆ ಎಂದರೆ ವಿಶ್ವದಲ್ಲಿಯೇ ಒಂದು ವಿಶಿಷ್ಟ ಸಂಗ್ರಹಾಲಯವಾಗಿ ಬೆಳೆದು ನಿಂತ ಸಂಸ್ಥೆ!

ಹೀಗೆ "ಪೇಯ್ನ್ ಅಂಡ್ ಪ್ಲೆಶರ್" ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕಾದ್ದು ಯೋಗ್ಯವಾಗಿದೆ. ಮಗನ ಮರಣ ನೋವಿನದು ಆ ನೋವನ್ನು ಕಡಿಮೆ ಮಾಡಲೆಂದೇ ನಿರ್ಮಾಣವಾದುದು ಈ ಸಂಗ್ರಹಾಲಯ – ದೇಶಕ್ಕೊಂದು ಕೊಡುಗೆ!

ಮಹಾರಾಷ್ಟ್ರ ಸರಕಾರ, ಕೇಂದ್ರ

[illegible] ಹೇಳುತ್ತಾರೆ!

ಬೆಂಕಿ – ಜ್ಯೋತಿ

ಅನಾಗರಿಕತೆಯ ಕಾಲದಲ್ಲಿಯ ಬೆಂಕಿ, ಈಗ ಜ್ಯೋತಿ, ಅಗ್ನಿ, ಅಗ್ನಿದೇವ ಯಜ್ಞದೇವ. [illegible] ಸೂರ್ಯ ಮುಂತಾದ ಹೆಸರುಗಳನ್ನು ಹೊತ್ತು ಧಾರ್ಮಿಕ ದೃಷ್ಟಿಯಲ್ಲಿ 'ದೇವ'ರೂಪ ತಾಳಿದ್ದಾನೆ ಈ ಜ್ಯೋತಿ!

ಧಾರ್ಮಿಕ ದೃಷ್ಟಿಯಲ್ಲಿ ದೇವ ಪೂಜೆಗೆ ಈ ದೀಪ, ಆರತಿ, ಮಂಗಳಾರತಿ, [illegible] ಪೂಜೆಯ ಮಾಧ್ಯಮವಾದರೂ ಕೂಡ ಈ ದೀಪವೇ ದೇವನ ಸ್ಥಾನಕ್ಕೆ ಏರುವುದೂ ಉಂಟು!

ಇನ್ನೂ ನಾಗರಿಕತೆ ಮುಂದೊರೆದಂತೆ ಧಾರ್ಮಿಕದೃಷ್ಟಿ ಹೆಚ್ಚಾದಂತೆ – ಅಗ್ನಿಹೋತ್ರಾ ಕೃತಿಯಲ್ಲಿ ಬಂತು, ಅಂದರೆ ಮಂತ್ರಶಕ್ತಿಯಿಂದಲೇ ಅಗ್ನಿಯ ಉತ್ಪತ್ತಿಯನ್ನು ಮಾಡುವುದು. ಅದು ಈಗ ಪುಸ್ತಕಗಳಲ್ಲಿ ಮಾತ್ರಾ ಉಳಿದಿದೆ. ನಮ್ಮೂರಿನ ವೇದ ಸಂಸ್ಕೃತ ಪಾಠಶಾಲೆಯ ವಿದ್ಯಾರ್ಥಿ ಒಬ್ಬ, "ಅಗ್ನಿಹೋತ್ರ" ಹೊತ್ತಾನು ಅವನಿಗೆ ಚೇಷ್ಟೆ ಮಾಡಿದೆ, ಆವೃತವನ್ನು ಸ್ವೀಕಾರ ಮಾಡುವುದು ಸುಲಭ. ಆದರೆ ನಡೆಸಿಕೊಂಡು ಹೋಗುವುದು ಕಷ್ಟ ಎಂದೆ – ಉತ್ತರವಾಗಿ ಆ ವಿದ್ಯಾರ್ಥಿ ನಕ್ಕನಷ್ಟೆ!

ಅಗ್ನಿ ಸವ್ಯಕ್ಕೂ ಬೇಕು, ಅಪಸವ್ಯದಲ್ಲೂ ಅದಕ್ಕೆ ಅಷ್ಟೇ

ಆನೆಯ ಬೆನ್ನಮೇಲೆ ದೀಪ ಕಂಬದ ವಿನ್ಯಾಸ

[illegible]

ಒಂದು ಹೊಸ ಹಾಡು ಹಾಡುವ [illegible] ದೊರಕಿದೆ.

[illegible]



ಆನೆಯುಳ್ಳ 'ಐರಾವತ' ಸ್ವಾರ ... ಜ್ಯೋತಿಯ ಹಣತೆ. 18ನೇ ಶತಮಾನದ ಮಹಾರಾಷ್ಟ್ರ ಕೃತಿ



ಜೋಡು ಆನೆಗಳ ವಿನ್ಯಾಸ

ಶತಮಾನಗಳ ಹಿಂದೆಯಷ್ಟೇ ನಿರ್ಮಿತವಾದವು. ಅಹುದು ಈ ದೀಪಗಳ ಕುರಿತು ಒಂದು ಸಚಿತ್ರ ಲೇಖನ ಬರೆಯುವ ಹಂಬಲ ಬಹು ಕಾಲದಿಂದಲೂ ನನ್ನಲ್ಲಿ ಹುದುಗಿತ್ತು. ಈ ವೈವಿಧ್ಯಮಯ ದೀಪಗಳನ್ನು ಕಂಡಾಗ ಪ್ರಾಣಿ ಪಕ್ಷಿಗಳನ್ನು ಆರಿಸಬೇಕೊ, ದೇವ ದೇವತೆಗಳನ್ನು ನನ್ನ ಬರವಣಿಗೆಯ ವಿಷಯವನ್ನಾಗಿ ಮಾಡಿಕೊಳ್ಳಬೇಕೊ ಎಂಬ ತೊಳಲಾಟ ನಡೆದೇ ಇತ್ತು ಈ ಸಂದಿಗ್ಧ ಪರಿಸ್ಥಿತಿಯಲ್ಲಿ. ನೋಡಿದ ವಸ್ತುಗಳನ್ನೇ ಹತ್ತೆಂಟು ಸಲ ವೀಕ್ಷಿಸಬೇಕಾಯಿತು. ಅದಕ್ಕಾಗಿ ಅಲೆದಾಡುವುದು ಹೆಚ್ಚಾಯಿತು. ಈ, ನನ್ನ ಆತುರತೆಯನ್ನು ಸಂಗ್ರಹಾಲಯದ ಸಿಬ್ಬಂದಿಯ



ವಿಷ್ಣುವಿನ ಪೂಜೆಗೆಂದೇ ನಿರ್ಮಿತವಾದ ಸಪ್ತ ಹಣತೆಗಳ ಸಮಯಿ – 18 ಶತಮಾನದ ತಮಿಳುನಾಡು ಕೃತಿ

ಲೋಹಯುಗ

...ಕಾಲ ಸರಿದಂತೆ ಮಾನವನ ...ರಿಕತೆಯ ಪ್ರಜ್ಞೆ ಇನ್ನು ...ನಚಾಯಿತು. ಬರೀ ಹಣತೆ ...ತ್ರವಲ್ಲ, ಗೃಹ ಉಪಯೋಗಿ ...ಗಳೆಲ್ಲ ಲೋಹದಲ್ಲಿ ಸಿದ್ಧವಾದ ...ತಗಿದವು. ಅಡಿಗೆಯ ಪಾತ್ರೆ, ...ಿದ ತಟ್ಟೆ, ತಾಂಬೂಲ ...ರಣೆಯ ಡಬ್ಬಿ, ಶಾಯಿಯ ..., ಉಜಿರೆ, ಪೂಜಾ ಸಾಮಗ್ರಿ, ... ದೇವತೆಗಳು ಮಕ್ಕಳ ಆಟಿಗೆ, ...ೇ ಎರಡೇ, ಎಲ್ಲವೂ ವಿವಿಧ ...ಹದಲ್ಲಿ ಸಿದ್ಧವಾಗತೊಡಗಿದವು. ...ಕತೆಯ ಬೆಳವಣಿಗೆಯೊಂದಿಗೆ, ...ಕ ಜ್ಞಾನವೂ ಸೇರಿಕೊಂಡಿತು. ... ಸೌಂದರ್ಯ ಪ್ರಜ್ಞೆ ಕಲಾತ್ಮಕ ...ಯೂ ಬೆಳೆಯಿತು. ಹೀಗಾಗಿ ...ರಿಸುತ್ತಿದ್ದ ಪ್ರತಿ ವಸ್ತುವಿನ ...ಕಲಾತ್ಮಕ ದೃಷ್ಟಿ ಇದ್ದೇ ...ತ್ತು!

...ಮ ಈ ದೃಷ್ಟಿ ...ಕಾರವಾಗಿ ಬೆಳೆದಿದೆ, ...ನಾಡೊ, ಕೇರಳವೊ ಉತ್ತರ ...ಯ ಸರಾಕರಗಳೋ, ಇಂದು ...ಯಾರಿಸುತ್ತಿರುವ ಇಂಥ ...ಕ ವಸ್ತುಗಳನ್ನು ಪ್ರದರ್ಶಿಸುತ್ತವೆ. ಅವುಗಳ ಥಳಕು – ಹೊಳಪು ಹೇಳ ತೀರದು. ಅಷ್ಟೆ ಕೌಶಲ್ಯದ ನಕ್ಷೆಗಳು ಕೂಡ, ಹಿಂದೆ ಬಿದ್ದಿಲ್ಲ. ಆದರೆ, ಹಳೆ ತಲೆಮಾರಿನ ಕಲಾತ್ಮಕ ವಸ್ತುಗಳನ್ನು ನೋಡಿದಾಗ ಆಗುವ ಆನಂದ. ಏಕೋ ಎಂತೋ ಈ ಆಧುನಿಕ ವಸ್ತುಗಳನ್ನು ಕಂಡಾಗ ನನಸಾಗುವುದಿಲ್ಲ!

ಈ ಹಸಿವಿನಿಂದಲೋ, ಏನೋ ಎಲ್ಲೆಲ್ಲಿ ವಸ್ತು ಸಂಗ್ರಹಾಲಯಗಳಿವೆಯೋ ಅವನ್ನು ಆರಿಸಿ ತಿರುಗಾಡುವುದು ನನಗೆ ಅಂಟಿಕೊಂಡ ರೋಗ, ಈ ಪರಿದಾಟದಲ್ಲಿ ನಾನೊಮ್ಮೆ ಪುಣೆಯಲ್ಲಿರುವ ರಾಜಾ ದಿನಕರ ವಸ್ತು ಸಂಗ್ರಹಾಲಯವನ್ನು ಹೊಕ್ಕೆ. ಅಲ್ಲಿ ಅಗಾಧವಾದ ಅಚ್ಚರಿ ನನ್ನನ್ನು ಕಾದಿತ್ತು! ಅದೆಂಥ ಅದ್ಭುತ ಸಂಗ್ರಹಾಲಯವದು. ಮನೆ ಬಳಕೆಯ ಎಲ್ಲ ವಸ್ತುಗಳಲ್ಲದೇ ಕಲಾತ್ಮಕವಾದ ವಸ್ತು ಎಲ್ಲಿ ಸಿಕ್ಕಿದಿಯೋ ಅಲ್ಲಿಂದ ತಂದು ಇಲ್ಲಿ ಸಂಗ್ರಹಿಸಿದ್ದಾರೆ. ಬೀಗ ಬೀಗದ ಕೈ, ಅಡಕೋತು, ತಾಂಬೂಲ ಸಾಮಗ್ರಿ ಬರವಣಿಗೆಯ ವಸ್ತುಗಳು, ದೀಪಗಳು – ದೀಪಗಳ ಸಂಗ್ರಹವಂತೂ ಇಲ್ಲಿ ಬಹು ಮಹತ್ವದ್ದು!

ಪಕ್ಷಿ ಪ್ರಾಣಿಗಳು, ದೇವ ದೇವತೆಗಳು, ವಿವಿಧ ದೇವತೆಗಳ ವಾಹನಗಳು. ಇವನ್ನೆಲ್ಲ ಬಳಸಿಕೊಂ–ಡು ದೀಪಗಳ ನಕ್ಷೆಯನ್ನು ನಿರ್ಮಿಸಿ ಅವನ್ನು ಎರಕ ಹೊಯ್ದು ಕೆತ್ತನೆಯ ಕೆಲಸ ಮಾಡಿದ್ದಾರೆ. ಆಧುನಿಕ ನಿರ್ಮಿತಿಯ ಹೊಳಪಿಲ್ಲದಿದ್ದರೂ ಅವುಗಳಲ್ಲಿ ಅಡಕವಾಗಿರುವ ಕಲಾತ್ಮಕ ದೃಷ್ಟಿ ಮಾತ್ರ ಅದ್ಭುತವಾದುದು!

ನಿರ್ಧಾರಕ್ಕೆ ತೊಳಲಾಟ

ಈ ಕೃತಿಗಲು ಬಹಳ ಹಿಂದಿನ ಕಾಲದವೇನಲ್ಲ. ಕೆಲವೇ ಕೆಲವರು ಲಕ್ಷ್ಯಕ್ಕೆ ತಂದುಕೊಂಡಿದ್ದರೋ ಏನೋ ಎರಡನೇ ದಿನ ನಾನು ಹೋದಾಗ ಅವರಲ್ಲಿಯ ಒಬ್ಬರು ಬಂದು, ನಿನ್ನೆಯಿಂದಲೇ ನಿಮ್ಮನ್ನು ನೋಡುತ್ತಿದ್ದೇವೆ. ಏನೋ ವಿಶಿಷ್ಟ ವಿಷಯವನ್ನು ಬಹು ಆತುರ, ಆಸ್ಥೆಯಿಂದ ಹುಡುಕುತ್ತಿದ್ದಂತೆ ಕಾಣುತ್ತದೆ. ಏನು ವಿಷಯ? ಎಂದು ಕೆಣಕಿದರು. ವಿಷಯ ತಿಳಿಸಿದೆ. ಅವರು ಮತ್ತೊಮ್ಮೆ ನನ್ನನ್ನು ಸಂಗ್ರಹಾಲಯದ ತುಂಬ ತಿರುಗಾಡಿಸಿದರು. ಆಗ ನಾನು ಹೇಳಬೇಕಾಯಿತು. ಸದ್ಯ ನಾನು

ಆರಿಸಿದ ವಸ್ತು ದೀಪಗಳು ಅವನ್ನೇ ಮತ್ತೊಮ್ಮೆ ನನಗೆ ತೋರಿಸಿದರು.

ವಿಷಯಕ್ಕಾಗಿ ತೊಳಲಾಡುತ್ತಿದ್ದರೂ ನನಗರಿಯದೆ ನನ್ನ ಮನದಲ್ಲಿ Elephant Motif ನನ್ನ ಮನವನ್ನು ಯಾವಾಗಲೋ ಸೇರಿತ್ತು. ಬಹುಶಃ ಅದಕ್ಕೆ ಕಾರಣ ಇರದೇ ಇಲ್ಲ. ಕೆಲವೇ ದಿನಗಳ ಹಿಂದೆ ನಡೆದು ಹೋಗಿದ್ದ ಗಣೇಶೋತ್ಸವದ ಸಮಯಕ್ಕೆ "ವಿದೇಶಗಳಲ್ಲಿ ವಿನಾಯಕ" ಎಂಬ ವಿಷಯ ಆರಿಸಿಕೊಂಡು, ಅವುಗಳ 30ಕ್ಕೂ ಹೆಚ್ಚು ಚಿತ್ರಗಳನ್ನು ಜಲವರ್ಣದಲ್ಲಿ ನಿರ್ಮಿಸಿ ಪ್ರದರ್ಶನ ಏರ್ಪಡಿಸಿದೆ. ಪ್ರದರ್ಶನ ಜನ ಮೆಚ್ಚಿಗೆಯನ್ನು ಪಡೆದಿತ್ತು.

ನನ್ನ ಮನದಿಂಗಿತವನ್ನು ಜೊತೆಗಿದ್ದ ಆಗಂತುಕನಿಗೆ ಹೇಳುವುದೇ ತಡ ಆನೆ ಹೊತ್ತ, ಆನೆಯ ಮೇಲಿದ್ದ ಹತ್ತಾರು ನಮೂನೆಯ ದೀಪಗಳನ್ನು ತೋರಿಸಿದನು. ಅವುಗಳನ್ನು ನೋಡುತ್ತಿದ್ದಂತೆ ನಾನು Sketch ಮಾಡಿಕೊಳ್ಳಲು ಪ್ರಾರಂಭಿಸಿದಾಗ ಅವನು ನನ್ನನ್ನು ತಡೆದು ಹೀಗೆ ಇಲ್ಲಿಯೇ ನೀವು Sketch ಮಾಡುವುದಾದರೆ ತಿಂಗಳು ಕಾಲ ಇಲ್ಲಿಯೇ ಕಳೆಯಬೇಕಾದೀತು ಎಂದು ಎಚ್ಚರಿಸಿ ದೀಪಗಳ ವಿಷಯವಾಗಿಯೇ ಇದ್ದ ವಿಶೇಷ ಪ್ರಕಟಣೆಯೊಂದನ್ನು ನನ್ನ ಕೈಗಿತ್ತನು. ಆ ಪುಸ್ತಿಕೆಯ ಪುಟ ತಿರುವುತ್ತಿದ್ದಂತೆ ಸಮಾಧಾನದ ಉಸಿರು ಬಿಸಿಯಾಗಿ ಹೊರ ಬಿತ್ತು!

ಸರಿ, ನಾನು ಯೋಜಿಸಿಕೊಂಡ ಪ್ರಕಟಣೆಯ ಸಮಯ ಸಮೀಪಿಸುತ್ತಿತ್ತು. ತಡ ಮಾಡಿ ನಾನು ಆರಿಸಿಕೊಂಡ "ಗಜಜ್ಯೋತಿ"ಯ ಚಿತ್ರಗಳನ್ನೇ ಒಂದೆಡೆ ಕೂಡಿಸಿಕೊಂ–ಡು ಅದರಲ್ಲಿ ಬೇಕೆಂದಷ್ಟನ್ನೇ ಚಿತ್ರಕ್ಕೆ ಅಳವಡಿಸಿಕೊಂಡ ಚಿತ್ರಿಸಲು ಉದ್ಯುಕ್ತನಾದೆ!

ಅಗಾಧ ಕಾದಿತ್ತು

ಈ ಅಪರೂಪದ ವಸ್ತುಗಳನ್ನು ನನ್ನ ಚಿತ್ರಲೇಖನಕ್ಕಾಗಿ ಒಂದೆಡೆ ಇದ್ದ ಸಂಗ್ರಹದಿಂದಲೇ ಆರಿಸಿ ತೆಗೆಯುವಾಗ ನನಗಾದ ತೊಂದರೆಯನ್ನು ಎಣಿಸಿ, ಇನ್ನು ದೇಶದ ತುಂಬೆಲ್ಲ ಅಲೆದು, ಹಳ್ಳಿ ಹಳ್ಳಿಗೆ ಹೋಗಿ, ಆ ವಸ್ತುಗಳನ್ನು ಹೊಂದಿದ ಮಾಲೀಕರ ಮನವನ್ನು ಒಲಿಸಿ ಸಂಗ್ರಹ ಮಾಡಿದ ಆ ಪುಣ್ಯಾತ್ಮನು ಎಷ್ಟು ಕಷ್ಟಪಟ್ಟಿರಬೇಕೆಂಬ ಅರಿವಾಯಿತು, ಮರುಕು ಹುಟ್ಟಿತು, ಆ ವ್ಯಕ್ತಿಯ ಬಗ್ಗೆ ಇಲ್ಲದ ಗೌರವ ಉತ್ಪನ್ನವಾಯಿತು.

ಇಂಗ್ಲಿಷಿನಲ್ಲಿ ಒಂದು ಮಾತು



ಗಣಪತಿಯೇ ದೀಪಿಗೆ ಹಿಡಿದ ವಿಶಿಷ್ಟ ಹಣತೆ.

ಇದೆ, "ಪೆಯ್ನ್ ಅಂಡ್ ಪ್ಲೆಶರ್" – ಒಂದೇ ಸಮಯಕ್ಕೆ ಘಟಿಸಿದ ಈ ವಾಕ್ಯವನ್ನು ಕೆಲ ಸಂದರ್ಭಗಳಲ್ಲಿ ಉಸಿರುವುದುಂಟು, ಆ ಸಂದರ್ಭ. ಈ ಸಂಗ್ರಹಾಲಯವನ್ನು ನಿರ್ಮಿಸಿದ, ಡಾ। ದಿನಕರ ಗಂಗಾಧರ ಕೆಳ್ಕಾರ ಜೀವನದ ನೆನಪಿನಲ್ಲಿ ಹೇಳಬೇಕಾದ್ದು!

ಕೇಳಕರ ದಂಪತಿಗಳು ತಾರುಣ್ಯದಲ್ಲಿ ಬೆಳೆಯುತ್ತಿದ್ದ ಕಾಲ ಒಂದು ಗಂಡು ಮಗುವಿನ ತಂದೆ ತಾಯಿಗಳು ಕೂಡ ಆಗಿದ್ದರು, ಆದರೆ ವಿಧಿ ತನ್ನ ಕೈ ತೋರಿಸಿತು. ತಾರುಣ್ಯವನ್ನು ತಲುಪಿತಿದ್ದ ಆ ಒಬ್ಬನೇ ಒಬ್ಬ ಮಗ "ರಾಜಾ ದಿನಕರ"ನನ್ನು ವಿಧಿ ತೆಗೆದುಕೊಂಡು ಹೋಯಿತು. ತಂದೆ ದಿನಕರ, ತಾಯಿ ಕಮಲಾಬಾಯಿ . ದಿಕ್ಕುಗಾಣದವರಾದರು, ಆದರೆ ನಿರಾಶರಾಗಲಿಲ್ಲ. ಕಳೆದುಹೋದ ಮಗನನ್ನು ತಮ್ಮ ಆತ್ಮದಲ್ಲಿಯೇ ಬೆಳೆಸಿದರು. ಅದರ ಪರಿಣಾಮವಾಗಿಯೇ "ರಾಜಾ ದಿನಕ ಕೇಳಕರ್ ಮ್ಯೂಜಿಯಮ್"ನ ಹುಟ್ಟು ಬೆಳವಣಿಗೆ, ಬೆಳವಣಿಗೆ ಎಂದರೆ ವಿಶ್ವದಲ್ಲಿಯೇ ಒಂದು ವಿಶಿಷ್ಟ ಸಂಗ್ರಹಾಲಯವಾಗಿ ಬೆಳೆದು ನಿಂತ ಸಂಸ್ಥೆ!

ಹೀಗೆ "ಪೆಯ್ನ್ ಅಂಡ್ ಪ್ಲೆಶರ್" ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕಾದ್ದು ಯೋಗ್ಯವಾಗಿದೆ. ಮಗನ ಮರಣ ನೋವಿನದು ಆ ನೋವನ್ನು ಕಡಿಮೆ ಮಾಡಲೆಂದೇ ನಿರ್ಮಾಣವಾದುದು ಈ ಸಂಗ್ರಹಾಲಯ – ದೇಶಕ್ಕೊಂದು ಕೊಡುಗೆ!

ಮಹಾರಾಷ್ಟ್ರ ಸರಕಾರ, ಕೇಂದ್ರ [illegible]

ಬೆಂಕಿ – ಜ್ಯೋತಿ

[illegible]

ಧಾರ್ಮಿಕ ದೃಷ್ಟಿಯಲ್ಲಿ ದೇವ ಪೂಜೆಗೆ ಈ ದೀಪ, ಆರತಿ, ಮಂಗಳಾರತಿ, [illegible] ಮಾಧ್ಯಮವಾದರೂ [illegible] ಈ ದೀಪವೇ ದೇವನ ಸ್ಥಾನಕ್ಕೆ ಏರುವುದೂ ಉಂಟು!

ಇನ್ನೂ ನಾಗರಿಕತೆ ಮುಂದೊರೆದಂತೆ ಧಾರ್ಮಿಕದೃಷ್ಟಿ ಹೆಚ್ಚಾದಂತೆ – ಅಗ್ನಿಹೋತ್ರ ಕೃತಿಯಲ್ಲಿ ಬಂತು. ಅಂದರೆ ಮಂತ್ರಶಕ್ತಿಯಿಂದಲೇ ಅಗ್ನಿಯ ಉತ್ಪತ್ತಿಯನ್ನು ಮಾಡುವುದು. ಅದು ಈಗ ಪುಸ್ತಕಗಳಲ್ಲಿ ಮಾತ್ರ ಉಳಿದಿದೆ. ನಮ್ಮೂರಿನ ವೇದ ಸಂಸ್ಕೃತ ಪಾಠಶಾಲೆಯ ವಿದ್ಯಾರ್ಥಿ ಒಬ್ಬ, "ಅಗ್ನಿಹೋತ್ರ" ಹೊತ್ತಾನು ಅವನಿಗೆ ಚೇಷ್ಟೆ ಮಾಡಿದೆ, ಅವ್ರತವನ್ನು ಸ್ವೀಕಾರ ಮಾಡುವುದು ಸುಲಭ. ಆದರೆ ನಡೆಸಿಕೊಂಡು ಹೋಗುವುದು ಕಷ್ಟ ಎಂದೆ – ಉತ್ತರವಾಗಿ ಆ ವಿದ್ಯಾರ್ಥಿ ನಕ್ಕನಷ್ಟೆ!

ಅಗ್ನಿ ಸವ್ಯಕ್ಕೂ ಬೇಕು, ಅಪಸವ್ಯದಲ್ಲೂ ಅದಕ್ಕೆ ಆಷ್ಟೇ

ಆನೆಯ ಬೆನ್ನಮೇಲೆ ದೀಪ ಕಂಬದ ವಿನ್ಯಾಸ

[illegible]

ಕರ್ನಾಟಕ ಕನ್ನಡಿ
9
ಕನ್ನಡಪ್ರಭ
ಮಂಗಳವಾರ
13 ಆಗಸ್ಟ್ 2002

ಬಂತೋ ನಾಗರಪಂಚಮಿ

ಇಂದು ನಾಗರ ಪಂಚಮಿ. ಈ ಹಿನ್ನೆಲೆಯಲ್ಲಿ ನಾಗಬನಗಳು ಮತ್ತು ನಾಗಮಂಡಲ ಕುರಿತು ಇಲ್ಲೊಂದು ಪ್ರಸ್ತಾಪ.

ನಾಗಬನಗಳು ದಕ್ಷಿಣ ಕನ್ನಡದ ವಿಶೇಷ

ನಾಗರ ಪಂಚಮಿ ಬಂತೆಂದರೆ ಮಹಿಳೆಯರಿಗೆ ಇಲ್ಲದ ಸಡಗರ. ತವರು ಮನೆಗೆ ತೆರಳುವ ತವಕ, ತಂಬಿಟ್ಟು ತಿನ್ನುವ ಚಪಲ, ಹೊಸ ಸೀರೆಯ ಆಸೆ, ಮದುವೆಯಾದ ಪ್ರಥಮ ಪಂಚಮಿಯ ಹಬ್ಬದ ಉಬ್ಬಂತೂ ಹೇಳತೀರದು. ಉತ್ತರ ಕರ್ನಾಟಕದಲ್ಲಿ ಇದಕ್ಕೆ ಒಂದು ವಿಶೇಷ ಮೆರುಗು. ಬಾಯಿ ಚಲಪಕ್ಕೆ ತಂಬಿಟ್ಟು ಫಲಹಾರವಾದರೆ, ಜೋಕಾಲಿ ಜೀಕುವ ಅವಕಾಶವೂ ಈಗಲೇ. ಹೀಗೆ ನಾಗನ ಪೂಜೆ ವೈವಿಧ್ಯಮಯವಾಗಿ ನಡೆಯುತ್ತದೆ.

ಉತ್ತರ ಕರ್ನಾಟಕದಲ್ಲಿ ಊರೂರಿಗೆ, ಗ್ರಾಮ ದೇವತೆ ಮಾರುತಿ ದೇವತೆಗಳ ಮಂದಿರಗಳು ಇರುವುದು ಸಾಮಾನ್ಯ ನೋಟ. ಇದೇ ರೀತಿ ದಕ್ಷಿಣ ಕನ್ನಡದಲ್ಲಿ 'ನಾಗಬನ'ಗಳ ನೋಟ ಸಾಮಾನ್ಯ.

'ನಾಗಬನ' ಎಂದರೆ ಕಟ್ಟೆ ಇರುವ ವೃಕ್ಷಗಳ ಕೆಳಗೆ ಕೆಲ ಶಿಲಾ ನಾಗಮೂರ್ತಿಗಳು ವಿಧಿವತ್ತಾಗಿ ಸ್ಥಾಪಿತವಾಗಿರುವ ಸ್ಥಳ. ಅಂಥ ಒಂದು ನಾಗಬನ ಮಂಗಳೂರು ತಾಲೂಕಿನ ತೋಕೂರಿನಲ್ಲಿದೆ. ಅದು ಅಲ್ಲಿಯ 'ಮಂತ್ರಾಡಿ' ಕುಟುಂಬದವರಿಗೆ ಸಂಬಂಧಿಸಿದ ಬನ. ಈಗ ಆ ಬನ ಮಂದಿರದ ರೂಪ ತಾಳಿದೆ. ಇಲ್ಲಿ ಸುಬ್ರಹ್ಮಣ್ಯ ದೇವಸ್ಥಾನವೂ ಇದೆ. ಮಂತ್ರಾಡಿಗಳೇ ಈ ದೇವಸ್ಥಾನದ 'ಮೊಕ್ತೇಸರರು' (ಧರ್ಮದರ್ಶಿಗಳು). ಈ ನಾಗಬನ-ದೇವಸ್ಥಾನಕ್ಕೂ ಈ ಕುಟುಂಬಕ್ಕೂ ನೂರಾರು ವರ್ಷಗಳ ನಂಟು.

ದೇವಸ್ಥಾನ ಈಗ ನವೀಕರಣಗೊಂಡಿದೆ. ನಾಗ ಪಂಚಮಿಯ ಸಮಯಕ್ಕೆ ಇಲ್ಲಿ ವಿಶೇಷ ಪೂಜೆ, ವಿಶಿಷ್ಟ ರೀತಿಯಲ್ಲಿ ನೆರವೇರುತ್ತದೆ.

ಭಕ್ತರಿಗೆ ಆಶೀರ್ವದಿಸುತ್ತಿರುವ ನಾಗಪಾತ್ರಿ. ಚಿತ್ರ: ನಂದಳಿಕೆ ಬಾಲಚಂದ್ರ ರಾವ್

'ನಾಗದರ್ಶನ ಪಾತ್ರಿ' ಅನುವಂಶಿಕವಾಗಿ ನಡೆದುಕೊಂಡು ಬಂದುದು. ಈ ಪಾತ್ರಿಯ ಅಧಿಕಾರ ತಂದೆಯಿಂದ ಮಗನಿಗೆ ಬರುತ್ತದೆ. ಅಧಿಕಾರ ನೀಡುವ ರೀತಿಯೆಂದರೆ, ತಂದೆ ಮಗನಿಗೆ ಪೂಜೆ ಪ್ರಾರ್ಥನೆಗಳನ್ನು ಮಾಡಿ 'ಹಿಂಗಾರ' (ಅಡಿಕೆ ಹೂವು)ವನ್ನು ಹಿರಿಯರು, ಒಡೆಯರ ಸಮಕ್ಷಮ ನೀಡಬೇಕು. ಈ ಸಂಸ್ಕಾರದ ನಂತರವೇ ಮಗನಿಗೆ 'ಪಾತ್ರಿ' ಅಧಿಕಾರ ಬರುವುದು. ಶ್ರದ್ಧೆ, ಭಕ್ತಿಯಿರುವ ನಾಗರಿಕರಿಗೂ ತಾತ್ಪೂರ್ತಿಕ 'ಪಾತ್ರಿ' ದೀಕ್ಷೆ ನೀಡಬಹುದು.

ನಾಗ ಪಂಚಮಿಯ ದಿನ ಬೆಳಿಗ್ಗೆ 'ಆಶ್ಲೇಷ ಬಲಿ' ಹಾಗೂ ನಾಗದರ್ಶನದಿಂದ ಈ ಹಬ್ಬದ ಪ್ರಾರಂಭ. ಈ ಮೊದಲು ನಾಗದೇವನಿಗೆ ಪಂಚಾಮೃತ ಅಭಿಷೇಕ ಪೂಜೆ ನಡೆಯುತ್ತದೆ. ಅಧಿಕಾರ ಹೊತ್ತ 'ಪಾತ್ರಿ' ವಿಶೇಷ ಉಡುಗೆಯನ್ನು ಧರಿಸಬೇಕು. ದೇಹಕ್ಕೆಲ್ಲ ಗಂಧ ಸವರಿಕೊಂಡಿರಬೇಕು, ಎರಡೂ ಕೈಯಲ್ಲಿ ಹಿಂಗಾರವಿರಲೇಬೇಕು, ದೇವರಿಗೆ ಏರಿಸುವ ಪುಷ್ಪಗಳಲ್ಲಿ ಕೇದಿಗೆ ಇರಲೇಬೇಕು. ನಾಗನಿಗೆ ಕೇದಿಗೆ ಬಲು ಪ್ರೀತಿ. ಆ ಹೂ ಅರಳುವಾಗ ಕೇದಿಗೆ ಬನ ನಿಸರ್ಗದತ್ತ ನಾಗಬನವಾಗಿಯೇ ಮಾರ್ಪಡುತ್ತದೆ.

ಕೆಲ ಕುಟುಂಬಗಳಿಗೆ ಆಯಾ ನಾಗಬನಗಳಿಗೇ ಹೋಗಬೇಕೆಂಬ ಕಟ್ಟಳೆ. ಕುಲದೇವರು ಇದ್ದಂತೆ ಪಂಚಮಿ ಸಮಯವೆಂದರೆ ಭೋರ್ಗರೆವ ಮಳೆಗಾಲ. ಅಂಥ ಪ್ರಸಂಗಗಳಲ್ಲಿ ಅವರು ಹೋಗಬೇಕಾದ ನಾಗಬನ, ಪೂರದಿಂದ ತುಂಬಿದ್ದರೆ, ದೋಣಿಯಲ್ಲಾದರೂ ಹೋಗಿ ಆ ಸ್ಥಳಕ್ಕೆ ಪೂಜೆ ಸಲ್ಲಿಸುವುದಿದೆ.

■ ಎನ್.ಸಿ. ದೇಸಾಯಿ


ಹಾವೇರಿ ಜಿಲ್ಲೆ ಬಂಕಾಪುರದ ಪಂಚಮಲಕಪ್ಪನ ಬಾವಿಯಲ್ಲಿರುವ ನಾಗಮಂಡಲ. ಚಿತ್ರ: ಎನ್.ಸಿ. ದೇಸಾಯಿ

ಕುಂದಾ ನಾಡಿನ ಕಮಲ ಬಸದಿ

ಬೆಳಗಾವಿ [illegible] ಇಂದಿನ [illegible] ಇರುವ [illegible] ಮಾಡಿಕೊಂಡು [illegible] ಈ ಪ್ರಸಿದ್ಧ ಜಿನ [illegible] ಶೈಲಿ [illegible] ಬಹಳ ತಡ [illegible] ಹೋಗುತ್ತಾರೆ

ಈ [illegible] ಗುಂಗಿನಲ್ಲಿ ಸಾಮಾನ್ಯ ಮನುಷ್ಯ ಬೆಳಗಾವಿಯಲ್ಲಿ ಒಂದು [illegible] ಶಿಲ್ಪಕಲೆಯ ತಾಣವಿದೆ ಎಂಬುದನ್ನು ಮರೆತೆ ಬಿಡುತ್ತಾನೆ.

ಮೂಲಬಯಲು ದಕ್ಷಿಣ ಭಾರತವೇ ಇವರ ನೆಲೆ. ರಟ್ಟರು (ರಾಷ್ಟ್ರಕೂಟರು) 'ಘಟಕೋಟೆ ಅಥವಾ ಮರಾಟೆ ಮನೆತನದ ಪೂರ್ವಜರೆಂದೂ, ಒಬ್ಬ ಆದಿ ಕ್ಷತ್ರಿಯ ಬುಡಕಟ್ಟಿನ ಜನಾಂಗಕ್ಕೆ ಸೇರಿದವರೆಂದು ಮೊಹ್ಯನಾಟಿಗೆ (ಮಹಾರಾಷ್ಟ್ರ) ಸೇರಿದವರೆಂದೂ ಹೇಳುತ್ತಾರೆ.

ಇವರ ಧರ್ಮದ ಬಗ್ಗೆ ನಿಶ್ಚಿತ ಅಭಿಪ್ರಾಯಗಳಿಲ್ಲ. ರಟ್ಟರು ಮತಾಂತರ ಹೊಂದಿ ಜೈನಮತವನ್ನು ಸ್ವೀಕರಿಸಿದ ರೆಂಬುದಕ್ಕೆ ಐತಿಹಾಸಿಕ ಆಧಾರಗಳು ಮಾತ್ರ ಲಭ್ಯವಿವೆ. ಮೊದಲನೆಯದಾಗಿ

ಹಾರ ಮನೆತನದ 'ರಟ್ಟ' ರಾಜನು ಈ ಪಟ್ಟಣದಲ್ಲಿಯ ಅಷ್ಟೇಶ್ವರ ಎಂಬ ಶಿವಾಲಯಕ್ಕೆ ದತ್ತಿಕೊಟ್ಟದ್ದನ್ನು ತಿಳಿಸುವದಲ್ಲದೆ 9 ಜನ ಅರಸರ ವಂಶಾವಳಿಯೂ ಇದರಲ್ಲಿ ನಮೂದಿಸಲಾಗಿದೆ.

